ಬೆಳ್ಳಿ ಹಬ್ಬದ ಪ್ರಕಟಣೆ

# ಬೆಳ್ಳಿ ತೆರೆ

ಉಷಾ ನವರತ್ನರಾವ್

DEPARTMENT OF PUBLIC LIBRARIES
COPY RIGHT
BUREAU
No ..................
STATE CENTRAL LIBRARY, BANGALORE

ಪ್ರಕಾಶ ಸಾಹಿತ್ಯ
ನಂ. 2, ತಲಕಾಡು ಸುಬ್ಬರಾವ್ ಗಲ್ಲಿ
ಬಳೇಪೇಟೆ : : ಬೆಂಗಳೂರು-560 053

*BELLI TERE*—A Novel by Usha Navarathnaram; Published by Prakasha Sahithya, Thalakadu Subba Rao Galli, Cottonpet, Bangalore-53

ದ್ವಿತೀಯ ಮುದ್ರಣ 1986

ಹಕ್ಕುಗಳು © ಲೇಖಕಿಯದು

ಮುದ್ರಕರು
ಶ್ರೀ ಸದ್ಗುರು ಪ್ರಿಂಟರ್ಸ್
ರಾಮಾನುಜ ರಸ್ತೆ, ಮೈಸೂರು—570 004

## ದ್ವಿತೀಯ ಮುದ್ರಣಕ್ಕೆ ಮುನ್ನುಡಿ

ಬೆಳ್ಳಿ ತೆರೆಯ ಮೇಲೆ ಮೂಡಿಬರುವ ಚಿತ್ರ ಎಷ್ಟು ನೈಜ, ಎಷ್ಟು ಕಲಾತ್ಮಕ, ಎಷ್ಟು ರಂಜನೀಯ! ಆದರೆ ಅದೇ ತೆರೆಯ ಮರೆಯ ಜೀವನದಲ್ಲಿನ ನೋವು-ನಲಿವು, ಸಿಹಿ-ಕಹಿ ಅರಿಯುವುದಾದರೂ ಹೇಗೆ? ಚಿತ್ರತಾರೆಯೆಂದರೆ ಅವಳು ಕೈಗೆಟುಕದ ನಕ್ಷತ್ರ, ಅತ್ಯಂತ ಸುಖಿ, ಊಹೆಗೆಟುಕದ ಸ್ವಪ್ನಲೋಕದ ಕಿನ್ನರಿ. ಅದು ಪ್ರೇಕ್ಷಕನ ದೃಷ್ಟಿಯಲ್ಲಿ! ತೆರೆ ಸರಿಸಿ ನೋಡಿದರೆ ಕಾಣುವ ಪ್ರಪಂಚವೇ ಬೇರೆ. ಅವಳೂ ಎಲ್ಲರಂತೆ ನೋವು ನಲಿವುಂಡು ಬದುಕಿನ ಮಹಾಪೂರದಲ್ಲಿ ಕೊಚ್ಚಿ ಹೋಗಬಹುದಾದ ಒಂದು ಹುಲ್ಲುಕಡ್ಡಿಯಂತೆ. ನೋವುಂಡು ನಲಿವು ನೀಡುವ ಪರಿಸರದವರ ಕೈಗೊಂಬೆ. ಚಿತ್ರ ನಟಿಯೋರ್ವಳ ಬದುಕನ್ನು ಪ್ರತಿಬಿಂಬಿಸುವ ಪ್ರಯತ್ನ ಇದು. 'ಚಿತ್ರದೀಪ' ಸಾಪ್ತಾಹಿಕದಲ್ಲಿ ಧಾರಾವಾಹಿಯಾಗಿ ಮೂಡಿ ಬಂದು ಮೆಚ್ಚಿಗೆ ಪಡೆದ ಈ ಕಾದಂಬರಿಯನ್ನು ನಿಮ್ಮ ಮುಂದೆ ಪುಸ್ತಕ ರೂಪದಲ್ಲಿ ಇಡುತ್ತಿದ್ದೇನೆ.

ಈ ಕಾದಂಬರಿಯ ದ್ವಿತೀಯ ಮುದ್ರಣವನ್ನು ಪ್ರಕಾಶಸಾಹಿತ್ಯದವರು ತಮ್ಮ ಬೆಳ್ಳಿಹಬ್ಬದ ಪ್ರಕಟಣೆಯಲ್ಲಿ ಹೊರತರುತ್ತಿದ್ದಾರೆ. ಅವರಿಗೂ ನನ್ನ ಬರವಣಿಗೆಯಲ್ಲಿ ಅಪಾರ ಆಸಕ್ತಿವಹಿಸುವ ಪ್ರಭಾಕರ್ ಅವರಿಗೂ ನನ್ನ ವಂದನೆಗಳು.

ಉಷಾ ನವರತ್ನರಾವ್

# ಅರ್ಪಣೆ

ಬೆಳ್ಳಿ ತೆರೆಯ ಮೇಲೆ ಮಿಂಚಿ ಮಾಯವಾದ ಮಿನುಗುತಾರೆ

ದಿ|| ಕಲ್ಪನಾರವರ ಚಿರನೆನಪಿಗೆ

# ಬೆಳ್ಳಿ ತೆರೆ

'ಪಾಪ್ಪೂ ಬ್ರೇಕ್ ಫಾಸ್ಟಿಗೆ ಬಾಮ್ಮಾ. ಒಂಭತ್ತು ಗಂಟೆಯಾಗೋದ್ರೆ ನಿಂಗೆ ಟೈಂ ಸಿಕ್ಕೋದೇ ಇಲ್ಲ ಆಮೇಲೆ' ಮಾಲತಮ್ಮ ಮಗಳ ರೂಮಿನ ಬಾಗಿಲ ಬಳಿ ಬಂದು ನಿಂತು ಕರೆದರು. ಒಳಗಿನ ಉಡುಪಿನಲ್ಲೇ ವ್ಯಾಯಾಮ ಮಾಡುತ್ತಿದ್ದ ಪವಿತ್ರ ತಾಯಿಯನ್ನು ಕರೆದಳು.

'ಅಮ್ಮಾ ಬಾ ಇಲ್ಲಿ. ನೋಡು ಮೂರು ದಿನ ಔಟ್ ಡೋರ್ ಶೂಟಿಂಗ್‌ಗೆ ಹೋಗಿ ನನ್ನ ರೂಟೀನ್ ಅಪ್‌ಸೆಟ್ ಆಗೋಯ್ತು. ಒಂದು ಕೇಜಿ ತೂಕ ಜಾಸ್ತಿಯಾಗಿದ್ದೀನಿ.' ಒಳಗೆ ಬಂದು ಮಾಲತಮ್ಮ ಅಸಮಾಧಾನ ವ್ಯಕ್ತ ಪಡಿಸಿದರು.

'ನಾನು ಊಟಿಗೆ ಹೋದಾಗ ಹೇಳ್ದೆ ಕೇಳಿದ್ಯಾ ? ಬೆಳಗಾಗೆದ್ದು ಜಾಗ್ ಮಾಡೂಂದ್ರೆ ಬೆಚ್ಚಗೆ ಮಲ್ಕೊಂಡಿದ್ದೀ. ಸಿಹಿ ತಿಂಡಿ ತಿನ್ಬೇಡಾಂದ್ರೆ ರಾಜೇಂದ್ರ ಕೊಟ್ನಾಂತ ತಿಂದಿ. ಅರ್ಧ ಇಂಚು ಹೆಚ್ಚು ಕಡಿಮೆಯಾದ್ರೂ ನಿನ್ನ ಡ್ರೆಸ್ ಎಲ್ಲಾ ಆಲ್ಟರ್ ಮಾಡ್ಬೇಕು ! ಮೊದ್ಲೇ ಆ ಗಾಯಿತ್ರಿ ಫಿಲಂಸ್ ಪ್ರೊಡ್ಯೂಸರ್ ಮುರುಗೇಂದ್ರಪ್ಪ ದುಡ್ಡು ಬಿಚ್ಚೋಕ್ಕೇ ಸಾಯ್ತಾನೆ !'

'ಪರ್ವಾಗಿಲ್ಲ ಬಿಡಮ್ಮಾ, ಎರಡು ದಿನ ಊಟ ಸ್ಕಿಪ್ ಮಾಡಿ ವ್ಯಾಯಾಮ ಮಾಡಿ ಕರಗಿಸ್ಕೋತೀನಿ. ಎರಡು ನಿಮಿಷದಲ್ಲಿ ಬರ್ತೀನಿ. ನಂಗೆ ಬರೀ ನಿಂಬೇಹಣ್ಣಿನ ಪಾನಕ ಸಾಕು. ಹೆಚ್ಚು ಸಕ್ರೆ ಹಾಕ್ಬೇಡಾ ಅನ್ನು ಅಯ್ಯರ್‌ಗೆ !' ಪವಿತ್ರ ಟವಲಿನಿಂದ ಬೆವೆತ ಮುಖ, ಕತ್ತು ಒರೆಸಿಕೊಂಡು ಹೌಸ್ ಕೋಟನ್ನು ಕೈಗೆತ್ತಿಕೊಂಡಳು.

'ಹಾಗೇ ಮಾಡು, ರೋಜಿಗೆ ಹೇಳ್ತೀನಿ ನಿನ್ನ ಸ್ನಾನಕ್ಕೆ ರೆಡಿ ಮಾಡೂಂತ' ಮಾಲತಮ್ಮ ಹೊರಟಾಗ ಫೋನಿನ ಕರೆಗಂಟೆ ಬಡಿದುಕೊಂಡಿತು.

'ನೀನು ಬ್ರೇಕ್‌ಫಾಸ್ಟ್ ಮುಗಿಸು ಹೋಗು. ನಾನು ವಿಚಾರಿಸಿಕೊಳ್ತೀನಿ' ಮಾಲತಮ್ಮ ಕೈಗೆ ರಿಸೀವರ್ ಎತ್ತಿಕೊಂಡಾಗ ಪವಿತ್ರ ಕಾಲಿಗೆ ವೆಲ್ವೆಟ್ ಚಪ್ಪಲಿ ಧರಿಸಿ ಹೊರಬಿದ್ದಳು.

ಡೈನಿಂಗ್ ಟೇಬಲ್ಲಿನ ಸುತ್ತ ಕುಳಿತು ರೋಜಿ,ಲಲ್ಲಿ, ಪುಟ್ಟಿ, ಮಾಧೂ

ರಾಮು, ಶ್ಯಾಮು ತಟ್ಟೆಯಲ್ಲಿ ಬಿಸಿ ಬಿಸಿ ಇಡ್ಲಿಗೆ ಬೆಣ್ಣೆ ಹಾಕಿಕೊಂಡು ತಿನ್ನುತ್ತಾ ಕುಳಿತಿದ್ದರು.

'ಲೇ ರೋಜೀ, ಪಾಪೂಗೆ ನಾಲ್ಕು ಇಡ್ಲಿ ಎರಡು ಚಮಚ ಬೆಣ್ಣೆ ಹಾಕಿ ಕೊಡೇ' ಮಾಧೂ ಹೇಳಿದ.

'ನಾನು ಅದೆಲ್ಲಾ ಮಾಡೋಲ್ಲ. ಅಮ್ಮ ಬೈತಾಳೆ' ತನ್ನ ತಟ್ಟೆಗೆ ಮತ್ತೆರಡು ಇಡ್ಲಿ ಚಟ್ನಿ, ಬೆಣ್ಣೆ ಹಾಕಿಕೊಂಡಳು.

'ಬರೀ ಇಡ್ಲೀಲೇ ಹೊಟ್ಟೆ ತುಂಬಿಸ್ಕೋಬೇಡಾ. ಅಯ್ಯರ್ ಇನ್ನೂ ಕೇಸರಿಭಾತ್ ತಂದಿಟ್ಟಿಲ್ಲ. ಅಷ್ಟರಲ್ಲೇ ನಿಂಗೆ ಅವಸರ !' ಲಲ್ಲಿ ರೋಜಿ ಯತ್ತ ನೋಡಿ ನಕ್ಕಳು. 'ನಿನಗೇನು ಬಿಡು, ಏನು ತಿಂದ್ರೂ ಹಂಚಿ ಕಡ್ಡೀನೇ !'

'ನಾನು ಹೇಗಿದ್ರೇನು ? ನಾನೇನೂ ಪಾಪೂ ಹಾಗೆ ಫಿಲಂ ಸ್ಟಾರ್ ಅಲ್ವಲ್ಲಾ !' ರೋಜಿ ಹೇಳಿದಾಗ ಎಲ್ಲರೂ ನಕ್ಕರು. ಪವಿತ್ರ ನಗಲಿಲ್ಲ. ಇವರೆಲ್ಲಾ ತನ್ನ ಅಕ್ಕ ತಂಗಿಯರು, ಅಣ್ಣ ತಮ್ಮಂದಿರು. ಹೊಟ್ಟೆ ತುಂಬಾ ತಿಂದು ನಲಿಯಲಿ. ಆದರೆ ಒಬ್ಬರಾದರೂ ಎದ್ದು ತನಗೆ ಕುಳಿತುಕೊಳ್ಳಲು ಸ್ಥಳ ಬಿಡಬೇಡವೇ ? ತಾನು ನಿಂತೇ ಇದ್ದಂತೆ ಅವರು ತಿನ್ನುತ್ತಲೇ ಹರಟು ತ್ತಿದ್ದಾರೆ ! ಇವರೆಲ್ಲರಿಗಾಗಿ ತಾನು ದುಡಿಯುವುದು. ಅಯ್ಯರ್ 'ಘಂ' ಎನ್ನುತ್ತಿದ್ದ ಕೇಸರಿಭಾತಿನ ಹರಿವಾಣ ತಂದು ಡೈನಿಂಗ್ ಟೇಬಲ್ಲಿನ ಮೇಲಿಡುತ್ತಲೇ ಎಲ್ಲರೂ ಎದ್ದು ನಿಂತು ಕೈಚಾಚಿದರು.

'ನಂಗೆ ಫಸ್ಟ್, ನಾನು ಕಾಲೇಜಿಗೆ ಹೋಗ್ಬೇಕೂ.'

'ಏನಿಲ್ಲ ನಂಗೆ ಫಸ್ಟ್, ನಾನು ಡ್ಯಾನ್ಸ್ ಕ್ಲಾಸಿಗೆ ಹೋಗ್ಬೇಕೂ !'

'ಅದೆಲ್ಲಾ ಬಿಟ್ಟಿಡು, ನಂಗೇ ಫಸ್ಟ್. ನಾನು ಪಾಪೂ ಜೊತೆ ಸ್ಟುಡಿಯೋಗೆ ಶೂಟಿಂಗ್‌ಗೆ ಹೋಗ್ಬೇಕು !' ಅವರ ಗಲಾಟೆ ಕೇಳಿ ಮಾಲತಮ್ಮ ಧಾವಿಸಿ ಬಂದರು.

'ಏನ್ಗಲಾಟೆ ! ಯಾಕೆ ಹೀಗೆ ಬಡ್ಕೊಂತೀರಾ ? ಅವಳ್ಗೆ ಒಂದ್ಲೋಟ ನಿಂಬೆಹಣ್ಣಿನ ಪಾನಕ ಮಾಡಿಕೊಂಡ್ಬಾ ಹೋಗು. ಒಂದೇ ಚಮಚ ಸಕ್ರೆ ಸಾಕು. ಎರಡು ನಿಮಿಷದಲ್ಲಿ ತರ್ಬೇಕೂ !' ಅವರ ದೃಷ್ಟಿ ದೊಡ್ಡ ಮಗಳು ರೋಜಿಯತ್ತಾ ಹೋಯಿತು. 'ಯಾಕೆ ಹಾಗೆ ಮುಕ್ಕುತ್ತಾ ಇದ್ದೀಯಾ? ಎದ್ದು ಪಾಪೂಗೆ ಜಾಗ ಕೊಡ್ಬಾರ್ದಾ ? ಎದ್ಹೋಗಿ ಅವಳ ಸ್ನಾನಕ್ಕೆ ರೆಡಿ ಮಾಡು ಹೋಗು' ಗದರಿದಾಗ ರೋಜಿ ಅರ್ಧ ತಿಂದು ಮುಗಿಸಿದ ತಟ್ಟೆ

ಯನ್ನು ಕೈಗೆತ್ತಿಕೊಂಡು ಎದ್ದು ನಿಂತಳು.

'ಬಾ ಪಾಪೂ ಕೂತ್ಕೊ.'

ಪವಿತ್ರ ತಲೆಯಾಡಿಸಿ ನಕ್ಕಳು. ತಾಯಿ ಬಂದು ಹೇಳುವವರೆಗೆ ಅವರ್‍ಯಾರಿಗೂ ತನ್ನ ಮೇಲೆ ಆದರವಿರಲಿಲ್ಲವೇ ?

'ಬೇಡಾ ರೋಜಿ ನೀನು ಕೂತ್ಕೊಂಡು ತಿನ್ನು, ಬರೀ ಪಾನಕ ತಾನೇ, ನಿಂತ್ಕೊಂಡೇ ಕುಡಿದರಾಯಿತು !'

ಮಾಧೂ ಕುರ್ಚಿಯೊಂದನ್ನು ತಂದು ಪವಿತ್ರಳ ಮುಂದಿಟ್ಟ.

'ಕೂತ್ಕೊಂಡು ಕುಡೀ ಪಾಪೂ. ಸಾರಿ, ನಿನ್ನ ಮರ್‍ತೇ ಬಿಟ್ಟಿದ್ವು !'

ಅಯ್ಯರ್ ಗಡಬಡಿಸಿ ತಂದಿತ್ತ ಪಾನಕವನ್ನು ಎರಡೇ ಗುಟುಕಿನಲ್ಲಿ ಮುಗಿಸಿ ಪವಿತ್ರ ಎಲ್ಲರತ್ತ ನೋಡಿ ನಕ್ಕಳು. ಎಲ್ಲರಿಗಿಂತ ಚಿಕ್ಕವಳಾದ ಪುಟ್ಟಿ ತಾನೂ ಎದ್ದು ನಿಂತಳು.

'ಪಾಪೂ ನಾನೂ ಬರ್‍ಲಾ ಶೂಟಿಂಗ್‌ಗೆ ? ನಂಗೆ ತುಂಬಾ ಆಸೆ !'

'ಸುಮ್ನೆ ಇರೀ ಮೂದೇವಿ. ನಿನ್ನ ಬೊಚ್ಚು ಬಾಯಿ, ನಿನ್ಮುಖ ನೋಡಿದ್ರೆ ನಾಳೆಯಿಂದ ಪಾಪೂಗೆ ಬರೋ ಚಾನ್ಸಸ್ ಎಲ್ಲಾ ಹಾಳಾಗುತ್ತೆ !' ಶ್ಯಾಮು ಗದರಿದ.

'ಯಾರೂ ಬರ್‍ಬೇಕಾಗಿಲ್ಲ. ನಾನೇ ಹೋಗ್ತಾ ಇದ್ದೀನಿ !' ಮಾಲ ತಮ್ಮ ಮಕ್ಕಳನ್ನು ಗದರಿಕೊಂಡರು. ಪವಿತ್ರ ಕುಡಿದ ಲೋಟವನ್ನು ಕೆಳಗಿಟ್ಟ ಮಾಲತಮ್ಮ ಅವಳ ಸೊಂಪು, ನೀಳ ಕೇಶರಾಶಿಯತ್ತ ಕಣ್ಣು ಹಾಯಿಸಿದರು.

'ಪಾಪೂ, ಚಿದಂಬರ ಆರ್ಟ್ಸ್‌ನ ಪ್ರೊಡ್ಯೂಸರ್ ಷಣ್ಮುಗಂ ಫೋನು ಮಾಡಿದ್ರು. ಅವರ ಹೊಸ ಚಿತ್ರಕ್ಕೆ ಸುನೀಲ್‌ಕುಮಾರ್ ಜೊತೆ ಮಾಡೋಕೆ ನಿನ್ನ ಕೇಳ್ತಾ ಇದ್ದಾರೆ. ಇಪ್ಪತ್ತೈದು ಸಾವಿರಕ್ಕೆ ಕಡಿಮೆ ಇಲ್ಲಾಂತ ಹೇಳಿದ್ದೀನಿ ! ಗಾಯಿತ್ರಿ ಸ್ಟುಡಿಯೋಗೆ ನಿನ್ನ ನೋಡೋಕೆ ಬರ್‍ತಾರಂತೆ.'

ಮಾಧು ಕ್ರಾಪಿನಲ್ಲಿ ಕೈಯಾಡಿಸಿಕೊಂಡು ತಾಯಿಯತ್ತ ನೋಡಿದ.

'ಅಮ್ಮಾ, ನಿಂಗೆ ತಲೆ ಇಲ್ಲಾ ಅನ್ನೋದು ಅದಕ್ಕೇ. ಸುನೀಲ್ ಕುಮಾರ್ ಜೊತೆಮಾಡೋಕೆ ಚಾನ್ಸ್ ಸಿಕ್ತಾ ಇರೋದೇ ಹೆಚ್ಚು. ನೀನು ಬರೀ ಕಮಾಯ್ಸೋದು ನೋಡ್ತೀಯಾ ! ನಮ್ಮ ಪಾಪೂ ಅವ್ನ ಜೊತೆ 'ಹಿಟ್' ಆಗ್ಬಿಟ್ರೆ ಅಂಥ ಇಪ್ಪತ್ತೈದು ಸಾವಿರ ಎಷ್ಟು ಬೀಳತ್ತೋ ? !'

'ಮಾಥೂ ಹೇಳೋದು ಕರೆಕ್ಟ್ !' ರಾಮು ದನಿಗೂಡಿಸಿದ. 'ಪ್ರೊಡ್ಯೂಸರ್ಸ್ ಇನ್ಯಾರಾದ್ರೂ ಇಪ್ಪತ್ತಕ್ಕೆ ಮಾಡ್ತೀನಿಂತ ಅಂದ್ರೆ ಸಾಕು ಪಾಪ್ರೂ ಕೈ ಬಿಡ್ತಾರೆ !'

'ಸಾಕ್ರೋ ಎಲ್ರೂ ಜಾಣರೇ, ನಂಗೇ ಹೇಳ್ಕೊಡ್ತೀರಾ ? ಪಾಪ್ರೂ ಹೇಗಿದ್ಲು ! ಇವೊತ್ತು 'ತಾರೆ' ಅಂತ ಮಾಡ್ದೋಳು ನಾನು ಗೊತ್ತಾ ? ನಿಮ್ಮ ಬುದ್ಧಿವಾದ ನಂಗೆ ಬೇಕಾಗಿಲ್ಲ. ನಾನು ನೋಡ್ಕೋತೀನಿ.'

ಪವಿತ್ರ ಅವರಿಗೆ ಬೆನ್ನು ತಿರುಗಿಸಿ ತನ್ನ ರೂಮಿನತ್ತ ಹೆಜ್ಜೆ ಹಾಕಿದಳು. ಯಾಕೋ ಕೊಂಚ ತಲೆ ನೋಯುತ್ತಿತ್ತು. ಮೈ ಕೈ ಭಾರ. ಹಾಯಾಗಿ ಬೆಚ್ಚಗೆ ಹೊದ್ದು ಮಲಗುವ ಹಾಗಿದ್ದರೆ ! ತಾನೂ ಅವರಂತೆ ಬಾಯಿಗೆ ಬಂದಂತೆ ಹರಟುತ್ತಾ, ಬಯಸಿದ್ದು ತಿನ್ನುವ ಹಾಗಿದ್ದರೆ ! ರೋಜಿ ಬಂದು ನಿಂತಾಗ ಪಾಪ್ರೂ ಹೌಸ್ ಕೋಟನ್ನು ಬಿಚ್ಚಿ ಸೆದಳು.

'ಬಾ, ಪಾಪ್ರೂ ನೀರು ರೆಡಿಯಾಗಿದೆ. ಮೈ ಕೈ ಮಸಾಜ್ ಮಾಡಿಬಿಡ್ತೀನಿ. ಅಷ್ಟರಲ್ಲಿ ನೀರು ಕೊಂಚ ಆರಲಿ.'

ಪವಿತ್ರ ಮರು ಮಾತಾಡದೇ ಅಕ್ಕ ರೋಜಿ ಹೇಳಿದಂತೆ ಸಣ್ಣ ಮರದ ಮಂಚದ ಮೇಲೇರಿ ಕುಳಿತಳು. ರೋಜಿ ಅವಳ ಕೂದಲನ್ನೆತ್ತಿ ಬೋರಲಾಗಿ ಮಲಗುವಂತೆ ಹೇಳಿ ವಿವಸ್ತ್ರಳನ್ನಾಗಿ ಮಾಡಿ ಮೈಗೆ ಎಣ್ಣೆ ಹಾಕಿ ಮಸಾಜ್ ಮಾಡತೊಡಗಿದಾಗ ಪವಿತ್ರ ನಿಟ್ಟುಸಿರಿಟ್ಟಳು. ರೋಜಿಯೆಂದರೆ ತನಗೆ ಬಲು ಅಪ್ತಳು. ಅವಳೊಬ್ಬಳೇ ಇದ್ದರೆ ತಾನು ಏನು ಬೇಕಾದರೂ ಮಾತನಾಡಬಹುದು.

'ರೋಜೀ, ಅಲ್ಲೇ ಕಣೇ ಬೆನ್ನ ಹತ್ರ ನೋವು. ಕತ್ತಿನ ಹಿಂಬಾಗಾನೂ ಮಸಾಜ್ ಮಾಡು. ಯಾಕೋ ತಲೆ ನೋಯ್ತಾ ಇದೆ. ಇವೊತ್ತು ಶೂಟಿಂಗ್ ಇಲ್ದಿದ್ರೆ ಎಷ್ಟು ಚೆನ್ನಾಗಿರೋದೂ!' ಪವಿತ್ರ ಹೇಳಿದಾಗ ರೋಜಿ ಅರ್ಧ ಮರೆಯಾಗಿದ್ದ ತಂಗಿಯ ಮುಖದತ್ತ ನೋಡಿದಳು. ಬೊಗಸೆ ಕಂಗಳ ಚೆಲುವೆ, ಆ ನೀಳವಾದ ಮೂಗು, ಪುಟ್ಟ ತುಂಟ ತುಟಿ, ಆ ನುಣ್ಣನೆಯ ಸುಳಿಗಲ್ಲ. ಮರುಕ ಉಕ್ಕಿತು. ಅವಳು ಚಿಕ್ಕ ಮಗುವಾಗಿದ್ದಾಗ ತಾನು ಅವಳನ್ನು ಸೊಂಟದ ಮೇಲೆ ಎತ್ತಿಕೊಂಡು ಹೆಮ್ಮೆಯಿಂದ ಹೋದಾಗ ತನ್ನ ಕುಂಟೆ ಬಿಲ್ಲೆ ಗೆಳತಿಯರೆಲ್ಲಾ ಹೇಳುತ್ತಿರಲಿಲ್ಲವೇ ? 'ಲೇ ರೋಜೀ ನಿನ್ತಂಗಿ ತುಂಬಾ ಮುದ್ದಾಗಿದ್ದಾಳೆ. ನಿಮ್ಮನೇಲಿ ಯಾರೂ ಅವಳಷ್ಟು ಚೆನ್ನಾಗಿಲ್ಲಾಂತ !' ಅದೂ ನಿಜವೇ. ಶ್ಯಾಮುವಿಗೆ ಮಾತ್ರ

ಅವಳ ಹೋಲಿಕೆ ಕೊಂಚವಿತ್ತು. ತಾವೆಲ್ಲಾ ಅಮ್ಮನನ್ನೇ ಹೋಲುತ್ತಿದ್ದುದ್ದು. ಅಪ್ಪನನ್ನು ತುಂಬಾ ಹೋಲುತ್ತಿದ್ದುದ್ದು ಮಾಧೂ. ಈ ಪವಿತ್ರ ಅಪ್ಪನ ಮೂಗು, ಕಣ್ಣು, ಬಾಯಿ ಹೋಲುತ್ತಿದ್ದು ಅಮ್ಮನ ಬಣ್ಣ ಮಾತ್ರ ಪೂರಾ ಪಡೆದಿದ್ದಳು. ಅಲ್ಲದೇ ಅಪ್ಪನಂತೆ ನೀಳವಾದ ದೇಹ, ಮಾಟವಾದ ಕೈಕಾಲು ಬೆರಳುಗಳೂ ! ಜೊತೆಗೆ ಅಪ್ಪನ ಗಾಂಭೀರ್ಯ ಕೂಡ ! ಮಾಧೂ ಎಲ್ಲಾ ಅಪ್ಪನಂತಿದ್ದರೂ ಬುದ್ಧಿಯೆಲ್ಲ ಅಮ್ಮನದೇ ! ತಾನೂ, ಮಾಧೂ ಶ್ಯಾಮು ಲಲ್ಲಿಯಾದ ಮೇಲೆ ಐದನೆಯವಳು ಪವಿತ್ರ. ಆಮೇಲೆ ರಾಮು, ಪುಟ್ಟಿ. ಅಪ್ಪನಿದ್ದ ಬಡ ಗುಮಾಸ್ತನ ಕೆಲಸಕ್ಕೆ ಏಳು ಜನ ಮಕ್ಕಳೇಕೆ ಬೇಕಿತ್ತು ! ಈ ದೊಡ್ಡ ಸಂಸಾರದ ಭಾರ ಈಗ ಎಲ್ಲಾ ಪವಿತ್ರಳ ಮೇಲೆ.

'ಲೇ ರೋಜೀ ಮೆಲ್ಲಗೇ ! ನನ್ನ ಕಾಲೇನಾಗ್ಬೇಕು ಹಾಗೆ ಬಲವಾಗಿ ಹಿಸುಕಿದರೆ !' ಪವಿತ್ರ ರೇಗಿದಾಗ ಎಚ್ಚೆತ್ತಳು. 'ಎಲ್ಲಿ ಬೆನ್ನಿನ ಮೇಲೆ ಮಲಗು !'

'ಇನ್ನೂ ಮುಗೀಲಿಲ್ವಾ ಪಾಪೂ ? ಆಗ್ಲೇ ಎಂಟು ಗಂಟೆಯಾಗ್ತಾ ಬಂತು ! ಮಾಲತಮ್ಮ ಆಗಲೇ ಶಿಸ್ತಾಗಿ ಅಲಂಕರಿಸಿಕೊಂಡು ಬಂದಿದ್ದರು. ಗಿಣಿಗಲ ಹಸಿರು ಜರತಾರಿಯ ಸೀರೆ, ಕೆಂಪು ಅರ್ಧ ತೋಳಿನ ರವಿಕೆ, ಒಂದು ಕೈಗೆ ನಾಲ್ಕು ಚಿನ್ನದ ಬಳೆ, ಮತ್ತೊಂದು ಕೈಗೆ ವಾಚು, ಕತ್ತಿನಲ್ಲಿ ನಾಲ್ಕೆಳೆ ಚಿನ್ನದ ಸರ, ಒಂದು ಅಡ್ಡಿಕೆ, ಕಂಕುಳಲ್ಲಿ ದೊಡ್ಡ ಕಪ್ಪು ಪರ್ಸ್, ಕಾಲಿಗೆ ಅರ್ಧ ಇಂಚು ಎತ್ತರದ ನಿಗಿನಿಗಿ ಹೊಳೆಯುವ ಚಪ್ಪಲಿ, ಎತ್ತಿ ಕಟ್ಟಿದ ತುರುಬು. ನವಿರಾಗಿ ಮುಖಕ್ಕೆ ಹಚ್ಚಿದ ಮೇಕಪ್, ಹುಬ್ಬುಗಳ ನಡುವೆ ಕಂಡೂ ಕಾಣದಂತೆ ಕೆಂಪು ಕುಂಕುಮ ತಂದೆ ಸತ್ತು ಆಗಲೇ ನಾಲ್ಕು ವರ್ಷವಾಗಿ ಹೋಗಿತ್ತು. ಸಣ್ಣ ಮನೆಯಲ್ಲಿ ಒಂದು ಹೊತ್ತು ಊಟವಿದ್ದರೆ ಮತ್ತೊಂದು ಹೊತ್ತು ಏನೂ ಇರುತ್ತಿರಲಿಲ್ಲ. ಪವಿತ್ರಳನ್ನು 'ತಾರೆ'ಯನ್ನಾಗಿ ಮಾಡಲು ಅಮ್ಮ ತಯಾರಾದ ಮೇಲೆಯೇ ತಮ್ಮ ಬದುಕು ಹಸನಾದುದು. ಕೈಮಗ್ಗದ ಅಗ್ಗದ ಸೀರೆ, ಬರಿಗೈ ಬರಿ ಕತ್ತಿನಲ್ಲಿದ್ದ ಅಮ್ಮ ಹೀಗಾಗಲು ಸಾಧ್ಯವಾದುದು ! ರೋಜಿ ಯೋಚಿಸುತ್ತಲೇ ಅವಸರವಾಗಿ ಮಸಾಜ್ ಮುಗಿಸಿದಳು.

'ಬಾ ಪಾಪೂ, ಸ್ನಾನ ಮಾಡು ನಡಿ. ಅಮ್ಮ, ಲಲ್ಲಿಗೇ ಹೇಳು ಪಾಪೂ ಬಟ್ಟೆ ತೆಗೆದಿಡೋಕೆ !'

ಪವಿತ್ರಳಿಗೆ ವೈಶಿಕ್ಕಿ ಹದವಾದ ನೀರಿನಲ್ಲಿ ಸ್ನಾನ ಮಾಡಿಸಿದಾಗ ಅಕ್ಕನ ಬಗ್ಗೆ ಮರುಕವುಂಟಾಯಿತು.

'ರೋಜಿ ನನ್ನ ನೀವು ಸ್ಟಾರ್ ಮಾಡೋಕೆ ಹೋಗಿ ನೀವೆಲ್ಲ ನನ್ನ ಚಾಕರಿ ಮಾಡೋ ಹಾಗಾಯ್ತು ! ತಾಳು ಇನ್ನೊಂದೆರಡು ಚಿತ್ರಗಳು ಸಕ್ಸೆಸ್ ಆಗ್ಲಿ ನಿಮ್ಮನ್ನೆಲ್ಲಾ ಚೆನ್ನಾಗಿ ನೋಡ್ಕೊಳ್ಳೋಕೆ ನಾನೇ ನಿಮ್ಗೆ ಆಳುಗಳನ್ನ , ಕೆಲಸದೋರ್ನ ಇಡಿಸ್ತೀನಿ !'

'ಸಾಕು ಪಾಪೂ, ಸುಮ್ನೆ ಮೈ ಕೆಡಿಸ್ಕೋಬೇಡಾ. ಈಗ ಇರೋದೇ ಸಾಕು !' ರೋಜಿ ಹೇಳಿದಾಗ ಪಾಪೂ ತಡೆದಳು.

'ಹಾಗನ್ನಬೇಡಾ ರೋಜೀ. ಈ ಲೈನ್‌ನಲ್ಲಿ ಯಾವಾಗ್ಲೂ ಮೇಲೆ ಏರ್ತಾ ಇರ್ಬೇಕು. ಒಂದ್ಸಲ ಜಾರಿ ಕೆಳಗೆ ಇಳಿದ್ರೆ ಕೆಳಗೆ ಬಿದ್ದು ಹೋಗೋದೇ ! ಪ್ರತಿ ದಿನ ನಂಗೊಬ್ಬ ಪ್ರತಿಸ್ಪರ್ಧಿಯಾಗಿ ಸೇರ್ತಾನೇ ಇರ್ತಾಳೆ ! ಕಾಲ ನಡೀಬೇಕಾದ್ದೆ ಮಾಡ್ಕೋಬೇಕು. ಅಮ್ಮ ಒಂದೊಂದ್ಸಲ ಹೇಳೋದು ನಿಜ !'

ರೋಜಿ ಅವಳ ಮೈಯೊರಸುತ್ತಾ ನಕ್ಕಳು. 'ಅಲ್ವೇ ಪಾಪೂ, ನೀನೊಬ್ಬೇ ನಮ್ಗೆ ಬೇಕಾದ್ದೆಲ್ಲಾ ಮಾಡೋಕೆ ದುಡೀಬೇಕಾ ? ನಾಲ್ಕು ಸಲ ಪೀಯೂಸೀಲಿ ಡುಮ್ಕಿ ಹೊಡೆಯೋ ಬದ್ಲು ಮಾಧು ಓದಿ ಮುಂದೆ ಬಂದಿದ್ರೆ, ಶ್ಯಾಮೂ ಸಿಗರೇಟು, ಕುಡಿಯುತ್ತಾ ಸಮಯ ಹಾಳುಮಾಡ್ದೇ ಇದ್ದಿದ್ರೆ ನಮಗ್ಯಾಕೆ ಕಷ್ಟ ಇರೋದು ! ನನ್ನೂ ಅಮ್ಮ ಓದಿಸಿದ್ರೆ ನಾನೂ ಏನಾದ್ರೂ ಕೆಲ್ಸ ಹುಡ್ಕೋಬೋದಿತ್ತು. ಲಲ್ಲೀಗೆ ಫ್ಯಾಷನ್ ಹುಚ್ಚು ಕಡಿಮೆಯಾಗಿ ಬೇಗ ಬೇಗ ಪಾಸು ಮಾಡಿದ್ರೆ ಅವಳಿಗೂ ಎಲ್ಲಾದ್ರೂ ಕೆಲಸ ಸಿಕ್ಕೋದು ! ನಾವು ನಾಲ್ಕು ಜನ ಸೇರಿ ದುಡಿಯೋ ಹಾಗಿದ್ರೆ ನಿನ್ನ , ಪುಟ್ಟೀನ್ನ ರಾಮೂನನ್ನು ನೋಡ್ಕೊಳೋದೇನು ಕಷ್ಟ ಆಗ್ತಾ ಇತ್ತು ಹೇಳು ! ಅಮ್ಮ ನಿನ್ನ ಸೌಂದರ್ಯಾನ್ನ ಉಪಯೋಗಿಸ್ಕೊಂಡು ಲಕ್ಷಾಂತರ ರೂಪಾಯಿ ಸಂಪಾದಿಸ್ತೀನಿ ಅಂತ ಹೊರಟಿರೋದು ನಂಗ್ಯಾಕೋ ಇಷ್ಟ ಇಲ್ಲ !'

'ರೋಜಿ, ಆ ಮಾತು ಈಗ ಬೇಡಾ. ನಂಗೆ ಅದೆಲ್ಲಾ ನೆನಸ್ಕೊಂಡ್ರೆ ದಿನಾನೇ ಕೆಟ್ಟುಹೋಗುತ್ತೆ. ಇವೊತ್ತು ಕ್ಲೈಮಾಕ್ಸ್ ಶೂಟಿಂಗ್ ಬೇರೆ !' ಪವಿತ್ರಳಿಗೆ ಮಾತು ಮುಂದುವರಿಸಲು ಬೇಸರವಾಯಿತು.

ಲಲ್ಲಿ ತೆಗೆದಿಟ್ಟಿದ್ದ ತಿಳಿ ಹಳದಿ ಶಿಫಾನ್ ಸೀರೆ, ಅದಕ್ಕೊಪ್ಪುವ ಅದೇ

ಬಣ್ಣದ ತೋಳಿಲ್ಲದ ರವಿಕೆ, ಅದಕ್ಕೆ ಹೊಂದುವ ಒಳ ಉಡುಪುಗಳು, ಕಾಲಿಗೂ ಹಳದಿ ಬಣ್ಣದ ಒಂದಿಂಚು ಎತ್ತರದ ಚಪ್ಪಲಿ, ಅದೇ ಬಣ್ಣದ ಸಣ್ಣ ಪರ್ಸು, ಸೆಂಟು ಹಾಕಿದ್ದ ಅಂದವಾದ ಕರವಸ್ತ್ರ.

ರೋಜಿಯ ಆದೇಶದ ಮೇರೆಗೆ ಹಿಪ್‌ಸ್ಟರ್ ಸೀರೆಯುಟ್ಟು ತೋರು ವೈಯಿನ ರವಿಕೆ ತೊಟ್ಟಾಗ ಪವಿತ್ರಳಿಗೇಕೋ ಹಿಂಸೆಯಾಯಿತು. ಪಾರ ದರ್ಶಕವಾದ ಹಳದಿ ಶಿಫಾನ್ ಸೀರೆ ಅವಳ ಮೈಮುಖ ಮುಚ್ಚುವ ಬದಲು ಮತ್ತು ಎದ್ದು ತೋರುವಂತೆ ಮಾಡಿತ್ತು. .ಅವಳ ಮುಜುಗರ ಕಂಡ ಲಲ್ಲಿ ನಸು ನಕ್ಕಳು.

'ಅಲ್ವೇ ಪಾಪೂ, ಸಿಂಗೆ ಇಷ್ಟೊಳ್ಳೆ, ಫಿಗರು, ಬ್ಯೂಟಿ, ಕಲರ್ ಯಾಕೇ ಇರೋದೂ ? ನಂಗೇನಾದ್ರೂ ಇದ್ದಿದ್ರೆ ಹೇಗೆ ಮೆರೀತಾ ಇದ್ನೋ.'

ಅವಳ ಕೈ ಪವಿತ್ರಳ ಉದ್ದವಾದ ಸೊಂಪಾದ ನಣ್ಗಾದಲಿನ ಮೇಲೆ ಆಡಿತು.

'ಥೂ ಇಷ್ಟುದ್ದಾ ಕೂದಲು ಬೇಡ್ವೇ ಪಾಪೂ. ಹೀಗೆ ಕೂದ್ಲು ಇಟ್ಕೊಂಡಿರೋದು ನೋಡಿದ್ರೆ, ಎಲ್ರೂ ಸಿಂಗೆ ಗಜಗಾರಿಯಂತ ರೋಲ್ಸ್ ಕೊಡೋದೂ. ಸ್ವಲ್ಪ 'ಮಾಡ್' ಆಗಿರು. ಈ ಪಿಕ್ಚರ್ ಶೂಟಿಂಗ್ ಮಾಡಿದ್ಮೇಲೆ ಅರ್ಧ ಬೆನ್ನಿನವರೆಗೆ ಕತ್ತರಿಸಿಬಿಡ್ತೀನಿ. ನೀನು ಜೀನ್ಸ್, ಮಿಡಿ, ಸ್ವಿಮ್ ಸೂಟ್ ಹಾಕಿದ್ರೂ ಚೆನ್ನಾಗಿರುತ್ತೆ.'

'ಸಧ್ಯ ನನ್ನ ಕೂದಲಿನ ತಂಟೆಗೆ ಬರ್ಬೇಡಾ ನಂಗಿದೇ ಇಷ್ಟ' ಪವಿತ್ರ ಅವಳ ಕೈ ಅತ್ತ ಸರಿಸಿದಳು

ಅಷ್ಟರಲ್ಲಿ ಮೇಕಪ್ ಮ್ಯಾನ್ ಅರಸಪ್ಪ ಬಂದ. ರೋಜಿ, ಲಲ್ಲಿ ರೂಮಿನಿಂದ ಹೊರಬಂದರು.

ಮುಖಕ್ಕೆ ನವಿರಾಗಿ ಮೇಕಪ್ ಬಳಸಿ, ಮುಂಗೂದಲಿಗೆ ಕರ್ಲರ್ಸ್ ಹಾಕಿ ತುಟಿಗೆ ರಂಗು ಹಚ್ಚುತ್ತಾ ಅರಸಪ್ಪ ಹೇಳಿದ.

'ಅಮ್ಮಾ ರಾಜೇಂದ್ರ ನಿಮ್ಮ ಹತ್ರ ಮಾತಾಡ್ಬೇಕಂತೆ. ಸ್ಟುಡಿಯೋ ಗ್ರೀನ್ ರೂಂಗೆ ಲಂಚ್ ಬ್ರೇಕ್ನಲ್ಲಿ ಬರ್ತಾರಂತೆ.'

ಪವಿತ್ರ ಅವನು ತುಟಿಗೆ ರಂಗು ಹಚ್ಚುವವರೆಗೆ ಕಾಯಬೇಕಿತ್ತು. ಹಚ್ಚಿ ಮುಗಿಸಿದ ನಂತರ ಕೇಳಿದರು.

'ಯಾಕಂತೆ ? ಹಾಗೆ ಗ್ರೀನ್ ರೂಂಗೆ ಬರ್ಬೇಡಾ ಅಮ್ಮಾ ಇರ್ತಾ

ಳೇಂದ್ರೆ ಕೇಳೋದಿಲ್ಲ. ಪ್ರೆಸ್ನೋರೆಲ್ಲಾ ಇರ್ತಾರೆ. ಇಲ್ಲದ್ದು ಸಲ್ಲದ್ದೆಲ್ಲ ಹಬ್ಬಿಬಿಡುತ್ತೆ. ಮನೇಗೆ ಬರ್ಬೇಕಂತೇಂತ ಹೇಳು. ಇವತ್ತೆಲ್ಲಿದೆ ಅವರ ಶೂಟಿಂಗ್ ? ನಿಂಗೆ ಯಾವಾಗ ಹೇಳಿದ್ರು ?'

'ಎರಡ್ನೇ ಫ್ಲೋರಲ್ಲಿದೆ. ಬರೀ ಆ್ಯಕ್ಷನ್ ಸೀನುಗಳೇ. ನನ್ತಮ್ಮ ಚಂದ್ರಪ್ಪ ಅವರ ಮೇಕಪ್ ಮ್ಯಾನ್ ಆಗಿದ್ದಾನಲ್ಲಾ ಈಗ ಅವ್ನ ಕೈಲಿ ಹೇಳಿ ಕಳ್ಸಿದ್ರು. ಮನೆಗೆ ಬಂದ್ರೆ ನಿಮ್ಮನೇಲಿ ಒಬ್ರಿಗೂ ಇಷ್ಟ ಇಲ್ಲಾಂತ ಗೊತ್ತು ಅವರ್ಗೆ.'

ಅರಸಪ್ಪ ಹುಬ್ಬು ತಿದ್ದುತ್ತಾ ಹೇಳಿದ. 'ಚಿದಂಬರಂ ಆರ್ಟ್ಸ್‌ನ ಷಣ್ಮುಗಂ ಹತ್ರ ನೆನ್ನೆ ಮಾತಾಡ್ತಾ ಇದ್ದಾಗ ಅವ್ರು ನಿಮ್ಮನ್ನು ಮುಂದಿನ ಚಿತ್ರಕ್ಕೆ ಸುನೀಲ್‌ಕುಮಾರ್ ಜೊತೆ ಹಾಕ್ತೀನಿ ಅಂದಾಗ ರಾಜೇಂದ್ರನಿಗೆ ಚೂರು ಇಷ್ಟ ಆಗ್ಲಿಲ್ಲ. ಶುದ್ಧ ಲೋಫರ್ ಸೂಳೇ ಮಗ. ಅವ್ನ ಕೈಗೆ ಪವಿತ್ರನ್ನ ಒಪ್ಸಿದ್ರಾಯ್ತೂಂತ ನನ್ತಮ್ಮನ ಹತ್ರ ರೇಗಾಡಿದ್ರಂತೆ.'

ಪೂರ ಮುಖದ ಅಲಂಕಾರ ಮುಗಿಸುವವರೆಗೆ ಪವಿತ್ರ ಏನೂ ಮಾತ ನಾಡುವ ಹಾಗಿರಲಿಲ್ಲ. ಕಂಟಿನ್ಯೂಯಿಟಿಗೋಸ್ಕರ ಹಿಂದಿನ ದಿನ ಷೂಟಿಂಗ್ ನಂತೆಯೇ ಕೂದಲ ವಿನ್ಯಾಸ ಮುಂತಾದುದಕ್ಕೆಲ್ಲ ಪ್ರಿನ್ಸೆಸ್ ಬ್ಯೂಟಿ ಪಾರ್ಲ್‌ರ್‌ನಿಂದ ರೀಟಾ ಬರಬೇಕಿತ್ತು.

ಮಾಲತಮ್ಮನ ಹೆಜ್ಜೆ ಸದ್ದು ಕೇಳಿ ಬರುತ್ತಲೇ ಪವಿತ್ರ ತುಟಿಯ ಮೇಲೆ ಬೆರಳಿಟ್ಟು ಸಂಜ್ಞೆ ಮಾಡಿದಳು.

ಅರಸಪ್ಪ ತನ್ನ ಪೆಟ್ಟಿಗೆಯತ್ತ ಗಮನ ಹರಿಸದಂತೆ ನಟಿಸಿದ. ಮಾಲ ತಮ್ಮ ಅಲ್ಲಿಯೇ ಇದ್ದ ಕುರ್ಚಿಯ ಮೇಲೆ ಕುಳಿತರು.

'ಎಲ್ಲಿ ಪವಿತ್ರ ಇತ್ತ ತಿರುಗು ಕಣ್ಣಿನ ಸೋಗೆ ಜಾಸ್ತಿ. ಅರಸಪ್ಪ, ನಿಂಗೆ ಎಷ್ಟು ಸಲ ಹೇಳಿದ್ದೀನಿ, ಅವಳಿಗೆ ಹುಬ್ಬಿನ ನಡುವೆ ಬಿಂದಿ ಇಡ ಬೇಡಾಂತ. ಅದು ಅವಳಿಗೆ ತುಂಬಾ ದೊಡ್ಡದಾಗಿ ಕಾಣುತ್ತೆ. ಕೆಳಗಿನ ತುಟಿಗೆ ತುಂಬಾ ಜಾಸ್ತಿಯಾಯ್ತು ಬಣ್ಣ. ಕಿವಿ ಮಗ್ಗುಲಲ್ಲಿ ಒಂದಿಷ್ಟು ಜಾಸ್ತಿ ಕೂದಲು ಬಿಟ್ಟು ಕಲ್ಲರ್‌ನ ಹಾಕು.'

ಅರಸಪ್ಪ ತಲೆ ತುರಿಸಿಕೊಂಡ.

'ಅಮ್ಮ, ಕಂಟಿನ್ಯೂಟಿಗೋಸ್ಕರ ಹೀಗೆ ಮಾಡಿದ್ದೀನಿ. ಆಮೇಲೆ ಡೈರೆಕ್ಟರ್ ವಿಜಯೇಂದ್ರ ನನ್ನ ಸುಮ್ನೆ ಬಿಡ್ತಾರಾ ?'

'ನೀವು ಮೇಕಪ್‌ಮ್ಯಾನ್, ಕ್ಯಾಮರಾಮ್ಯಾನ್ ಯಾವ ಆಕ್ಟರ್,

ಆಕ್ಟ್ರೆಸ್‌ಗಳನ್ನು ಹಾಳು ಮಾಡಬಲ್ಲಿರಿ. ಯಾರ ಮುಖದಲ್ಲಿ ಯಾವುದು ಹೆಚ್ಚು ಸುಂದರ ಅಂತ ನೋಡಿ ಮೇಕಪ್ ಮಾಡೋಲ್ಲ. ನಿಮಗಿಷ್ಟ ಬಂದ್ಹಾಗೆ ಮಾಡ್ತೀರಿ. ಅವ್ರು ಕ್ಯಾಮೆರಾಮೆನ್ ಯಾವ ಅಂಗಲ್‌ನಲ್ಲಿ ಯಾರು ಹೆಚ್ಚು ಚೆನ್ನಾಗಿ ಕಾಣ್ತಾರೇಂತ ಯೋಚಿಸಿ ಮಾಡೋಲ್ಲ.'

ಮಾಲತಮ್ಮ ತಮಗೆ ಬೆಳ್ಳಿ ತೆರೆಯ ಸಕಲವೂ ತಿಳಿದಂತೆ ಮಾತನಾಡಿದಾಗ ಪವಿತ್ರಳಿಗೆ ಸರಿ ಬೀಳಲಿಲ್ಲ.

'ಹಾಗೆಲ್ಲಾ ಹೇಳ್ಬೇಡಮ್ಮ, ಅರಸಪ್ಪನಿಗೆ ಆ ತರಹ ಭಾವನೆ ಇಲ್ಲ. ನಾನು ಮಾಡಿರೋ ಹನ್ನೊಂದು ಚಿತ್ರಗಳಲ್ಲೂ ನಾನು ಯಾವ ಅಂಗಲ್‌ನಲ್ಲೂ ಅಸಹ್ಯವಾಗಿ ಕಂಡಿಲ್ಲ. ಹಾಗಿದ್ದಿದ್ರೆ ಇವೊತ್ತು ನನ್ನ ಕೈಲಿ ಇಷ್ಟೊಂದು ಫಿಲಂಸ್ ಇರ್ತಾ ಇತ್ತಾ ?'

'ನೀನು ಚೆನ್ನಾಗಿದ್ದೀ, ಟ್ಯಾಲೆಂಟ್ ಇದೆ, ಯಾರೂ ಏನೂ ಮಾಡೋಕ್ಕಾಗೋಲ್ಲ. ಆ ಹಾಳು ರಾಜೇಂದ್ರ ಒಬ್ನೇ ನಿನ್ನ ಭವಿಷ್ಯ ಹಾಳು ಮಾಡೋಕೆ ಪ್ರಯತ್ನಿಸ್ತಾ ಇರೋದು. ಅವನ್ಜೊತೆ ಎರಡು ಪಿಕ್ಚರ್‌ನಲ್ಲಿ ಮಾಡ್ಬಿಟ್ಟೇ ಅಂತ ಅವನ ಸೊತ್ತು ನೀನು ಅಂದ್ಕೊಂಡಿದ್ದಾನೆ. ನಿನ್ನ ಸೆಟ್ಸ್‌ನಲ್ಲಿ ಬಂದು ಅವ್ನು ನೋಡೋದು ನಂಗೆ ಸುತರಾಂ ಇಷ್ಟ ಇಲ್ಲ' ಮಾಲತಮ್ಮ ಹೇಳಿದಾಗ ಅರಸಪ್ಪ ಪವಿತ್ರಳ ಮುಖ ನೋಡಿದ. ಮೇಕಪ್ಪಿನ ಬಣ್ಣದಲ್ಲೂ ಅದು ಬಣ್ಣವೇರಿದ್ದು ಕಾಣಿಸಿತು.

'ಇನ್ನೊಂದ್ಲೋಟ ಪಾನಕ ಕುಡಿ ಪಾಪೂ. ಇಲ್ದಿದ್ರೆ ಸುಸ್ತಾಗುತ್ತೆ. ಶ್ಯಾಮೂಗೆ ಹೇಳಿದ್ದೀನಿ, ಹನ್ನೆರಡು ಗಂಟೆಗೆ ಇನ್ನೊಂದೆರಡು ಲೋಟ ಪಾನಕ ಮಾಡಿಸಿಕೊಂಡು ಬಾ ಅಂತ. ಸಕ್ರೇನೂ ಜಾಸ್ತಿ ಹಾಕ್ಬೇಡಾಂತ ಹೇಳಿದ್ದೀನಿ. ಅರಸಪ್ಪ ನೀನೂ ನಮ್ಜೊತೆ ಕಾರ್ನಲ್ಲಿ ಬಂದ್ಬಿಡು. ಅಲ್ಲಿ ಮೇಕಪ್ ಟಚ್ ಮಾಡ್ಬೇಕಾಗುತ್ತೆ. ಪ್ರೊಡ್ಯೂಸರ್ ಷಣ್ಮುಗಂ ಬರ್ತಾ ಇದ್ದಾರೆ. ಟೇಕ್ಸ್ ಮಧ್ಯ ಬಿಡುವಿನ ವೇಳೇಲಿ ಮಾತಾಡ್ತಾರಂತೆ.'

ತಾಯಿ ಎಲ್ಲಾ ಕಾರುಬಾರು ವಹಿಸಿಕೊಂಡ ಮೇಲೆ ಪವಿತ್ರಳಿಗೆ ಮಾತನಾಡಲು ಏನೂ ಉಳಿದಿರಲಿಲ್ಲ.

ತಾನು ರಾಜೇಂದ್ರನನ್ನು ಭೇಟಿಯಾಗಿ ಮಾತನಾಡಬೇಕಾದರೆ ತನಗೆ ಸಹಾಯ ಮಾಡುವವಳು ಅಕ್ಕ ರೋಜಿಯೊಬ್ಬಳೇ. ರೀಟಾ ಏದುಬ್ಬಸ ಪಡುತ್ತಾ ಬಂದಳು.

'ಸಾರಿ ಮ್ಯಾಡಂ, ರಿಕ್ಷಾ ಟ್ಯಾಕ್ಸಿ ಒಂದೂ ಸಿಗಲಿಲ್ಲ. ಯಾರ್ನೊ

ಲಿಫ್ಟ್ ಕೇಳಿ ಬಂದೆ.'

'ಬೇಗ ಹೇರ್ ಸ್ಟೈಲ್ ಮುಗಿಸು ರೀಟಾ. ಇನ್ನೊಂದು ಕಾಲು ಗಂಟೇಲಿ ಯೂನಿಟ್ಟಿನ ಕಾರು ಬರುತ್ತೆ. ನಾವು ಯಾವಾಗ್ಲೂ ಟೈಮಿಗೆ ಸರ್‍ಯಾಗಿ ಹೋಗೋರು. ಪವಿತ್ರ ಬೇಕೂಂತ ಲೇಟಾಗಿ ಬರ್‍ತಾಳೇಂತ ಗುಲ್ಲು ಹಬ್ಬುತ್ತೆ ಅಷ್ಟೇ.'

ರೀಟಾ ಕೂದಲನ್ನು ಎತ್ತಿ ಕಟ್ಟುತ್ತಾ ಹೇಳಿದಳು. 'ಮಿಸೆಸ್ ಅಮ್ಮ, ನೀವು ಮಗಳ ಕೂದಲು ಕೊಂಚ ಕಟ್ ಮಾಡಿಸಿದರೆ ವಾಸಿ. ತುಂಬಾ ಉದ್ದ ಇದ್ರೆ ಮ್ಯಾನೇಜ್ ಮಾಡೋದು ಕಷ್ಟ.'

'ಬೇಡಾ, ಹೀಗೇ ಇರ್‍ಲಿ. ಕೂದಲು ಅವಳ ಸೌಂದರ್ಯಕ್ಕೆ ಕಳೆ ಕೊಡುತ್ತೆ ಅವಳ ಕೂದಲು ಕಂಡೇ ಅವಳ ಮೊದಲು ಫಿಲಂ ಪ್ರೊಡ್ಯೂಸರ್ ಶೇಖರ್ ಮಾರು ಹೋದದ್ದು' ಮಾಲತಮ್ಮ ಹೆಮ್ಮೆ ಯಿಂದ ಹೇಳಿಕೊಂಡರು.

'ಆದ್ರೆ ಎಲ್ಲಾ ಪ್ರೊಡ್ಯೂಸರ್‍ಸ್ ಒಂದೇ ತರಹ ಇರೋಲ್ಲ. ಒಬ್ಬೊಬ್ಬರ ಐಡಿಯಾ ಒಂದೊಂದು ತರಹ' ರೀಟಾ ಹೇಳಿದಾಗ ಮಾಲತಮ್ಮ ಕೊಂಚ ಗಡುಸಾಗಿ ಉತ್ತರಿಸಿದರು

'ರೀಟಾ, ನೀನು ಬಂದಿರೋದು ಹೇರ್‌ಸ್ಟೈಲ್ ಮಾಡೋಕೋ, ನಂಗೆ ಅಡ್ವೈಸ್ ಮಾಡೋಕೋ ?'

ಯೂನಿಟ್ಟಿನ ಕಾರು ಬರುವ ವೇಳೆಗೆ ಪವಿತ್ರ ಸಿದ್ಧಳಾಗಿದ್ದಳು.

ಮ್ಯಾನೇಜರ್ ಮೂರ್ತಿ ಕಾರು ನಿಲ್ಲಿಸಿ ಒಳಗೆ ಬಂದಾಗ ಮಾಲತಮ್ಮ ಅವರನ್ನು ಹಳೆಯ ಸೋಫಾದ ಮೇಲೆ ಕೂಡಿಸಲು ಮನಸ್ಸು ಅಳುಕಿತು. ಸೋಫಾದ ಮೇಲೆ ಪುಟ್ಟಿಯ ಸ್ವೆಟರ್ ಬಿದ್ದಿತ್ತು. ಟೇಬಲ್ಲಿನ ಕೆಳಗೆ ರಾಮುವಿನ ಚಪ್ಪಲಿ ಇತ್ತು. ಬಾಗಿಲಿಗೆ ಹಾಕಿದ್ದ ಕರ್ಟನ್ ಒಂದೆಡೆ ಹೊಲೆದದ್ದು ಕಾಣುತ್ತಿತ್ತು.

ಮೂರ್ತಿ ಕೂಡುತ್ತಲೇ ಹೇಳಿದರು. 'ಇವೊತ್ತು, ರವೀಂದ್ರನಾಥ್ ಅಂತ ರಾಜಲಕ್ಷ್ಮಿ ನಿಕೇತನ್ ಬ್ಯಾನರ್‌ನಲ್ಲಿ ಹೊಸ ಚಿತ್ರ ತಯಾರಿಸ್ಬೇ ಕೂಂತ ಇದ್ದಾರೆ. ಅವ್ರು ಬಂದು ಪವಿತ್ರನ್ನ ಒಂದ್ಸಲ ಎದುರಿಗೆ ನೋಡ್ಬೇ ಕೂಂದ್ರು. ನಾನು ಸೆಟ್ಸ್‌ಗೆ ಬಂದು ನೋಡಲು ಹೇಳ್ದೆ. ಯಾಕೆ ಒಳಗೆ ಬಂದು ಕೂತ್ಕೊಂಡ್ರೆಂದ್ರೆ ನೋಡಿ ಅಮ್ಮ, ಈ ಮನೆಗೆ ಅವರ್‍ನ ಕರ್ಕೊಂಡು ಬಂದ್ರೆ ಒಳ್ಳೇ ಒಪೀನಿಯನ್ ಬರೋಲ್ಲ. ಇಷ್ಟೊಂದು ಬೇಡಿಕೆ

ಯಿರೋ ತಾರೇಂದ್ರೇಲಿ ಒಂದು ದೊಡ್ಡ ಮನೆ, ಕಾರು ಬೇಡ್ವಾ ? ನಮ್ಮ ಪ್ರೊಡ್ಯೂಸರ್ ಹೇಗಿದ್ರೂ ಮುಂದೆ ಮಾಡೋ ಎರಡು ಫಿಲಂಗಳಲ್ಲಿ ಪವಿತ್ರನ್ನೇ ಹಾಕ್ಕೋಬೇಕೂಂತ ಇದ್ದಾರೆ. ಈಗ್ಲೆ ಅಡ್ವಾನ್ಸ್ ತೊಗೊಂಡು ಒಳ್ಳೆ ಆಧುನಿಕವಾದ ದೊಡ್ಡ ಬಂಗ್ಲೆಗೆ ಹೋಗೋದು ವಾಸಿ. ನನ್ನ ಫ್ರೆಂಡ್ ಹತ್ತಿರ ಸೆಕೆಂಡ್‌ಹ್ಯಾಂಡ್ ಕಾರಿದೆ. ಕೊಟ್ಬಿಡ್ಬೇಕೂಂತ ಇದ್ದಾನೆ. ಟೆಂಕರಿಂಗ್ ಮಾಡಿಸಿ, ಪೈಯಿಂಟ್ ಮಾಡ್ಸಿದ್ರೆ ಹೊಸ ಗಾಡಿ ಇದ್ದಾಗೇ ಆಗುತ್ತೆ.'

ಮೂರ್ತಿ ಹೇಳುತ್ತಿರುವಂತೆಯೇ ಮಾಲತಮ್ಮನ ಕಿವಿ ಚುರುಕಾಯಿತು. ಮೂರ್ತಿಯ ಪ್ರೊಡ್ಯೂಸರ್ ದೇವರಾಜ್ ಕೊಂಚ ಖಯಾಲಿ ಮನುಷ್ಯ. ಸೆಟ್‌ಗೆ ಆಗಾಗ ಬಂದಾಗಲೆಲ್ಲಾ ಪವಿತ್ರಳ ಪಕ್ಕದಲ್ಲೇ ಕುಳಿತು ಮಾತನಾಡುತ್ತಿದ್ದರು. ಧೈರ್ಯವಾಗಿ ಅವಳ ಚೆಲುವನ್ನು ಮೆಚ್ಚಿಗೆಯಿಂದ ನೋಡುತ್ತಿದ್ದರು. ಅವಳೊಡನೆ ಮಾತನಾಡುವಾಗಲೆಲ್ಲಾ ಅವಳ ಮುಖದ ಹತ್ತಿರ ಮುಖ ತಂದೇ ಮಾತನಾಡುತ್ತಿದ್ದುದು. ಇದರ ಬಗ್ಗೆ ಪವಿತ್ರ ಒಂದೆರಡು ಬಾರಿ ಬೇಸರದಿಂದ ಗೊಣಗಿದ್ದು ಉಂಟು. ಪವಿತ್ರ ಕೊಂಚ ಸಹಕರಿಸಿದರೆ ದೇವರಾಜ್‌ರವರನ್ನು ಸುಲಭವಾಗಿ ಬಲೆಯಲ್ಲಿ ಕೆಡವಿಕೊಳ್ಳಬಹುದು ಎನ್ನಿಸಿತು. ಪವಿತ್ರಳಿಗೂ ಹತ್ತೊಂಬತ್ತು ವರ್ಷ. ಆದರೆ ತಾವು ಎಲ್ಲರ ಮುಂದೆ ಹದಿನಾರಾಗಿ ಹದಿನೇಳನೆಯ ವಯಸ್ಸೆಂದೇ ಹೇಳುತ್ತಿದ್ದುದು. ತಾವು ಎಂದೂ ಪವಿತ್ರಳ ಚೆಲುವನ್ನು ದುರುಪಯೋಗ ಪಡಿಸಿಕೊಳ್ಳಲಿಚ್ಛಿಸಿರಲಿಲ್ಲ. ತಾಯಾಗಿ ಅವಳಿಗೇನೂ ಕೆಡುಕಾದರೂ ಸಹಿಸುತ್ತಿರಲಿಲ್ಲ. ಆದರೆ ಅದೃಷ್ಟ ತಾನಾಗಿ ಮನೆಯ ಬಾಗಿಲಿಗೆ ಬಂದಾಗ ಅದನ್ನು ಬಿಟ್ಟುಬಿಡುವುದೇ ? ಮುಳುಗುವ ತನಕ ಹೆದರಿಕೆ. ಮುಳುಗಿದ ಮೇಲೆ ಚಳಿಯೇನು ? ಅವರ ಮನಸ್ಸಿನಲ್ಲಾಗುತ್ತಿದ್ದ ಆಂದೋಲನ ಮೂರ್ತಿ ಗ್ರಹಿಸಿದರು.

'ಅದರ ಬಗ್ಗೆ ತುಂಬಾ ಚಿಂತೆ ಮಾಡ್ಬೇಕಾಗಿಲ್ಲ. ನಾನಿದ್ದೀನಿ ಬಿಡಿ. ಪವಿತ್ರ ನನ್ನ ಮಗಳ ಹಾಗೆ. ನೀವು 'ಹೂಂ' ಅಂದ್ರೆ ಸಾಕು ನಾನು ಮಿಕ್ಕಿದ್ದು ಮಾತನಾಡ್ತೀನಿ. ಪವಿತ್ರಾನೂ ಸ್ವಲ್ಪ ಸಹಕರಿಸಿದರೆ ಸಾಕು. ಅವ್ರು ನಮ್ಮ ಪ್ರೊಡ್ಯೂಸರ್‌ಗೆ ಮನೆ ಬಗ್ಗೆ ಕಾರಿನ ಬಗ್ಗೆ ಹೇಳಿದ್ರೆ ಸಾಕು.'

'ಕೇಳಿದ್ಯಾ ಪಾಪೂ, ಈ ಉದ್ಯಮದಲ್ಲಿ ಎಲ್ಲಾ ಹೊಸ ಹೊಸದು

ಕಲೀಬೇಕಮ್ಮ' ತಾಯಿ ಹೇಳಿದಾಗ ಪವಿತ್ರ ಅವರತ್ತ ಅಚ್ಚರಿಯಿಂದ ನೋಡಿದಳು.

'ಏನಮ್ಮ ನೀನು ಹೇಳ್ತಾ ಇರೋದು ?' ಅವಳ ದನಿ ನಡುಗಿದ್ದು ದನ್ನು ಅರಸಪ್ಪ ಗಮನಿಸಿದ. ರಾಜೇಂದ್ರನಿಗೆ ಈ ವಿಷಯ ತಿಳಿಸಲೇಬೇಕು. ಸ್ಟುಡಿಯೋಗೆ ಹೋದಾಗ ಚಂದ್ರಪ್ಪನ ಕೈಲಿ ಹೇಳಿ ಕಳಿಸಬೇಕು ಎಂದು ಕೊಂಡ.

ಕಾರಿನಲ್ಲಿ ತಾಯಿಯ ಪಕ್ಕ ಹಿಂದಿನ ಸೀಟಿನಲ್ಲಿ ಕುಳಿತು ಹೋಗುತ್ತಿದ್ದಾಗ ಪವಿತ್ರಳ ಮನಸ್ಸು ಉಕ್ಕೇರಿದ ಸಾಗರದಂತಿತ್ತು. ಚಿಕ್ಕಂದಿನಿಂದ ತಾನು ಬಹಳ ಮುದ್ದಾಗಿದ್ದನೆಂದು ಎಲ್ಲರ ಮುಂದೆ ತನ್ನ ಪ್ರದರ್ಶನಮಾಡುತ್ತಿದ್ದುದು ತನ್ನ ತಾಯಿ.

'ನಮ್ಮ ಪಾಪೂ ಎಷ್ಟು ಚೆನ್ನಾಗಿ ಡ್ಯಾನ್ಸ್ ಮಾಡ್ತಾಳೆ ಗೊತ್ತಾ..? ನೆನ್ನೆ ಪಕ್ಕದ್ಮನೇಲಿ ಯಾವ್ದೋ ನಾಟಕ ಕೇಳಿದ್ನಂತೆ ರೇಡಿಯೋಲಿ. ಹಾಗೇ ಆ ಕಲಾವಿದೆ ಮಾತಾಡಿ ದಹಾಗೆ ಮಾತಾಡಿದ್ಲು. ನಮ್ಮ ಪಾಪು ಮಾತೇ ಆಡೋದ್ಬೇಡಾ. ಕಣ್ಣು ಮುಖ ನೋಡಿದ್ರೆ ಅವಳ ಭಾವನೆಗಳೆಲ್ಲಾ ಗೊತ್ತಾಗಿ ಹೋಗುತ್ತೆ. ಗಿರಿಜಮ್ಮನ ಮನೆಗೆ ಅರಸಿನ ಕುಂಕುಮಕ್ಕೆ ಹೋದಾಗ ಪಾಪೂನ್ನ ನೋಡಿ ಎಲ್ರೂ ದಂಗಾಗಿ ಬಿಟ್ರು. ಮಾಲತಮ್ಮ, ನಿಮ್ಗೆ ಇಷ್ಟು ಮುದ್ದಾದ ಮಗ್ಳು ಇದ್ದಾಳೇಂತ ನಮ್ಗೆ ಗೊತ್ತೇ ಇರ್ಲಿಲ್ಲ ಅಂತ' ಹೀಗೇ ನೂರಾರು....ಅದನ್ನು ಕಂಡಾಗಲೆಲ್ಲಾ ತನ್ನ ತಂದೆ ಬೇಸರಪಡೋರು.

'ಮಾಲತಿ, ನಮ್ಮ ಮಕ್ಕಳು ನಮಗೆ ಮುದ್ದು. ಎಲ್ಲರ ಮುಂದೆ ಹಾಗೇಕೆ ಹೇಳ್ತೀ ? ಅದೂ ಅಲ್ದೇ ನಿಂಗೆ ಅವಳಲ್ದೇ ಇನ್ನೂ ಬೇರೆ ಮಕ್ಕಳಿವೆ ಅನ್ನೋದು ಮರೀಬೇಡಾ.'

ತಾನು ನಾಲ್ಕನೇ ಕ್ಲಾಸಿನಲ್ಲಿದ್ದಾಗ ನಾಟಕವೊಂದರಲ್ಲಿ ಅಭಿನಯಿಸಿ ಬಹುಮಾನ ಪಡೆದಾಗ ಅಂದಿನ ಮುಖ್ಯ ಅಥಿತಿ ವೇದಿಕೆಯ ಮೇಲೆ ಹೊಗಳಿದ್ದರು.

'ಈ ಮಗುವಿಗೆ ಭವ್ಯವಾದ ಭವಿಷ್ಯವಿದೆ. ಮುಂದೆ ದೊಡ್ಡ ನಟಿಯಾಗುತ್ತಾಳೆ' ಎಂದು.

ಸರಿ ಅಮ್ಮ ಅದನ್ನೇ ಪಟ್ಟಾಗಿ ಹಿಡಿದಿದ್ದಳು. 'ಎಲ್ರಿಗೂ ನಮ್ಮ ಪಾಪೂಮೇಲೇ ಕಣ್ಣು. ಎಷ್ಟೋ ಜನ ಸಿನಿಮಾದೋರು ಬಂದು ಕೇಳ್ತಾನೆ

ಇರ್ತಾರೆ. ಈ ಮಗೂನ್ನ ನೀವ್ಯಾಕೆ ಸಿನಿಮಾದಲ್ಲಿ ಮಾಡಿಸ್ಬಾರ್ದೂಂತ. ಓದು ಮುಖ್ಯಾಂತ ನಾನೇ ಆಗೋಲ್ಲ ಅಂದ್ಬಿಟ್ಟೆ' ಎಂದು ಎಷ್ಟೋ ಮಂದಿ ಮುಂದೆ ಹೇಳಿಕೊಂಡಿದ್ದಳು. ತಾನು ಆ ದಿನ ಚಿತ್ರರಂಗಕ್ಕೆ ಇಳಿದುದು. ಆ ದಿನ ತನಗೆ ಮರೆಯಲು ಸಾಧ್ಯವೇ ಇಲ್ಲ. ತಾನು ಶಾಲೆಯಿಂದ ಬರುವ ಹೊತ್ತಿಗೆ ತನಗೇ ಅಚ್ಚರಿ ಕಾದಿತ್ತು.

ಮನೆಯ ತುಂಬಾ ಜನ ತುಂಬಿದ್ದರು. ವನಜಾಕ್ಷಿ ಟೀಚರ್ ತಾಯಿಯ ಬಳಿ ಮಾತನಾಡುತ್ತಾ ಕುಳಿತಿದ್ದರು.

'ಓಹ್ಹೋ ಬಂದ್ಲು ನೋಡಿ. ನಿಂಗೋಸ್ಕರಾನೇ ಕಾಯ್ತಾ ಇದ್ದು' ವನಜಾಕ್ಷಿ ಟೀಚರ್ ಹೇಳಿದಾಗ ನಾನು ಎಲ್ಲರತ್ತ ಅಚ್ಚರಿಯಿಂದ ನೋಡಿದೆ.

'ಯಾಕೆ ?' ನಾನು ಕೇಳಿದಾಗ ರೋಜೀ ಮಾಧೂ ಹತ್ತಿರ ಬಂದು ಕುಣಿದಿದ್ದರು.

'ಪಾಪೂ, ನಿನ್ನ ಫಿಲಂ ಸ್ಟಾರ್ ರಂಜನಿ ಜೊತೆ ಅವರ ಫ್ರೆಂಡ್ ಆಗಿ ಅಭಿನಯಿಸಬೇಕಂತೆ.'

'ನೋಡಿದ್ಯಾ ಚಾನ್ಸ್ ಅಂದ್ರೆ ಹೇಗೆ ಬಾಗಿಲಿಗೇ ಹುಡ್ಕೊಂಡು ಬರುತ್ತೆ. ಅದೃಷ್ಟಾ ಅನ್ನೋದು ಇದ್ಕೇ' ವನಜಾಕ್ಷಿ ಟೀಚರ್ ಹೇಳಿದರು. 'ಊರು ಆಚೆ ಇರೋ ತೋಟದ ಪಕ್ಕದ ರಸ್ತೇಲಿ ರಂಜನಿ ಜೊತೆ ಹೋಗಲು ಒಂದಿಷ್ಟು ಹುಡುಗಿಯರು ಬಣ್ಣ ಬಣ್ಣದ ಬಟ್ಟೆ ಹಾಕಿಕೊಂಡು ಕುಣಿಯುತ್ತಾ ಬರಬೇಕು. ಎಲ್ಲಾದ್ರೂ ಹುಡುಕಿಕೊಡ್ತೀರಾ ಅಂತ ಡ್ರಿಲ್ ಮೇಷ್ಟ್ರು ಬಂದು ಕೇಳಿದ್ರು. ಈ ಚಿತ್ರದಲ್ಲಿ ಅವರೂ ಒಂದು ಫೈಟ್ನಲ್ಲಿದ್ದಾರೆ. ಈ ಹುಡುಗಿಯರ್ನೇನೋ ಕೂಡಿ ಹಾಕ್ಕೊಂಡೆ. ಬೆಳಿಗ್ಗೆ ಬಂದು ರಂಜನಿ ಜೊತೆ ಹೋಗೋ ಹುಡುಗಿಯರ ಜೊತೆ ಒಬ್ಬ ಚೆನ್ನಾಗಿರೋ ಹುಡುಗಿ ಕಣ್ಣು ಮೂಗು ನೇರವಾಗಿರೋಳು ಬೇಕು. ಅವಳ ಜೊತೆ, ಅವಳ ಹಿಂದೆ ಓಡಿ ಹೋಗುತ್ತಾ ಅವಳ ಸೆರಗು ಹಿಡಿದು ನಿಲ್ಲಿಸುವುದಕ್ಕೆ ಅಂತ ಅದೇನೋ ಹೇಳಿದ್ರು. ತಕ್ಷಣ ನಿನ್ನ ಜ್ಞಾಪಕ ಬಂತು. ಬಂದು ನಿಮ್ತಾಯೀನ್ನ ಕೇಳ್ದೆ. 'ಹೂಂ' ಅಂದೇ ಬಿಟ್ರು.'

ತನಗೇನೋ ಅದು ಅಷ್ಟು ರೋಮಾಂಚಕಾರಿಯಾಗಿರಲಿಲ್ಲ. ತನಗೆ ಯಾವಾಗಲೂ ತಾನು ದೊಡ್ಡ ಕಲಾವಿದೆಯಾಗಬೇಕು. ಮನಮುಟ್ಟುವ ಪಾತ್ರ ಮಾಡಿ ಎಲ್ಲರೂ ತನ್ನನ್ನೂ ಅಬ್ಬಾ ಎಂತಹ ಕಲಾವಿದೆ ಅನ್ನಬೇಕು. ಗ್ರೆಟಾಗಾರ್ಬೋ, ಇನ್‌ಗ್ರಿಡ್ ಬರ್ಗ್‌ಮಾನ್, ನರ್ಗೀಸ್, ಮೀನಾ

ಕುಮಾರಿ, ಕಲ್ಪನಾ ಇವರಂತೆ ತಾನು ಹೆಸರುವಾಸಿಯಾಗಬೇಕು ಎಂಬ ಬಯಕೆಯಿತ್ತು.

'ಮಾಡಿದ ಎಲ್ಲರಿಗೂ ಊಟ, ತಿಂಡಿ ಎಲ್ಲಾ ಕೊಡ್ತಾರಂತೆ. ನಾಳೆ ಬೆಳಗ್ಗೆ ಕರ್ಕ್ಕೊಂಡು ಹೋಗೋಕೆ ವ್ಯಾನು ಕಳಿಸ್ತಾರಂತೆ. ಪಾತ್ರ ಮುಗಿದ್ಮೇಲೆ ಎಲ್ಲರಿಗೂ ಇಪ್ಪತ್ತೈದು ರೂಪಾಯಿ ಕೊಡ್ತಾರಂತೆ' ವನಜಾಕ್ಷಿ ಟೀಚರ್ ಉತ್ಸುಕರಾಗಿ ಹೇಳುತ್ತಲೇ ಇದ್ದರು.

ಅಮ್ಮ ತನ್ನ ಮುಂದಲೆ ಸರಿಮಾಡಿ 'ಹೋಗು ಪಾಪೂ, ಕಾಫಿ ಕುಡಿದು ತಿಂಡಿ ತಿಂದ್ಬಿಟ್ಬಾ' ಎಂದು ಒಳಗೆ ಕಳುಹಿಸಿದ್ದಳು. ತನಗೆ ಗೊತ್ತಿತ್ತು. ಎಂದೂ ಸಂಜೆಗೆ ಮನೆಗೆ ಬಂದಾಗ ತಿಂಡಿಯಿರುವುದಿಲ್ಲವೆಂದು ಎಲ್ಲರ ಮುಂದೆ ದೊಡ್ಡಸ್ತಿಕೆಗಾಗಿ ಜಂಬ ಹೇಳಿಕೊಂಡಿದ್ದಾಳೆಂದು ಅಡಿಗೆ ಮನೆಗೆ ಹೋಗಿ ನೋಡಿದಾಗ ರೋಜಿ ಬೆಲ್ಲದ ಕರಿಯ ಕಾಫಿಯನ್ನು ಸೀಮೆಎಣ್ಣೆ ಒಲೆಯ ಮೇಲೆ ಅಲ್ಯೂಮಿನಿಯಂ ಪಾತ್ರೆಯಲ್ಲಿ ಬಿಸಿ ಮಾಡುತ್ತಿದ್ದಳು. ಅದನ್ನೇ ಗಟಗಟನೇ ಕುಡಿದು ಹೊರ ಬಂದಾಗ ಬಂದಿದ್ದ ಇತರ ಹುಡುಗಿಯರೆಲ್ಲಾ ಹೊರಟುಹೋಗಿದ್ದರು. ಅಮ್ಮ ವನಜಾಕ್ಷಿ ಟೀಚರ್ ಇಬ್ಬರೇ ಮಾತನಾಡುತ್ತಿದ್ದರು.

'ಅಯ್ಯೋ, ಅದೇನು ಮಹಾ ಬಿಡಿ ಮಾಲತಮ್ಮ, ನಾನು ಅವಳಿಗೆ ಎಲ್ಲಿಂದ್ಲಾದ್ರೂ ಬಟ್ಟೆ ತಂದ್ಕೊಡ್ತೀನಿ. ಯೋಚನೆ ಮಾಡ್ಬೇಡಿ. ಬೆಳಗ್ಗೆ ಎಂಟು ಗಂಟೆಗೆಲ್ಲಾ ರೆಡಿಯಾಗಿರ್ಲಿ '

ಅವರು ಹೋದ ಮೇಲೆ ನಾನು ಅಮ್ಮನನ್ನು ತರಾಟೆಗೆ ತೆಗೆದುಕೊಂಡಿರಲಿಲ್ಲವೇ ? 'ಏನಮ್ಮಾ, ನನ್ನ ಎಕ್ಸ್‌ಟ್ರಾ ಆಗಿ ಮಾಡೋಕೆ ಒಪ್ಕೊಂಡಿದ್ದೀ. ಮೊದಲನೇ ಸಲ ಚಿತ್ರದಲ್ಲಿ ಮಾಡೋವಾಗ ಒಳ್ಳೆಯ ರೋಲ್ ಮಾಡ್ದೇ ಇದ್ರೆ ಕೊನೆವರ್ಗೂ ಎಕ್ಸ್‌ಟ್ರಾ ಆಗೇ ಉಳೀಬೇಕಾಗುತ್ತೆ.'

'ನೀನು ಯಾವದೊಡ್ಡ ಮನುಷ್ಯಳಂತ ದೊಡ್ಡ ಪಾತ್ರ ಕೊಡ್ತಾರೆ ? ಏನೋ ಒಂದು ಅಭಿನಯಿಸೋ ಛಾನ್ಸು ಸಿಕ್ತಲ್ಲಾಂತ ಸಂತೋಷ ಪಡೋದ್ಬಿಟ್ಟು ನನ್ಮೇಲೆ ಎಗರಾಡ್ತೀಯಾ. ನೀನಲ್ದೇ ಇದ್ರೆ ನಿನ್ನಂತೋರು ಯಾರಾದ್ರೂ ಸಿಕ್ತಾರೆ. ದಮ್ಮಯ್ಯ ಅಂತ ಒಪ್ಕೋತಾರೆ' ಅಮ್ಮ ಗದರಿಕೊಂಡಿದ್ದಳು. 'ನಾನೇನೋ ನನ್ನ ಮಗಳು ತಾರೆ ಆಗ್ತಾಳೇಂತ ಆಸೆ ಇಟ್ಕೊಂಡಿದ್ದೆ.'

ತಾನು ಇದರ ಬಗ್ಗೆ ಹೆಚ್ಚು ಬೆಳಸುವುದಿಷ್ಟಪಡದೇ ಸುಮ್ಮನಾಗಿದ್ದಾಗ ಅಪ್ಪ ಎಲ್ಲವನ್ನೂ ಮೌನವಾಗಿ ಅವಲೋಕಿಸಿದ್ದರು.

'ಪಾಪೂ, ನಿಂಗಿಷ್ಟ ಇಲ್ದಿದ್ರೆ ಮಾಡ್ಬೇಡಾ' ಎಂದು ಹೇಳಿದ್ದರು.

ರಾತ್ರಿ ಚಾಪೆ, ಹರಕು ಜಮುಖಾನ, ಸುತ್ತಿದ ಬಟ್ಟೆಯ ಗಂಟಿನ ಚೊಂಬು ದಿಂಬು, ಅಮ್ಮನ ಹಳೆಯ ಸೀರೆಯನ್ನು ಹೊದ್ದು ಮಲಗಿದ್ದಾಗ ಪಕ್ಕದಲ್ಲಿ ಮಲಗಿದ್ದ ಲಲ್ಲಿ, ರೋಜಿ ಪಿಸುದನಿಯಲ್ಲಿ ಮಾತು ತೆಗೆದಿದ್ದಳು.

'ಏನೇ ಪಾಪೂ, ಒಂದ್ವೇಳೆ ನೀನೇನಾದ್ರೂ ದೊಡ್ಡ ಸ್ಟಾರ್ ಆದ್ರೆ ನನ್ನ ಮರ್‍ತು ಬಿಡ್ತೀಯೇನೇ ?'

'ಅವಳು ನಮ್ಮನ್ಯಾಕೆ ಜ್ಞಾಪಿಸ್ಕೋಬೇಕೂ ? ನಮ್ಮ ಹೆಸರಿಗೊಂದಿಷ್ಟು ದುಡ್ಡು ಕಳಿಸಿದ್ರಾಯ್ತಮ್ಮಾ' ಲಲ್ಲಿ ಗೊಣಗಿದಳು.

'ಅವ್ಳು ದೊಡ್ಡ ಸ್ಟಾರ್ ಆದ್ರೆ ಕಾರು, ಬಂಗ್ಲೆ ಎಲ್ಲಾ ಇರುತ್ತೆ. ಅವಳ್ನ ನೋಡೋಕೇ ಜನ ಕ್ಯೂನಲ್ಲಿ ನಿಂತಿರ್ತಾರೆ. ಎಲ್ಲೆಲ್ಲಿ ನೋಡಿದ್ರೂ ಅವಳ್ದೇ ಚಿತ್ರಗಳಿರುತ್ತೆ. ಆಗ ನಾವು ಎಷ್ಟು ಜಂಬದಿಂದ 'ಇವ್ಳು ನಮ್ಮ ಪಾಪೂ' ಅಂದ್ರೆ ಯಾರಾದ್ರೂ ನಂಬ್ತಾರಾ ?'

ಅವರ ಮಾತುಗಳನ್ನು ಕೇಳುತ್ತಾ ತನಗೆ ಯಾವ ವಿಧವಾದ ಆಸಕ್ತಿಯೂ ಕೆರಳಿರಲಿಲ್ಲ. ರೋಜಿಯ ಮಗ್ಗುಲಿಗೆ ತಿರುಗುತ್ತಾ ಹೇಳಿರಲಿಲ್ಲವೇ ?

'ರೋಜೀ ನಂಗಿದೆಲ್ಲಾ ಇಷ್ಟ ಇಲ್ಲ. ನಾನು ಓದಿ ದೊಡ್ಡ ಆಫೀಸರ್ ಆಗಿ ಸಂಪಾದಿಸಿ ನಿಮ್ಮನ್ನೆಲ್ಲಾ ಸಾಕೋದಾಗಿದ್ರೆ ಎಷ್ಟು ಚೆನ್ನಾಗಿತ್ತು.'

'ಸುಮ್ನೆ ಮಲ್ಕೋಳೆ ಪಾಪು. ಅದ್ರ ವಿಷಯದ ಬಗ್ಗೆ ತಲೆ ಯಾಕೆ ಕೆಡಿಸ್ಕೋತಿ ? ಯಾವುದ್ರಲ್ಲಿ ನೀನು ಮುಂದೆ ಬರ್ಬೇಕೋ ಯಾರಿಗ್ಗೊತ್ತು ? ನನ್ನಂತೂ ಓದು ಬಿಡ್ಸಿ ಮಕ್ಕನ್ನ, ಮನೇನ ನೋಡ್ಕೊಳ್ಳೋಕೆ ಹಾಕ್ಬಿಟ್ಲು ಅಮ್ಮ. ನಂಗೂ ಓದಿ ಮುಂದೆ ಬರ್ಬೇಕೂ ಅಂತ ಆಸೆ ಇತ್ತು. ನಮ್ಮ ಹಣೇಲಿ ಈ ಬಡತನಾನೇ ಇರ್ಬೇಕೂಂದ್ರೆ ಯಾರೇನು ಮಾಡ್ಬೇಕು ಹೇಳು' ರೋಜಿ ನಿಟ್ಟುಸಿರಿಟ್ಟಿದ್ದಳು.

ತನಗೆ ಅಂದು ರಾತ್ರಿ ಕಣ್ಣಿಗೆ ನಿದ್ರೆ ಹತ್ತಿರಲಿಲ್ಲ. ಮೂಲೆಯಲ್ಲಿ ಮುದುರಿ ಮಲಗಿದ್ದ ತನ್ನ ಅಣ್ಣಂದಿರು ತಮ್ಮ ತಂಗಿ, ತನ್ನ ಇಕ್ಕೆಲದಲ್ಲಿ ದೊಡ್ಡ ಅಕ್ಕಂದಿರು, ಅಡಿಗೆ ಮನೆಯಲ್ಲಿ ಮಲಗಿದ್ದ ತಾಯಿ, ಪುಟ್ಟ ಅಂಗೈ ಅಗಲದ ಮನೆ. ಮನೆಯಲ್ಲಿದ್ದ ಅಲ್ಯೂಮಿನಿಯಂ ಪಾತ್ರೆಗಳು ಲೋಟ

ಗಳು, ತಟ್ಟೆಗಳು, ತಮ್ಮ ಹಳೆಯ ಮಾಸಿದ ಬಟ್ಟೆಗಳು, ತಾನು ಮಲಗಿದ್ದ ಹರಕು ಚಾಪೆ, ದೊಡ್ಡ ಹರಕು ಸೀರೆ. ಇದೇ ಮುಂದಿನ ಬಾಳೂ ಆದರೆ ಇದರಿಂದ ಮುಕ್ತಿ ದೊರಕುವುದಾದರೆ ತನಗೆ ಮುಕ್ತಿ ದೊರಕಿತೆಂದರೆ ತಮ್ಮಾಸೆಗಳನ್ನೆಲ್ಲಾ ಅದುಮಿಟ್ಟು ತಮ್ಮ ಪರಿಸರದವರು ಉಂಡು, ಉಟ್ಟು, ನಲಿಯುವುದನ್ನು ಕಣ್ಣಲ್ಲೇ ನೋಡಿ ಸಂತಸಪಡುತ್ತಿದ್ದ ತನ್ನ ಸೋದರ, ಸೋದರಿಯರು ಮದುವೆಯಾದಾಗಿನಿಂದ ತನ್ನ ಪತಿ, ಮಕ್ಕಳಿಗಾಗಿ ತನ್ನ ಸುಖ ಸಂತೋಷಗಳನ್ನೇ ಮುಡಿಪಿಟ್ಟಿದ್ದ ತಾಯಿ ! ಒಂದು ವೇಳೆ ತಾನು ದೊಡ್ಡ ತಾರೆಯಾಗಿ ಸಾವಿರಾರು ರೂಪಾಯಿಗಳನ್ನು ಸಂಪಾದಿಸುವ ಹಾಗಿದ್ದರೆ, ಇವರೆಲ್ಲಾ ಬಯಸುವುದನ್ನೆಲ್ಲಾ ತಾನು ತಂದು ಹಾಕುವ ಹಾಗಿದ್ದರೆ, ಮೆರೆಸುವ ಹಾಗಿದ್ದರೆ–'ಆದರೆ'ಗಳ ಪ್ರಪಂಚದಲ್ಲಿ ತೇಲಿ ಹೋದಾಗ ನಿದ್ರೆ ದೂರವಾಗಿ ಮನಸ್ಸು ಹೊಂಗನಸು ಕಟ್ಟಲಾರಂಭಿಸಿತು. ಎಲ್ಲರೂ ತನ್ನ ರೂಪು ಹೊಗಳುತ್ತಿದ್ದರು ತನ್ನನ್ನು ಮೆಚ್ಚಿ ಹುರಿದುಂಬಿಸುತ್ತಿದ್ದರು. ಆಗಲಿ ಒಂದು ಕೈ ನೋಡೇಬಿಡಬೇಕು. ತಾನು ಮಾರನೆಯ ದಿನ ರಂಜನಿಯ ಜೊತೆ ಮಾತನಾಡಬೇಕು. ಎಲ್ಲರೂ ಮೆಚ್ಚುವಂತೆ ಮಾಡಬೇಕು ಎನ್ನಿಸಿದಾಗ ದಿಂಬಿನೊಳಗೆ ಮುಖ ಮರೆಸಿ ಮಲಗಲು ಯತ್ನಿಸಿ ಬಹಳ ಹೊತ್ತಿನ ಮೇಲೆ ತನಗೆ ನಿದ್ರೆ ಬಂದುದು. ಬೆಳಿಗ್ಗೆ ಅಮ್ಮ ಎಬ್ಬಿಸಿದಾಗಲೇ ಎಚ್ಚರವಾದುದು.

'ಏಳೇ ಪಾಪೂ, ಬಲಗಡೆಯಿಂದ ಏಳು. ಬೇಗ ಸ್ನಾನ ಮಾಡಿ ದೇವರಿಗೆ ದೀಪ ಹಚ್ಚಿ ರೆಡಿಯಾಗು. ವನಜಾಕ್ಷಿ ಟೀಚರ್ ಇನ್ನೇನು ಬಂದುಬಿಡ್ತಾರೆ.'

ಅಮ್ಮ ಹೇಳಿದಂತೆ ಸ್ನಾನ ಮಾಡಿ ದೇವರಿಗೆ ದೀಪ ಹಚ್ಚಿ ನಮಸ್ಕರಿಸಿ ಅಮ್ಮ ಕೊಟ್ಟ ಅಕ್ಕಿ ರೊಟ್ಟಿ, ಕಾಫಿ ಕುಡಿದು, ತಲೆ ಬಾಚಿಕೊಳ್ಳುತ್ತಿದ್ದಾಗ ವನಜಾಕ್ಷಿ ಟೀಚರ್, 'ಅಲ್ಲಿ ಮೇಕಪ್ ಮಾಡೇ ಮಾಡ್ತಾರೆ. ಎಲ್ರೂ ಕಾಯ್ತಾ ಇದ್ದಾರೆ ಬೇಗ ನಡಿಯೇ' ಎಂದರು.

ಅಮ್ಮನಿಗೆ ಅವಸರದಿಂದ ನಮಸ್ಕರಿಸಿ ವನಜಾಕ್ಷಿ ಟೀಚರ್ ಹಿಂದೆ ಓಡಿಹೋಗಿದ್ದು, ಓಡುತ್ತಾ ಮೊದಲೇ ಹಳೆಯದಾಗಿದ್ದ ಚಪ್ಪಲಿ ಕಿತ್ತು ಬಂದಿತ್ತು. ಗಮನಿಸದೇ ಓಡಿದ್ದು ! ತಮ್ಮನ್ನೆಲ್ಲಾ ಸಣ್ಣ ರೂಮಿಗೆ ಕರೆದೊಯ್ದು ಮುಖಕ್ಕೆ ಬಣ್ಣ ಹಚ್ಚುತ್ತಿದ್ದಾಗ ಯಾವುದೋ ಕೆಲಸದ ನಿಮಿತ್ತ ಮೂರ್ತಿ ಒಳಗೆ ಬಂದಿದ್ದರು. ತನ್ನ ಕಡೆ ನೋಡಿ ಕ್ಷಣ ಕಾಲ

ನಿಂತು ಮೇಕಪ್ ಮ್ಯಾನ್‌ಗೆ ಹೇಳಿದ್ದರು.

'ಅರಸಪ್ಪ, ಅಂದ ಕೊಳಂದಕ್ಕು ನಲ್ಲ ಮೇಕಪ್ ಪಣ್ಣೂ. ಹೈ ಕ್ಲಾಸ್ ಇರಕ್ಕುಟುಂ' ಎಂದಿದ್ದರು. ಅಂದು ಅರಸಪ್ಪ ತನ್ನ ಹುಬ್ಬು ಸರಿ ಪಡಿಸಿ ಮುಂದಲೆ ಸರಿಮಾಡಿ, ಕಣ್ಣು ತಿದ್ದಿ, ತುಟಿಗೆ ರಂಗು ಹಚ್ಚಿ ಮನ ಜಾಕ್ಷಿ ಟೀಚರ್ ಕಡೆ ನೋಡಿ ಹುಬ್ಬು ಹಾರಿಸಿದ್ದ.

'ಈ ಮಗೂ ಹೆಸರೇನೂ ?'

'ಪವಿತ್ರ ಅಂತ, ಪಾಪೂ ಅಂತ ಕರೀತಾರೆ' ಎಂದಾಗ ಅರಸಪ್ಪ ಕೆನ್ನೆಯ ಮೇಲೆ ದೃಷ್ಟಿ ಬೊಟ್ಟಿಟ್ಟು ನಕ್ಕಿದ್ದ.

'ಪಾಪೂ, ಹಸರು ಚೆನ್ನಾಗಿದೆ.'

ಬಟ್ಟೆ ಬದಲಿಸುವಾಗ ತನಗೆ ಜೀವ ಹಿಡಿಯಾಗಿತ್ತು. ಒಳಗೆ ಹಾಕಿದ್ದ ಲಂಗ ಹರಿದು ಚೂರಾಗಿತ್ತು ಅದು ರೋಜಿಯುದು. ತನ್ನ ಬಳಿ ಬಿಳಿಯ ಲಂಗವೇ ಇರಲಿಲ್ಲ. ಹಳೆಯ ಚಿಕ್ಕವಾದವುಗಳನ್ನೇ ಒಳಗೆ ಹಾಕಿಕೊಳ್ಳು ತ್ತಿದ್ದುದ್ದು. ತಾನು ಹಾಕಿಕೊಂಡಿದ್ದ ಕೆಂಪು ರವಿಕೆ ಆಗಲೇ ಮಾಸಲು ಬಣ್ಣಕೆ ತಿರುಗಿತ್ತು. ತಾನೇ ಎಣಿಸಿದಂತೆ ಬರಿಯ ಬಣ್ಣದ ಬಟ್ಟೆಗಳನ್ನು ತನಗೆ ಹಾಕದೇ ಹಾಗೆಯೇ ಒಳಲಂಗದಲ್ಲಿ ಬರಿಯ ರವಿಕೆಯಲ್ಲಿ ನಿಲ್ಲಿಸಿದಾಗ ಕೈಗಳಿಂದ ಮೈಮುಚ್ಚಿಕೊಂಡು ಅವಮಾನದಿಂದ, ನಾಚಿಕೆಯಿಂದ ನಿಂತಾಗ ದೇವರಾಜ್ ಬಂದಿದ್ದರು. ಮಧ್ಯ ವಯಸ್ಸು ಸಮೀಪಿಸುತ್ತಿದ್ದು ಬೈತಲೆಯ ಇಕ್ಕೆಲಗಳಲ್ಲಿ ನರೆಗೂದಲು ಅಲ್ಲಲ್ಲಿ ಮೂಡಿತ್ತು. ಕಪ್ಪಗಿದ್ದರೂ ಲಕ್ಷಣವಾಗಿದ್ದ ಕಟ್ಟು ಮಸ್ತಾದ ಆಳು ಹಾಕಿದ್ದ ಬಿಳಿಯ ಸಿಲ್ಕಿನ ಜುಬ್ಬ ಉಟ್ಟಿದ್ದು ಮಲ್ಲಿನ ಪಂಚೆ, ಕೈಯಲ್ಲಿ ಚಿನ್ನದ ವಾಚು, ಕತ್ತಿನಲ್ಲಿ ಒಂದೆಳೆ ಸರ ಅದಕ್ಕೆ ಹುಲಿಯುಗುರಿನ ಪದಕ, ಬೆರಳಲ್ಲಿ ಹೊಳೆಯುವ ವಜ್ರದುಂಗುರ. ಅವರ ಕಣ್ಣುಗಳು ಅಲಂಕರಿಸಿಕೊಳ್ಳುತ್ತಿದ್ದ ಹುಡುಗಿ ಯತ್ತ ಸರಿಯಿತು. 'ಎಲ್ಲಿ ಮೂರ್ತಿ, ನೀನು ಹೇಳಿದ ಹುಡುಗಿ ಯಾರು ?'

'ಅಲ್ನೋಡಿ ಸಾರ್' ಎಂದು ತನ್ನತ್ತ ತೋರಿದಾಗ ತನಗೆ ಕಣ್ಣು ಗಳಲ್ಲಿ ನೀರುಕ್ಕಿ ಬರುವ ಹಾಗಾಯಿತು. ದೇವರಾಜ್ ತನ್ನ ಬಳಿ ಬಂದು, 'ಎಲ್ಲಿ ಸರಿಯಾಗಿ ನಿಂತುಕೋ ನೋಡೋಣ' ಎಂದಾಗ ಅವಮಾನಿಸುತ್ತ ನಾಚಿಕೆಯಿಂದ ತಲೆ ತಗ್ಗಿಸಿ ನಿಂತಿದ್ದೆ. ಅವರ ಕಣ್ಣುಗಳು ತನ್ನನ್ನು ಅಡಿ ಯಿಂದ ಮುಡಿಯವರೆಗೆ ನೋಡಿ ಮೆಚ್ಚಿಕೆಯಿಂದ ಹೊಳೆದಿದ್ದವು.

'ನಿನ್ನ ಹೆಸರೇನು ?' ತನ್ನನ್ನು ಕೇಳಿದಾಗ ಉತ್ತರಿಸಲಾಗದೆ ಕಣ್ಣು

ಗಳಲ್ಲಿ ಕಂಬನಿ ಇಟುಕಿ ಕೊನೆಗೆ ಕೆನ್ನೆಯ ಮೇಲಿಳಿಯಿತು.

'ಮೂರ್ತಿ, ಆಗಲಿ ಟ್ರೈ ಮಾಡೋಣ. ಶಂಕರ್‌ರಾವ್‌ನ ಕರೀ. ಡ್ರೆಸ್ ಹಾಕಿ ಎಲ್ಲಿ ಆಲ್ವರ್ ಮಾಡ್ಸೇಕೋ. ಪೂರಾ ಡ್ರೆಸ್‌ನಲ್ಲಿ ನೋಡೋ ತನ್ಕ ಏನೂ ಹೇಳೋಕಾಗೋಲ್ಲ" ಎಂದು ಹೇಳಿ ದೇವರಾಜ್ ಹೊರಟೇ ಹೋಗಿದ್ದರು. ಶಂಕರ್‌ರಾವ್ ಬಂದು ತನಗೆ ಅಚ್ಚುಗೆಂಪಿನ ಜರತಾರಿ ಸೀರೆಯನ್ನುಡಿಸಿದ್ದ. ಅದೇ ಬಣ್ಣದ ರವಿಕೆ ಹಾಕಿ ಏರು ತಗ್ಗುಗಳು ಎದ್ದು ಕಾಣುವಂತೆ ಮಾಡಿದ್ದ. ಕಿವಿಗೆ, ಕತ್ತಿಗೆ, ಕೈಗೆ, ಒಡವೆಗಳು ಬಂದಾಯಿತು. ಕಾಲಿನ ಹರಕು ಚಪ್ಪಲಿ ಬಿಟ್ಟರೆ ಎಲ್ಲಾ ಮಾರ್ಪಾಡಾಗಿತ್ತು.

'ಇಲ್ಲಿ ಬಾಮ್ಮಾ, ಪ್ರೊಡ್ಯೂಸರ್ ಹತ್ತಿರ ಹೋಗೋಣ. ಡೈರೆಕ್ಟರ್ ಅಲ್ಲೇ ಇದ್ದಾರೆ' ಮೂರ್ತಿ ತನ್ನನ್ನು ಕರೆದೊಯ್ದಿದ್ದರು. ಹರಕು ಚಪ್ಪಲಿ ಎಳೆದು ಹಾಕುತ್ತಾ ಹೋದಾಗ ಡೈರೆಕ್ಟರ್ ವಿಜಯೇಂದ್ರ ಗುಡುಗಿದ್ದರು.

'ಏನ್ರೀ, ಕಾಲಿಗೆ ಒಂದು ಜೊತೆ ಒಳ್ಳೇ ಚಪ್ಪಲಿ ತರ್ಸೋಕ್ಕಾಗದಿಲ್ವೇನ್ರಿ. ಯೂನಿಟ್ ರೆಡಿ ಆಗೋಕೆ ಇಷ್ಟು ಹೊತ್ತಾದ್ರೆ ಹೇಗೆ ? ನಿನ್ನೆ ಏನು ಮಾಡ್ತಾ ಇದ್ರಿ ?' ಅವರು ರೇಗುತ್ತಲೇ ತನ್ನತ್ತ ನೋಡಿದ್ದರು. ದೇವರಾಜ್, ಅವರೂ ಏನೋ ಮೆಲು ದನಿಯಲ್ಲಿ ಮಾತಾಡಿಕೊಂಡರು. ಮೂರ್ತಿ ಹಾಗೂ ಹೀಗೂ ಯಾವುದೋ ಒಂದು ಜೊತೆ ಚಪ್ಪಲಿ ತಂದು ತನಗೆ ಕೊಟ್ಟಾಗ ಕೊಂಚ ಸಡಿಲವಾದರೂ ಕಾಲಿಗೊಂದು ಸಿಕ್ಕಿತಲ್ಲಾ ಎನ್ನಿಸಿತ್ತು.

'ಕೂತ್ಕೋ ಬಾಮ್ಮಾ,' ವಿಜಯೇಂದ್ರ ಕರೆದಿದ್ದರು. ತನ್ನ ಹೆಸರು ಓದು ಬರಹ, ತಂದೆ ತಾಯಿ, ಮನೆತನ ವಿಚಾರಿಸಿಕೊಂಡು, ತನ್ನ ಅಭಿನಯದ ಅನುಭವ ಕೇಳಿದ್ದರು. ನೃತ್ಯ ಸಂಗೀತ ಬಗ್ಗೆ ಕೇಳಿದ್ದರು.

'ಇವೊತ್ತು ಸ್ಕ್ರೀನ್ ಟೆಸ್ಟ್ ಮಾಡಿ ನೋಡೋಣ. ಈ ಔಟ್ ಡೋರ್ ಮುಗೀಲಿ. ಆದ್ರಲ್ಲೇನೂ ಹೆಚ್ಚಿಲ್ಲ' ಎಂದಿದ್ದರು.

ರಂಜನಿಯ ಆ ರೂಮು, ಆ ಉಡಿಗೆ, ತೊಡಿಗೆ, ಅವಳ ಗತ್ತು ತನಗೆ ಕಂಡಾಗ ಹೆದರಿಕೆಯಿಂದ ಕೈಕಾಲು ನಡುಗಿತ್ತು. ತನ್ನತ್ತ ಕುಡಿನೋಟ ಬೀರಿ ಕಣ್ತಿರುಗಿಸಿ ಕೇಳಿದ್ದಳು.

'ಈ ಹುಡ್ಗೀನಾ ನನ್ನ ಫ್ರೆಂಡ್ ? ಎಲ್ಲಿಂದ ಸಂಪಾದಿಸ್ಕೊಂಡು ಬಂದ್ರಿ ಮೂರ್ತಿಗಳೇ ?' ಎಂದು ಹಾಸ್ಯ ಮಾಡಿ ನಕ್ಕಿದ್ದಳು. ಅನಂತರ

ತನ್ನತ್ತ ಕಡೆಗಣ್ಣಿನಿಂದಲೂ ನೋಡಿರಲಿಲ್ಲ. ಅಷ್ಟರಲ್ಲೇ ಕುಳಿತಲ್ಲಿ ನಿಂತಲ್ಲಿ ಅಲ್ಲಿದ್ದವರಿಗೆಲ್ಲಾ ಕಾಫಿ, ತಿಂಡಿ, ತಂದುಕೊಟ್ಟರು. ಪೂರಿ ಪಲ್ಯ, ಒಂದಿಷ್ಟು ಸಜ್ಜಿಗೆ ಪ್ಲೇಟಿನಲ್ಲಿ ಹಾಕಿ ರಂಜನಿ, ದೇವರಾಜ್, ಮೂರ್ತಿ, ಕ್ಯಾಮರಾಮನ್ ರಮಾಕಾಂತ, ವಿಜಯೇಂದ್ರ, ಹೀರೋ ಅವಿನಾಶ್ ಎಲ್ಲರಿಗೂ ತಂದು ಕೈಗೆ ಕೊಟ್ಟಾಗ ಆ ಹೋಟೆಲಿನವನು ತನ್ನತ್ತ ನೋಡಿಯೂ ನೋಡದಂತೆ ನಟಿಸಿದ್ದ.

ಡೈರೆಕ್ಟರ್ ವಿಜಯೇಂದ್ರ ಮತ್ತೆ ಗಡಸು ದನಿಯಲ್ಲಿ ಕೂಗು ಹಾಕಿದರು.

'ಏನಯ್ಯಾ, ಈ ಮಗು ನಿಂತಿರೋದು ಕಾಣ್ಲಿಲ್ವಾ? ಅವಳಿಗೂ ಕೊಡು.'

ಹೋಟೆಲಿನವನು ತನ್ನತ್ತ ಒರಟಾಗಿ ಬಂದು ಪ್ಲೇಟು ಮುಖಕ್ಕೆ ಹಿಡಿದಿದ್ದ. ಎಕ್ಸ್‌ಟ್ರಾ ಎಂದರೆ ಇವರಿಗೂ ಅಷ್ಟಕ್ಕಷ್ಟೆ ಎನ್ನಿಸಿತು. ಡೈರೆಕ್ಟರ್, ಹೀರೋ, ರಂಜನಿ, ಎಲ್ಲರೂ ಸೀನ್‌ನಲ್ಲಿ ಬರುವ ಸಂಭಾಷಣೆಗಳನ್ನು ನೋಡಿಕೊಳ್ಳುತ್ತಿದ್ದಾಗ ಲೈಟ್‌ಬಾಯ್ ಏನೋ ಪಿಸು ಮಾತಾಡುತ್ತಾ ತನ್ನತ್ತ ನೋಡಿಕೊಂಡು ನಗುತ್ತಿದ್ದುದು ಕಂಡು ಅವರು ತನ್ನನ್ನು ಗೇಲಿ ಮಾಡಿಕೊಂಡು ನಗುತ್ತಿದ್ದಾರೆಂದುಕೊಂಡಿರಲಿಲ್ಲವೇ? ತನಗೆ ಅಲ್ಲಿ ಕುಳಿತುಕೊಳ್ಳಲು ಕುರ್ಚಿಗಳೂ ಇರಲಿಲ್ಲ. ಸ್ಟಿಲ್ ಫೋಟೋಗ್ರಾಫರನೊಬ್ಬ ಬಂದು ರಂಜನಿಯ, ಅವಿನಾಶನ ಕೆಲವು ಫೋಟೋಗಳನ್ನು ವಿವಿಧ ಭಂಗಿಯಲ್ಲಿ ಸೆರೆಹಿಡಿಯುತ್ತಿದ್ದ. ತಿಂಡಿಯ ಖಾಲಿ ತಟ್ಟೆಯನ್ನು ಅಲ್ಲೇ ಇಟ್ಟು, ಕೊಟ್ಟ ಕಾಫಿಯನ್ನು ಕುಡಿದು ಚಿಕ್ಕ ಗ್ರೀನ್ ರೂಮಿನತ್ತ ಹೊರಟಾಗ ತನ್ನನ್ನು ಯಾರು ತಡೆದಿರಲಿಲ್ಲ. ಅಲ್ಲಿ ತನ್ನಂತೆಯೇ, ತನ್ನ ಜೊತೆಗೆ ಬಂದಿದ್ದ ಹುಡುಗಿಯರೂ ಮತ್ತು ವನಜಾಕ್ಷಿ ಟೀಚರ್ ಕುಳಿತಿದ್ದರು. ಎಲ್ಲರ ಮುಖ ಸಪ್ಪೆಯಾಗಿತ್ತು.

'ಒಂಬತ್ತು ಗಂಟೆಗೆಲ್ಲಾ ಶೂಟಿಂಗ್ ಶುರುವಾಗುತ್ತೆ ಅಂದ್ರು. ಆಗ್ಲೇ ಹತ್ತು ಗಂಟೆಯಾಗ್ತಾ ಬಂತು' ವನಜಾಕ್ಷಿ ಟೀಚರ್ ಕೈಗಡಿಯಾರ ನೋಡಿಕೊಂಡರು. ಡ್ರಿಲ್ ಮೇಷ್ಟ್ರು ರಂಗಪ್ಪ ಒಳ್ಳೆ ಖಳನಾಯಕರಂತೆ ಅಲಂಕರಿಸಿಕೊಂಡು ಅತ್ತ ಇತ್ತ ಶತಪಥ ತಿರುಗಾಡುತ್ತಿದ್ದರು.

'ಟೀಚರ್ ಹಸಿವಾಗ್ತಾ ಇದೆ' ಎಂದು ಒಂದು ಹುಡುಗಿ ಮೆಲ್ಲನೇ ಹೇಳಿದಳು.

'ನಂಗೂ ಅಷ್ಟೇ ಬೆಳಗ್ಗೆ ಅವಸರದಲ್ಲಿ ಏನೂ ತಿನ್ನಲಿಲ್ಲ. ನೀವು ಹೇಳಿದ್ರಿ ಇಲ್ಲೇ ಎಲ್ಲಾ ಕೊಡ್ತಾರೇಂತ' ಮತ್ತೊಬ್ಬಳು ದನಿ ಸೇರಿಸಿದಳು.'

'ಏನ್ರಿ ರಂಗಪ್ಪ ಮೇಷ್ಟ್ರೇ, ಎಲ್ಲಿ ತಿಂಡಿ ಕಾಫಿ ಎಲ್ಲಾ ? ಹೊರಗೆ ಎಲ್ರೂ ನಿಂತೇ ಇದ್ದಾರೆ' ವನಜಾಕ್ಷಿ ಟೀಚರ್ ಹೇಳಿದಾಗ ರಂಗಪ್ಪ ಮೇಷ್ಟ್ರು ತಲೆ ಕೆರೆದುಕೊಂಡರು.

'ಕೊಡ್ತಾರೆ ಇರಿ. ಮೊದ್ಲು ದೊಡ್ಡವರಿಗೆಲ್ಲಾ ಆಗ್ಬೇಕಲ್ಲಾ' ತಾನು ಅಲ್ಲಿ ತಿಂದು ಬಂದುದು ಅವರಿಗೆ ಗೊತ್ತಿರಲಿಲ್ಲ. ರೂಮಿನಿಂದ ಮರೆಯಾಗಿ ಅತ್ತಕಡೆ ನಿಂತಿದ್ದು, ತನಗೆ ಅವರ ಬಾಡಿದ ಮುಖ, ನೋಡಿ ಹೊಟ್ಟೆಯುಲ್ಲಿ ಸಂಕಟವಾಗಿತ್ತು. ತಾನು ಅಲ್ಲಿ ನಿಂತಿದ್ದಕ್ಕೇ ತನಗೆ ಕೊಟ್ಟಿದ್ದರು. ಇಲ್ಲಿ ಇವರನ್ನು ಮರತೇಬಿಟ್ಟರೆ ! ಅರಸಪ್ಪ ಯಾವುದೋ ಬಟ್ಟೆಯು ತುಂಡು ತೆಗೆದುಕೊಳ್ಳಲು ಬಂದಾಗ ಅವನಿಗೆ ತಾನೇ ಕೇಳಿರಲಿಲ್ಲವೇ ?

'ಇವರಿಗೆಲ್ಲಾ ತಿಂಡಿ ಕಾಫಿ ಕೊಡುವುದಿಲ್ಲವೇ ?'

ಅರಸಪ್ಪ ಕೆಳಗೆ ಹೋಗಿ ಏನು ಹೇಳಿದನೋ, ದೊಡ್ಡ ಕೆಟಲಲ್ಲಿ ಕಾಫಿ, ಮೊರದಲ್ಲಿ ಪೂರಿ, ಒಂದು ಬೇಸನ್ನಿನಲ್ಲಿ ಪಲ್ಯ ಬಂದಿತ್ತು. ತಟ್ಟೆಗಳಲ್ಲಿ ಒಂದೊಂದೇ ಪೂರಿ, ಒಂದಿಷ್ಟು ಪಲ್ಯ ಹಾಕಿ ಎಲ್ಲರ ಮುಂದೆ ಹಿಡಿದಾಗ ನನಗೆ ಮೈಯುರಿದಿತ್ತು. ಅವರೆಲ್ಲರಿಗೂ 3–4 ಪೂರಿ ಕೊಟ್ಟಿದ್ದರು. ಸಜ್ಜಿಗೆ ಕೊಟ್ಟಿದ್ದರು. ವನಜಾಕ್ಷಿ ತಡೆಯಲಾರದೇ ಕೇಳಿದ್ದರು.

'ಒಂದೇ ಪೂರೀನೇನಪ್ಪಾ ?'

'ಹೌದು, ಮಿಕ್ಕಿರೋದೇ ಇಷ್ಟು. ಎಲ್ರಿಗೂ ಆಗ್ಬೇಡ್ವಾ ?'

ಕೊಟ್ಟ ಕಾಫಿ ಕೂಡ ಅರ್ಧಲೋಟ. ಆರಿ ತಣ್ಣಗಾಗಿತ್ತು. ಒಬ್ಬ ಇನ್ನೊಬ್ಬನ ಕಣ್ಣು ಕಿಸಿದು ನಕ್ಕಿದ್ದ.

'ಅಲ್ಲಿ ತಿಂದಿದ್ದು ಸಾಲ್ದಾ ? ಇಲ್ಲೂ ಬೇಕಾ ?'

ಆ ಮಾತು ತನಗೇ ಅಂದದ್ದು ಎಂದು ತಿಳಿದಿತ್ತು. ತನ್ನ ಮುಂದೆ ಪೂರಿ, ಪಲ್ಯ, ಕಾಫಿ ಹಿಡಿದಾಗ ತಾನು ಮುಖ ತಿರುಗಿಸಿರಲಿಲ್ಲವೇ ? 'ನನ್ನದಾಯಿತು ಬೇಡ' ಎಂದು. ಗೀತ, ಜ್ಯೋತಿ, ವಿಜಯ ಇವರುಗಳ ಕಣ್ಣುಗಳಲ್ಲಿ ನೀರೇ ಬರುವ ಹಾಗಾಗಿತ್ತು. ರಂಗಪ್ಪ ಮೇಷ್ಟ್ರಿಗೆ, ವನಜಾಕ್ಷಿಗೆ ಮಾತ್ರ ಎರಡು ಪೂರಿ ಕೊಟ್ಟಿದ್ದರು. ಅವರೆಲ್ಲಾ ಅತ್ತ ಹೋಗುತ್ತಲೇ

ವನಜಾಕ್ಷಿ ತಮ್ಮ ಪರ್ಸ್ ತೆಗೆದು ಹತ್ತು ರೂಪಾಯಿನ ನೋಟು ತೆಗೆದು ರಂಗಪ್ಪ ಪೇಸ್ಟ್ರಿಗೆ ಕೊಟ್ಟರು.

'ಮಕ್ಕಳಿಗೆ ಏನಾದ್ರೂ ತರ್‍ಸಿ. ಬಾಳೇಹಣ್ಣೋ, ಬಿಸ್ಕತ್ತೋ !'

'ಇಲ್ಲಿ ಏನು ಸಿಕ್ಕುತ್ತೆ. ಇಲ್ಲಿಂದ ಎರಡು ಫರ್ಲಾಂಗ್ ಹೋಗಿ ಬರ ಬೇಕು. ಯಾರೂ ಹೋಗಿ ತರೋಲ್ಲ. ನೋಡ್ತೀನಿ ತಾಳಿ !.

ಹತ್ತು ನಿಮಿಷ ಬಿಟ್ಟು ಕೈಯಲ್ಲಿ ಎರಡು ದೊಡ್ಡ ಪೊಟ್ಟಣ ಹಿಡಿದು ಬಂದರು.

'ಮೂಲೇಲಿ ಪೆಟ್ಟಿಗೆ ಅಂಗಡೀಲಿ ಏನೇನಿತ್ತೋ ತಂದಿದ್ದೀನಿ. ತೊಗೊಳ್ಳಿ.'

ಆ ಪೊಟ್ಟಣದಲ್ಲಿ ಬಾಳೇಹಣ್ಣು, ಒಂದಿಷ್ಟು ಬಿಸ್ಕತ್ತುಗಳು, ಪೆಪ್ಪರ ಮೆಂಟು, ಖಾರದ ಕಡಲೇಕಾಯಿ ಬೀಜ ಇತ್ತು. ಅದನ್ನೆ ಎಲ್ಲರೂ ಹಂಚಿ ಕೊಂಡು ತಿಂದು ನೀರು ಕುಡಿದರು.

ಅಷ್ಟರಲ್ಲಿ ಮೂರ್ತಿಯವರು ಬಂದಿದ್ದರು. 'ಏನ್ರಮ್ಮಾ ತಿಂಡಿ ಕಾಫಿ ಆಯ್ತಾ ? ಲೋ ಗೋಪಿ ಇವರಿಗೆಲ್ಲಾ ತಿಂಡಿ ಕಾಫಿ ಕೊಟ್ಟ್ಯಾ ?' ಕೂಗಿ ಕೇಳಿದಾಗ 'ಆಯ್ತು ಸಾರ್' ಎಂದಿದ್ದ ಅವನು. 'ಓಹೋ ನಮ್ಗೆಲ್ಲಾ ಆಯ್ತು' ಎಂದಿದ್ದರು ವನಜಾಕ್ಷಿ

'ಬನ್ನಿ ಬನ್ನಿ ಹೊತ್ತಾಗಿ ಹೋಯ್ತು !' ತಮ್ಮನ್ನೆಲ್ಲಾ ವ್ಯಾನಿಗೆ ಕುರಿಗಳನ್ನು ತುಂಬುವಂತೆ ತುಂಬಿದ್ದರು !

ಒಳ್ಳೆ ಬಿಸಿಲು, ಒಣಗಿದ ಮರದಡಿಯಲ್ಲಿ ಕುರ್ಚಿಗಳನ್ನು ಹಾಕಿದ್ದರು. ಅದರ ಮೇಲೆ ರಂಜನಿ–ಅವಿನಾಶ್ ಕುಳಿತಿದ್ದರು. ಅವರಿಗೆ ಬಿಸಿಲು ಬೀಳ ದಂತೆ ಛತ್ರಿ ಹಿಡಿದಿದ್ದರು. ಪ್ರತಿಯೊಂದು 'ಟೇಕ್'ಗೂ ಹತ್ತು ಹನ್ನೆರಡು ಸಲ ರಿಹರ್ಸಲ್, ಬದಲಾವಣೆ. ರಂಜನಿ ಸರಿಯಾಗಿ ಮಾಡಿದರೆ ಅವಿನಾಶ್ ತಪ್ಪುತ್ತಿದ್ದ. ಅವನು ಸರಿ ಮಾಡಿದರೆ ಇವಳು ತಪ್ಪುತ್ತಿದ್ದಳು !

'ಸೀನ್ ಸೆವೆನ್, ಶಾಟ್ ಫೈವ್, ಟೇಕ್ ಥ್ರೀ–ಟೇಕ್ ಫ್ಲೋರ್, ಟೇಕ್ ಫೈವ್' ನಡೆದೇ ಇತ್ತು. ವಿಜಯೇಂದ್ರ ಕೂಗಿ ಅಬ್ಬರಿಸುತ್ತಿದ್ದರು. ಅವರಿಗೂ ತಾಳ್ಮೆ ಮೀರುತ್ತಿದ್ದುದು ಗೊತ್ತಾಗುತ್ತಿತ್ತು. ಕೊನೆಗೆ ತಮ್ಮ ಛಾನ್ಸ್ ಬರುವ ವೇಳೆಗೆ ಹನ್ನೆರಡು ಗಂಟೆಯು ಮೇಲಾಗಿತ್ತು. ರಂಜನಿ ಹೀರೋವಿನಿಂದ ಕೈ ತಪ್ಪಿಸಿಕೊಂಡು ಓಡಿಹೋಗಿ ಹುಡುಗಿಯರ ಗುಂಪನ್ನೇ ಕರೆತಂದು ಅವನನ್ನು ರೇಗಿಸುವ ದೃಶ್ಯ? ಅವಳ ಜೊತೆ

ಯಲ್ಲಿಯೇ ಓಡಿಬಂದು ಸೆರಗು ಗಿಡಕ್ಕೆ ಸಿಕ್ಕಿಕೊಂಡಾಗ ಬೆಚ್ಚಿ ನಿಂತಾಗ, ತಾನು ಅವಳ ಸೆರಗು ಬಿಡಿಸಿ ನಗುವುದು. ಇಷ್ಟೇ ಮಾಡಬೇಕಾದ್ದು ! ಹತ್ತು ಹನ್ನೆರಡು ಸಲ ಪ್ರಾಕ್ಟೀಸ್ ಮಾಡಿಸಿ ಕೊನೆಗೂ ಟೇಕ್ ಓಕೆ ಯಾದಾಗ ಎರಡು ಗಂಟೆಯಾಗಿತ್ತು. ಅಷ್ಟರಲ್ಲಿ ಮಧ್ಯೆ ರಂಜನಿಗೆ, ಅವಿನಾಶ್‌ಗೆ, ಮತ್ತಿತರರಿಗೆ ಟೋರೀನೋ, ಥಮ್ಸ್ ಅಪ್ ಎರಡು ಮೂರು ಬಾರಿ ಸಪ್ಲೈ ಆಗಿತ್ತು.

ಬಾಯಾರಿಕೆಯೆಂದಾಗ ವಿಜಯ, ಗೀತಾ ಜ್ಯೋತಿಗೆ ನೀರು ಬಗ್ಗಿಸಿ ಕೊಟ್ಟಿದ್ದರು. ತಾವೆಲ್ಲಾ ಮತ್ತೊಂದು ಒಣ ಮರದ ಕೆಳಗೆ ನೆರಳು ಬರೆ ಬರೆಯಾಗಿ ಬಿದ್ದೆಡೆ ಬಿಸಿಲಲ್ಲಿ ಬೆವೆತು, ಬಸವಳಿದು ನಿಂತಿದ್ದರು. ಕೂಡಲು ಏನೂ ಇರಲಿಲ್ಲ. ಬರಿಯ ನೆಲದ ಮೇಲೆ ಕುಳಿತರೆ ಉಡಿಗೆ ತೊಡಿಗೆ ಹಾಳಾಗುವುದೆಂದು ಭಯ. ವನಜಾಕ್ಷಿ ಟೀಚರ್‌ಗೆ ಅಳು ಬರುವುದೊಂದು ಬಾಕಿ ಇತ್ತು.

ಊಟ ಬಂದಾಗ, ಬಾಳೆ ಎಲೆ ಅಲ್ಲೇ ಹಾಕಿ ತಮಗೆ ಅನ್ನ, ಹುಳಿ, ಮೊಸರು, ಉಪ್ಪಿನಕಾಯಿ ಧಾರಾಳವಾಗಿ ಬಡಿಸಿದ್ದರು. ದೊಡ್ಡ ಕಾರೊಂದು ಬಂದು ರಂಜನಿಯನ್ನು, ಅವಿನಾಶ್, ಡೈರೆಕ್ಟರ್‌ನನ್ನು ಕರೆ ದೊಯ್ದಿತ್ತು. ಊಟವಾದ ಮೇಲೆ ಮೂರ್ತಿ ತಮ್ಮನ್ನೆಲ್ಲಾ ವ್ಯಾನಿಗೆ ತುಂಬಿ ಕಳುಹಿಸಿದ್ದರು ಸ್ಟುಡಿಯೋಗೆ ಹೋಗಿ ಬಟ್ಟೆ ಬದಲಿಸಿದ ಮೇಲೆ ಮನೆಗೆ ಕರೆದೊಯ್ಯು ಬಿಡುತ್ತಾರೆಂದೂ, ತಾವು ಮಾರನೆಯ ದಿನ ಬಂದು ವನಜಾಕ್ಷಿಯನ್ನು ಭೇಟಿಯಾಗುವುದಾಗಿಯೂ ಹೇಳಿದರು.

ವ್ಯಾನಿನಿಂದ ಇಳಿದ ಕೂಡಲೇ ನಮ್ಮ ಬಟ್ಟೆ ನಾವು ಹಾಕಿಕೊಂಡು ಮನೆಗೆ ಹೊರಡಲು ತಯಾರಾಗುವಾಗ ಮನಸ್ಸು ನೆಮ್ಮದಿಯಾಗಿತ್ತು. ವ್ಯಾನು ಎಷ್ಟು ಹೊತ್ತಾದರೂ ಬರಲಿಲ್ಲ, ಮಿಕ್ಕವರನ್ನು ಕರೆತರುವುದ ಕ್ಕಾಗಿ ಹೇಳಿದ್ದರು. ರಂಗಪ್ಪ ಮೇಷ್ಟ್ರು ಇನ್ನೂ ಅದೇ ಉಡುಪಿನಲ್ಲಿದ್ದರು. ಅವರ ಛಾನ್ಸ್ ಬಂದೇ ಇರಲಿಲ್ಲ.

ಕೊನೆಗೂ ವ್ಯಾನು ಬಂದಾಗ ಸಂಜೆ ಐದರ ಸಮಯ. ಹೊರಡುವ ತರಾತುರಿಯಲ್ಲಿದ್ದ ತಮ್ಮನ್ನು ಒಬ್ಬ ಲೈಟ್ ಬಾಯ್ ಬಂದು ಕರೆದಿದ್ದ.

'ಡೈರೆಕ್ಟರ್ ಕರೀತಾರೆ' ತಾನು ಸಾಮಾನ್ಯ ಉಡುಪಿನಲ್ಲಿದ್ದುದು ನೋಡಿ ಹುಬ್ಬು ಗಂಟಿಕ್ಕಿದ್ದರು.

'ಸ್ಕ್ರೀನ್ ಟೆಸ್ಟ್ ಮಾಡ್ಬೇಕು ಅಂತ ಹೇಳಿರ್ಲಿಲ್ವಾ ?'

'ಬೇಡಾ ಸಾರ್, ಈಗ ಹೊತ್ತಾಗುತ್ತದೆ. ಬೇಕಾದ್ರೆ ನಾಳೆ ಬರೋಕ್ಕೆ ಹೇಳೋಣ' ಕ್ಯಾಮರಾಮನ್ ರಮಾಕಾಂತ ಹೇಳಿದ್ದ.

ಒಂದು ದಿನದ ಅನುಭವವೇ ಸಾಕಾಗಿತ್ತು. ಇನ್ನು ಮತ್ತೆ ಮಾರನೆಯ ದಿನ! ಏಕೋ ಬೇಸರವಾಯಿತು.

'ನಾಳೆ ಬರ್ತೀಯಾ?' ವಿಜಯೇಂದ್ರ ಕೇಳಿಗಾದ ಅನುಮಾನಿಸಿರಲಿಲ್ಲವೇ?

'ನಂಗೆ ಇಲ್ಲಿಗೆ ಬರೋಕೆ ಜೊತೆ ಯಾರೂ ಇಲ್ಲ ದಾರೀನೂ ಗೊತ್ತಿಲ್ಲ' ಧೈರ್ಯವಾಗಿ ಹೇಳಿದ್ದೆ.

'ರೀ ಮೂರ್ತಿಗಳೇ, ನಾಳೆ ಈ ಹುಡ್ಗೀನ್ನು ಕರ್ಕೊಂಡ್ ಬನ್ನಿ. 9 ಗಂಟೆಗೆ ಸ್ಕ್ರೀನ್ ಟೆಸ್ಟ್‌ಗೆ' ವಿಜಯೇಂದ್ರ ಹೇಳಿದ್ದರು. 'ಆಗಲಿ' ಎಂದಿದ್ರು ಮೂರ್ತಿ.

ಮನೆಗೆ ತಲುಪಿದಾಗ ತನಗನ್ನಿಸಿತು. ಗಂಜಿಯೋ, ಅಂಬಲಿಯೋ ಇದಕ್ಕಿಂತ ಸ್ವರ್ಗವಿಲ್ಲ ಎಂದು. ಅಷ್ಟೊಂದು ಬಸವಳಿದು ಬಂದಿದ್ದ ಹುಡುಗಿಯರು ಈಗ ಅತ್ಯುತ್ಸಾಹದಿಂದ ಹೇಳುತ್ತಿದ್ದರು.

'ತುಂಬಾ ಚೆನ್ನಾಗಿ ನೋಡ್ತಿದ್ರು, ನಮ್ಗೆ ತಿಂಡಿ, ಕಾಫಿ, ಊಟ ಎಲ್ಲಾ ಕೊಟ್ರು. ಬಿಸಿಲಾಗುತ್ತೇಂತ ಮರದ ನೆರಳಲ್ಲಿ ಕೂಡ್ಸಿದ್ರು. ನಾವೂ ಫಿಲಂ ಸ್ಟಾರ್ಸ್ ಅಂತ ಎಲ್ರೂ ನಮ್ಮನ್ನು ಮುತ್ತುತಾ ಇದ್ರು. ಒಂದು ಸಾಂಗ್ ಸೀಕ್ವೆನ್ಸ್ ಪೂರ ನಾವೆಲ್ಲ ಇದ್ದೇವೆ.' ಅವರ ಮಾತು ಕೇಳಿ ತನಗೆ ನಗು ಬಂದಿತ್ತು.

'ರೀ ಮಾಲತಮ್ಮ, ನಾಳೆ ಮೂರ್ತಿಯವರು ಒಂಭತ್ತು ಗಂಟೆಗೆ ಬಂದು ಪಾಪೂನ್ನ ಕರ್ಕೊಂಡು ಹೋಗ್ತಾರಂತೆ. ಸ್ಕ್ರೀನ್ ಟೆಸ್ಟ್‌ಗೆ ನೀವೇ ಹೋಗ್ರೀ ಮಗಳ ಜೊತೆ. ನನಗೆ ಪುರುಸೊತ್ತಿಲ್ಲ' ಎಂದು ಜಾರಿಕೊಂಡಿದ್ದರು.

ತನ್ನ ಸೋದರ ಸೋದರಿಯರೆಲ್ಲಾ ತನ್ನ ಸುತ್ತುವರಿದು ನೂರಾರು ಪ್ರಶ್ನೆಗಳ ಮಳೆಗರೆದಿರಲಿಲ್ಲವೆ?

'ತಾಳು, ಆ ಪಿಕ್ಚರ್ ರಿಲೀಸ್ ಆಗ್ಲಿ, ನೋಡುವಿರಂತೆ ನನ್ನನ್ನು' ಅದೊಂದೇ ತನ್ನ ಉತ್ತರ. ಮಾರನೆಯ ದಿನ ಬರದೇ ಇದ್ದರೆ ಚೆನ್ನ ಎನ್ನಿಸಿತು. ಬೆಳಗಿನಿಂದ ಸಾಕಾಗಿತ್ತು. ತಾನು ಎಲ್ಲರಿಗಿಂತ ಮುಂಚೆ ಮಲಗಲು ಹವಣಿಸುತ್ತಿರುವಾಗ ಅಮ್ಮ ಕಡ್ಡಿ ನಿವಾಳಿಸಿ ದೃಷ್ಟಿ ತೆಗೆ

ದಿದ್ದರು! ತಲೆಯನ್ನು ದಿಂಬಿಗೆ ಕೊಟ್ಟದ್ದೊಂದೇ ತನಗೆ ಗೊತ್ತು.

ಮಾರನೆಯ ದಿನ ಅಮ್ಮ ಸಡಗರದಿಂದ ತನ್ನ ಮದುವೆಯ ಸೀರೆ ಕೊಂಚ ಬಣ್ಣ ತಿರುಗಿ ಅಲ್ಲಲ್ಲಿ ಅಂಚು ಹರಿದಿದ್ದರೂ ನಾಜೂಕಾಗಿ ಉಟ್ಟು ಕೊಂಡು ಪಕ್ಕದ್ಮನೆ ಜಯಮ್ಮನ ಬಳಿ ಹಳೆಯ ಪರ್ಸೊಂದನ್ನು ಎರವಲು ತಂದು ಸಿದ್ಧಳಾಗಿ ನಿಂತಿದ್ದಳು.

ತಾನು ಒಲ್ಲದ ಮನಸ್ಸಿನಿಂದ ಇದ್ದಿದ್ದರಲ್ಲಿ ಸುಮಾರಾಗಿದ್ದ ರೋಜಿಯ ವಾಯಿಲ್ ಸೀರೆಯನ್ನೇ ಉಟ್ಟು ಸಿದ್ಧವಾಗಿರಲಿಲ್ಲವೇ? ಒಂಭತ್ತು ಗಂಟೆಗೆ ಬರುವೆನೆಂದು ಹೇಳಿದ್ದರೂ ಹನ್ನೊಂದು ಗಂಟೆಯವರೆಗೆ ಬಂದಿರಲಿಲ್ಲ. ಕೊನೆಗೆ ಬಂದಾಗ ಅಮ್ಮನಿಗೆ ತಾನು ದೊಡ್ಡ ತಾರೆಯೊಬ್ಬಳ ತಾಯಿ ಎಂಬ ಹೆಮ್ಮೆಯುಕ್ಕಿ ಬಂದಿತ್ತು.

ಹಿಂದಿನ ದಿನ ತನ್ನನ್ನು ಮಾತನಾಡಿಸಿದ್ದ ವಿಜಯೇಂದ್ರ, ದೇವರಾಜ್ ಯಾರೂ ಮಾತನಾಡಿಸಲಿಲ್ಲ. ಅರಸಪ್ಪನ ಜೊತೆಗಿದ್ದ ಇನ್ನೊಬ್ಬ ಮೇಕಪ್ ಮ್ಯಾನ್ ಬಂದು ತನ್ನನ್ನು ಗ್ರೀನ್ ರೂಮಿಗೆ ಕರೆದೊಯ್ದಿದ್ದ.

ಮುಖದ ಮೇಕಪ್ ಮುಗಿಯುವ ಹೊತ್ತಿಗೆ ಒಬ್ಬೊಬ್ಬರಾಗಿ ತನ್ನತ್ತ ನೋಡಿ ಹೋಗಲು ಬಂದಿದ್ದರು. ಅಮ್ಮನೇ ತನ್ನ ಪರಿಚಯ ಮಾಡಿಕೊಂಡಿದ್ದಳು.

'ನಾನು ಇವಳ ತಾಯಿ, ಮಾಲತಮ್ಮ ಅಂತ.'

ದೇವರಾಜ್ 'ಹೂಂ' ಎಂದು ನಿರಾಸಕ್ತಿಯಿಂದ ತಲೆಯಾಡಿಸಿ ತಮ್ಮ ಮಾತು ಮುಂದುವರೆಸಿದ್ದರು.

'ಶಂಕರ್‌ರಾವ್‌ನ ಕರ್‍ದು ಬೇರೆ ಕಾಸ್ಟ್ಯೂಮ್‌ಗಳನ್ನು ಹಾಕುವಂತೆ ಹೇಳು. ಲೆಫ್ಟ್ ಪ್ರೊಫೈಲ್ ಚೆನ್ನಾಗಿರುತ್ತೆ ..'

'ಒಂದೆರಡು ರೋಲ್ಸ್ ಮಾಡಿ ನೋಡ್ಬೋದು....' ಕ್ಯಾಮರಾ ಮನ್ ರಮಾಕಾಂತ್, ಅವರೂ ತಮಿಳಿನಲ್ಲಿ ಏನೋ ಮಾತಾಡಿಕೊಂಡರು. ತನಗದು ಆಗ ಅರ್ಥವಾಗಿರಲಿಲ್ಲ.

ಶಂಕರ್‌ರಾವ್ ಬಂದು ಮೊದಲಿಗೆ ಹಳ್ಳಿಯ ಹುಡುಗಿಯ ಉಡಿಗೆ ತೊಡಿಗೆ ಹಾಕಿ ಎದೆ, ಕಂಕಳು ಸೊಂಟದ ಬಳಿ ಎಳೆದು, ಮೈಯಿಗೆ ಅಂಟಿ ಕೊಳ್ಳುವಂತೆ ಹೊಲಿಗೆ ಹಾಕಿ ಸರಿಪಡಿಸಿದಾಗ ತನಗೆ ಮೈ ಮೇಲೆ ಮುಳ್ಳು ಹರಿದಂತಾಗಿತ್ತು.

ತನ್ನ ಚಡಪಡಿಕೆ ಕಂಡು ನಯವಾಗಿ ಗದರಿದ್ದ, 'ಸ್ವಲ್ಪ ಸುಮ್ನಿ

ರಮ್ಮ, ಹಾಗಾಡಿದ್ರೆ ಕಾಸ್ಟ್ಯೂಮ್ ಹೇಗೆ ಸರಿ ಮಾಡೋದು. ಎಲ್ಲೆಲ್ಲಿ ಮೈಗೆ ಕಚ್ಚಿದ ಹಾಗಿರ್ಬೇಕೊ ಹಾಗೇ ಇರ್ಬೇಕೂ. ಡೈರೆಕ್ಟರ್ ಸಾಹೇಬ್ರು ನಮ್ನ ಬೈಯ್ತಾರೆ ಆಮೇಲೆ.'

'ಸುಮ್ನಿರೇ ಪಾಪೂ....ಎಲ್ಲಕ್ಕೂ ತಾಳ್ಮೆ ಇರ್ಬೇಕೂ' ಅಮ್ಮ ಕೂಡ ಗದರಿದ್ದಳು.

ಆ ಉಡುಪಿನಲ್ಲಿ ಅವರ ಮುಂದೆ ಮೈಬಳುಕಿಸುತ್ತಾ ಓಡಾಡುವಾಗ ಕ್ಯಾಮರಾ ಹಿಂದೆ ನಿಂತಿದ್ದ ರಮಾಕಾಂತ್–'ಎಲ್ಲಿ, ಎಡಗಡೆ ತಿರುಗಿ ನಗು... ತಲೆ ಹಿಂದೆ ಮಾಡಿ ನಗು. ಸೊಂಟದ ಮೇಲೆ ಕೈಯಿಟ್ಟು ಇನ್ನೊಂದು ಕೈ ಮೇಲೆತ್ತಿ ನಿಂತುಕೋ–ಬೆನ್ನು ಬಗ್ಗಿಸಬೇಡ' ಎನ್ನುತ್ತಿದ್ದ.

ತನ್ನನ್ನು ಕ್ಯಾಮರಾದ ಎಲ್ಲಾ ಕೋನಗಳಿಂದಲೂ ನೋಡಾಯಿತು. ಅನಂತರ, ಡ್ಯಾನ್ಸ್ ಕಾಸ್ಟ್ಯೂಮ್. ಆಮೇಲೆ ಮೈ ತೋರುವ ಮಿಡಿ, ಮಿನಿಗಳಲ್ಲಿ, ಪಾರದರ್ಶಕ ಸೀರೆಯುಡಿಸಿ ತನ್ನ ಮೈಮಾಟವನ್ನು ಎಷ್ಟು ತೋರಬಹುದೋ ಅಷ್ಟು ಬಗೆಯಲ್ಲಿ ನೈಬಾಗಿಸಿ, ಮೈತೋರಿಸಿ ಯಾಗಿತ್ತು. ನಗಿಸಿ, ಕೋಪಿಸಿಕೊಂಡಂತೆ, ಕಣ್ಣಿಗೆ ಗ್ಲಿಸರಿನ್ ಹಾಕಿ ಅಳಿಸಿ ಮುಖಭಾವವನ್ನು ಅಳೆದಾಗಿತ್ತು.

ಮೂರ್ತಿಗೆ ದೇವರಾಜ್ ಏನೋ ಹೇಳಿದರು. ಮೂರ್ತಿ ಅಮ್ಮನ ಬಳಿ ಬಂದು ಏನೋ ಪಿಸುಗುಟ್ಟಿದರು.

'ಓಹೋ ಅದಕ್ಕೇನು ಮಾಡ್ಲಿ ? ಚಿತ್ರರಂಗದಲ್ಲಿ ಇಳೀಬೇಕೂಂದ್ರೆ ಎಲ್ಲಾ ಮಾಡ್ಬೇಕೂ' ಎಂದಾಗ ತಾನೂ ಅಚ್ಚರಿಯಿಂದ ಅವಳತ್ತ ನೋಡಿ ದಾಗ ಸುಮ್ಮನಿರುವಂತೆ ಕಣ್ಸನ್ನೆ ಮಾಡಿದ್ದಳು.

ಗ್ಲಾಮರ್‌ಗೋಸ್ಕರ ಕೆಲವು ಎಲ್ಲಾ ರೀತಿಯಲ್ಲೂ ಮಾಡ್ಬೇಕಾ ಗುತ್ತೆ. ಈಗ ನಾವು ತಯಾರಿಸ್ತಾ ಇರೋ ಚಿತ್ರದಲ್ಲಿ ಹೀರೋಯಿನ್ ಫ್ರೆಂಡ್ ಸ್ನಾನ ಮಾಡುತ್ತಿರುತ್ತಾಳೆ. ಅಷ್ಟು ಹೊತ್ತಿಗೆ ವಿಲ್ಲನ್ ಬಾಗಿಲು ಬಡಿದಾಗ ಕಿರುಚಿಬಿಡುತ್ತಾಳೆ. ಆಗ ಮನೆಯವರೆಲ್ಲಾ ಬರುತ್ತಾರೆ. ಹೀರೋ ವಿಲನ್‌ನ ಹಿಡಿದು ಒದ್ದು ಕಳಿಸ್ತಾನೆ. ನಿಮ್ಮ ಮಗಳು ಆ ಫ್ರೆಂಡ್ ರೋಲು ಮಾಡೋ ಹಾಗಿದ್ರೆ ಮೊದಲ್ನೇ ಫಿಲಂನಲ್ಲಿ ಛಾನ್ಸು. ನೋಡಿ ಮೆಚ್ಚಿದ್ರೆ ಬೇಕಾದಷ್ಟು ಫಿಲಂಗಳು ಬುಕ್ ಆಗುತ್ತೆ–ಮಾಡ್ಲಿ. ನಾಳೆ ಸ್ನಾನ ಮಾಡುವ ದೃಶ್ಯ ತೆಗೆದ್ಕೋತೀವಿ' ಮೂರ್ತಿ, ದೇವರಾಜ್ ಸರಾಗವಾಗಿ ಹೇಳಿದರು.

ಎನು ಮನಸ್ಸಿನಲ್ಲೇ ಹಲ್ಲು ಕಡಿದಿರಲಿಲ್ಲವೇ ?

ಮ್ಮ ಹಿಂದೆ ಮುಂದೆ ನೋಡದೇ ಒಪ್ಪಿದ್ದಳು.

ರಮ್ಮ ಪಾಪೂಗಿನ್ನೂ ಹದಿನಾಲ್ಕಾಗಿ ಹದಿನೈದನೇ ವರ್ಷ. ಬೇಗ ಬೆಳೆದುಬಿಟ್ಟಿದ್ದಾಳೆ ಅಷ್ಟೆ. ಇನ್ನೂ ಚಿಕ್ಕೋಳು, ಮಾಡಿದ್ರೇನು ಬಿಡಿ ದೊಡ್ಡ ದೊಡ್ಡ ಗಡವಾಗಳೇ ಮಾಡ್ತಾರಂತೆ.'

ತಾನು ಕೆಂಪು ಬಣ್ಣದ ಸ್ವಿಮ್ಮಿಂಗ್ ಕಾಸ್ಟ್ಯೂಮ್ ಹಾಕಿಕೊಳ್ಳಲು ಅತ್ತು ಕರೆದು ರಂಪ ಮಾಡಿರಲಿಲ್ಲವೇ ? ಅಮ್ಮ ತನ್ನನ್ನು ಕಣ್ಣಿನಲ್ಲೇ ಗದರಿದ್ದಳು. ಮುಡಿಕಚ್ಚಿ ಬೈಯ್ದಿದ್ದಳು.

'ಮನೆಗೆ ಬಾ ಮಾಡ್ತೀನಿ. ಎಲ್ರೆದುರ್ಗೆ ಎದುರು ವಾದ್ಸಿ ನನ್ನ ಮಾನ ತೆಗೀತ್ಯಾ ?' ಎಂದು ಕಿಡಿ ಕಿಡಿಯಾಗಿದ್ದಳು. 'ಬಡತನದಲ್ಲೇ ಸಾಯ್ಬೇಕೂಂತ ನಿನ್ನ ಹಣೇಲಿ ಬರ್ದಿದ್ರೆ ಯಾರೇನು ಮಾಡೋಕ್ಕಾಗುತ್ತೆ ? ಎಲ್ಲಕ್ಕೂ ಕೇಳ್ಕೊಂಡು ಬರ್ಬೇಕು. ನಿನ್ನ ಒಳ್ಳೇದಕ್ಕೆ ನಾನು ಹೇಳೋದು '

ಅಮ್ಮ ಇನ್ನು ತನ್ನನ್ನು ಎಲ್ಲರ ಮುಂದೆ ಹಂಗಿಸಿ ತನ್ನನ್ನು ಹಿಂಸಿಸುವಳೆಂದು ತಿಳಿದಿತ್ತು. ಕೆಟ್ಟ ಧೈರ್ಯ ತಂದುಕೊಂಡು ಈಜು ಉಡಿಗೆ ತೊಟ್ಟಿದ್ದಾಯಿತು. ಆದರೆ ಸೀರೆಯಿಂದ ಮೈ ಮುಚ್ಚಿಕೊಂಡೇ ನಿಂತಿದ್ದಾಗ ವಿಜಯೇಂದ್ರ ಹೇಳಿದ್ದರು.

'ಎಲ್ಲಿ ಆಕ್ಷನ್, ಸೀರೆ ತೆಗೆದು ಆ ಕಡೆ ಎಸಿ. ಅಲ್ಲಿಂದ ಇಲ್ಲಿಯುವರೆಗೆ ನಡೆದುಕೊಂಡು ಬಾ. ನಾವೆಲ್ಲಾ ನಿನ್ನ ನೋಡ್ತಾ ಇದ್ದೀವಿ ಅನ್ನೋದು ಮರ್ತುಬಿಡಬೇಕು.'

ಹೇಗೆ ತಾನು ಮರೆಯುವುದು ? ಲೈಟ್ ಬಾಯ್‌ಗಳು, ಅಸಿಸ್ಟೆಂಟುಗಳು, ಸ್ಟುಡಿಯೋ ಕೆಲಸಗಾರರು, ದೇವರಾಜ್, ರಮಾಕಾಂತ್, ಮೂರ್ತಿ ಎಲ್ಲರೂ ತನ್ನನ್ನು ಹಸಿದ ಕಣ್ಣುಗಳಿಂದ ನೋಡುತ್ತಿರುವುದನ್ನು ! 'ನೋಡು, ನೀನು ಸರಿಯಾಗಿ ಮಾಡದಿದ್ದರೆ ನಿನ್ನ ಛಾನ್ಸ್ ಹೋಯಿತೂಂತ ತಿಳಿದುಕೋ.'

ಮೂರ್ತಿಯವರು ಎಚ್ಚರಿಸಿದಾಗ ನನಗೆ ರೇಗಿತ್ತು. ತಾನು ತಾರೆಯಾಗಬೇಕಾದರೆ ತನ್ನಲ್ಲಿರುವ ಪ್ರತಿಭೆಯಿಂದಲ್ಲ....ಹಾಕುವ ಸ್ವಿಮ್ಮಿಂಗ್ ಡ್ರೆಸ್ಸಿನಿಂದ !

ಮೈ ಉರಿದು ಬೆಂಕಿಯಾಗಿತ್ತು. ಸೀರೆಯನ್ನು ಕಿತ್ತೆಸೆದು 'ನೋಡ್ಬೇಕೇನೋ ಬೋಳೀಮಕ್ಳ... ನೋಡ್ರೋ' ಎಂದು ಮನದಲ್ಲೇ ಎಲ್ಲರನ್ನೂ

ತಃಚ್ಚ್ಛೇಕರಿಸಿ ಸೆಟೆದು ನಿಂತು ರಾಜಾ ರೋಷವಾಗಿ ನಡೆದು ಬಂದಾಗ ವಿಜಯೇಂದ್ರ 'ವೆರಿಗುಡ್, ವೆರಿಗುಡ್' ಎಂದಿದ್ದರು.

'ಇಷ್ಟೇನೋ ಇನ್ನೇನಾದ್ರೂ ಇದ್ಯೋ?' ಎಂದು ಕೇಳುವ ಮನಸ್ಸಾದರೂ ತುಟಿ ಕಚ್ಚಿ ತಡೆದಿರಲಿಲ್ಲವೇ ?

'ಹೊಸ ಪರಿಚಯ, ಚೆಲುವೆ, ಮುಗ್ಧ ಪವಿತ್ರ ಅಂತ ಟೈಟಲ್ ಕಾರ್ಡ್ ಸೇರ್ಸಿ' ಎಂದಿದ್ದರು ದೇವರಾಜ್.

'ಹೊಸ ನಾಯಕಿಯೊಬ್ಬಳನ್ನು ಪರಿಚಯಿಸಿದ ಹೆಮ್ಮೆ ನಮಗಿರಲಿ.'

'ನೋಡ್ತಾ ಇರಿ ಸಾರ್. ಈ ಫಿಲಂ ರಿಲೀಸ್ ಆಗ್ಲಿ. ಪವಿತ್ರಾಗೆ ಏನಿಲ್ಲಾ ಅಂದ್ರೆ ಹತ್ತು ಹದಿನೈದು ಫಿಲಂಸ್ ಗ್ಯಾರಂಟಿ!' ಮೂರ್ತಿಯವರು ಹೇಳಿದ್ದರು.

'ರಮಾಕಾಂತ್, ನಾಳೆ ಷೂಟಿಂಗ್‌ನಲ್ಲಿ ನೋಡೋಣ. ಸೀಕ್ವೆನ್ಸ್‌ಗೆ ಹೇಗೆ ಸೆಟ್ಟಾಗ್ತಾಳೇಂತಾ!' ಎಂದು ರಾಗವೆಳೆದಿದ್ದರು 'ಎಡಭಾಗದ ಸೊಂಟದ ಮೇಲೆ ಕಾಸಿನಗಲ ಮಚ್ಚೆ ಇದೆ ಸಾರ್. ಅದ್ನ ಕವರ್ ಮಾಡ್ಬೇಕಾಗುತ್ತೆ' ಭೂತಕನ್ನಡಿಯ ಸಹಾಯದಿಂದ ನೋಡಿದ್ದ ರಮಾಕಾಂತನ ಕಣ್ಣಿಗೆ ಅದು ಬಿದ್ದಿತ್ತು.

ಎಲ್ಲರೂ ತನ್ನ ಇತರ ಭಾಗಗಳನ್ನು ನೋಡುತ್ತಿದ್ದರೆ ಇವನು ಸ್ವಿಮ್ಮಿಂಗ್ ಸೂಟಿನಿಂದ ಅರೆಬರೆ ಕಂಡ ತನ್ನ ಪುಟ್ಟ ಮಚ್ಚೆಯನ್ನು ನೋಡಿದ್ದಾನಾ ?

'ಅದೇನ್ರೀ ಮಹಾ! ನಾಳೆ ಲಕ್ ಕುಲಾಯಿಸ್ದ್ರೆ, ಆ ಮಚ್ಚೇನೇ ಪ್ಲಸ್ ಪಾಯಿಂಟ್ ಮಾಡ್ಬೋದೋ!' ವಿಜಯೇಂದ್ರ ಹೇಳಿದ್ದರು.

ಅಂದು ತಾನು ತಾಯಿಯ ಬಳಿ ಒಂದೂ ಮಾತನಾಡಲಿಲ್ಲ. ತನಗೆ ಅಮ್ಮನ ಮೇಲೆ ಕೋಪ, ತಿರಸ್ಕಾರ ಎರಡೂ ಬಂದಿತ್ತು.

'ನನ್ನ ಮಗಳಿಗೆ ಪ್ರತಿಭೆಯಿದ್ದರೆ ಅವಕಾಶ ಕೊಡಿ. ಇಲ್ಲದಿದ್ದರೆ ಬೇಡಾ' ಅನ್ನುವ ಬದಲು ಹೇಗಾದರೂ ಅವಳಿಗೊಂದು ಛಾನ್ಸ್ ಸಿಕ್ಕರೆ ಸಾಕು ಎಂದುಕೊಂಡಳಲ್ಲಾ.

ತಾನೇನಾದರೂ ಅಮ್ಮ ಆಗಿದ್ರೆ 'ಈ ಕೊಲಸೆಲ್ಲಾ ಬೇಡಾ ಬಾ' ಎಂದು ಮನೆಗೆ ಕರೆತರುತ್ತಿದ್ದೆ.

ಒಂದು ಹೆಣ್ಣು ಅಶ್ಲೀಲವಾಗಿ ಬರಿಯ ಮೈ, ತೋರು ಮೈಯಲ್ಲಿ ನಟಿಸಲು ಒಪ್ಪಿದರೆ, ಇನ್ನು ಮಿಕ್ಕ ಹೆಣ್ಣುಗಳಿಂದಲೂ ಎಲ್ಲರೂ ಅದನ್ನೇ

ಅಪೇಕ್ಷಿಸುತ್ತಾರೆ. ಈ ಸ್ಪರ್ಧಾತ್ಮಕ ಬದುಕಿನಲ್ಲಿ ಯಾರೂ ಮಾಡದುದನ್ನು ಮಾಡಿ ತೋರಿಸಿದರೆ ಅದನ್ನೇ ಜನ ನೋಡಲು ಹೆಚ್ಚಿದಾಗ, ಅದನ್ನೇ ಬಂಡವಾಳ ಮಾಡಿಕೊಂಡು ಇವರು ಚಿತ್ರ ಮಾಡುತ್ತಾರೆ ಆಗ ಪ್ರತಿಭೆಗೆ ಪುರಸ್ಕಾರವಲ್ಲ. ಬೆಡಗು, ಬಿರಿವೈಗೆ ಪುರಸ್ಕಾರ.

ಅಂದು ಮನವೆಲ್ಲಾ ಕಲಸಿ ಹೋಗಿ ಜೊಂಡು ಬೆಳೆದ ಕೊಳದಂತಾಗಿ ಹೋಗಿತ್ತು. ತಿಳಿಗೊಳದಂತಿದ್ದ ತನ್ನ ಮನಸ್ಸು ಕೆಸರಿನ ಆಗರವಾಗಿ ಹೋಗಿತ್ತು. ತನ್ನ ಮನಸ್ಸಿನ ಮುಜುಗರವನ್ನು ಅಮ್ಮ ಬೇರೆ ರೀತಿಯಲ್ಲಿ ಅರ್ಥ ಮಾಡಿಕೊಂಡಿದ್ದಳು.

'ಪಾಪೂಗೆ ತುಂಬಾ ಸಾಕಾಗಿದೆ. ಯಾರು ತೊಂದರೆ ಮಾಡಬೇಡಿ' ಎಂದಿದ್ದಳು.

ಅಪ್ಪನ ಮುಂದೆ ಒಂದಕ್ಕೆ ನಾಲ್ಕಾಗಿ ಹೊಗಳಿದ್ದರು. 'ನಮ್ಮ ಪಾಪೂಗೆ ಎಂತಹ ಛಾನ್ಸ್ ಅಂತ. ಅವಳ ಕಾಲ್ಗುಣ ತುಂಬಾ ಚೆನ್ನಾಗಿ ದೇಂದ್ರೆ. ಏನಾದ್ರೂ ಮಾಡಿ ಅವಳ್ನ ದೊಡ್ಡ ಸ್ಟಾರ್ ಮಾಡೋಣ. ಎಂತಹ ರೂಪು, ಚೆಲುವೂಂತ ಎಲ್ರೂ ಹೊಗಳಿದ್ದೂ ಹೊಗಳಿದ್ದು.' ಅಪ್ಪ ಎಲ್ಲಕ್ಕೂ ನಿರ್ವಿಕಾರ ಪ್ರತಿಕ್ರಿಯೆ ತೋರಿದ್ದರು. ಮಗಳಿಗೆ ಅವಳಿಷ್ಟದಂತೆ ಓದಿಸಿ ಮುಂದೆ ತರುವ ಚೈತನ್ಯವಿಲ್ಲದೇ ಸೋತಿದ್ದ ಅಪ್ಪ ಏನು ತಾನೇ ಹೇಳಬಲ್ಲರು ?

ಮಾರನೆಯ ದಿನ ಷೂಟಿಂಗ್‌ಗೆ ಒಂಭತ್ತು ಗಂಟೆಗೆ ಸರಿಯಾಗಿ ಕಾರು ಮನೆಯ ಮುಂದೆ ಬಂದು ನಿಂತಿತು. ತನ್ನನ್ನು ಸ್ಟುಡಿಯೋಗೆ ಕರೆದೊಯ್ಯುವ ಬದಲು ಬ್ಯೂಟಿ ಪಾರ್ಲರ್‌ಗೆ ಕರೆದೊಯ್ಯಲಾಗಿತ್ತು. ಮೈ ಕೈಯೆಲ್ಲಾ ಮಿರುಮಿರುಗುವಂತೆ ಮಾಡಿದ ಮೇಲೆ ತಾನು ಸ್ಟುಡಿಯೋಗೆ ಬಂದಿದ್ದು. ರಂಜನಿ ಆಗಲೇ ಬಂದು ಉಪಸ್ಥಿತಳಾಗಿದ್ದಳು.

ಅವಿನಾಶನೂ ಬಂದು ಕುಳಿತಿದ್ದ. ಅಂದು ತನಗೆ ಎಂತಹ ಮರ್ಯಾದೆ, ಎಂತಹ ಗೌರವ ! ಎಲ್ಲರೂ ನಗು ನಗುತ್ತಾ ಮಾತನಾಡಿಸಿದ್ದರು.

'ಹಲೋ ಪಾಪೂ ! ಗುಡ್ ಮಾರ್ನಿಂಗ್' ಎಂದು ಸ್ವಾಗತಿಸಿದ್ದರು.

ಅವಿನಾಶ್ ತನ್ನ ಬಳಿಗೆ ಬಂದು 'ಹಲೋ ಪಾಪೂ, ಗುಡ್ ಮಾರ್ನಿಂಗ್' ಎಂದು ಸ್ವಾಗತಿಸಿದ್ದರು. ಮೊದಲ ದಿನ ತನ್ನನ್ನು ಕಡೆಗಣ್ಣಿನಿಂದ ನೋಡಿದ್ದ ರಂಜನಿ ಮುಗುಳ್ನಕ್ಕು, 'ಹಲೋ, ಅಭಿನಂದನೆ

ಗಳು' ಎಂದಿದ್ದಳು.

ತನಗೆ ಕುಳಿತಲ್ಲೇ ತಿಂಡಿ ಅತ್ಯಂತ ವಿನಯದಿಂದ ಗೌರವದಿಂದ ಕೊಡಲಾಗಿತ್ತು. ಅಮ್ಮನಿಗಂತೂ ಸ್ವರ್ಗಕ್ಕೆ ಎರಡು ಗೇಣುಗಳಿದ್ದವು.

ಮೂರ್ತಿಯವರು ಐನೂರು ರೂಗಳ ಚೆಕ್ಕೊಂದನ್ನು ಅಮ್ಮನ ಕೈಗಿತ್ತರು.

'ಇದು ಅಡ್ವಾನ್ಸ್, ಚಿತ್ರ ಮುಗಿದ ಮೇಲೆ ಮಿಕ್ಕಿದ್ದು ಕೊಡ್ತೀವಿ. ಮೊದಲ್ನೇ ಚಿತ್ರಾಂತ ಎರಡು ಸಾವಿರ ಕೊಡ್ತಾ ಇದ್ದೀವಿ...' ಎಂದಾಗ ಅಮ್ಮನಿಗೆ ಕಣ್ಣುಗಳು ತುಂಬಿ ಬಂದು ಚೆಕ್ಕನ್ನು ಕಣ್ಣೊತ್ತಿಕೊಂಡು ಪರ್ಸಿನಲ್ಲಿಟ್ಟುಕೊಂಡಳು! ಅಷ್ಟು ದೊಡ್ಡ ಮೊತ್ತವನ್ನು ಅವಳು ಮೊದಲ ಬಾರಿಗೆ ನೋಡಿದುದು ಅದೇ ಏನೋ!

'ನೋಡಿದ್ಯಾ ಪಾಪೂ, ಎಷ್ಟು ಒಳ್ಳೆಯವರು. ವನಜಾಕ್ಷಿ ಟೀಚರ್ ಸುಳ್ಳು ಹೇಳಿದ್ರು, ಇಪ್ಪತ್ತೈದು ರೂಪಾಯಿ ಕೊಡ್ತೀನಿ ಪ್ರತಿಯೊಬ್ಬರಿಗೂ ಅಂದವ್ರು ಬಿಡಿಕಾಸು ಕೊಡ್ಲಿಲ್ಲಾಂತ. ಎಲ್ಲೋ ಕೊಟ್ಟಿದ್ದನ್ನು ತಾವೇ ಉಪಯೋಗಿಸ್ಕೊಂಡಿರಬೇಕು. ನೋಡು, ನೀನು ಅವರು ಹೇಗೆ ಹೇಳಿದ್ರೆ ಹಾಗೆ ಮಾಡ್ಬೇಕು. ನಿನ್ನೆ ಹಾಗೆ ಸುಮ್ನೇ ತರಲೇ ಮಾಡಬೇಡ. ಅವರಿಗೆ ತೊಂದ್ರೆ ಆಗುತ್ತೆ. ಪಾಪ, ಎಷ್ಟು ಹಣ ಖರ್ಚು ಮಾಡ್ತಾರೆ. ಅವರಿಗೂ ಕಷ್ಟ ಇರುತ್ತೆ. ದುಡ್ಡೇನೂ ಆಕಾಶದಿಂದ ಬೀಳುತ್ತಾ?' ಎಂದು ಮೆಲುದನಿಯಲ್ಲಿ ತನಗೆ ಉಪದೇಶಿಸಿದ್ದಳು.

ಎಲ್ಲವೂ ಸ್ಟುಡಿಯೋ ಸೆಟ್ಟಿಂಗ್ಸ್‌ನಲ್ಲೇ. ಎದುರುಗಡೆ ಹಬೆಯಾಡುತ್ತಿದ್ದ ನೀರು. ತಾನು ಸ್ನಾನ ಮಾಡಲು ಬಂದು ಹಾಡೊಂದನ್ನು ಗುನುಗುತ್ತಾ ಒಂದೊಂದೇ ಬಟ್ಟೆ ಕಳಚಬೇಕು. ಕ್ಯಾಮರಾಕ್ಕೆ ಬೆನ್ನು ಮಾಡಿಕೊಂಡಿದ್ದು ಒಂದೊಂದು ವಸ್ತ್ರವನ್ನೇ ತೆಗೆದು ಎಸೆಯಬೇಕು. ತಾನು ಒಳ ಉಡಿಗೆಯವರಿಗೆ ಬಂದಾಗ ಬಾಗಿಲ ತೆಳು ಪರದೆಯ ಹಿಂಭಾಗದಲ್ಲಿ ನಿಂತು ಎಲ್ಲವನ್ನೂ ಕಳಚಿ ಟಬ್ಬಿನೊಳಗೆ ಇಳಿಯಬೇಕು. ನೆರಳು ಬೆಳಕುಗಳಾಟದಲ್ಲಿ ತನ್ನ ಮೈ ಸಿರಿ ತೋರಿಸಬೇಕಿತ್ತು. ಅದನ್ನು ವಿಜಯೇಂದ್ರ ಹೇಳಿದಾಗ ತಾನು ಗರ ಬಡಿದಂತೆ ಕುಳಿತಿರಲಿಲ್ಲವೇ?

'ಯಾಕೆ ನರ್ವಸ್? ನಾಚಿಕೇನಾ? ಬೇಕಾದ್ರೆ ನಾವೆಲ್ಲಾ ಹೊರಟು ಹೋಗ್ತೀವಿ. ಕ್ಯಾಮರಾಮನ್ ಮಾತ್ರ ಸಾಕು, ನೀನು ಸರಿಯಾಗಿ ಮಾಡುವ ಹಾಗಿದ್ದರೆ' ಎಂದಿದ್ದರು ವಿಜಯೇಂದ್ರ. ತನ್ನ ಎದೆ ನಗಾರಿ

ಯಂತೆ ಬಡಿದುಕೊಳ್ಳುತ್ತಿತ್ತು. ಇವರೆಲ್ಲರನ್ನೂ ಕಣ್ಣಿನಿಂದಲೇ ತಾನು ಸುಟ್ಟುಬಿಡುವ ಹಾಗಿದ್ದರೆ....!

'ಇಲ್ಲ ಮಾಡ್ತಾಳೆ, ತುಂಬಾ ನಾಚಿಕೆ, ಸಂಕೋಚ ಅವಳ್ಗೆ! ಮಾಡಮ್ಮ ಪಾಪೂ ಜಾಣಮರಿ. ನನ್ನ ಚಿನ್ನ' ಅಮ್ಮ ಎಲ್ಲರ ಮುಂದೆ ಗಲ್ಲ ಕೆನ್ನೆ ಸವರಿದ್ದಳು.

ಹೆಚ್ಚು ತರಲೆ ಮಾಡಿದರೆ ತನಗೇ ಹಿಂಸೆ ಜಾಸ್ತಿ. ಮಾಡುವುದನ್ನೇ ಸರಿಯಾಗಿ ಒಂದೇ ಸಲ ಮಾಡಿ ಮುಗಿಸಿಬಿಡಬೇಕು. ನೀರಿಗಿಳಿದ ಮೇಲೆ ಚಳಿಯೇನು, ಮಳೆಯೇನು ಎನ್ನಿಸಿತು.

ತಾನು ಎಷ್ಟು ಸರಿಯಾಗಿ ಮಾಡಿದ್ದರೂ ಬೇಕಂತಲೇ ಕಟ್ ಎನ್ನು ತ್ತಿದ್ದರೆಂದೆನಿಸಿತು.

'ಸೀನ್ ಟೆನ್, ಟೇಕ್ ಟೂ, ಆಕ್ಷನ್' ಎನ್ನುತ್ತಿದ್ದರು. ಪೂರ ಮುಗಿದು ತೆಳುಪರದೆಯ ಹಿಂದೆ ಹೋದಾಗ ಕಟ್ ಎನ್ನುತ್ತಿದ್ದರು.

'ನೀನು ಸರಿಯಾಗಿ ಒಳಗೆ ಹೋಗಿಲ್ಲ'—'ಹೋಗುವಾಗ ಕೈ ಸರಿ ಯಾಗಿ ಕಾಣಲಿಲ್ಲ'–'ಕಾಲು ಸರಿಯಾಗಿ ಕಾಣಲಿಲ್ಲ' ಹೀಗೆ ಅನೇಕ ಸಬೂಬುಗಳು. ಎಂಟನೆಯ ಟೇಕ್‌ಗೆ ಓಕೆ ಆಗಿತ್ತು.

ಬಂದವರಿಗೆಲ್ಲಾ ಮನದಣಿಯ ಮನರಂಜನೆ ದೊರಕಬೇಕು ಎನ್ನಿ ಸಿತ್ತು. ಟಬ್ಬಿನಲ್ಲಿ ಕತ್ತಿನವರೆಗೆ ನೊರೆ ಮುಚ್ಚಿದ್ದು ಖಳನಾಯಕ ಸುರೇಂದ್ರ ಬಂದಾಗ ತಾನು ಕಿರುಚಿಕೊಳ್ಳಬೇಕಿತ್ತು. ಆ ಸೀನಿನಲ್ಲಿ ತನಗೆ ಎಷ್ಟು ಬೇಸರವಾಗಿತ್ತೆಂದರೆ ಅವನು ಒಳಗೆಬಂದ ಕೂಡಲೇ ಎದೆಯಲ್ಲಿ ಅದುಮಿಟ್ಟ ಅಗ್ನಿಪರ್ವತ ಸ್ಫೋಟಗೊಂಡಿತ್ತು. ತಾನು ಕೆಟ್ಟದಾಗಿ ಕಿರುಚಿ, ಅವನು ಹತ್ತಿರ ಬಂದಾಗ ಅವನ ಮುಖ ಕೈ ಎಲ್ಲಾ ರಕ್ತ ಬರುವ ಹಾಗೆ ಪರಚಿಬಿಟ್ಟಿದ್ದೆ ...

ಆ ಕ್ಷಣ ನೋವಿನಿಂದ ಅವನೂ ಕೂಗಿದ್ದ. 'ಪರ್‌ಫೆಕ್ಟ್' ಒಂದೇ ಶಾಟಿನಲ್ಲಿ ಅದು ಓಕೆಯಾಗಿತ್ತು. ತಾನು ನೀರಿನಿಂದ ಎದ್ದು ಬರುವಾಗ ಅಮ್ಮ ಅಡ್ಡ ನಿಂತು ತನಗೆ ದೊಡ್ಡ ಟವಲೊಂದನ್ನು ಸುತ್ತಿಕೊಳ್ಳಲು ಕೊಟ್ಟಿದ್ದಳು. ತಾನು ಯಾರತ್ತಲೂ ನೋಡದೇ ಗ್ರೀನ್ ರೂಮಿಗೆ ಓಡಿಹೋಗಿ ಬೇಗ ಬಟ್ಟೆ ಹಾಕಿಕೊಂಡು ಬಿಕ್ಕಿಬಿಕ್ಕಿ ಅತ್ತಾಗ ಎಲ್ಲರೂ ಓಡಿ ಬಂದಿದ್ದರು.

'ಯಾಕೆ ಏನಾಯ್ತು ?'

'ಇಲ್ಲ ಇಲ್ಲಾ, ಷೀ ವಾಸ್ ಕ್ಯಾರಿಡ್ ಅವೇ ಬೈ ಹರ್ ಫೀಲಿಂಗ್ಸ್'

'ಪಾಪ, ನಮ್ಮ ಫೀಲಿಂಗ್ಸ್ ನೋಡಿ ಹೆದರಿ ಬಿಟ್ಟಿರ್ಬೇಕೂ!'

'ಇಲ್ಲಾ, ಷಿ ಈಸ್ ಎ ಫೈನ್ ಆಕ್ಟ್ರೆಸ್, ಎಮೋಷನಲ್ ಆಗಿ ಮಾಡ್ತಾರೆ' ಹೀಗೆ ನೂರಾರು!

ರಕ್ತ ಬಂದ ಕಡೆಯೆಲ್ಲಾ ಒದ್ದೆ ಹತ್ತಿಯಿಂದ ಒರೆಸಿಕೊಳ್ಳುತ್ತಾ ಬಂದಿದ್ದ ಸುರೇಂದ್ರ ಬೆನ್ನು ತಟ್ಟಿದ್ದ.

'ಸಾರಿ ಸಿಸ್ಟರ್, ನಿಮ್ಮನ್ನ ನಾನು ನಿಜವಾಗ್ಲೂ ಹೆದರಿಸಿದ್ದರೆ ಕ್ಷಮಿಸಬೇಕು. ನೀವಿನ್ನೂ ಹೊಸಬ್ರು. ಅದಕ್ಕೇ. ಇದೆಲ್ಲಾ ಬರೀ ನಟನೆ, ದಿ ಹೋಲ್ ಥಿಂಗ್ ಈಸ್ ಎ ಡ್ರಾಮಾ, ಆಕ್ಟಿಂಗ್ ಅನ್ನೋದು ಮರ್‍ತು ಬಿಟ್ರಿ! ನಂಗೆ ನಿಜವಾಗ್ಲೂ ಹೆಣ್ಣು ಹುಲಿ ಮರಿ ನೋಡಿದಾಗಾಯ್ತು!' ಎಂದಾಗ ಎಲ್ಲರೂ ನಕ್ಕರು.

ತನಗೆ ಸುರೇಂದ್ರನನ್ನು ಕಂಡು ಅಲ್ಲಿಯೇ ಪೂಜಿಸಿಬಿಡುವಷ್ಟು ಆವೇಶ ಬಂದಿತ್ತು. ಮಾಡುವುದು ಖಳನಾಯಕನ ಪಾತ್ರ. 'ಸಾರಿ ಎಂದು ತನ್ನನ್ನು ಎಷ್ಟು ಮರ್ಯಾದೆಯಿಂದ ನಡೆಸಿಕೊಂಡಿದ್ದ! ತನ್ನ ಬಗೆಗೆ ತನಗೇ ಅವಮಾನವಾಗಿತ್ತು. ಕಣ್ಣೀರು ಒರೆಸಿಕೊಂಡು ಸುರೇಂದ್ರನಿಗೆ ತಾನೇ ಹೇಳಿರಲಿಲ್ಲವೆ?

'ಸಾರಿ, ನಂಗೆ ಇವ್ರೆಲ್ಲಾ ನನ್ನೈಲಿ ಹೀಗೆ ಮಾಡ್ಸಿದ್ರೂಂತ ತುಂಬಾ ಕೋಪ ಬಂದಿತ್ತು. ನಿಮ್ಮನ್ನ ನೋಯಿಸಿಬಿಟ್ಟೆ! ತುಂಬಾ ನೋವಾಯಿತಾ?'

'ಐ ಅಂಡರ್ ಸ್ಟ್ಯಾಂಡ್, ನನಗೆ ನೀವು ಪರಚಿದ್ದು ನೋವಾಗಲಿಲ್ಲ. ನಿಮ್ಮ ಅವಸ್ಥೆ ನೋಡಿ ಬಹಳ ನೋಯಿತು, ಮನಸ್ಸಿಗೆ' ಎಂದಿದ್ದ. ಅದೇಕೋ ಅವನು ಬಹಳ ಆಪ್ತನಂತೆ ಕಂಡಿದ್ದ. ಯಾರೊಂದಿಗೂ ಮಾತನಾಡದ ತಾನು ಇವನೊಂದಿಗೆ ಹರಟಿದ್ದೂ ಹರಟಿದ್ದೇ. ಅವನು ಹೇಳಿಕೊಟ್ಟ ಇಸ್ಪೀಟ್ ಎಲೆಯ ಮ್ಯಾಜಿಕ್ ಕಲಿತಿದ್ದೂ ಕಲಿತಿದ್ದೇ. ಅವನ ಸ್ನೇಹಮಯ ನಡುವಳಿಕೆಯಿಂದ ತನ್ನನ್ನು ಎಚ್ಚರಗೊಳಿಸಿ, ಎಲ್ಲರಲ್ಲೂ ಸ್ನೇಹದಿಂದ ನಡೆದುಕೊಳ್ಳುವಂತೆ ಮಾಡಿದ್ದ. ಚಿತ್ರ ಜಗತ್ತಿನ ಮೇಲೆ ಮೊದಲಿಗೆ ತನ್ನಲ್ಲಿ ಉದ್ಭವಿಸಿದ್ದ. ಅಸಹನೆಯನ್ನು ಹೋಗಲಾಡಿಸಿದ್ದ.

ರಿಲೀಸಿನ ತಾರೀಖು ತಿಳಿದ ಕೂಡಲೇ ಬಂದು ನೋಡಿ ಹಣ ಸಂದಾಯಮಾಡಿ ತನಗೆ ಬೇಕಾದವರಿಗೆಲ್ಲಾ ಆಹ್ವಾನ ಪತ್ರಿಕೆ ಕೊಡುವು

ದಾಗಿ ಹೇಳಿ ಚಿತ್ರದ ಜಾಹಿರಾತಿನಲ್ಲಿ ತನ್ನ ಬಗ್ಗೆ ಹೆಚ್ಚು ಪ್ರಚಾರ ಕೊಡುವುದಾಗಿ ಹೇಳಿದ್ದರು. ತಾನು ಅಂದು ಕಾರಿನಲ್ಲಿ ಹತ್ತಿ ಮನೆಯತ್ತ ಹೊರಟಾಗ ನಗುತ್ತಾ ಎಲ್ಲರತ್ತ ಕೈ ಬೀಸಿದ್ದೆ. 'ಸುರೇಂದ್ರ, ಮನೆಗೊಂದು ದಿನ ಬನ್ನಿ' ಎಂದು ಕರೆದಿದ್ದೆ. ಶೀಲವೆಂಬ ತನ್ನ ನೈತಿಕವಮೌಲ್ಯವನ್ನು ಗಾಳಿಗೆಸದಿದ್ದೆ.

ಆ ಚಿತ್ರ ಪತ್ರಿಕೆಯಲ್ಲಿ ಪ್ರಚಾರವಾಗಿ ಅಲ್ಲಲ್ಲಿ ಜಾಹಿರಾತುಗಳು ಬಂದವು. ಹೊಸ ಮುಖ ಪರಿಚಯಿಸಲಿದ್ದಾರೆ ಎಂದಿದ್ದರು. ತನ್ನ ಹೆಸರಿರಲಿಲ್ಲ. ಕೊನೆಗೆ ಚಿತ್ರ ಬಿಡುಗಡೆಯ ಹಿಂದಿನ ದಿನದವರೆಗೆ ಕಾದರೂ ಯಾರೂ ಬಂದು ಆಹ್ವಾನಿಸಲಿಲ್ಲ. ತನಗೆ ಮಿಕ್ಕ ಹಣವನ್ನು ಕೊಡಲಿಲ್ಲ. ತಾನು ಮಾಡಿದ ಚಿತ್ರವೆಂದು ತಾನೇ ಹಣಕೊಟ್ಟು ಮನೆಯವರು, ವನಜಾಕ್ಷಿ ಟೀಚರ್, ಆ ಬೇರೆ ಹೆಣ್ಣು ಮಕ್ಕಳು ಎಲ್ಲರೂ ನೋಡಲು ಹೊರಟೆವು. ಟೈಟಲ್ ಕಾರ್ಡಿನಲ್ಲಾಗಲೀ ಕ್ರೆಡಿಟ್ಸ್‌ನಲ್ಲಾಗಲೀ ತನ್ನ ಹೆಸರಿರಲಿಲ್ಲ. ರಂಜನಿಯ ಜೊತೆ ಮಾಡಿದ ದೃಶ್ಯವಿತ್ತು. ತನ್ನ ಪಾತ್ರ ಕಿರಿದು ಮಾಡಿಬಿಟ್ಟು ತನ್ನ ಮುಖ ಅರೆಕ್ಷಣ ತೋರಿಸಿದ್ದರು ಮಾತ್ರ. ತನ್ನ ಕೈಲಿ ಮಾಡಿಸಿದ್ದ ಸ್ನಾನದ ದೃಶ್ಯವೇ ಮಾಯವಾಗಿತ್ತು. ಅಲ್ಲಿ ಇಲ್ಲಿ ವಿಚಾರಿಸಿದಾಗ ಸೆನ್ಸಾರ್ ಕತ್ತರಿಗೆ ಸಿಲುಕಿತೆಂದು ಅದನ್ನು ಪ್ರದರ್ಶಿಸಲಾಗುವುದಿಲ್ಲವೆಂದೂ ಹೇಳಿದ್ದರು. ಸೆನ್ಸಾರ್ ಕತ್ತರಿಗೆ ಸಿಲುಕಿಸುವರೆಂದೂ ತಿಳಿದರೂ ಆ ದೃಶ್ಯವನ್ನೇಕೆ ಅಳವಡಿಸಿಕೊಳ್ಳಬೇಕಿತ್ತು ? ಇದರಲ್ಲಿ ಸ್ವಾರ್ಥ ಎಷ್ಟಿದೆ ? ಮನರಂಜನೆ ಯಾರಿಗೆ ? ನೈತಿಕಪತನ ಯಾರದು ? ತನಗೆ ಆ ದಿನ ಎಷ್ಟು ಮನಸ್ಸು ಕೆಟ್ಟು ಹೋಗಿತ್ತು. ನಂಬಿಸಿ ಮೋಸಮಾಡಿ ತನ್ನ ಕೈಲಿ ಮಾಡಬಾರದ್ದನ್ನು ಮಾಡಿಸಿ ಕೊನೆಗೂ ಕೈಕೊಟ್ಟರಲ್ಲಾ ಎಂದು ಆ ದಿನ ರಾತ್ರಿ ನಾಲ್ಕಾರು ಬಾರಿ ಪ್ರಾಣ ಕಳೆದುಕೊಳ್ಳುವ ಮನಸ್ಸು ಮಾಡಿರಲಿಲ್ಲವೇ ?

'ಏನ್ರೀ, ನಿಮ್ಮ ಮಗಳು ಮಾಡಿದ್ದಾಳೇಂದ್ರೀ. ಎಲ್ಲಿ ಕಾಯ್ತಾ ಇದ್ವಿ, ಬರ್ಲೇ ಇಲ್ಲ. ಸುಮ್ನೆ ಟಿಕೆಟ್ ಹಣ ದಂಡ!' ಅಕ್ಕಪಕ್ಕದವರು ಆಡಿಕೊಂಡು ನಕ್ಕರು.

'ಎಲ್ಲೋ ರೈಲು ಹತ್ತಿಸಿದ್ದಾರೆ. ಮಾಲತಮ್ಮ ನಂಬಿಬಿಟ್ಟಿದ್ದಾರೆ, ಪಾಪ.'

'ಹೂಂ, ಪವಿತ್ರ ನೋಡೋಕೆ ತೆಳ್ಳಗೆ ಬೆಳ್ಳಗಿದ್ದಾಳೆ. ಇದೂ

ಮಾಡ್ಸಿ ನೋಡಿ ಸಂತೋಷ ಪಟ್ಟಿರ್ಬೇಕು ಅಷ್ಟೆ.'

ತನಗೆ ಮನೆ ಬಿಟ್ಟು ಹೊರಗೆ ಬಂದು ಮುಖ ತೋರಿಸಲೇ ಅವಮಾನ ವಾಗುತ್ತೆ. ಥೂ! ಈ ಚಿತ್ರ ಜಗತ್ತಿಗೆ ಕಾಲೇ ಇಡಬಾರದು ಎಂದು ಕೊಂಡು ಮೊದಲಿನಂತೆ ಸ್ಕೂಲಿಗೆ ಹೋಗಲು ಮನಸ್ಸು ಮಾಡಿದಾಗ ಅದೃಷ್ಟ ತಾನೇ ತಾನಾಗಿ ಬಂದಿತ್ತು. ಕಥೆ ಪುಸ್ತಕ ಹಿಡಿದು ಒಬ್ಬಳೇ ಕುಳಿತು ಓದುತ್ತಿದ್ದಾಗ ಡೈರೆಕ್ಟರ್ ವಿಜಯೇಂದ್ರ, ಮೂರ್ತಿ ಕಾರಿನಲ್ಲಿ ಬಂದಿಳಿದಿದ್ದರು. ಅಮ್ಮನಿಗೆ ಹೊಟ್ಟೆಯೊಳಗೆ ಅಡಗಿದ್ದ ಕೋಪಾಗ್ನಿ ಸ್ಫೋಟವಾಗಿತ್ತು.

'ಓಹೊಹೋ, ಏನು ಬಂದಿದ್ದು. ಜ್ಞಾಪಕ ಇದ್ಯಲ್ಲಾ ಇನ್ನೂ!'

'ಯಾಕಮ್ಮಾ, ಏನಾಯ್ತು?' ಏನೂ ತಿಳಿಯದವರಂತೆ ಮೂರ್ತಿ ಯವರು, ವಿಜಯೇಂದ್ರ ಕೇಳಿದರು. •

'ಹೋದ ಸಲ ನನ್ನ ಮಗಳಿಗೆ ಎಷ್ಟು ಮೋಸಮಾಡಿಬಿಟ್ರಿ ನೀವು? ಹೀಗೆ ಎಷ್ಟು ಹೆಣ್ಣು ಮಕ್ಕಳಿಗೆ ಆಸೆ ತೋರಿಸಿ ಬದ್ಕು ಹಾಳು ಮಾಡಿ ದ್ದೀರಿ?' ಅಮ್ಮ ಅವರ ಬಳಿ ಹಾಗೆ ಮಾತನಾಡುವುದೇ ಬೇಕಾಗಿರಲಿಲ್ಲ. ಅದು ಎಲ್ಲರಿಗೂ ತಿಳಿದ ವಿಷಯವೇ ಎನ್ನಿಸಿತ್ತು. ಅಪ್ಪ ಹಿತ್ತಲ ಬಾಗಿಲಿ ನಿಂದ ಹೊರಗೆ ಹೊರಟು ಹೋಗಿದ್ದರು. ರೋಜಿ, ಲಲ್ಲಿ, ಬಾಗಿಲ ಹಿಂದೆ ನಿಂತು ಇಣುಕಿ ನೋಡುತ್ತಿದ್ದರು. ಬಂದವರಿಗೆ ಕುಳಿತುಕೊಳ್ಳುವಂತೆ ಹೇಳಲು ಕುರ್ಚಿಗಳೇ ಇರಲಿಲ್ಲ. ಮೂಲೆಯಲ್ಲಿ ಸುತ್ತಿಟ್ಟಿದ್ದ ಹಳೆಯ ಚಾಪೆಯನ್ನೇ ಹಾಕಲಾಯಿತು.

'ಛೆ ಛೆ! ನೀವು ತಪ್ಪು ತಿಳ್ಕೊಂಡಿದ್ದೀರಿ! ನಿಮ್ಗೆ ನಾವ್ಯಾಕೆ ಮೋಸ ಮಾಡ್ಬೇಕೂ? ಮಾಡೋಹಾಗಿದ್ದಿದ್ರೆ ಇಲ್ಲಿವರ್ಗೂ ನಾವ್ಯಾಕೆ ಬರ್ತಾ ಇದ್ವಿ?' ವಿಜಯೇಂದ್ರ ಬಹಳ ಗಂಭೀರದಿಂದ ವಿನಯದಿಂದ ಹೇಳಿ ದ್ದರು. 'ನೋಡೀಮ್ಮ, ಈ ಫೀಲ್ಡ್ ಜೂಜಿನಂತೆ. ನಾವೇನೊ ಇದು ಜನ ಮೆಚ್ಚಬಹುದೂಂತ ಆಸೆಯಿಂದ ದುಡ್ಡು ಸುರಿದು ಬೆವರು ಸುರಿಸಿ ಮಾಡ್ತೀವಿ. ಸೆನ್ಸಾರ್‌ನವರಿಗೆ ತಿನ್ನಿಸಿ ಒಂದಿಷ್ಟು ಮಸಾಲೆ ತುರುಕ್ತೀವಿ. ದುಡ್ಡು ಕೊಟ್ಟು ಗೋಳು ನೋಡೋಕೆ ಯಾರಿಗೆ ಇಷ್ಟ! ಎಲ್ಲರಿಗೂ ಮನರಂಜನೆಬೇಕು. ತಮ್ಮ ಕಷ್ಟ ಕಾರ್ಪಣ್ಯಗಳು ಇದಿದ್ದೇ. ಅದನ್ನು ಮರೆಯಲು ಚಿತ್ರ ನೋಡೋಕೆ ಬರ್ತಾರೇ ಹೊರ್ತು ಅದನ್ನೇ ಮತ್ತೆ ಮತ್ತೆ ನೋಡೋಕೆ ಇಷ್ಟ ಪಡೋಲ್ಲ. ಪೌರಾಣಿಕವಾದ್ರೆ ಹೇಗಿದ್ರೂ

ನಡ್ಯತ್ತೆ. ಎಲ್ಲಾ ದೇವರ ಹೆಸರಲ್ಲಿರುತ್ತೆ. ನೋಡಿ, ಆ ಸೀನ್ ಹಾಕಿ ಎಲ್ಲರ ಕಣ್ಣಿಗೂ ಪವಿತ್ರ ಬೀಳಲಿ ಅಂತಲೇ ಮಾಡಿದ್ದು. ಆದ್ರೆ ಸೆನ್ಸಾರ್ ಅಬ್ಜೆಕ್ಟ್ ಮಾಡಿ ಆ ಸೀನ್ ಇಲ್ದಿದ್ರೂ ನಡ್ಯತ್ತೇಂತ ಕಿತ್ತುಹಾಕಿಬಿಟ್ರು.'

'ಆದ್ರೆ ಅವಳ ಹೆಸರೂ ಹಾಕ್ಲಿಲ್ಲ ನೀವು ಕ್ರೆಡಿಟ್ಸ್‌ನಲ್ಲಿ' ಅಮ್ಮ ರೇಗಿದ್ದಳು.

'ನೋಡಿ ತಾಯಿ, ಏನೂ ಮಾಡ್ದೇ ಇರಬೇಕಾದೆ ಎಲ್ಲೋ ಒಂದ್ಕಡೆ ಹೀಗ್ಬಂದು ಹಾಗೋಗೋಕ್ಕೆ ಹೆಸರು ಹಾಕಿ ಪ್ರಚಾರ ಕೊಟ್ರೆ ಕತೆ ಮುಗೀತು. ಯಾರೂ ಮೂಸಿ ನೋಡೋಲ್ಲ. ಹೊಸ ಪರಿಚಯ ಅಂದ್ಮೇಲೆ ಯಾವ್ದಾದ್ರೂ ಒಳ್ಳೆ ರೋಲ್ ಕಣ್ಣು ಕಟ್ಟೋ ಹಾಗಿರೋದು ಮಾಡ್ಸಿ ಹಾಕ್ಬೇಕೂ, ನಿಮ್ಮ ಮಗಳ ಭವಿಷ್ಯ ಚಿಂತಿಸಿಯೇ ತೆಗೆಸಿ ಹಾಕ್ದೆ ಅವಳ ಹೆಸರ್ನ.'

'ಅದ್ಸರಿ, ನಾವು ಬಡವರು ಅಂತ ತಾತ್ಸಾರ. ರಿಲೀಸ್‌ಗೆ ನಮ್ಗೆ ಒಂದು ಇನ್ವಿಟೇಷನ್-ಬರ್ಲಿಲ್ಲ. ನಾವೇ ದುಡ್ಡು ಕೊಟ್ಟು ನೋಡಿದ್ದಾಯ್ತು. ಅದೇ ಹಣವಂತರಾಗಿದ್ರೆ ..' ಅಮ್ಮ ಮೂಗೆಳೆದು ಅಸಮಾಧಾನ ವ್ಯಕ್ತಪಡಿಸಿದಾಗ ವಿಜಯೇಂದ್ರ ನಸುನಕ್ಕಿದ್ದರು.

'ಅಲ್ಲಾ ತಾಯಿ, ಹುಟ್ತಾನೆ ಹಣವಂತರಾಗಿರೋರು ಬೇರೆ. ಈಗ್ನೋಡಿ ನಾನೇನು ಹೀಗಿದ್ದೋನೇ ಈಗಿರೋ ಹಾಗೆ ಆಗ್ಬೇಕಾದ್ರೆ ಎಷ್ಟು ಕಷ್ಟ ಪಟ್ಟಿದ್ದೀನಿ ಗೊತ್ತಾ ತಾಯಿ? ನೆನಸ್ಕೊಂಡ್ರೆ ಈಗ್ಲೂ ಕಣ್ಣಲ್ಲಿ ನೀರಲ್ಲ ರಕ್ತ ಬಂದೀತು. ಫುಟ್‌ಪಾತ್ ಮೇಲೆ ಮಲಗ್ತಾ ಇದ್ದೆ. ಹೊಟ್ಟೆಗೆ ಏನಾದ್ರೂ ಇಲ್ದೇ ಇದ್ದಾಗ ಬೀದಿ ನಲ್ಲಿ ನೀರ್ನ ಹೊಟ್ಟೆ ತುಂಬಾ ಕುಡ್ದು ಮಲಗ್ತಾ ಇದ್ದೆ. ಭಿಕ್ಷೆ ಮಾತ್ರ ಬೇಡ್ಬಾರ್ದೂಂತ ಅಲ್ಲಿ ಇಲ್ಲಿ ತಿರುಗಿ ಕೊನೆಗೆ ನಮ್ಮ ವೀರಭದ್ರಯ್ಯನವರ ಮನೇಲಿ ಕೆಲಸಕ್ಕೆ ಸೇರಿದ್ದೆ. ಅವರ ಮಕ್ಕಳನ್ನ ಸ್ಕೂಲಿಗೆ ಕರ್ಕೊಂಡ್ಹೋಗೋದು, ನೋಡ್ಕೊಳ್ಳೋದು ಮಾಡ್ತಾ ಇದ್ದೆ. ಆ ಮಕ್ಳ ಷೂಸು ಕೂಡ ಪಾಲೀಶ್ ಮಾಡಿದ್ದೀನಿ. ಅವರ್ಮನೆಗೆ ಬರ್ತಾ ಇದ್ದ ಚಿತ್ರರಂಗದ ವ್ಯಕ್ತಿಗಳ ಪರಿಚಯವಾದ್ಮೇಲೆ ಅವರಿವರ್ನ ಕೇಳಿ ಸ್ಟುಡಿಯೋದಲ್ಲಿ ಲೈಟ್ ಬಾಯ್ ಆಗಿ ಸೇರ್ದೆ. ಅಲ್ಲಿಂದ ನೋಡಿ ಇಲ್ಲಿವರ್ಗೂ ಕಷ್ಟಪಟ್ಟು ಮುಂದೆ ಬಂದಿದ್ದೀನಿ. ನನ್ನ 'ವಿಷವರ್ತುಲ' ಸಕ್ಸಸ್ ಆದ್ಮೇಲೆ ಎಲ್ರೂ ನನ್ನ ಒಬ್ಬ ಮನುಷ್ಯಾಂತ ತಿಳ್ಕೊಂಡ್ರು. ಹೆಸರು ಬಂದ್ಮೇಲೆ ನಾನು ಎಲ್ರಿಗೂ ಬೇಕಾದ ವ್ಯಕ್ತಿ. ಅದೇ ಎಲ್ಲಾ ಬಿಗಿನಿಂಗ್ಸ್‌ಗಳೂ ಕಷ್ಟವೇ'

ಅವರು ಹೇಳಿದ್ದು ಕೇಳಿ ತನಗೆ ಸರಿಯೆನಿಸಿತ್ತು.

'ಅದ್ಸರಿ, ಪಾತ್ರ ಮಾಡ್ಸಿ ಮಿಕ್ಕ ದುಡ್ಡು ಕೊಡ್ತೀನಿ ಅಂದಿದ್ರು' ಅಮ್ಮ ರಾಗವೆಳೆದಾಗ ವಿಜಯೇಂದ್ರ ನಸುನಕ್ಕರು.

'ಅಲ್ಲಾ ತಾಯಿ ನಿಮಗೆ ಐನೂರಾದ್ರೂ ಸಿಕ್ತು. ಎಷ್ಟು ಜನಕ್ಕೆ ಅದೂ ಸಿಗಲಿಲ್ಲ. ಕೇಳಿ ನಂಗಿನ್ನೂ ಡೈರೆಕ್ಷನ್ದು ಅರ್ಧ ಹಣ ಮುಂಗಡ ಕೊಟ್ಟಿದ್ದು, ಮಿಕ್ಕಿದ್ದು ಇನ್ನೂ ಬಂದಿಲ್ಲ. ದೇವರಾಜ್ ಅವರಿಗೂ ಹಣದ ಮುಗ್ಗಟ್ಟಾಗಿರುತ್ತೆ. ಇಲ್ಲಿ ದುಡ್ಡು ರೋಲ್ ಆಗ್ತಾ ಇರಬೇಕು. ಎಂದಾದರೂ ಕೊಟ್ಟೇ ಕೊಡ್ತಾರೆ. ನನಗೆ ನಂಬಿಕೆ ಇದೆ. ನೋಡಿ ಆಗ್಩ೇ ಅವರ ಮುಂದಿನ ಮೂರು ಚಿತ್ರಗಳಿಗೆ ನಾನೇ ಡೈರೆಕ್ಟರ್. ಇನ್ಯಾವುದಾದ್ರೂ ರೀತೀಲಿ ಸಹಾಯ ಮಾಡೇ ಮಾಡ್ತಾರೆ!'

'ಅದ್ಸರಿ, ಏನು ಬಂದದ್ದು?' ಎಂದಾಗ ತನಗೆ ಮಾತಾಡೋಕೆ ಬಿಡ್ಲಿಲ್ಲ. ನಾವು ಬಂದ ವಿಷಯ ಏನಾದ್ರೂ ದೇವರಾಜ್ ಅವರ ಹೊಸ ಚಿತ್ರ ತಯಾರಿಸ್ಬೇಕೂಂತ ಇದ್ದಾರೆ. ಲೋ ಬಡ್ಜೆಟ್ ಫಿಲಂ ಒಂದ್ನ ಬರೀ ಹೊಸ ಮುಖಗಳ್ನ ಹಾಕ್ಕೊಂಡು ಮಾಡ್ಬೇಕೂ ಅಂತ ಹೀರೋ ರಾಜೇಂದ್ರನ್ನ ಹಾಕ್ಕೊಂಡಿದ್ದಾರೆ. ಇನ್ನು ಮಿಕ್ಕವರೆಲ್ಲಾ ಹೊಸಬರು. ನಿಮ್ಮ ಪವಿತ್ರಾಳನ್ನ ಇದ್ರಲ್ಲಿ ಹೀರೋಯಿನ್ ಮಾಡ್ಸಿ ಮುಂದೆ ತರ್ಬೇಕೂಂತ ಅವರಿಗೆ ಆಸೆ. ನೀವೇನು ಹೇಳ್ತೀರಿ?'

'ಎಷ್ಟು ಕೊಡ್ತಾರಂತೆ?' ಅಮ್ಮ ಬಹಳ ಬೇಗ ಜಾಣತನ, ಲೆಕ್ಕಾಚಾರ ವ್ಯವಹಾರ ಕಲಿತಿದ್ದಳು.

'ಅವಳನ್ನು ಮಾಡಿಸಲು ಒಪ್ಪಿದರೆ ಮಿಕ್ಕ ವಿಚಾರ ಎಲ್ಲಾ ದೇವರಾಜರ ಹತ್ತಿರ ಮಾತಾಡಿ ಬಂದು ಮೂರ್ತಿಯವರು ಬಂದು ತಿಳಿಸುತ್ತಾರೆ, ಮೊದ್ಲು ಒಪ್ಪಿಗೆ ಕೊಡಿ.'

'ಹಿಂದಿನ್ಸಲದ್ಹಾಗೆ ಮಾಡ್ದೇ ಇರೋ ಹಾಗಿದ್ರೆ ನಾನು ಒಪ್ಪಿಗೆ ಕೊಡೋದು. ಪ್ರಮಾಣಪತ್ರ, ಕರಾರು ಎಲ್ಲಾ ಮಾಡಿಕೊಡಬೇಕು. ನನ್ನ ಮಗಳ ಭವಿಷ್ಯ ಹಾಳು ಮಾಡೋಕೆ ನಾನು ಸಿದ್ಧಳಿಲ್ಲ!'

ವಿಜಯೇಂದ್ರ ಮೂರ್ತಿಯವರತ್ತ ನೋಡಿದಾಗ ಮೂರ್ತಿಯವರು ತಂದಿದ್ದ ಕರಿಯ ಚರ್ಮದ ಚೀಲ ತೆಗೆದು ಸಾವಿರದೈನೂರು ರೂಪಾಯಿ ಎಣಿಸಿ ಅಮ್ಮನ ಮುಂದಿಟ್ಟರು.

'ಇದು ಒಪ್ಪಿಕೊಂಡದ್ದಕ್ಕೆ ಮುಂಗಡ ಹಣ, ಆಮೇಲೆ ಬಂದು

ಕರಾರು ಪತ್ರ ಮಾಡಿಕೊಳ್ಳುತ್ತೇವೆ.

ಅಮ್ಮ ತನ್ನ ಕಣ್ಣುಗಳನ್ನು ತಾನೇ ನಂಬಲಿಲ್ಲ. ಹಣ ನಕಲಿ ನೋಟು ಗಳೇನೋ ತಿರುಗಿಸಿ ತಿರುಗಿಸಿ ನೋಡಿದ್ದಳು.

'ಇದಕ್ಕೆ ರಸೀತಿ ಬೇಡವೇ?' ಅಮ್ಮ ಕೇಳಿದಾಗ ಮೂರ್ತಿ, ವಿಜಯೇಂದ್ರ ಎದ್ದು ನಿಂತಿದ್ದರು.

'ಏನಮ್ಮ ನೀವು ಹೇಳೋದು? ನಮ್ಮ ನಿಮ್ಮ ವಿಶ್ವಾಸ ಮುಖ್ಯ. ಕರಾರೂ ರಸೀತಿಯೆಲ್ಲಾ ಬರೀ ಅಪರಿಚಿತರಿಗೆ ಮಾತ್ರ! ಬರ್ತೀವಿ, ಹದಿನೈದು ದಿನಗಳಲ್ಲಿ ಬಂದು ನೋಡ್ತೀವಿ.' ಅವರು ಹೊರಟಾಗ ಅಮ್ಮ ಹಣ ಎಣಿಸಿ ಕೊಂಡು ಭದ್ರವಾಗಿ ತೆಗೆದಿಟ್ಟಳು.

'ಪಾಪೂ ನಿನ್ನ ಅದೃಷ್ಟದ ಬಾಗಿಲು ತೆಗೆಯಿತು ಕಣೇ, ಇನ್ಮೇಲೆ ಬರೀ ಸಾವಿರ, ಎರಡು ಸಾವಿರಾನೇ ದಿನಕ್ಕೆ ಸಂಪಾದಿಸ್ತೀ ಬಿಡು.' ತನ್ನನ್ನು ಬಿರುಗಣ್ಣಿನಿಂದ ನೋಡುತ್ತಿದ್ದ ರೋಜಿ, ಲಲ್ಲಿ ಪುಟ್ಟಿ ಎಲ್ಲರತ್ತ ನೋಡಿ ಕಣ್ಣು ಕೆಕ್ಕರಿಸಿದ್ದಳು. 'ನೀವೂ ಇದ್ದೀರಿ ನೋಡಿ ದಂಡಕ್ಕೆ.'

ಹೊಸ ಅಧ್ಯಾಯ ಪ್ರಾರಂಭವಾಗಿತ್ತು ತನ್ನ ಬದುಕಿನಲ್ಲಿ. ತಾನು ತನ್ನ ಮನೆಗೆ ಮಾತ್ರ ಸೀಮಿತವಾಗಿರದೇ ಸಮಾಜದ ಸಿಲವುಗನ್ನಡಿಯಲ್ಲಿ ಕಾಣಿಸಿದ ವ್ಯಕ್ತಿ. ಬೆಳ್ಳಿತೆರೆಯ ಮೇಲೆ ಅವರಿಗಾಗಿ ಮೂಡಿ ಬರಲು ಮನೆ ಹೊಸಿಲು ದಾಟಿ ಸಮಾಜದ ಸೋಪಾನವೇರಿದ್ದೆ. ತನ್ನ ಭಾವನೆಗಳಿಗೆ ನೀರೆರೆದು ಪೋಷಿಸುತ್ತಿದ್ದುದು ಒಂದೇ ಜೀವ-ತನ್ನ ತಂದೆಯನ್ನು ಕೆಲವೇ ದಿನಗಳಲ್ಲಿ ಕಳೆದುಕೊಂಡಿದ್ದಾಗಿತ್ತು.

'ಏನು ಪಾಪೂ, ನಿದ್ದೆ ಮಾಡ್ತಾ ಇದ್ದೀಯಾ? ಸ್ಟುಡಿಯೋ ಇನ್ನೇನು ಬಂತು. ಬೇಕಾದ್ರೆ ಟೀಕ್ಸ್ ಮಧ್ಯ ವಿರಾಮ ಮಾಡ್ಕೊಂಡು ನಿದ್ರೆ ಮಾಡು.' ಅಮ್ಮ ಎಚ್ಚರಿಸಿದಾಗ ಪವಿತ್ರ ಬೆಚ್ಚಿ ಎದ್ದಳು. ಸ್ಟುಡಿಯೋ ಬಂದಿತೆಂದಾಗ ಅವಳೆದೆ ಗೂಡಿನ ಹಕ್ಕಿ ರೆಕ್ಕೆಬಿಚ್ಚಿ ಕುಣಿದಾ ಡಿತು. ರಾಜೇಂದ್ರ ತನ್ನನ್ನು ನೋಡಲು ಬರುತ್ತಾನೆ, ಅವನನ್ನೊಮ್ಮೆ ನೋಡಿದರೆ ಸಾಕು ತನ್ನ ಮನಸ್ಸು ಹೂವಾಗುತಿತ್ತು, ಹರಿವ ತೊರೆಯಾಗು ತಿತ್ತು, ಹಾಡುವ ಹಕ್ಕಿಯಾಗುತಿತ್ತು. ರಾಜೇಂದ್ರ ಅವರನ್ನು ತನ್ನ ಜೀವನ ದಲ್ಲಿ ಮೊದಲ ಬಾರಿಗೆ ಅಡಿಯಿಟ್ಟು ಬಂದು ತನ್ನನ್ನು ಕಂಡು ನಸುನಕ್ಕಾಗ 'ಓಹ್ ರಾಜೇಂದ್ರ, ರಾಜಾ ಐ ಸಿಂಪ್ಲಿ ಲವ್ ಯೂ! ಐ ಆಡೋರ್ ಯೂ' ಪವಿತ್ರ ಅವನನ್ನು ನೆನೆದು ನಸುನಗುತ್ತಲೇ ಇಳಿದಳು. ಹೊರಗೆ

ತನ್ನ ದರುಶನಕ್ಕಾಗಿ ಕಾದು ನಿಂತಿದ್ದ ತನ್ನ ಅಭಿಮಾನಿಗಳತ್ತ ಕೈ ಬೀಸಿದಾಗ ಅವಳಿಗೆ ಕಂಡದ್ದು ರಾಜೇಂದ್ರನ ನಗುಮುಖವೇ! ಎಲ್ಲೆಲ್ಲೂ ಅದೇ!

ಒಬ್ಬರಿಗೊಬ್ಬರು ಮಾತೇ ಇಲ್ಲ. ದೀರ್ಘಾಲಿಂಗನದಲ್ಲಿ ಮೈಮರೆತು ಹೋಗಿದ್ದರು. ಪರಿಸರದ ಪರಿವೇ ಇಲ್ಲ. ಹೊರಗೆ ಅರಸಪ್ಪ ಮುಚ್ಚಿದ್ದ ಬಾಗಿಲ ಬಳಿ ಪಹರೆ. ಯಾರು ಬಂದರೂ 'ಮೈ ಚೆನ್ನಾಗಿಲ್ಲಾಂತ ರೆಸ್ಟ್ ತೊಗೋತಾ ಇದ್ದಾರೆ. ತೊಂದರೆ ಮಾಡಬಾರದೆಂದು ಹೇಳಿದ್ದಾರೆ' ಎನ್ನುತ್ತಿದ್ದ.

ಹೊರಗೆ ಸೆಟ್ಟಿನ ಬಳಿ ಕುಳಿತು ಮಾಲತಮ್ಮ ಮೂರ್ತಿಯವರೊಡನೆ ದೇವರಾಜ್‌ರವರೊಡನೆ ಮಾತನಾಡುತ್ತಿದ್ದರು ಮಗಳು ಅಲ್ಲಿಲ್ಲದಿದ್ದುದೇ ಅವರಿಗೆ ಬೇಕಾಗಿತ್ತು. ತಾನೇನು ಮಾತನಾಡಿದರೂ ಅಡ್ಡಿ ಮಾಡುವಳೆಂದು ಅವರಿಗೆ ತಿಳಿದಿತ್ತು. ಹಿಂದೆ ಡೈರೆಕ್ಟರ್ ವಿಜಯೇಂದ್ರ, ಫೋಟೋಗ್ರಾಫರ್ ರಮಾಕಾಂತ ಇಬ್ಬರೂ ಇವಳಿಗಾಗಿ ಹಂಬಲಿಸಿದ್ದರು. ಆದರೆ ಕಡ್ಡಿ ಮುರಿದಂತೆ ಮಾತನಾಡಿ ಯಾವ ಕೆಲಸವನ್ನೂ ಮುಂದುವರಿಸದಂತೆ ಮಾಡಿದ್ದಳು.

'ನಾನು ಫಿಲಂ ಸ್ಟಾರ್ ಇರಬಹುದು. ಆದರೆ ಮಾನ ಮರ್ಯಾದೆ ಇಲ್ಲದವಳಲ್ಲ, ಮೈ ಮಾರಿಕೊಳ್ಳುವವಳಲ್ಲ.'

ಅಸಿಸ್ಟೆಂಟ್ ಡೈರೆಕ್ಟರ್ ಪುಟ್ಟಪ್ಪ ಹೆದರಿಸಿಯೂ ಇದ್ದರು. 'ಅವರಿಬ್ಬರೂ ಸೇರಿದರೆ ನಿಮ್ಮ ಪವಿತ್ರನ ಬದುಕೇ ಹಾಳು ಮಾಡಿಬಿಡಬಹುದು. ಕೆಲವರನ್ನು ಬುಟ್ಟೀಲಿ ಹಾಕ್ಕೊಂಡಿದ್ರೆ ನಿಮ್ಮ ಕೆಲಸ ಸುಲಭ ಡೈರೆಕ್ಟರ್ ಸಂತೋಷಪಡಿಸಿದ್ರೆ ಎಷ್ಟು ಮೇಲೆ ಬೇಕಾದರೂ ಏರ್ಬೋದು. ಅವರ್ನ ಎದುರು ಹಾಕ್ಕೊಂಡ್ರೆ ಕೈಗೆ ಚಿಪ್ಪೇ ಸಿಗೋದು.'

ಮಾಲತಮ್ಮ ಭಯದಿಂದ ಮಗಳ ಮನವೊಲಿಸಲು ಇನ್ನಿಲ್ಲದಂತೆ ಯತ್ನಿಸಿದ್ದರು.

'ನಾನೇನೂ ದೊಡ್ಡ ತಾರೆಯಲ್ಲ. ಮೇಲೇರದಿದ್ರೆ ಇಲ್ಲೇ ಉಳ್ಕೋತೀನಿ. ಚಿತ್ರರಂಗಾನೇ ಬಿಟ್ಟು ಬಿಡ್ತೀನಿ ಬೇಕಾದ್ರೆ! ಈ ಕೆಟ್ಟ ಸಹವಾಸವೇ ಬೇಡ' ಎಂದುಬಿಟ್ಟಿದ್ದಳು.

ತಾವೇ ವಿಜಯೇಂದ್ರರ ಬಳಿ ಹೋಗಿ ಹೇಳಿರಲಿಲ್ಲವೇ? 'ಪಾಪೂ ಇನ್ನೂ ಚಿಕ್ಕವಳು ವಯಸ್ಸು ಬರಲಿ ತಾಳಿ, ಅವಳಿಗೇನೂ ತಿಳಿಯೋಲ್ಲ.

ಅವಳಿಲ್ಲಿ ಹೋಗ್ತಾಳೆ? ಅರ್ಥ ಆಗೋ ವಯಸ್ಸಲ್ಲ ಇನ್ನೂ! ನಿಮಗೆ ತಾಳ್ಮೆ ಇದ್ದರೆ ವಾಸಿ!' ಅದಕ್ಕೇ ಏನೋ ಅಂತೂ ಯಾರೂ ಅವಳ ಭವಿಷ್ಯ ಹಾಳು ಮಾಡಿರಲಿಲ್ಲ. ನಾಲ್ಕು ಜನರೆದುರು ಚೆನ್ನಾಗಿರಬೇಕೆಂದೂ ತಿಂಗಳು ತಿಂಗಳು ದುಬಾರಿ ಬಾಡಿಗೆ ಸುರಿದು ದೊಡ್ಡಮನೆ ಕೊಡಿಸ ಲಾಗಿತ್ತು. ಅವಳು ಸಂಪಾದಿಸುತ್ತಿದ್ದ ಹಣವೆಲ್ಲಾ ಇನ್ನಿತರ ಮಕ್ಕಳ ಹೊಟ್ಟೆ ತುಂಬಿಸಲೇ ಸಾಕಾಗುತಿತ್ತು. ಎಂದೂ ಕಾಣದ ಊಟ, ತಿಂಡಿ, ಹಣ ನೋಡಿ ಕಂಗಾಲಾದ ಮಕ್ಕಳು ಸಿಕ್ಕಿದ್ದೆಲ್ಲಾ ಮುಕ್ಕುತ್ತಿದ್ದರು. ಅವರಿಗೆ ಮಾಡಿಹಾಕಲು ಕುಳಿತರೆ ಇವಳ ಬದುಕು ನೋಡಿಕೊಳ್ಳುವರಾ ರೆಂದು ತಾವೇ ಅಯ್ಯರ್‌ರನ್ನು ಕರೆತಂದು ಮನೆಯಲ್ಲಿಟ್ಟುಕೊಂಡಾಗಿತ್ತು. ಅದೂ ಅವನೂ ಸಿಕ್ಕಿದ್ದು ತಮಗೆ ಅದೃಷ್ಟವೆಂದೇ ಹೇಳಬೇಕು. ಅವನಿಗೆ ಸಂಬಳವಿಲ್ಲದ ಕೆಲಸ. ಸೆಟ್ಟಿನಲ್ಲಿ ಒಮ್ಮೆ ದೂರದಲ್ಲಿ ನಿಂತು ಬಿರುಗಣ್ಣಿ ನಿಂದ ನೋಡುತ್ತಿದ್ದ ಅವನು ತಾನು ಒಬ್ಬ ಚಿತ್ರ ಕಲಾವಿದನಾಗಬೇಕೆಂಬ ಆಸೆಯಿಂದ ಊರು ತೊರೆದು ಬಂದಿದ್ದ. ಎಲ್ಲೂ ಕೆಲಸವಿರಲಿಲ್ಲ. ಯಾರೂ ಅವನಿಗೆ ಪಾತ್ರ ನೀಡಲಿಲ್ಲ. ಎಲ್ಲಾ ಚಿತ್ರದ ಶೂಟಿಂಗ್ ನಡೆಯುತ್ತಿದ್ದರೂ ಅಲ್ಲಿಗೆ ಬಂದು ಎಲ್ಲರ ಮರ್ಜಿ ಕಾಯುತ್ತಾ ತನಗೆ ಒಂದು ಸಣ್ಣ ಪಾತ್ರ ವಾದರೂ ಸಿಗಬಹುದೆಂಬ ಹಂಬಲದಿಂದ ಬರುತ್ತಿದ್ದ. ಹೊಟ್ಟೆಗೆ ಅನ್ನವಿಲ್ಲ. ಯಾರಾದರೂ ಅವನ ಮೇಲೆ ಕರುಣೆಯಿಟ್ಟು ಏನಾದರೂ ಕೊಟ್ಟರೆ ಉಂಟು! ಇಲ್ಲದಿದ್ದರೆ ಇಲ್ಲ. ಅವನ ಕೈಯಲ್ಲಿ ಸೆಟ್ಟಿನಲ್ಲಿರುತ್ತಿದ್ದ ಎಲ್ಲರೂ ಕೆಲಸ ತೆಗೆಯುತ್ತಿದ್ದುದೂ ಉಂಟು.

'ಅಯ್ಯರ್ ಈ ಕುರ್ಚಿ ಅಲ್ಲಿಡಿ'—'ಅಯ್ಯರ್, ಕೈತೊಳೆಯೋಕೆ ನೀರಿದ್ರೆ ತನ್ನಿ' 'ಅಯ್ಯರ್ ಒಂದು ಪ್ಯಾಕ್ ತ್ರಿಬ್ಬಲ್ ಫೈವ್ ಸಿಗರೇಟು ತನ್ನಿ'–ಅಯ್ಯರ್ ಒಂದಿಷ್ಟು ಅಡಿಕೆ, ಎಲೆ ತೊಗೊಂಡ್ಬನ್ನಿ'–ಹೀಗೆ ನೂರಾರು ಕೆಲಸ. ಆದರೆ ಚಿತ್ರದಲ್ಲಿ ಪಾತ್ರ ಮಾತ್ರ ಯಾರೂ ಕೊಟ್ಟಿರ ಲಿಲ್ಲ. ಒಮ್ಮೆ ಮಾಲತಮ್ಮ ಪರ್ಸ್ ಮರೆತು ಬಂದಾಗ ಅಯ್ಯರ್ ಭಯ ಭಕ್ತಿಯಿಂದ ತಂದಿತ್ತಿದ್ದ. ಆಗ ಅವರು ಅವನ ಪ್ರಾಮಾಣಿಕತೆಯನ್ನು ಮೆಚ್ಚಿ ಎಲ್ಲರಿಗೂ ಕಾಣುವಂತೆ ಧಾರಾಳವಾಗಿ ಐದು ರೂಪಾಯಿ ನೋಟು ಕೊಟ್ಟಿದ್ದರು. ಆಗ ಕೈ ಮುಗಿದು ಕೇಳಿಕೊಂಡಿದ್ದ.

'ಅಮ್ಮ, ನಿಮಗೆ ಎಲ್ಲರ ಪರಿಚಯವಿದೆ. ಹೇಗಾದ್ರೂ ಮಾಡಿ ನಂಗೊಂದು ಪಾತ್ರ ಕೊಡಿಸೀಮ್ಮಾ!'

ಮಾಲತಮ್ಮನಿಗೆ ಬಹಳ ಮುಂದಾಲೋಚನೆ. 'ಎಲ್ಲರ ಚಾಕ್ರಿ ಮಾಡ್ತೀ! ನಿನ್ನ ನೋಡಿದ್ರೆ ಅಯ್ಯೋ ಅನ್ನುತ್ತೆ. ಕಣ್ಣೆದುರುಗಿದ್ರೆ ಜ್ಞಾಪ್ಕ ಇರುತ್ತೆ. ಎಲ್ಲಾದ್ರೂ ಕೆಲ್ಸ ಮಾಡ್ಬಾರ್ದೇ?'

'ಯಾರು ಕೊಡ್ತಾರಮ್ಮಾ ಕೆಲ್ಸ?' ಎಂದಾಗ ಮಾಲತಮ್ಮ ಸಂತಸದಿಂದ ಹೇಳಿದ್ದರು.

ನಾನು ಕೊಡ್ತೀನಿ ಬನ್ನಿ. ನಂಗೆ ಮನೇಗೆ ಬರೋರು ಹೋಗೋರು ಜಾಸ್ತಿ, ನಂಗೆ ಒಂದಿಷ್ಟು ಮನೇಲಿ ಸಹಾಯ ಮಾಡ್ಕೊಂಡಿರಿ. ಮನೆಗೆ ಬರೋ ಪ್ರೊಡ್ಯೂಸರ್, ಡೈರೆಕ್ಟರ್‌ಗಳಿಗೆ ಹೇಳಿ ಒಂದು ಪಾತ್ರ ಕೊಡಿಸ್ತೀನಿ.' ಅಯ್ಯರ್‌ಗೊಂದು ನೆಲೆ ಸಿಕ್ಕಿತು. ಕೆಲಸ ಸಿಕ್ಕಿತು. ಹೊಟ್ಟೆ ತುಂಬಾ ಅನ್ನ ಸಿಗುತ್ತಿತ್ತು. ದೂರದ ಆಸೆಯೊಂದು ಹೊತ್ತು ಅವರ ಮನೆಯ ಅಡುಗೆಯವರಿಗಾಗಿ ಕಾದಿದ್ದರು. ಮಾಲತಮ್ಮ ಯಾರನ್ನೂ ಅವರ ಪಾತ್ರದ ಬಗ್ಗೆ ಕೇಳುತ್ತಿರಲಿಲ್ಲ. ಒಮ್ಮೊಮ್ಮೆ ಅವರೇ ಬಾಯಿ ಬಿಟ್ಟು ಕೇಳಿದಾಗ ಮಾಧೂ ಹಾಸ್ಯ ಮಾಡುತ್ತಿದ್ದ.

'ನಿಮ್ಮ ಮುಖ, ನಿಮ್ಮ ಜುಟ್ಟು, ನಿಮ್ಮ ಮೈನೋಡಿ ಯಾರು ಕೊಡ್ತಾರೆ ಹೇಳಿ. ನಮ್ಮ ಪಾಪೂನೇ ಒಂದು ದಿನ ಚಿತ್ರ ತಯಾರಿಸೋ ಹಾಗಾಗ್ತಾಳೆ. ಆಗ ನಿಮ್ಮನ್ನು ಖಂಡಿತ ಹಾಕ್ಕೊಳ್ತಾಳೆ!'

ದೈವೇಚ್ಛೆಯೆಂದು ಸುಮ್ಮನಾಗಿಬಿಟ್ಟಿದ್ದರು. ಮನೆಯ ಸಂಸಾರ ತೂಗಿಸಲು ಮಾಲತಮ್ಮ ಹೆಣಗುತ್ತಿದ್ದರು. ನಾಲ್ಕು ಜನರ ಮುಂದೆ ದೊಡ್ಡಸ್ತಿಕೆ ತೋರಿಸಿಕೊಳ್ಳಬೇಕು. ಪವಿತ್ರ ಮನಸ್ಸು ಮಾಡಿದ್ದರೆ ಲೀಲಾಜಾಲವಾಗಿ ತೋರಿಸಬಹುದಿತ್ತು. ಅವಳಿಗಿನ್ನೂ ಬದುಕಿನ ಹಂದರವರ್ಥವಾಗಿಲ್ಲ. ಈಗಲಾದರೂ ದೇವರಾಜ್‌ರವರನ್ನು ಸರಿಮಾಡಿಕೊಂಡರೆ ಮನೆ, ಕಾರು, ಮೋಜು ಮಾಡಬಹುದು. ಅವಳಿನ್ನೂ ಒಲವು, ಪ್ರೇಮ, ಪ್ರೀತಿ ಇವುಗಳ ಸುಂದರ ಕನಸಿನ ಕಲ್ಪನೆಗಳನ್ನೇ, ನಂಬಿದ್ದಾಳೆ. ಆ ರಾಜೇಂದ್ರ ಏಕಾದರೂ ಬಂದನೋ ಇವಳ ಬದುಕಿನಲ್ಲಿ! ಏನೋ ಇಲ್ಲ ಸಲ್ಲದ ಮೌಲ್ಯಗಳನ್ನೆಲ್ಲಾ ತಲೆಗೆ ತುಂಬುತ್ತಾನೆ. ಇನ್ನೊಬ್ಬರಿಗೆ ಬುದ್ಧಿ ಹೇಳುವ ಇವನು ಮಾಡುವ ಕೆಲಸವೇನು ಕಡಿಮೆಯೇ? ಕೈಹಿಡಿದ ಹೆಂಡತಿ, ಪುಟ್ಟಮಕ್ಕಳು ಮನೆಯಲ್ಲಿದ್ದರೂ ಎಲ್ಲ ಚಿಕ್ಕ ಪುಟ್ಟ ಹೊಸತಾರೆಯರ ಮೇಲೆ, ಎಕ್ಸ್‌ಟ್ರಾಗಳ ಜೊತೆಯಲ್ಲೂ ಚೆಲ್ಲು ಬಡಿಯುವುದು. ಕಂಡಿರಲಿಲ್ಲವೆ? ನೋಡುವವರಿಗೆ, 'ರಾಜೇಂದ್ರ, ತುಂಬಾ ಒಳ್ಳೆಯವಳು

ಜೂನಿಯರ್ ಆರಿಸ್ಟ್‌ಗಳನ್ನೂ ಬಾಯಿ ತುಂಬಾ ಮಾತಾಡಿಸುತ್ತಾರೆ' ಎನ್ನುತ್ತಿದ್ದರು. ಬದುಕಿನಕಹಿಯುಂಡವರು ತಾವು. ತಮಗೆ ಗೊತ್ತಿಲ್ಲವೆ? ಪಾಪೂನ್ನೂ ಅಷ್ಟೆ. ನೋಡೋಕೆ ಒಳ್ಳೆ ರಸ ತುಂಬಿದ ಚೆಲುವೆ. ಒಂದು ಕೈ ನೋಡಬೇಕೆಂದು ಇನ್ನಿಲ್ಲದ ಹಾಗೆ ಪ್ರೇಮ, ಪ್ರೀತಿ ಅಂತ ಹುರಿದುಂಬಿಸುತ್ತಿದ್ದಾನೆ. ತಾವು ಅವನನ್ನು ಕಾಯದಿದ್ದರೆ ಎಂದೋ ಪವಿತ್ರ ಅವನ ಕೈಯ್ಯಲ್ಲಿ ಹಾಳಾಗುತ್ತಿದ್ದುದು ನಿಜ. ಹೇಗಾದರೂ ಮಾಡಿ ಅವನಿಂದ ಅವಳನ್ನು ದೂರ ಮಾಡಿಬಿಟ್ಟರೆ ಸಾಕು. ದೇವರಾಜ್‌ರವರನ್ನು ಹಿಡಿದರೆ ಮಾತ್ರ ಈ ಕೆಲಸ ಸಾಧ್ಯ. ಅವನ ಬಗ್ಗೆ ಹೊಗಳಿ ಅವರೇ ಎಷ್ಟೋ ಪಾತ್ರಗಳನ್ನು ಕೊಡಿಸುತ್ತಿದ್ದರು. ಅವರಿಗೆ ಪವಿತ್ರ–ರಾಜೇಂದ್ರನ ಸಂಬಂಧ ತಿಳಿದರೆ ಖಂಡಿತ ರಾಜೇಂದ್ರ ದೂರವಾಗುತ್ತಾನೆ, ದೂರಮಾಡುತ್ತಾರೆ. ಅವಳ ಬಾಳಿನಲ್ಲಿ ಅವನೊಂದು ಮುಳ್ಳು!

ಆದರೆ ಅವರ ಹಿಂದೆಯೇ ನಡೆಯುತ್ತಿದ್ದುದು ಅವರಿಗೆ ತಿಳಿದಿರಲಿಲ್ಲ. 'ನಿನ್ನ ಬಗ್ಗೆ ನನಗೆ ದೊಡ್ಡ ಚಿಂತೆ ಹತ್ತಿಬಿಟ್ಟಿದೆ ಪವಿತ್ರಾ. ಎಲ್ಲರೂ ನಿನ್ನ ಮೇಲೆ ಕಣ್ಣು ಹಾಕಿದ್ದಾರೆ. ಎಲ್ಲಿ ನಿನ್ನ ಎಗರಿಸಿಕೊಂಡು ಹೊರಟು ಹೋಗ್ತಾರೋ ಅಂತ ನನಗೆ ಹೆದರಿಕೆಯಾಗಿಬಿಟ್ಟಿದೆ' ರಾಜೇಂದ್ರ ನಾಯಕನ ಉಡುಪಿನಲ್ಲಿ ಮಾದಕ ನಗೆ ಬೀರಿ ಅವಳನ್ನು ಮುತ್ತಿಟ್ಟು ಹೇಳಿದಾಗ ಪವಿತ್ರ ಅವನಿಗೆ ಸೋತಿದ್ದಳು. ಎಂತಹ ಚೆಲುವ ಇವನು! ತನ್ನ ಬಗ್ಗೆ ಇವನಿಗೆ ಎಷ್ಟು ಅಕ್ಕರೆ! ಇವನಂತಹವನು ತನ್ನ ಬೆಂಗಾವಲಾಗಿರುವವರೆಗೆ ತನಗೆ ಭಯವಿಲ್ಲ. ಅವನೆದೆಗೆ ಬಾಗಿಯೇ ಹೇಳಿದಳು.

'ನೀವಿರೋ ತನ್ಕ ನನ್ನ ಯಾರೂ ಎಗರಿಸಿಕೊಂಡು ಹೋಗೋ ಧೈರ್ಯವಿಲ್ಲ! ನಿಮ್ಮನ್ನು ಬಿಟ್ಟು ನಾನು ಹಾಗೆಲ್ಲಾ ಹೊರಟುಹೋಗ್ತೀನಾ?' ಈ ಕ್ಷಣ 'ಬಾ' ಅಂದ್ರೂ ನಾನು ಬಂದುಬಿಡ್ತೀನಿ ನಿಮ್ಮ ಜೊತೆ' ಪವಿತ್ರ ಹೇಳಿದಾಗ ರಾಜೇಂದ್ರ ತುಟಿಗೆ ಹೂಮುತ್ತನಿತ್ತ.

'ನೀನು ಮೇಕಪ್‌ನಲ್ಲಿದ್ದೀ. ಇಲ್ಲದಿದ್ದರೆ ಆ ಮಾತು ಹೇಳಿದ್ದಕ್ಕೇ ನಮ್ಮನೇಲಿ ಇಟ್ಕೊಂಡ್ಬಿಡ್ತಾ ಇದ್ದೆ. ಒಂದು ಸಾವಿರ ಮುತ್ತಿನಾರತಿ ಮಾಡುತ್ತಿದ್ದೆ.' ಅವನಾಲಿಂಗನದಲ್ಲಿ ಕರಗಿಹೋದಳು.

'ಎಷ್ಟು ದಿನಗಳು ಹೀಗೆ ಕದ್ದು ಭೇಟಿಯಾಗಬೇಕು?' ಪವಿತ್ರ ಮೆಲ್ಲನುಸರಿದಳು. 'ರಾತ್ರಿ ಒಮ್ಮೊಮ್ಮೆ ಹಾಗೆಯೇ ಎದ್ದು ನಿಮ್ಮ ಬಳಿ ಗೋಡಿಬಂದು ಬಿಡಲೇ ಎನಿಸುತ್ತದೆ.'

ರಾಜೇಂದ್ರ ಅವಳ ಮುಖವನ್ನು ಬೊಗಸೆಯಲ್ಲಿ ಹಿಡಿದು ಕಣ್ಣಲ್ಲಿ ಕಣ್ಣಿಟ್ಟು ಹೇಳಿದ.

'ನನಗೂ ನೀನು ನನ್ನ ಬಳಿಗೆ ಬಂದುಬಿಡಬಾರದೆ ಎನ್ನಿಸುತ್ತೆ. ಆದರೆ ನನ್ನ ಹೆಂಡತಿ ಕಣ್ತಪ್ಪಿ, ನಿನ್ನ ತಾಯಿಯ ಕಣ್ತಪ್ಪಿಸಿ ಹೇಗೆ ಮಾಡಲು ಸಾಧ್ಯ ? ಬರೀ ಇಷ್ಟರಲ್ಲೇ ಆಗಿಹೋಯಿತಲ್ಲಾ ಚಿನ್ನ ! ಒಮ್ಮೆಯಾದರೂ ನಿನ್ನನ್ನು ನಾನೆಷ್ಟು ಪ್ರೀತಿಸುವೆನೆಂದು ತೋರಿಸಲಾಗಲಿಲ್ಲವಲ್ಲ ಒಂದು ಸಲ ಎಲ್ಲರ ಕಣ್ಣಿಗೂ ಮಣ್ಣೆರಚಿ ಎಲ್ಲಾದರೂ ಇಬ್ಬರೂ ಓಡಿಹೋಗಿ ಬಿಡೋಣ, ಬರ್ತೀಯಾ ?'

'ನೀನೆಲ್ಲಿಗೆ ಬಾ ಅಂದ್ರೂ ಬರ್ತೀನಿ !' ಪವಿತ್ರ ಅವನೆದೆಗೊರಗಿದಳು. 'ಅರಸಪ್ಪ ಇರವವರೆಗೂ ಸರಿ. ಆಮೇಲೆ ಹೀಗೆ ಗ್ರೀನ್ ರೂಂನಲ್ಲಿ ಕದ್ದು ಭೇಟಿಯಾಗುವುದೂ ಕಡಿಮೆಯಾದೀತು ! ಅನಂತರ ಇದೂ ಕೊನೆಗೊಳ್ಳು ವುದೇನೋ ಅಂತ ನಂಗೆ ಏನೋ ಆತಂಕ ಭಯ.'

'ಕೊನೆ ಯಾಕೆ ಬೇಕು ಚಿನ್ನ, ಹೀಗೆ ಇದ್ದರೆ ಚೆನ್ನಾಗಿರುತ್ತೆ !'

'ಹೀಗೆ ಕದ್ದು, ಸುಳ್ಳು ಹೇಳಿ...'

'ಇದರಲ್ಲಿ ಸೊಗಸು ಜಾಸ್ತಿ ! ಅದ್ರಲ್ಲಿ ಸಿಗೋ ಸುಖ, ಆನಂದ ಇನ್ನೆಲ್ಲಿ ಸಿಗುತ್ತೆ !'

'ಇದು ಯಾವ ಚಿತ್ರದ ಡೈಲಾಗೋ ?'

'ಯಾವ್ದಾದ್ರೂ ಆಗ್ಲಿ. ಈಗ ಬೇಗ ಹೇಳು, ನೆಕ್ಸ್ಟ್‌ವೀಕ್ ನಾನು ಫ್ರೀ. ನೀನು ಯಾವಾಗ ಸಿಕ್ತೀ ?'

'ನನಗೆಲ್ಲಿದೆ ಫ್ರೀ ಟೈಂ ? ಎರಡು ಷಿಫ್ಟ್ ಮಾಡ್ತಾ ಇಲ್ವಾ ?' ಪವಿತ್ರ ಹೇಳಿದಾಗ ರಾಜೇಂದ್ರ ಅವಳ ಮುಖ ನೋಡಿದ.

'ಪವಿತ್ರಾ, ನಿನ್ನ ಬಿಟ್ಟು ನಂಗಿರೋಕೇ ಸಾಧ್ಯವೇ ಆಗ್ತಾ ಇಲ್ಲ. ಹಗಲೂ ರಾತ್ರಿ ನಿಂದೇ ಚಿಂತೆ ಹತ್ಕೊಂಡ್ಬಿಟ್ಟಿದೆ. ನಿಂಗೆ ಹೊಸ ಹೊಸ ಹೀರೋಗಳು ಸಿಗ್ತಾ ನನ್ನ ಮರ್ತೀ ಬಿಡ್ತೀ ಅನ್ನೋ ಹೆದರಿಕೆ ಬೇರೆ ನಂಗೆ.'

'ಏನು ಮಾತಾಡ್ತೀರಿ ರಾಜಾ, ನಿಮ್ಮನ್ನ ಅಷ್ಟು ಸುಲಭವಾಗಿ ಮರ್ತು ಬಿಡ್ತೀನಾ ನಾನು' ಪವಿತ್ರ ಕೇಳಿದಳು.

'ನೋಡೂ, ನೀನಿನ್ನೂ ನನಗಿಂತ ಚಿಕ್ಕೋಳು—ನಾನು ಚಿತ್ರರಂಗ ದಲ್ಲಿ ಆಗಲೇ ಹತ್ತು ವರ್ಷ ಪಳಗಿದ್ದೀನಿ. ನೀನಿನ್ನೂ ಈಗ್ತಾನೇ ಚಿತ್ರ

ಪ್ರಪಂಚದಲ್ಲಿ ಕಣ್ಣು ಬಿಡ್ತಾ ಇದ್ದೀಯಾ. ನೀನು ಮೇಲೇರ್ತಾ ಹೋಗ್ತೀಯಾ–ನಾನು ಸ್ಟಾರ್ ವಾಲ್ಯೂನಲ್ಲಿ ಹಿಂದಕ್ಕೆ ಇಳೀತಾ ಹೋಗ್ತೀನಿ. ಈಗ ಕೈಲಿರೋ ನಾಲ್ಕು ಚಿತ್ರಗಳ್ನ ಬಿಟ್ರೆ ನಂಗೆ ಇನ್ಯಾವ್ದೂ ಬಂದೇ ಇಲ್ಲ'

'ಬರುತ್ತೆ ಇರಿ ರಾಜಾ...ನಿಮ್ಮಂತಹ ಆರ್ಟಿಸ್ಟ್‌ಗೆ ಬರೋದು !' ರಾಜೇಂದ್ರ ಪವಿತ್ರಳ ತುಟಿಗೆ ತುಟಿ ತಂದ. 'ನೀನಾದರೂ ಹಾಗೆ ಹೇಳ್ತಿಯಲ್ಲಾ ಅದಕ್ಕೆ ಇದು !' ಬಹಳ ಹೊತ್ತಿನ ನಂತರ ಮೆಲ್ಲನುಸರಿದ. 'ಪವಿತ್ರ ನೀನೇ ನನ್ನ ಉಸಿರು. ಮುಳುಗುತ್ತಿರುವವನಿಗೆ ಹುಲ್ಲುಕಡ್ಡಿಯ ಆಸೆ. ಪವಿತ್ರ ಅವನ ಕುತ್ತಿಗೆಯ ಸುತ್ತ ಕೈಬಳಸಿ ಕೆನ್ನೆಗೆ ಕೆನ್ನೆ ತಂದು ಉಸಿರಿದಳು. 'ನೀನೇ ನನ್ನ ಜೀವ.'

'ಪವಿತ್ರ ನನಗೊಂದು ಉಪಕಾರ ಮಾಡ್ತೀಯಾ ?'

'ನಿಮಗೆ ನನ್ನಿಂದ ಒಂದೇ ಉಪಕಾರ ಸಾಕಾ ?'

'ಸಧ್ಯಕ್ಕೆ ಸಾಕು. ದೇವರಾಜ್ ಎರಡು ಫಿಲಂಸ್‌ಗೆ ನಿನ್ನನ್ನೇ ನಾಯಕಿಯಾಗಿ ಹಾಕ್ಕೊಳ್ತಾ ಇದ್ದಾರಂತೆ. ಅವರಿಗೆ ನಿನ್ನ ಮೇಲೆ ಬಹಳ ಮನಸ್ಸಿದೆಯಂತೆ, ನೀನು ಹೇಳಿದರೆ ಅವರಿಲ್ಲಾ ಅನ್ನೋಲ್ಲ. ಅವರಿಗೆ ಹೇಳಿ ಅವರ ಫಿಲಂನಲ್ಲಿ ನಂಗೆ ಹೀರೋ ರೋಲ್ ಕೊಡೋಕೆ ಹೇಳ್ತೀಯಾ ?'

ಪವಿತ್ರ ಅವನ ಆಲಿಂಗನದಲ್ಲೇ ಕಲ್ಲಾದಳು. ಓಹೋ ತನ್ನ ರಾಜೇಂದ್ರನ ಒಲವು ಇಷ್ಟೇಯೇ ? ಇವನೂ ತನ್ನನ್ನು ಬಳಸಿಕೊಳ್ಳುತ್ತಿರುವವನೆ ? ಇವರೆಲ್ಲಾ ತನ್ನ ಮೇಲೆ ಪರತಂತ್ರಜೀವಿಗಳು. ಅವಳ ಹೃದಯದಲ್ಲಿ ಕಾರ್ಮೋಡ ಕವಿದು ಕಾರ್ಗತ್ತಲು ಕವಿದಂತಾಯಿತು. ಆದರೆ ಅದೇಕೋ ಅವನ ಬಗ್ಗೆ ಕೀಳು ಭಾವನೆ ಮೂಡದಂತೆ ಎಚ್ಚರಿಕೆ ವಹಿಸಿದಳು. ಮೊದಲನೇ ಬಾರಿಗೆ ತನ್ನ ಬದುಕಿನಲ್ಲಿ ಪುರುಷನ ಪರಿಚಯ ಮಾಡಿಕೊಟ್ಟವನಲ್ಲವೆ ಅವನು. ಒಲವಿನ ಧಾರೆ ಹರಿಸಿದವರು ತನ್ನ ಬದುಕಿನಲ್ಲಿ ಯಾರೂ ಇರಲಿಲ್ಲ. ಹೊಸ ಅಧ್ಯಾಯ ಪ್ರಾರಂಭಿಸಿದವನು. ಅವನಿತ್ತ ಅಮೃತದ ಧಾರೆಗೆ ತಾನಿಷ್ಟು ಮಾಡಲಾರೆನೇ.

'ಯಾಕೆ ಚಿನ್ನ ಸುಮ್ಮನಾಗಿಬಿಟ್ಟೆ ? ಆಗುವುದಿಲ್ಲವೇ ?'

'ಆಗೋಲ್ಲ ಅಲ್ಲಾ ರಾಜಾ, ನಾನು ಕೇಳಿದರೂ ಅವರೊಪ್ಪದಿದ್ದಲ್ಲಿ ನೀವು ನನ್ನ ಮೇಲೆ ಬೇಸರಪಡುವುದಿಲ್ಲ ತಾನೇ ?' ಅವಳ ಕಣ್ಣುಗಳು

ಆಗಲೇ ತೀವವಾಗಿದ್ದವು.

'ಛೀ ! ಎಂತಹ ಮಾತನಾಡುತ್ತೀ ! ಕೈಹಿಡಿದ ಹೆಂಡತಿ, ಮಕ್ಕಳನ್ನೂ ಮರೆತು ನಿನ್ನ ಧ್ಯಾನದಲ್ಲಿ ನಾನು ಇಷ್ಟು ದಿನ ಮುಳುಗಿ ಹೋದದ್ದು ಇದಕ್ಕಾಗಿಯೇನಾ ? ನೀನು ಉಪಕಾರ ಮಾಡಿದರೂ ಅಷ್ಟೆ ಮಾಡದಿದ್ದರೂ ಅಷ್ಟೆ ನೀನು ನನ್ನವಳು ಪವಿತ್ರ ! ಅದನ್ನು ಮಾತ್ರ ನೀನು ಮರೀಬೇಡಾ ! ಅಂತಹ ಭಾವನೆಗಳನ್ನು ನಿನ್ನ ಮನಸ್ಸಿನಿಂದ, ಹೃದಯ ದಿಂದ ಕಿತ್ತೆಸೆದುಬಿಡು ನಿನ್ನಿಂದ ಏನಾದರೂ ಉಪಕಾರವಾದೀತು ಎಂದು ಕೇಳಿದೆನಷ್ಟೆ.' ಅವಳ ಕೆನ್ನೆಗಳಿಗೆ, ತುಟಿಗೆ ಮುತ್ತಿಟ್ಟ.

'ರಾಜಾ ಖಂಡಿತ ಕೇಳ್ತೀನಿ, ಹೇಗಾದ್ರೂ ಮಾಡಿ ಒಪ್ಪಿಸ್ತೀನಿ '

'ಓಹ್ ನನ್ನ ಚಿನ್ನ, ನನ್ನ ಬಂಗಾರ, ಮೈ ಶುಗರ್, ಮೈ ಸ್ವೀಟ್ !' ರಾಜೇಂದ್ರ ಅವಳನ್ನು ಬರಸೆಳೆದ. ಅವನ ಬಾಹುಗಳಲ್ಲಿ ಕರಗಿ ಹೋದಳು ಪವಿತ್ರ.

ಹೊರಗಿನಿಂದ ಅರಸಪ್ಪ ನಾಲ್ಕು ಬಾರಿ ಕದ ತಟ್ಟಿದ. ಪವಿತ್ರ ರಾಜೇಂದ್ರ ದೂರ ಸರಿದರು. 'ನಾನಿನ್ನು ಬರ್ತೀನಿ ಚಿನ್ನಾ ! ನಾಳೆಯಿಂದ ಔಟ್‌ಡೋರ್ ಶೂಟಿಂಗ್ ಪ್ರಾರಂಭ. ಈ ವಾರದ ಕೊನೆಗೆ ಎಲ್ಲಾ ಮುಗಿ ಯುತ್ತೆ, ಆಮೇಲೆ ನಿನ್ನ ನೋಡ್ತೀನಿ. ಅಲ್ಲಿವರ್ಗೂ ಇದು ಇರಲಿ.' ಅವಳನ್ನು ಮುತ್ತಿಟ್ಟು ಬಾಗಿಲು ತೆರೆದು ಹೊರಗೆ ನುಸುಳಿಕೊಂಡು ಬಂದಾಗ ಅಲ್ಲಿಯೇ ಅವನಿಗಾಗಿ ಕಾಯುತ್ತಿದ್ದ ಚಂದ್ರಪ್ಪ ಅವನ ಉಡುಪು, ಮುಖದ ಮೇಕಪ್ ಅಲ್ಲಲ್ಲಿ ಬೇಗ ಸರಿಪಡಿಸಿದ. ಒಳಗೆ ಹೋದ ಅರಸಪ್ಪ ಪವಿತ್ರಳ ಉಡಿಗೆ, ತೊಡಿಗೆ, ಮೇಕಪ್ ಸರಿಪಡಿಸಿದ.

'ಕೆಳಗೆ ಅಸಿಸ್ಟೆಂಟ್ ಡೈರೆಕ್ಟರ್ ಕರೀತಾ ಇದ್ದಾರೆ.'

'ಅರಸಪ್ಪಾ, ರಾಜೇಂದ್ರ ಬಂದದ್ದು ಹೋದದ್ದು ಯಾರಿಗೂ ತಿಳೀ ಲಿಲ್ಲ ಅಲ್ವಾ ?'

'ಇಲ್ಲ. ಅವರು ಮೇಕಪ್‌ಗೋಸ್ಕರ ಗ್ರೀನ್ ರೂಂಗೆ ಬಂದಿದ್ದಾರೆ ಅಂದ್ಕೊಂಡಿದ್ದಾರೆ. ನೀವು ಆ ಕಡೇ ಬಾಗಿಲು ತೆಗೆದಿದೆ. ಹೊರಗ್ನಿಂದ ಬಂದಂಗೆ ಒಳಗೆ ಬಂದುಬಿಡಿ ಯಾರಿಗೂ ಅನುಮಾನ ಬರೋಲ್ಲ.' ಅವನು ಹೇಳಿದಂತೆಯೇ ಹೊರಗಿನಿಂದ ಬಂದಾಗ ರಾಜೇಂದ್ರ ಅಸಿಸ್ಟೆಂಟ್ ಡೈರೆಕ್ಟರ ಜೊತೆ ಮಾತನಾಡುತ್ತಾ ನಿಂತಿದ್ದ.

ಓಹೋಹೋ ಬಂದ್ರಾಮ್ಮಾ ನಿಮ್ದೇ ಲೇಟು. ಕಾಯ್ತಾ ಇದ್ದಾರೆ.

ಒಂದ್ಸಲ ಡೈಲಾಗ್ ಮಾಡ್ಕೊಂಡು ರಿಹರ್ಸ್ ಮಾಡ್ಬಿಡ್ತೀರಾ ?'

'ಓಹ್ ಪವಿತ್ರಾನಾ ...ಹಲೋ ಬಹಳ ದಿನಗಳಾಯ್ತು ಭೇಟಿಯಾಗಿ! ರಾಜೇಂದ್ರ ಕೈ ಮುಗಿದ. 'ನನ್ನ ಜ್ಞಾಪಕ ಇದೇ ತಾನೇ ?'

'ಹಾಗೇ ಅಂದ್ಕೊಳ್ಳಿ, ನೀವು ಏಣಿ ಮೇಲೇರಿದ್ದೀರಾ....ನಾಳೆ ನಿಮ್ಮ ಆಟೋಗ್ರಾಫ್‌ಗೋಸ್ಕರ ಇಲ್ಲಿಗೆ ಬರ್ಬೇಕಾಗ್ಬೋದು ನಾನೂ ! ರಾಜೇಂದ್ರ ನಕ್ಕ.

'ತುಂಬಾ ಹೊಗಳಿದ್ದೀರಿ. ಏನ್ಸಮಾಚಾರ? ಏನಾದ್ರೂ ಕೆಲಸ ವಾಗ್ಬೇಕಿತ್ತಾ ?' ಪವಿತ್ರ ನಕ್ಕಾಗ ರಾಜೇಂದ್ರ ಪ್ರತಿನಕ್ಕ.

'ಶೂರ್, ನೀವು ಮುಂದಿನ್ವಾರ ನನ್ನ ಬರ್ತ್‌ಡೇ ಪಾರ್ಟಿಗೆ ಬರ್ಬೇಕೂ ನಾನು ನನ್ನ ಮಿಸೆಸ್ ಬಂದು ಪರ್ಸ್ನಲ್ ಆಗಿ ಕರೀತೀವಿ !'

'ಮೇಡಂ, ಡಯಲಾಗ್ಸ್...' ಅಸಿಸ್ಟೆಂಟ್ ಡೈರೆಕ್ಟರ್ ಪುಟ್ಟಪ್ಪ ರಟ್ಟಿಗೆ ಹಾಕಿದ್ದ ಪೇಪರ್‌ಗಳನ್ನು ಮುಂದೆ ಹಿಡಿದ. ಪವಿತ್ರ ಆ ಸಂಭಾಷಣೆ ಯತ್ತ ಕಣ್ಣಾಡಿಸಿದಳು.

'ನೀವು ನನ್ನ ಉಸಿರು, ನೋಡಿಬೇಕಾದ್ರೆ ನಿಮ್ಮ ಹೆಸರು ಹೇಳ್ತಾನೇ ಎದೆ ಬಡಿತ ಏರ್ತಾ ಇದೆ. ನಿಮ್ಮ ಹೆಸರು ಇಲ್ದೇ ಹೋದ್ರೆ ಎದೆ ಬಡಿತ ನಿಂತೇ ಹೋದೀತೂ...ರಾಜಾ, ನನ್ನ ರಾಜಾ...ನಂಗೆ ಮೋಸ ಮಾಡೋಲ್ಲ ತಾನೇ ನನ್ನೆದೆಯಿಂದ ನಿನ್ನ ಹೆಸರು ಅಳಿಸಿಬಿಡೋಲ್ಲ ತಾನೇ ?'

ರಾಜೇಂದ್ರನತ್ತ ನೋಡಿದಳು. ಅವನೂ ಅವಳನ್ನೇ ನೋಡುತ್ತಿದ್ದ.

'ಸೀಯೂ ಆಲ್ ಲೇಟರ್ ?' ರಾಜೇಂದ್ರ ಕೈ ಬೀಸಿ ನಗುತ್ತಾ ತಲೆ ತಗ್ಗಿಸಿ ಹೊರಟುಹೋದಾಗ ಪವಿತ್ರಳಿಗೆ ಇದ್ದಕ್ಕಿದಂತೆ ಹಗಲಿನ ಬೆಳಕೆಲ್ಲ ಕರಗಿ ನೀರಾಗಿ ಹೋದಂತೆ ಭಾಸವಾಯಿತು.

'ಎಲ್ಲಿ ಡಯಲಾಗ್ ಹೇಳಿ ಮೇಡಂ' ಎಂದಾಗ ಪವಿತ್ರಳ ದನಿ ಭಾವು ಕತೆಯಿಂದ ಭಾರವಾಗಿ ಪ್ರತಿಯೊಂದು ಮಾತಿನಲ್ಲೂ ತನ್ನ ಮನದಿಂಗಿತ ವನ್ನು ಬೆರೆಸಿ ಹೇಳಿದಾಗ ಪುಟ್ಟಪ್ಪ, 'ಗುಡ್, ವಂಡರ್‌ಫುಲ್, ಒಂದೇ ಟೇಕ್ನಲ್ಲಿ ಓಕೆ ಆಗೋಗತ್ತೆ. ನೋಡಿದ್ರಾ ಇದಕ್ಕೇ ಟ್ಯಾಲೆಂಟ್ ಅನ್ನೋದು. ಎಲ್ಲಿ ವಿತ್ ಆಕ್ಷನ್ ಒಂದ್ಸಲ' ಎಂದಾಗ ಪವಿತ್ರಳಿಗೆ ರಾಜೇಂದ್ರ ಕೈಬೀಸಿ ತಲೆ ತಗ್ಗಿಸಿಕೊಂಡು ಹೋದುದು ನೆನಪಿನಂಗಳದಲ್ಲಿ ಮೂಡಿ ಬಂದಿತು. ಅವನು ತನ್ನನ್ನು ಹೀಗೆಯೇ ಬಿಟ್ಟು ಹೊರಟೇ ಹೋದರೆ! 'ಓಹ್ ರಾಜಾ, ನೀವು ನನ್ನ ಉಸಿರು. ನಿಮ್ಮ ಹೆಸರು

ಹೇಳ್ತಾನೇ ಎದೆ ಬಡಿತ ಏರ್ತಾ ಇದೆ.. ನಿಮ್ಮ ಹೆಸರು ಇಲ್ದೇ ಹೋದ್ರೆ ನನ್ನೆದೆ ಬಡಿತ ನಿಂತೇ ಹೋದೀತು...' ಅವಳ ಕಣ್ಣುಗಳಲ್ಲಿ ಭಾವುಕತೆ ಉಕ್ಕಿ ಹರಿದು ಮುಖದಲ್ಲಿ ಆರ್ತತೆ ಮೂಡಿತು. 'ರಾಜಾ, ನನ್ನ ರಾಜಾ, ನಂಗೆ ಮೋಸಮಾಡೋಲ್ಲ ತಾನೇ? ನನ್ನೆದೆಯಿಂದ ನಿಮ್ಮ ಹೆಸರು ಅಳಿಸಿ ಬಿಡೋಲ್ಲ ತಾನೇ?' ಎಂದು ಹೇಳುವಾಗ ಕಣ್ಣುಗಳಂಚಿನಲ್ಲಿ ಕಂಬನಿ ತುಳುಕಿ ಕಣ್ಣುಗಳು ತುಂಬಿದ ಕೊಳಗಳಾದವು.

'ಗ್ರೇಟ್, ವಂಡರ್‌ಫುಲ್. ಪವಿತ್ರಾ, ನೀವು ಬಹಳ ದೊಡ್ಡ ಕಲಾವಿದೆ ಆಗ್ತೀರಿ. ಹೀಗೇ ಮಾಡ್ಬಿಡಿ. ಒಂದೇ ಟೇಕಿಗೆ ಓಕೆ ಆಗೋಗ್ಲಿ!'

ಅರಸಪ್ಪ ಅವಳತ್ತ ಓಡಿಬಂದು ಕನ್ನಡಿ ಹಿಡಿದ. ಕಣ್ಣಿನಿಂದ ಕಂಬನಿ ಕೆನ್ನೆಗಳ ಮೇಲಿಳಿದು ಮುಖದ ಬಣ್ಣ ಹಾಳು ಮಾಡುವ ಮುನ್ನ ಅವುಗಳನ್ನು ತಡೆಯಲು ಕರವಸ್ತ್ರ ನೀಡಿದ. ಅವಳ ಕಣ್ಣು ಕೆನ್ನೆಗಳಿಗೆ ಮೂಗಿಗೆ ಮತ್ತೆ ಬಣ್ಣದ ರಂಗಿತ್ತು ಸರಿಪಡಿಸಿದ.

ಆ ಸೀನ್ ಶೂಟಿಂಗ್ ಪ್ರಾರಂಭವಾಗಿ ಅದು ಮುಗಿಯುವ ವೇಳೆಗೆ ಆಗಲೇ ಹನ್ನೆರಡು ಗಂಟೆಯಾಗಿತ್ತು. ಮಾಲತಮ್ಮನಾಗಲಿ, ರೋಜಿಯಾಗಲೀ ಬಂದಿರಲಿಲ್ಲ. ಬಾಯಾರಿದುದರಿಂದ ಪವಿತ್ರ ನೀರು ಕೇಳಿದಾಗ ಅಸಿಸ್ಟೆಂಟ್ ಮ್ಯಾನೇಜರ್ ರವಿಕೃಷ್ಣ ಅವಳಿಗೆ ಬಿಸಿ ಬಿಸಿ ಟೀ ತಂದಿತ್ತ.

'ಸ್ಪೆಷಲ್ ಟೀ, ನಿಮಗೋಸ್ಕರ ತಂದಿದ್ದೇನೆ!' ಅವನು ಅವಳ ಕಟ್ಟಾ ಅಭಿಮಾನಿ.

'ಬೇಡಾ ಪ್ಲೀಸ್, ನಂಗೆ ನೀರು ಸಾಕು' ಪವಿತ್ರ ಹೇಳಿದಾಗ ಅವನ ಮುಖ ಸಪ್ಪೆಯಾಯಿತು.

'ನಿಮಗೋಸ್ಕರ ಸ್ಪೆಷಲ್ಲಾಗಿ ತಂದೆ. ಅರ್ಧ ಕಪ್ಪು ತೊಗೊಳ್ಳಿ!'

ಅವನ ಮುಖ ನೋಡಿ ನಸುನಕ್ಕಳು.

'ಹೋಗ್ಲಿ ಕೊಡಿ, ಕುಡೀತೀನಿ. ನೀವು ಬೇಜಾರು ಮಾಡ್ಕೋಳ್ಳೋದು ಬೇಡಾ....' ಅವಳು ಅದನ್ನು ಕೈಗೆ ತೆಗೆದುಕೊಂಡು ಹೀರುತ್ತಿದ್ದಾಗ ರವಿಕೃಷ್ಣ ಬ್ರಹ್ಮಾನಂದ ಪಡೆದಂತಿದ್ದ. ಲೈಟ್ ಬಾಯ್ಸ್ ಲೈಟ್‌ಗಳನ್ನು ರಿಫ್ಲೆಕ್ಟರ್‌ಗಳನ್ನು ಸರಿಹೊಂದಿಸಿಕೊಳ್ಳುತ್ತಿದ್ದರು. ಡೈರೆಕ್ಟರ್, ಫೋಟೋಗ್ರಾಫರ್ ಇಬ್ಬರೂ ಗಂಭೀರವಾಗಿ ಮುಂದಿನ ಸೀನಿನ ಬಗ್ಗೆ ವಿಚಾರಣೆ ನಡೆಸುತ್ತಿದ್ದರು.

ಅಷ್ಟು ಹೊತ್ತಿಗೆ ಮಾಲತಮ್ಮ ಬಂದರು. ಸುತ್ತಲೂ ಕಣ್ಣಾಡಿಸಿ

ದಾಗ ಅವರಿಗಿದ್ದ ಅನುಮಾನ ಪರಿಹಾರವಾಯಿತು. ರವಿಕೃಷ್ಣ ಜೊತೆ ಪವಿತ್ರ ನಗುತ್ತಾ ಮಾತಾಡುತ್ತಿದ್ದಳು. ಅಸಿಸ್ಟೆಂಟ್ ಡೈರೆಕ್ಟರ್ ಪುಟ್ಟಪ್ಪ ಅವಳ ಮುಂದಿನ ಸಂಭಾಷಣೆಯನ್ನು ಸರಿಪಡಿಸುತ್ತಿದ್ದ. ಅವಿನಾಶ್, ಜಿನೇಶ್ ಇಬ್ಬರೂ ತಮ್ಮ ಅಭಿನಯದ ಅಭ್ಯಾಸದಲ್ಲಿ ತೊಡಗಿದ್ದರು. ಎಲ್ಲವೂ ಎಂದಿನಂತೆಯೇ ಸಹಜವಾಗಿತ್ತು.

'ಅರಸಪ್ಪಾ ಯಾರಾದ್ರೂ ಬಂದಿದ್ರಾ ?'

'ಇಲ್ಲಮ್ಮಾ...ನೀವತ್ಲಾಗೆ ಹೋದಾಗಿಂದ ಇಲ್ಲೇ ಇದ್ದಾರಲ್ಲಾ !'

ಮಾಲತಮ್ಮ ಮಗಳ ಪಕ್ಕದಲ್ಲಿ ಬಂದು ಕುಳಿತರು. 'ನೋಡು ಗಲಾಟೇಲಿ ನಿಂಗೆ ನಿಂಬೆ ಹಣ್ಣಿನ ಪಾನಕ ತರೋದೇ ಮರೆತುಬಿಟ್ಟೆ.'

ತಾಯಿ, ಮಗಳು ಏನೋ ಮಾತನಾಡಲೆಂದರಿತ ರವಿಕೃಷ್ಣ ಅಲ್ಲಿಂದ ದೂರ ಸರಿದ. ಅವನತ್ತ ಹೋಗುತ್ತಲೇ ಮಾಲತಮ್ಮ ಪಿಸುಗುಟ್ಟಿದರು.

'ಪಾಪೂ ನಿನ್ನ ಅದೃಷ್ಟ ಏನೆಂದು ಹೇಳಲಿ, ದೇವರಾಜ್ ನಿಂಗೆಂತ ಒಂದು ಮನೆ ಕೊಂಡುಕೊಡ್ತಾರಂತೆ. ಮೂರ್ತಿಗೆ ಆದಷ್ಟು ಬೇಗ ಮನೆ ನೋಡೋಕೆ ಹೇಳಿದರು. ಮುಂದಿನ ತಿಂಗಳು ಅವರ್ಜೊತೆ ನೀನೂ, ನಾನೂ ಇಬ್ರೂ ಕುಲು, ಕಾಶ್ಮೀರ, ಮನಾಲಿಗೆ ಹೋಗ್ತಾ ಇದ್ದೀವಿ.'

ಪವಿತ್ರ ಅವರತ್ತ ನೋಡಿ ನಕ್ಕಳಷ್ಟೆ. ತನ್ನ ತಾಯಿಗಿರುವಷ್ಟು ಬಿಟ್ಟ ದಷ್ಟು ಆಸೆ ತನಗಿದ್ದರೆ ಹಣಕ್ಕಾಗಿ. ಹೆಸರಿಗಾಗಿ ತನ್ನ ತಾಯಿ ಏನು ಮಾಡಲೂ ಸಿದ್ಧ.

'ಯಾಕೇ–ನಿಂಗೆ ಇದ್ನ ಕೇಳಿ ಸಂತೋಷವಾಗೋಲ್ವೆ ?' ಮಾಲತಮ್ಮ ಕೇಳಿದಾಗ ಪವಿತ್ರಳ ಮುಖ ಗಂಭೀರವಾಯಿತು.' ದೇವರಾಜ್ ರವರ ಪತ್ನಿ, ಮಕ್ಕಳು, ಬರ್ತಾ ಇದ್ದಾರಮ್ಮಾ ?'

'ಹೌದು, ಅವರೆಲ್ಲಾ ಬರ್ತಾ ಇರೋದ್ರಿಂದ್ಲೇ ಯಾವ ವಿಷಯಾನೂ ಯಾರಿಗೂ ತಿಳಿಸ್ಲಿಲ್ಲ. ದೇವರಾಜ್ ನಿನ್ನ ಮೇಲೆ ಬಹಳ ಆಸೆ ಇಟ್ಕೊಂಡಿದ್ದಾರೆ ಪಾಪೂ, ಅವರಿಗೇನು ಕಡಿಮೆ ಹೇಳು. ನಾಲ್ಕು ತಲೆಮಾರು ತಿಂದು ಹೋದರೂ ಉಳಿಯುವಷ್ಟು ಆಸ್ತಿ ಇದೆ. ಮುಂದಿನ ಅವರ ಚಿತ್ರಗಳಿಗೆಲ್ಲಾ ನೀನೇ ಹೀರೋಯಿನ್ ಗೊತ್ತಾ ? ನೀನು ಅವರು ಹೇಳಿದಂತೆ ನಡ್ಕೊಂಡ್ರೆ ಸಾಕು ಪಾಪೂ ...ಆ ಸ್ವರ್ಗಾನೇ ನಿನ್ನ ಮುಂದೆ ತಂದಿಡ್ತಾರಂತೆ.'

'ಅವರ ಪತ್ನಿಗೆ ಗೊತ್ತಾಗೋಲ್ವೇನಮ್ಮ ನಂಗೆ ಒಂದು ಸಂಸಾರ ಮುರಿಯೋ ಆಸೆ ಇಲ್ಲ.'

'ಅವರೇನು ಕಡಿಮೆ ಮಾಡಿದ್ದಾರೆ ಹೆಂಡತೀಗೆ. ಇರಲು ದೊಡ್ಡ ಬಂಗಲೆ, ಓಡಾಡಲು ಕಾರು, ವೈತುಂಬಾ ಒಡವೆ, ಒಳ್ಳೆಯ ರೇಷಿಮೆ ಸೀರೆಗಳು, ಮಕ್ಕಳಿಗೆ ಹೆಂಡತಿಗೆ ರಾಜ ವೈಭವವಿಲ್ಲವೇ? ನಿಂಗೊಂದಿಷ್ಟು ಕೊಟ್ಟರೆ ಏನೂ ಕರಗೋಲ್ಲ. ಅವರ ಹೆಂಡತೀಗೆ ತಿಳೀದೇ ಇರೋ ಹಾಗೆ ಮೂರ್ತಿಯವರು ಎಚ್ಚರಿಕೆ ವಹಿಸ್ತಾರಂತೆ.' ಪವಿತ್ರಳಿಗೆ ಆಗ ಕಣ್ಣಿನ ಮುಂದೆ ಬಂದುದು ರಾಜೇಂದ್ರನ ಚಿತ್ರ. ಅವನಿಗೆ ಹೇಗಾದರೂ ಮಾಡಿ, ತಾನು ಮಾಡುವ ಚಿತ್ರಗಳಲ್ಲಿ ಹೀರೋ ಪಾತ್ರ ಕೊಡಿಸಬೇಕು. ದೇವರಾಜ್‌ನನ್ನು ತಾನು ಸಂತೃಪ್ತಿಪಡಿಸುವುದಾದರೆ ಖಂಡಿತ ಅವರು ಒಪ್ಪದಿರುವುದಿಲ್ಲ. ತಾನೊಂದು ಮೊಂಬತ್ತಿಯಂತೆ ಹತ್ತಿಕೊಂಡು ಉರಿದುಹೋದರೂ ಪರವಾಗಿಲ್ಲ. ರಾಜೇಂದ್ರನ ಬದುಕಿನಲ್ಲಿ ಬೆಳಕು ಮೂಡುವುದಾದರೆ!

'ನೆಕ್ಸ್ಟ ಸೀನ್‌ಗೆ ರೆಡಿಯಾಗ್ಬೇಕಂತೆ ಮೇಡಂ.' ಪುಟ್ಟಪ್ಪ ಬಂದು ಹೇಳಿದಾಗ ಪವಿತ್ರ ಬೆಚ್ಚಿದಳು. ಮುಂದಿನ ಸೀನ್....ಅಲ್ಲ. ಮುಂದಿನ ಅಧ್ಯಾಯ ತನಗೆ ಕಾದು ಕುಳಿತಿದೆ. ಸಂಭಾಷಣೆಯನ್ನು ಓದಿಕೊಳ್ಳಲು ತೆಗೆದುಕೊಂಡಾಗ ಅವಳ ಅಂಗೈ ಬೆವೆತ್ತಿತ್ತು. ಕೈ ಬೆರಳುಗಳು ನಡುಗುತ್ತಿದ್ದವು. ಅಂದು ಅಮ್ಮ ಒಡ್ಡಿದ ಬಲೆಗೆ ಬೀಳಲೇ ಬೇಕಾಗಿತ್ತು! ಅದೂ ರಾಜೇಂದ್ರನಿಗಾಗಿ! ಅವನೊಲಿವಿಗಾಗಿ.

ನಾಲ್ಕು ಗಂಟೆಗೆ ಸಿಟಿ ಹೊರಗಿದ್ದ ಭವ್ಯ ಬಂಗಲೆಯಲ್ಲಿ ಶೂಟಿಂಗ್ ಇತ್ತು. ಒಂದು ಹಾಡಿನ ಸನ್ನಿವೇಶಕ್ಕಾಗಿ ರಾತ್ರಿ ಎರಡುಗಂಟೆಯವರೆಗೆ ಅಲ್ಲೇ ಆಗಿತ್ತು. ಉಡುಪು, ಮುಖಾಲಂಕಾರ, ಕೇಶವಿನ್ಯಾಸ ಎಲ್ಲವೂ ಬದಲಾಗಬೇಕಿತ್ತು. ರೀಟಾ, ಅರಸಪ್ಪ, ಇಬ್ಬರೂ ತುದಿಗಾಲಿನಲ್ಲಿ ನಿಂತು ಬೇಗ ಬೇಗ ಮುಗಿಸಿದ್ದರು. ಮಾಲತಮ್ಮನಿಗೆ ಮಗಳಿಗೆ ತಾವು ಹೇಳಬೇಕಾದ್ದೆಲ್ಲಾ ಹೇಳಲು ಆಗಲೇ ಇಲ್ಲ. ಮನೆಗೆ ಹಿಂತಿರುಗುವ ವೇಳೆಗೆ ಪವಿತ್ರಳಿಗೆ ಸಾಕಾಗಿಹೋಗಿತ್ತು.

'ರೋಜೀ, ನಂಗೆ ನೀರು ತೋಡು, ಹಾಯಾಗಿ ಸ್ನಾನ ಮಾಡಿ ಮಲಗಿ ಬಿಡ್ತೀನಿ. ತುಂಬಾ ಸುಸ್ತು!' ಎನ್ನುತ್ತಲೇ ಮನೆಯೊಳಗೆ ಹೆಜ್ಜೆಯಿಟ್ಟಿದಳು.

ಅವಳಿಗೆ ಹೇಗೆ ಹೇಳುವುದು? ಮೂರನೆಯ ದಿನ ಬೆಳಗ್ಗೆ

BUREAU OF COPY RIGHT COLLECTION
STATE CENTRAL LIBRARY, BANGALORE

ಶೂಟಿಂಗ್‌ಗೆ ಹೋಗುವಾಗ ಹೇಳಿದರಾಯಿತು ಎಂದುಕೊಂಡು ಮಾಲತಮ್ಮ ಸುಮ್ಮನಾದರು.

ಪವಿತ್ರಳಿಗೆ ತಾನೊಬ್ಬಳೇ ಹಾಯಾಗಿ ಯಾರ ಮಾತು ಕತೆಯಿಲ್ಲದೇ ಏಕಾಂಗಿಯಾಗಿರಬೇಕೆನಿಸಿತು. ರೋಜಿ ತೋಡಿದ್ದ ನೀರಿನಲ್ಲಿ ಸ್ನಾನ ಮಾಡುತ್ತಾ ಕದಡಿಹೋಗಿದ್ದ ತಲೆಯ ಸಮತೋಲನ ಒಂದುಗೂಡಿಸ ಲೆತ್ನಿಸಿದಳು. ತನ್ನ ನಿಜಸ್ವರೂಪವೇ ಮರೆತುಹೋದಂತಾಗಿ ಹೋಗಿದೆ. ಎರಡನೆಯ ಸಮಾನಾಂತರ ನಾಯಕಿ ಹೀರೋ, ಹೀರೋಯಿನ್ ಮಧ್ಯೆ ಬರುವ 'ಮಾಡ್ ಗರ್ಲ್', ನಾಯಕನನ್ನು ಪ್ರೀತಿಸಿ ಪಡೆಯಲಾರದ ದುರಂತ ಹೆಣ್ಣು, ಕಾಲೇಜಿನ ಚೆಲ್ಲು ಹುಡುಗಿ, ಹಳ್ಳಿಯ ನಾಚಿಕೆಯ ಹೆಣ್ಣು, ಕ್ಲಬ್ಬಿನ ದಿಟ್ಟ ಹೆಣ್ಣು, ಒಮ್ಮೆ ಗರತಿ,ಗೌರಿಯಾದರೆ ಮತ್ತೊಮ್ಮೆ ಅರೆನಗ್ನಳಾಗಿ ಆಧುನಿಕ ಉಡುಪಿನ ರೂಪದರ್ಶಿನಿ. ಒಮ್ಮೆ ಇನ್ನೊಂದು ಹೆಣ್ಣಿನ ಮಾನಕ್ಕಾಗಿ ತನ್ನ ಪ್ರಾಣ ಒತ್ತೆಯಿಟ್ಟು ಮಡಿಯುವವಳಾದರೆ ಮತ್ತೊಮ್ಮೆ ತಾನೇ ಖಳನಾಯಕನ ಅತ್ಯಾಚಾರಕ್ಕೆ ಬಲಿಯಾಗಿ ಸಾಯುವುದು. ಥೂ ! ಇದರಲ್ಲಿ ತಾನು ಯಾರು ? ತನ್ನ ವ್ಯಕ್ತಿತ್ವವೇ ಅಳಿಸಿ ಹೋದಂತಾಗುತ್ತಿದೆ. ಕುಂಟೆಬಿಲ್ಲೆಯಾಡುತ್ತಾ, ಅಕ್ಕ ಸರೋಜ, ಲಲಿತಳ ಜೊತೆ ಗುಟ್ಟು ರಟ್ಟು ಮಾಡುತ್ತಾ ನಗುವುದು, ಸ್ನೇಹಿತರೊಡನೆ ಅರ್ಥವಿಲ್ಲದೇ ನಗುವುದು, ಬೀದಿಯಲ್ಲಿ ಹೋಗುವವರನ್ನು ನೋಡಿ ಹಾಸ್ಯ ಮಾಡಿಕೊಂಡು ಮುಸಿ ಮುಸಿ ನಗುವುದು ಕದ್ದು ಚಿತ್ರಗಳನ್ನು ನೋಡುವುದು. ಮಾಧುವಿನ ಜೊತೆ ಜಟ್ಟಾ ಜಟ್ಟಿ ಜಗಳ ಆಡುವುದು, ಶ್ಯಾಮುವಿನೊಂದಿಗೆ ಚುಕ್ಕೆಯಾಟವಾಡುವುದು, ಪುಟ್ಟಿಯೊಂದಿಗೆ ಬೊಂಬೆಯಾಟ, ಮನೆಯಾಟವಾಡುವುದು ...ಯಾವಾಗಲಾದರೂ ಅಮ್ಮನ ತೊಡೆಯ ಮೇಲೆ ತಲೆಯಿಟ್ಟು ಬರಿಯ ನೆಲದಮೇಲೆ ಮಲಗುವುದು, ಬಟ್ಟೆ ಯೊಗೆಯುತ್ತಾ ನೀರಿನಲ್ಲಿ ಚಿನ್ನಾಟವಾಡುವುದು. ಬೇಕಾಗಿ ಮಳೆಯಲ್ಲಿ ನೆನೆಯಲೆಂದೇ ಮೂಲೆಯಂಗಡಿಗೆ ಹೋಗಿ ಐದು ಪೈಸೆಗೆ ಜೀರಿಗೆ ಪೆಪ್ಪರ ಮೆಂಟ್ ತರುವುದು ! ಹುಂ, ಅದೆಲ್ಲಾ ತನಗೆ ಎಷ್ಟು ಅಪ್ಯಾಯಮಾನವಾಗಿತ್ತು. ಈಗ ತಾನು ಅದೇನೂ ಮಾಡುವ ಹಾಗಿಲ್ಲ. ತಾನು ಈ ಮನೆಯ ಪಾಪುವಲ್ಲ. ಸಾವಿರಾರು ಮಂದಿ ಅಭಿಮಾನಿಗಳ ಕೈಗೊಂಬೆ. ತಾನು ಏನು ಮಾಡಿದರೂ ಅಭಿಮಾನಿಗಳ ಅಭಿಮಾನಕ್ಕೆ ಧಕ್ಕೆ ಬರದಂತೆ ನಡೆದುಕೊಳ್ಳಬೇಕು. ತಾನು ರಾಜೇಂದ್ರನನ್ನು ಪ್ರೀತಿಸುವುದರಲ್ಲಿ

ತಪ್ಪೇನು? ಎಷ್ಟು ಜನ ಆ ಕೆಲಸ ಮಾಡುವುದಿಲ್ಲ? ಮಾಡುತ್ತಿಲ್ಲ! ತಾನೇನೂ ಅವನ ಸಂಸಾರ ಮುರಿಯಲು ಯತ್ನಿಸಿಲ್ಲ. ಏನೋ ಒಂದು ಬಗೆಯ ಆಕರ್ಷಣೆಯಿಂದ ಅವನನ್ನು ಮೊದಲಿನಿಂದಲೂ ಆರಾಧಿಸಿಕೊಂಡು ಬಂದವಳು. ಚಿಕ್ಕವಳಾಗಿದ್ದಾಗ ಅವನ ಚಿತ್ರಗಳನ್ನು ಕಂಡು ಮೆಚ್ಚಿದವಳು ತಾನು. ನಾಯಿಕೆಯ ಸ್ಥಾನದಲ್ಲಿ ತನ್ನನ್ನಿರಿಸಿಕೊಂಡು ಅವನೊಂದಿಗೆ ವಿಹರಿಸಿದಂತೆ ಕನಸು ಕಟ್ಟಿಕೊಂಡಿದ್ದವಳು. ಆಗ ಅವನಿಗಿನ್ನೂ ವಿವಾಹವಾಗಿರಲಿಲ್ಲ. ಹಾಗೆ ನೋಡಿದರೆ ಅವನನ್ನು ತಾನೇ ಮೊದಲು ಪ್ರೇಮಿಸಿದ್ದು! ತನ್ನ ಹಾಗೆ ಅವನ ಬಗ್ಗೆ ಎಷ್ಟು ಸಾವಿರಾರು ಮಂದಿ ಹೆಣ್ಣು ಹುಡುಗಿಯರು ಹುಚ್ಚು ಕನಸು ಕಟ್ಟಿಕೊಂಡಿಲ್ಲ! ತಾನು ಯಾರ ಬಳಿಯಾದರೂ ಹೆಚ್ಚು ನಗುತ್ತಾ ಮಾತನಾಡಿದರೆ ಕೂಡಲೇ ಗುಸುಗುಸು. ತಮ್ಮಿಬ್ಬರ ಮಧ್ಯೆ ಏನೋ ನಡೆಯುತ್ತಿದೆಯೆಂಬ ಸಂದೇಹ. ಸುರೇಂದ್ರ ತನಗೆ ಅಣ್ಣನಂತೆ, ಅವನ ಒಳ್ಳೆಯ ಗುಣಕ್ಕೆ ಮಾರುಹೋಗಿ ನಾಲ್ಕು ದಿನ ಅವನೊಡನೆ ಸೆಟ್ಟಿನಲ್ಲಿ ಕುಳಿತು ನಗುನಗುತ್ತಾ ಮಾತನಾಡಿದಕ್ಕೇ ಪೇಪರುಗಳಲ್ಲಿ ಬಂದಿತ್ತು. ಸುರೇಂದ್ರ, ಪವಿತ್ರ ಈಚೀಚೆಗೆ ಬಹಳ ನಿಕಟವರ್ತಿಗಳೆಂದು ಸಾಲದಕ್ಕೆ ಅವನಿಗಿನ್ನೂ ಮದುವೆಯಾಗಿರಲಿಲ್ಲ. ಯಾರು ತನ್ನನ್ನು ಮುಗುಮ್ಮಾಗಿ ಕೇಳಿರಲಿಲ್ಲವೇ?

'ನಿಮಗೆ ಸುರೇಂದ್ರರನ್ನು ಕಂಡರೆ ತುಂಬಾ ಇಷ್ಟವಲ್ಲವೇ?' ಎಂದು.

'ಇಲ್ಲ' ಎಂದರೆ ಸುಳ್ಳಾದೀತು. 'ಇದೆ' ಎಂದರೆ ಸಾವಿರ ಕಟ್ಟು ಕತೆಗಳಾಗುತ್ತಿತ್ತು. ಕೊನೆಗೆ ಯೋಚಿಸಿ ತೋರಿಕೆಯ ನಗು ಬೀರಿ ಹೇಳಿರಲಿಲ್ಲವೇ? 'ನಿಮ್ಮ ತಂಗಿ ನಿಮ್ಮನ್ನೆಷ್ಟು ಪ್ರೀತಿಸುತ್ತಾಳೋ ಅಷ್ಟೇ ಅವರನ್ನು ನಾನು ಪ್ರೀತಿಸುತ್ತೇನೆ!'

ಎಲ್ಲರ ಕಣ್ಣು ತಪ್ಪಿಸಿ ರಾಜೇಂದ್ರನನ್ನು ಭೇಟಿಯಾಗುವುದು ಬರುಬರುತ್ತಾ ಬಹಳ ಕಷ್ಟವಾಗುತ್ತಿದೆ. ತನಗೆ ಒಂದು ಬಗೆಯ ಹುಚ್ಚುಭಯ, ಮನಸ್ಸಿನ ಒತ್ತಡ ಬಹಳವಾಗುತ್ತಿದೆ. ತಾಯಿಯ ಹದ್ದಿನ ಕಣ್ತಪ್ಪಿಸಿ, ನೋಡುವ ಸಾವಿರಾರು ಕಣ್ತಪ್ಪಿಸಿ ಅವನನ್ನು ಭೇಟಿಯಾಗಬೇಕು. ತಾನೇನು ತಪ್ಪು ಮಾಡುತ್ತಿರುವೆ? ಕೊಲೆಯೇ? ಸುಲಿಗೆಯೇ? ಆದರೂ ಈ ಹೆದರಿಕೆ, ಈ ಭಯ, ಈ ಆತಂಕ! ತನ್ನ ವ್ಯಕ್ತಿ ಸ್ವಾತಂತ್ರ್ಯದ ಲೂಟಿಯಾಗಿ ಹೋಗಿದೆ! ನಾಲಿಗೆ, ಗಂಟಲಲ್ಲಿ ಕಹಿಯಾದ ಅನುಭವ. ಅವಸರವಾಗಿ ಸ್ನಾನಮಾಡಿ ತನಗೆ ಬಹಳ ಪ್ರಿಯವಾದ ಹಳೆಯ ಮಾಸಿದ್ದ ನೈಟ್

ಡ್ರೆಸ್ ಹಾಕಿಕೊಂಡು ಕೂದಲೆಲ್ಲವನ್ನು ಎತ್ತಿಕಟ್ಟಿ ಮುಖಕ್ಕೆ ಕೋಲ್ಡ್ ಕ್ರೀಂ ಸಮೃದ್ಧವಾಗಿ ಬಳಿದುಕೊಂಡು ಫ್ಯಾನ್ ಹಾಕಿಕೊಂಡು ಹಾಸಿಗೆಯ ಮೇಲುರುಳಿಕೊಂಡಾಗ ಮನಸ್ಸಿಗೆ ಕೊಂಚ ನೆಮ್ಮದಿ.

ಅಯ್ಯರ್ ಕೈಯ್ಯಲ್ಲಿ ಸೌಟು ಹಿಡಿದೇ ಬಂದಿದ್ದರು

'ಚಿಕ್ಕಮ್ಮಾವ್ರೆ, ಇವೊತ್ತು ಎಲ್ಲಾ ತರಕಾರಿ ಹಾಕಿ ಕ್ಯಟು, ಆಲೂ ಗಡ್ಡೆ ಮೊಸರು ಬಜ್ಜಿ ಮಾಡಿದ್ದೀನಿ ನಿಮಗೋಸ್ಕರ. ಒಂದಿಷ್ಟು ತಿಂದು ಮಲಗಬಾರದೆ ? ಚಪಾತಿ ಬದಲು ಪೂರಿ ಕರೆದಿದ್ದೇನೆ. ಎಲ್ಲರೂ ತಿಂತಾ ಇದ್ದಾರೆ. ನೀವು ಒಂದಿಷ್ಟು ತಿನ್ನಬಾರದೇ ?'

ಪವಿತ್ರಳಿಗೆ ನಗಬೇಕೋ ಅಳಬೇಕೋ ತಿಳಿಯಲಿಲ್ಲ. ಅಯ್ಯರ್‌ಗೆ ಗೊತ್ತು ಅದೆಲ್ಲಾ ತನಗೆ ಪ್ರಿಯವಾದುದೆಂದು ! ಅವನ್ನು ಮಾಡಿಸಿ ಎಲ್ಲರೂ ತಿನ್ನುತ್ತಿದ್ದರು. ಅದಕ್ಕೆಲ್ಲಾ ತಾನು ಹಗಲಿರುಳು ದುಡಿಯುವ ಹಣವೇ, ತನ್ನ ಹಣವೇ ? ತನ್ನ ಮನೆ, ತನ್ನ ಅಡಿಗೆಯ ಅಯ್ಯರ್. ಆದರೆ ತಾನು ಅದನ್ನು ಸೋಂಕುವ ಹಾಗಿಲ್ಲ.

'ಬೇಡಾ ಅಯ್ಯರ್, ಈಗಲೇ ತೂಕ ಜಾಸ್ತಿಯಾಗಿದ್ದೀನಿ. ನಿಮ್ಮ ಕೈಯಿಂದಲೇ ಒಂದು ಲೋಟ ನೀರುಮಜ್ಜಿಗೆ ತಂದುಕೊಡಿ, ಕುಡಿದು ಮಲಗಿಬಿಡ್ತೀನಿ. ನನ್ನ ಬದಲು ನೀವೆರಡು ಪೂರಿ ಜಾಸ್ತಿ ತಿಂದುಬಿಡಿ ಸಾಕು.'

'ಈ ಸೌಭಾಗ್ಯಕ್ಕೆ ಯಾಕೆ ಇಷ್ಟು ಅಡಿಗೆ ಮಾಡಬೇಕಿತ್ತು ? ನೀವು ತಿನ್ನದೇ ಪ್ರತಿದಿನಾ ಮಲಗುವುದು ನೋಡಿದರೆ ನಂಗೇ ಹೊಟ್ಟೆಯಲ್ಲಿ ಸಂಕಟ ಆಗುತ್ತೆ. ಊಟ ಮಾಡ್ಬೇಕಾದ್ರೆ ಗಂಟಲಲ್ಲಿ ಅನ್ನ ಇಳಿಯೋಲ್ಲ. ನನ್ನ ಧಣಿ ಚಿಕ್ಕಮ್ಮೋರೇ ತಿನ್ನದಿದ್ದಾಗ ನಾನು ಕೂತು ಹೊಟ್ಟೆತುಂಬಾ ಉಣ್ಣಬೇಕಾ ಅಂತಾ... ! ಎಲ್ಲಕ್ಕೂ ಕೇಳಿಕೊಂಡು ಬರಬೇಕು. ಹೋಗಲಿ ನನ್ನ ಕೈಯಿಂದ ಮಜ್ಜಿಗೆಯಾದರೂ ಕುಡೀತೀರಲ್ಲಾ ಅದೇ ಪುಣ್ಯ.'

ಅಯ್ಯರ್ ನಿಟ್ಟುಸಿರಿಟ್ಟು ಹೊರಗೆ ಹೋದಾಗ ಪವಿತ್ರ ತುಟಿಕಚ್ಚಿ ಯೋಚಿಸಿದಳು. ಅಣ್ಣಂದಿರು, ಅಕ್ಕಂದಿರು, ತಮ್ಮ, ತಂಗಿ, ತಾಯಿ ಕುಳಿತು ಹರಟುತ್ತಾ ನಗುತ್ತಾ ಊಟ ಮಾಡುತ್ತಿದ್ದಾರೆ. ಒಬ್ಬರಿಗಾದರೂ ತನ್ನ ನೆನಪಿಲ್ಲ. ಒಂದು ದಿನದ ತನ್ನ ಕೆಲಸ ಮುಗಿಯಿತಲ್ಲಾ. ನಾಳೆ ಬೆಳಗ್ಗೆವರೆಗೆ ತಾನು ಅವರಿಗ್ಯಾರಿಗೂ ಬೇಕಾಗಿಲ್ಲ. ಅಯ್ಯರ್ರೆ ವಾಸಿ ಅವರೆಲ್ಲರಿಗಿಂತ.

ಅಯ್ಯರ್ ಮಜ್ಜಿಗೆಯ ಲೋಟ ಹಿಡಿದು ಬಂದಾಗ ಅವರ ಹಿಂದೆಯೇ ರೋಜಿಯೂ ಬಂದಿದ್ದಳು.

'ಅಲ್ವೇ ಪಾಪೂ, ಕೇಳಿದ್ರೆ ನಾನೇ ತಂದ್ಕೊಡ್ತಿರ್ಲಿಲ್ವಾ ? ಅಯ್ಯರ್‌ಗೆ ಯಾಕೆ ಹೇಳೋಕೆ ಹೋದಿ ? ಅಲ್ಲಿಟ್ಟು ಹೋಗಿ. '

ಅಯ್ಯರ್ ಅತ್ತ ಹೋಗುತ್ತಲೇ ಅವರು ಟೇಬಲ್ಲಿನ ಮೇಲಿಟ್ಟಿದ್ದ ಮಜ್ಜಿಗೆ ಲೋಟವನ್ನು ಪವಿತ್ರಳ ಕೈಗಿತ್ತಳು.

'ಉಪ್ಪು ಸಾಕಾ ನೋಡು. ಹಾಳಾದವ್ರು ಉಪ್ಪೇ ಹಾಕೋಲ್ಲ ಸರಿಯಾಗಿ .. '

'ತುಂಬಾ ಚೆನ್ನಾಗಿದೆ ರೋಜೀ !' ಪವಿತ್ರ ಕುಡಿದು ಲೋಟ ಕೆಳಗಿಟ್ಟಳು. ರೋಜಿಯನ್ನು ತಾನೆಲ್ಲಾ ಕೇಳಬೇಕಿತ್ತೆ ಅವಳಿಗೆ ಅನ್ನಿಸುವುದಿಲ್ಲವೇ ? ರೋಜಿ ಅಲ್ಲಿಯೇ ಕುಳಿತಾಗ ಏನೋ ವಿಷಯವಿದೆಯೆಂದು ಗ್ರಹಿಸಿದಳು.

'ಏನ್ಸಮಾಚಾರ ರೋಜಿ ? ಏನಾದ್ರೂ ಬೇಕಾಗಿತ್ತಾ ?'

'ನೀನೇ ನಮ್ಮೆಲ್ಲರಲ್ಲಾ ಅದೃಷ್ಟವಂತಳು. ಅಮ್ಮ ಈಗ್ತಾನೇ ಎಲ್ರಿಗೂ ಹೇಳ್ತಾ ಇದ್ರು. ದೇವರಾಜ್ ನಿಂಗೆ ದೊಡ್ಡ ಬಂಗ್ಲೆ ಕೊಡಿಸ್ತಾರಂತೆ. ಮುಂದಿನ ತಿಂಗಳು ಅಮ್ಮ, ನೀನು ಅವರ ಜೊತೆ ಕುಲು, ಮನಾಲಿ, ಕಾಶ್ಮೀರ ಎಲ್ಲಾ ಕಡೆ ಪ್ರವಾಸಕ್ಕೆ ಹೋಗ್ತೀಯಂತೆ. ನಾಳೆ ನಿಂಗೋಸ್ಕರ ಒಳ್ಳೆ ಸೀರೆಗಳ್ನ, ಹೊಸತರಹ ಉಡುಪುಗಳ್ನ ಕಳಿಸ್ತಾರಂತೆ. ನಿಂಗೆ ಕೈಗೆ ಚಿನ್ನದ ಬಳೆ, ಕತ್ತಿಗೆ ಸರ, ಕಿವಿಗೆ ಓಲೆ ತೆಗೆದುಕೊಡೂಂತ ಅಮ್ಮನ ಕೈಲಿ ಇಪ್ಪತ್ತು ಸಾವಿರ ಕೊಟ್ಟಿದ್ದಾರಂತೆ !'

ಪವಿತ್ರಳ ಗಂಟಲಲ್ಲಿ ಉಸಿರು ಸಿಕ್ಕಿಕೊಂಡ ಹಾಗಾಯಿತು. ಅಮ್ಮ ತನ್ನನ್ನು ಸಿನಿಮಾ ತಾರೆ ಮಾಡುತ್ತಿದ್ದಾಳೊ, ಅಥವಾ ! ತಾನು ಅಲ್ಲಲ್ಲಿ ತನ್ನಿತರ ಸಹ ನಟಿಯರಿಂದ ಕೇಳಿದ್ದುಂಟು. ಅವರಿಗೆ ಒಳ್ಳೆಯ ಪಾತ್ರ, ಹೆಸರು ಉಳಿಸಿಕೊಳ್ಳಬೇಕಾದರೆ ಕೆಲವರನ್ನು ತೃಪ್ತಿಪಡಿಸಬೇಕಾಗುತ್ತದೆಯೆಂದು ! ಅದು ತನಗೆ ನಂಬಿಕೆಯಿರಲಿಲ್ಲ. ಅದು ತನಗೆ ಅನಿವಾರ್ಯವೇ? ತನ್ನಲ್ಲಿ ಪ್ರತಿಭೆಯಿದ್ದರೆ ಹೇಗಾದರೂ ಮುಂದೆ ಬರುತ್ತೇನೆ ಎಂಬ ನಂಬಿಕೆಯಿದೆ. ಆ ನಂಬಿಕೆ ಉಳಿಯುವುದೇ ?

'ಯಾಕೆ ಒಂದು ತರಹಾ ಆಗೋದೀ ? ನಿಂಗೇ ಎಲ್ಲಾ ಸಿಕ್ತುತ್ತೆ. ಬೇಡಾ, ನಮಗೆ ಏನೂ ಸಿಕ್ಕೋಲ್ಲ. ಎಲ್ಲಾ ಬೇಕೂ ಅನ್ನಿಸುತ್ತೆ.'

ಪವಿತ್ರ ರೋಜಿಯತ್ತ ನೋಡಿದಳು. ಅವಳೇನೂ ತೆಗೆದು ಹಾಕುವ ಹಾಗಿಲ್ಲ. ಎಷ್ಟೋ ಚಿತ್ರತಾರೆಯರು ಮೇಕಪ್ಪಿಲ್ಲದಿದ್ದಾಗ ಇನ್ನೂ ವಕ್ರವಾಗಿದ್ದುದು ತಾನೇ ಕಂಡಿಲ್ಲವೇ? ತಲೆಯಿಂದ ಕಾಲಿನವರೆಗೆ ಎಲ್ಲವೂ ಪ್ಯಾಡಿಂಗೇ! ರೋಜಿ ಮೈ ಕೈ ತುಂಬಿಕೊಂಡಿದ್ದ ಲಕ್ಷಣವಾಗೇ ಇರುವ ಹೆಣ್ಣು! ತನಗಿಂತ ಹಿರಿಯವಳು. ತನಗಿಂತ ಆಸೆಗಳನ್ನು ಬದುಕಿನಲ್ಲಿ ಹೊತ್ತವಳು. ತನ್ನ ಬದಲು ಅವಳೇ ದೇವರಾಜ್‌ರವರನ್ನು ಸಂತೃಪ್ತಿಗೊಳಿಸಬಾರದೇಕೆ?

'ರೋಜೀ, ನೀನೇ ಅದೆಲ್ಲಾ ತೊಗೋ. ಅವನ್ಜೊತೆ ಕಾಶ್ಮೀರಕ್ಕೂ ಹೋಗು. ನಾನಿಲ್ಲೇ ಇರ್ತೀನಿ' ಪವಿತ್ರ ಹೇಳಿದಾಗ ರೋಜಿ ತಂಗಿಯ ಕೆನ್ನೆ ಹಿಂಡಿ ನಕ್ಕಳು.

'ನೀನು ಚಿತ್ರತಾರೆ, ಎಲ್ಲರಿಗೂ ಬೇಕಾಗಿರುವವಳು. ನನ್ನ ಯಾರು ನೋಡ್ತಾರೆ ಹೇಳು. ಹುಚ್ಚುಚ್ಚಾಗಿ ಮಾತಾಡ್ಬೇಡಾ ಮಲ್ಕೋ. ನಾಳೆ ಬೆಳಗ್ಗೆ ರೀಟಾ ಆರು ಗಂಟೆಗೆ ಬರ್‍ತಾ ಇದ್ದಾಳೆ. ಕೂದಲು ಕರ್ಲ್ ಮಾಡ್ಬೇಕಂತಲ್ಲಾ. ವಿಗ್ ಬೇಡಾ, ನಿನ್ನ ಇಷ್ಟು ಒತ್ತುಗೂದಲನ್ನು ವಿಗ್ ಒಳಗೆ ಅಡಗಿಸೋಕೆ ಆಗೋಲ್ಲಾಂತ ಹೇಳಿದ್ಲಂತೆ.'

ಪವಿತ್ರಳ ಒಮ್ಮೆಲೇ ಮನಸ್ಸು ಮುದುಡಿತು. ಕಣ್ತುಂಬಾ ನಿದ್ದೆಯೂ ಮಾಡುವ ಹಾಗಿಲ್ಲ.

'ಗುಡ್ ನೈಟ್ ರೋಜೀ' ಪವಿತ್ರ ಕಣ್ಣು ಮುಚ್ಚಿದಳು. ರೋಜಿ ರೂಮಿನಿಂದ ಹೊರಟಿದ್ದಳು.

'ಅಮ್ಮ ನನಗೆ ಒಂದು ಸಾವಿರ ಕೊಟ್ಬಿಡು. ಮನೆಲೇ ಕೂತು ಬೇಜಾರಾಗಿ ಹೋಗಿದೆ. ಬಾಂಬೆಗೆ ಹೋಗಿ ಎಲ್ಲಾದ್ರೂ ಕೆಲಸ ಹುಡುಕ್ತೀನಿ.'

'ಬೇಡ್ವೋ ಹದಿನೈದು ಸಾವಿರ ಇಸ್ಕೋ ಇಬ್ರೂ ಯಾವುದಾದ್ರೂ ಬಿಸಿನೆಸ್ ಪ್ರಾರಂಭಿಸೋಣ' ಮಾಧೂ, ಶ್ಯಾಮು ಹೇಳುತ್ತಿದ್ದುದು ಕೇಳಿಸಿತು.

'ಅದೆಲ್ಲಾ ಕೊಡಕ್ಕಾಗೋಲ್ಲ' ತಾಯಿಯ ದನಿ.

'ಯಾವ್ದಾದ್ರೂ ಗಿಲೀಟಿನ ಒಡವೆ ತಂದಾಕಮ್ಮ ಯಾರಿಗೊತ್ತಾಗುತ್ತೆ' ಮಾಧುವಿನ ದನಿ.

ತಾಯಿ ಏನು ಉತ್ತರಿಸಿದರೋ ಅವರ ಗಲಾಟೆಯಲ್ಲಿ ಕೇಳಿಸಲಿಲ್ಲ. ಕಣ್ಣುಗಳನ್ನು ಮತ್ತೂ ಭದ್ರವಾಗಿ ಮುಚ್ಚಿಕೊಂಡಳು. ಸ್ವಲ್ಪ ಹೊತ್ತಿನ

ನಂತರ ತಾಯಿ ಒಳಗೆ ಬಂದು ಕೈಲಿದ್ದ ನೋಟುಗಳನ್ನು ಎಣಿಸಿ ಗಾಡ್ರೆಜ್ ಬೀರುವಿನಲ್ಲಿಟ್ಟು ಬೀಗ ಹಾಕಿ ಬೀಗದ ಕೈ ಸೊಂಟಕ್ಕೆ ಸಿಕ್ಕಿಸಿಕೊಂಡಿದ್ದು ಮೆಲ್ಲನೇ ಕಣ್ತೆರೆದು ನೋಡಿದಳು. ತನ್ನತ್ತ ತಾಯಿ ನೋಡುವಳೋ, ಬಂದು ಏನಾದರೂ ಮಾತನಾಡುವಳೋ ಎಂದು ಕಾದಿದ್ದ ಪವಿತ್ರನಿಗೆ ನಿರಾಸೆಯಾಯಿತು. ಗಡಿಯಾರಕ್ಕೆ ಕೀ ಕೊಟ್ಟು ಬೆಳಿಗ್ಗೆ ಐದೂವರೆ ಗಂಟೆಗೆ ಅಲಾರಂ ಇಟ್ಟು ದೀಪವಾರಿಸಿ ಅಲ್ಲಿಯೇ ಇದ್ದ ಮಂಚದ ಮೇಲೆ ಕುಳಿತು ಸೊಂಟದಿಂದ ಬೀಗದ ಕೈ ತೆಗೆದು ದಿಂಬಿನ ಕೆಳಗಿಟ್ಟು ಮಲಗಿದರು ಮಾಲತಮ್ಮ. ಪವಿತ್ರಳಿಗೆ ಕಣ್ಣಲ್ಲಿ ನೀರುಕ್ಕಿತು. ತನ್ನ ತಾರಾಸ್ಥಾನ ತಾಯಿಯ ಒಲವನ್ನೂ ಕಿತ್ತುಕೊಂಡಿತೇ? ತಾಯಿಗೆ ಈಗ ಏನಿದ್ದರೂ ತನಗಿಂತ ತನ್ನ ಸಂಪಾದನೆ, ಹೆಸರು, ಬೇಕು. ಏನಿದ್ದರೂ ತಾನು ಬಂಗಾರದ ಮೊಟ್ಟೆಯಿಡುವ ಕೋಳಿ. ಎದ್ದು ಬೀರುವಿನಿಂದ ದುಡ್ಡು ತೆಗೆದು ಮಾಧು, ಶ್ಯಾಮುಗಳ ಮುಂದೆ ಎಸೆಯಬೇಕೆನಿಸಿತು. ಅಮ್ಮನನ್ನು ಹಿಡಿದಲುಗಿಸಿ, 'ಅಮ್ಮಾ ನೋಡು, ನಾನು ನಿನ್ನ ಮುದ್ದು ಮಗಳು ಪಾಪೂ. ಇನ್ನೂ ಜೀವಂತವಾಗಿದ್ದೀನಿ' ಎಂದು ಕಿರಿಚಬೇಕೆನಿಸಿತು. ಆದರೆ ಎರಡನ್ನೂ ಮಾಡಲಿಲ್ಲ. ಅನಿವಾರ್ಯವಾದುದನ್ನು ಅನುಭವಿಸಬೇಕು ತಾನೊಬ್ಬಳು ಕೆಟ್ಟರೂ ಇನ್ನೆಲ್ಲರೂ ಸಂತೋಷದಿಂದಿರಬೇಕಾದಲ್ಲಿ ಏಕೆ ಮಾಡಬಾರದು? ದೇವರಾಜ್‌ರವರನ್ನು ತಾನು ಕಿರುಬೆರಳಲ್ಲಿ ಆಡಿಸುವ ಹಾಗಿದ್ದರೆ ರಾಜೇಂದ್ರನಿಗೆ ಪಾತ್ರಗಳನ್ನು ಕೊಡಿಸಬಹುದಲ್ಲವೇ? ಅವನ ನೆನಪು ಬಂದಕೂಡಲೇ ತಾಯಿ, ತಮ್ಮ, ತಂಗಿ, ಅಕ್ಕ, ಅಣ್ಣ ಎಲ್ಲ ಚಿತ್ತ ಭಿತ್ತಿಯಿಂದ ಮರೆಯಾದರು. ಮನದಲ್ಲಿ ಹೃದಯದ ತುಂಬಾ ಮುಚ್ಚಿದ್ದ ಕಣ್ಮುಂದೆ ಮೂಡಿ ಬಂದವನು ರಾಜೇಂದ್ರನೊಬ್ಬನೇ. ಅವನ ನೆನಪೊಂದೇ ಅವಳ ನಿದ್ರೆಗೆ ಜೋಗುಳ!

ಪವಿತ್ರ ಅಂದು ಮೊದಲ ಬಾರಿಗೆ ಸಂಭಾಷಣೆ ಹೇಳಿ ಮಾಡುವ ಪಾತ್ರ ಮಾಡಬೇಕಿತ್ತು. ಅವಳ ಮೊದಲ ಅನುಭವ ರಂಜನಿಯ ಜೊತೆ ಕ್ಷಣಕಾಲ ಬಂದುದ್ದೇ ಹೊರತು ಯಾವ ಮಾತನ್ನೂ ಆಡಿರಲಿಲ್ಲ. ಆದರೆ ಈಗ ಮೊದಲ ಬಾರಿಗೆ ನಾಯಕ ರಾಜೇಂದ್ರನೊಂದಿಗೆ ಮಾತನಾಡಬೇಕಿತ್ತು. ಅವಳು ಅವನನ್ನು ಪ್ರೀತಿಸಿದ ಪ್ರೇಯಸಿ. ಆದರೆ ಖಳನಾಯ

ಕನ ಕೈಕೆಳಗಿದ್ದ ಅವಳು ಅವನನ್ನೊಲಿಸಿಕೊಂಡು ಅವನ ಗುಟ್ಟನ್ನು ಬಯಲು ಮಾಡಬೇಕು. ಕೊನೆಗೆ ಅವನ ಗುಂಡಿಗೆ ಬಲಿಯಾಗಿ ಅವನ ಬಾಹುಗಳಲ್ಲೇ ಸಾಯಬೇಕು. ಖಳನಾಯಕನಿಗೆ ಸಹಾಯಕಳಾಗಿದ್ದೂ ಅವನಿಗೆ ತಿಳಿಯ ದಂತೆ ನಾಯಕನ ಪ್ರಾಣರಕ್ಷೆ ಮಾಡುವವಳು. ಮೊದಲ ಶಾಟಿಗೆ ಅವಳು ನಾಯಕನನ್ನು ನೋಡಲು ಬರಬೇಕು. ಅವನ-ಆಫೀಸಿನಲ್ಲಿ ಕೆಲಸಕ್ಕಾಗಿ ಬರುವ ರಿಸೆಪ್ಷನಿಸ್ಟ್ ಆಗಿ ಅಭಿನಯಿಸಬೇಕಿತ್ತು. ರಾಜೇಂದ್ರನನ್ನು ಆಗಲೇ ಮೊದಲ ಬಾರಿಗೆ ಕಣ್ತುಂಬಾ ನೋಡಿದುದು. ದಷ್ಟಪುಷ್ಟ ಮೈ, ಅಗಾಧ ಮೈಸಂಪತ್ತಿನೊಂದಿಗೆ ಮೋಹಕ ಮುಖ, ಆಕರ್ಷಕ ನಗು, ತನ್ನ ಮುಂದೆ ನಿಂತು ಕಿರುನಕ್ಕು ಕೈ ಮುಗಿದಿದ್ದ.

'ಹೊಸ ಕಿರುತಾರೇನಾ ಇವ್ರು ?' ಎಂದಾಗ ಅವನ ಕಣ್ಣು ಅವ ಳನ್ನು ಅಡಿಯಿಂದ ಮುಡಿಯವರೆಗೆ ನೋಡಿ ಅಳೆದು ಮೆಚ್ಚಿಗೆ ಸೂಸಿದ್ದವು

ಅವನನ್ನು ಮೊದಲಿನಿಂದಲೂ ಮೆಚ್ಚಿಕೊಂಡಿದ್ದ ಅವಳಿಗೆ ಬಾಯಿಂದ ಮಾತೇ ಹೊರಡಲಿಲ್ಲ. ನಾಚಿ ಕೆಂಪಾಗಿದ್ದಳು. ಅವನೇ ಅವಳತ್ತ ನೋಡಿ ಕಿರುನಕ್ಕಿದ್ದ.

'ತುಂಬಾ ನಾಚಿಕೇನಾ ?'

ಇಲ್ಲವೆಂದು ತಲೆಯಾಡಿಸಿದಾಗ ಕೂಡಲೇ ಅವಳ ಮುಖವನ್ನು ಹಿಡಿದೆತ್ತಿ ತನ್ನತ್ತ ನೋಡುವಂತೆ ಬಲವತ್ತರವಾಗಿ ತನ್ನ ಪ್ರತಿಕ್ರಿಯೆಗೆ ಪ್ರಯತ್ನಿಸಿದ್ದ.

'ನಾನೇನೂ ನಿಮ್ಮನ್ನ ತಿಂದುಹಾಕಿಬಿಡೋ ಹುಲಿ ಅಲ್ಲಾ. ನಾನೂ ನಿಮ್ಮ ಹಾಗೇ ಮನುಷ್ಯ ! ಈ ನಾಚಿಕೆ ಎಲ್ಲಾ ಕಟ್ಟಿಡಬೇಕೂ !'

ಪವಿತ್ರಳಿಗೆ ಎಲ್ಲರೆದುರಿಗೂ ಹಾಗೆ ಮಾಡಿದಾಗ ಎದೆ ಡವಡವನೆ ಹೊಡೆದುಕೊಂಡಿತ್ತು. ಕೈಕಾಲು ನೀರಾಗಿ ಹೋದಂತಾಗಿತ್ತು.

'ಹೆಸರೇನು ?' ಅವನು ಕೇಳಿದಾಗ ಮೆಲ್ಲನೇ 'ಪವಿತ್ರ' ಎಂದಾಗ 'ಸರಿಯಾಗಿ ಕೇಳಿಸೋಲ್ಲ. ಸ್ವಲ್ಪ ಜೋರಾಗಿ ಹೇಳಿ !' ಎಂದಿದ್ದ.

ಕೊಂಚ ಜೋರಾಗಿ ತನ್ನ ಹೆಸರು ಹೇಳಿದಾಗ ಬೇಕಾಗಿಯೋ ಬಿದ್ದು ಬಿದ್ದು ನಕ್ಕಿದ್ದ.

'ಪವಿತ್ರಾ, ವೆರಿಗುಡ್ ಪವಿತ್ರಾ. ಕೇಳಿದ್ರಾ ಎಲ್ಲಾ. ಇವಳು ಗಂಗಾ ನದಿಯಂತೆ ಪವಿತ್ರ. ರಾಮಾಯಣ, ಮಹಾಭಾರತ, ಭಗವದ್ಗೀತೆಯಷ್ಟು ಪವಿತ್ರ. ಯಾರೇನು ಪಾಪಾ ಮಾಡಿದ್ರೂ ಇವರ್ನ ಮುಟ್ಟಿಡೀ, ನಿಮ್ಮ

ಪಾಪ ಎಲ್ಲಾ ತೊಳೆದುಹೋಗುತ್ತೆ ! ನಾನು ಈಗ್ತಾನೇ ಹುಟ್ಟಿದೆ. ನನ್ನ ಪಾಪವೆಲ್ಲಾ ನಾಶವಾಗಿ ಹೋಯಿತು !'

ಅಲ್ಲಿಯೇ ನಿಂತಿದ್ದ ಖಳನಾಯಕನ ಪಾತ್ರ ಮಾಡಿದ್ದ ಸುಂದರರಾಜ್ ಅವನ ಬೆನ್ನ ಮೇಲೆ ಕೈಹಾಕಿ ನುಡಿದಿದ್ದ. 'ಮರೀ, ಯಾವ ಚಿತ್ರದ ಡಯಲಾಗ್ ಇದು ?'

ಅಷ್ಟರಲ್ಲಿ ಮಾಲತಮ್ಮ ಪವಿತ್ರನನ್ನು ಅರಸುತ್ತಾ 'ಪಾಪೂ' ಎಂದು ಬಂದರು. ಅದನ್ನು ಕೇಳಿ ಪಾಪೂ ಎಂದು ಬೇಕಾಗಿಯೇ ಕೂಗುತ್ತಾ ಚಿಕ್ಕ ಮಗುವನ್ನು ನಡೆಸಿಕೊಳ್ಳುವಂತೆ ನಡೆಸಿಕೊಂಡಿದ್ದ.

'ಪಾಪೂ ನೀರು ಬೇಕಾ ? ಪೆಪ್ಪರಮೆಂಟ್ ಬೇಕಾ ? ಚಾಕಲೇಟ್ ಬೇಕಾ ? ಆಟದ ಸಾಮಾನು ಬೇಕಾ ?' ಎಂದು ಸುಂದರರಾಜ್, ರಾಜೇಂದ್ರ ಕಮಿಡಿಯನ್ ರಘು ಅವಳನ್ನು ರೇಗಿಸಿ, ಅಳಿಸಿ, ನಕ್ಕು ನುಡಿದಿದ್ದರು.

ಮೊದಲೇ ಬೆದರಿದ್ದ ಪವಿತ್ರ ಮತ್ತೂ ಬೆದರಿಬಿಟ್ಟಿದ್ದಳು.

ಮೊದಲನೆಯ ಸಂಭಾಷಣೆ ರಾಜೇಂದ್ರನೊಂದಿಗೆ 'ಯಾರೋ ನಿಮ್ಮನ್ನ ನೋಡೋಕೇ ಬಂದಿದ್ದಾರೆ ಒಳಗೆ ಕಳಿಸಲಾ ?' ಎಂದು ಇಂಟರ್‌ಕಾಮ್‌ನಲ್ಲಿ ಹೇಳಿ ಎದ್ದು ಒಳಗೆ ಹೋಗಿ 'ಎಕ್ಸ್‌ಕ್ಯೂಸ್ ಮೀ ಸರ್. ಅವರು ಬಂದಿದ್ದಾರೆ. ಒಳಗೆ ಕಳುಹಿಸಲಾ ?' ಎಂದು ವಯ್ಯಾರ ವಾಗಿ ಹೇಳಬೇಕು.

ಆಗ ನಾಯಕ ಅವಳತ್ತ ವಿಚಿತ್ರವಾಗಿ ನೋಡಿ 'ನೀನು ಹೊಸ ರಿಸೆಪ್ಷನಿಸ್ಟ್ ಪ್ರಿಯಾನಾ ? ವೈಗಾಡ್ ನಂಗೆ ಇಷ್ಟು ಸುಂದರವಾಗಿರೋ ರಿಸೆಪ್ಷನಿಸ್ಟ್ ಇದ್ದಾಳೆಂದೇ ತಿಳಿದಿರಲಿಲ್ಲ. ಅವರಿಗೆ ಸ್ವಲ್ಪ ಕಾದಿರುವಂತೆ ಹೇಳಿ ಇಲ್ಲಿ ಬಾ !' ಎಂದು ಕೈ ಚಾಚುವಾಗ

'ಹೊರಗೆ ಕಾಯ್ತಾ ಇದ್ದಾರೆ ಸರ್' ಎಂದು ಹೇಳಿ ಅವನಿಗೆ ಸಿಗ ದಂತೆ ಹೊರಸರಿದು ಹೋಗಬೇಕು.

ಪವಿತ್ರ ಇಂಟರ್‌ಕಾಮ್‌ನಲ್ಲಿ ಮಾತನಾಡುವಾಗ 'ಅವರು ಬಂದಿದ್ದಾರೆ ಒಳಗೆ ಕಳುಹಿಸಲಾ ?' ಎಂದಾಗ ಮೆಲ್ಲನೇ ಹೇಳಿದ್ದ. 'ಅವರನ್ನು ಕಳಿಸಬೇಡಾ, ನೀನೇ ಬಾ.'

ಡೈರೆಕ್ಟರ್ 'ಕಟ್' ಎಂದು ರಾಜೇಂದ್ರನತ್ತ ಹುಸಿಮುನಿದಿದ್ದರು.

ಪವಿತ್ರ ಕೆಂಪೇರಿ ಹೋಗಿದ್ದಳು. 'ರಾಜೇಂದ್ರ ನೀವು ಅವಳನ್ನ

ತುಂಬಾ ನರ್ವಸ್ ಮಾಡ್ತಾ ಇದ್ದೀರಿ' ಎಂದು ಡೈರೆಕ್ಟರ್ ನಯವಾಗಿ ಗದರಿಕೊಂಡಿದ್ದರು.

ಕೊನೆಗೆ ಮೂರು ಟೇಕ್‌ಗಳಾದ ಮೇಲೆ ಶಾಟ್ ಓ. ಕೇ. ಆಗಿತ್ತು. ಮುಂದಿನ ಸೀನ್‌ನಲ್ಲಿ ಪವಿತ್ರಳೇ ರಾಜೇಂದ್ರನನ್ನು ಬಲೆಗೆ ಹಾಕಿಕೊಳ್ಳಲು ಪ್ರಯತ್ನಿಸಬೇಕು. ಅವಳೆಷ್ಟು ವಯ್ಯಾರವಾಗಿ ಅವನ ಮುಂದೆ ನಟಿಸಿದಾಗಲೂ ಅವನು ಶಿಲೆಯಂತೆಯೇ ಕುಳಿತಿದ್ದ.

'ರಾಜೇಂದ್ರ ಯಾಕೆ ಸುಮ್ನೆ ಕೂತ್ಬಿಟ್ರೀ ಶಾಟ್ಸ್ ಓಕೇ ಮಾಡಬೇಕೂ' ಎಂದು ಡೈರೆಕ್ಟರ್ ಹೇಳಿದಾಗ ಎದ್ದು ಹೋಗಿ ಮತ್ತೆ ಬಂದು ಕುಳಿತ.

'ಯಾಕೋ ಮೂಡಿಲ್ಲ. ಸ್ವಲ್ಪ ವೈಯ್ಟ್ ಮಾಡ್ತೀರಾ ? ಪ್ಲೀಸ್ ?' ಎಂದ ನಾಯಕ ಮಹಾಶಯ

ಎಲ್ಲರೂ ಕೊಂಚ ಸುಮ್ಮನಾದರು. ಸ್ಟಿಲ್ಸ್‌ಗಾಗಿ ಕೆಲವು ಚಿತ್ರಗಳನ್ನು ತೆಗೆದುಕೊಂಡರು. ಅಸಿಸ್ಟೆಂಟ್ ಡೈರೆಕ್ಟರ್ ಕೇಳಿದ್ದರು.

'ಯಾಕೆ ಸಾರ್ ಮೂಡಿಲ್ಲ ?'

'ಆ ಮಗೂ ಮುಖ ನೋಡಿದ್ರೆ ಪಾಪಾ ಅನ್ನಿಸುತ್ತೆ. ಹಾಲು ಕುಡ್ಯೋ ಮಗು ಇದ್ದಾಗಿದೆ. ಅದರ ಜೊತೆ ನಾನು ಹೇಗೆ ಮಾಡೋದು?'

ಅದು ಪವಿತ್ರಳ ಕಿವಿಗೆ ಬಿದ್ದು ಕಣ್ಣುಗಳಲ್ಲಿ ಅಶ್ರುತುಂಬಿ ನಿಂತಿತ್ತು. ಮಾಲತಮ್ಮನಿಗೆ ಅದು ಬಿಸಿ ತುಪ್ಪದಂತೆ ನುಂಗಲಾರದೇ ಉಗುಳಲಾರದೆ ತಳಮಳಿಸಿದರು.

'ಬೇಕಾದ್ರೆ ಕಾಮಿನೀನ್ನ ಹಾಕ್ಕೊಳ್ಳೋಣ, ಅದಕ್ಕೇನಂತೆ' ಡೈರೆಕ್ಟರತ್ತ ಮ್ಯಾನೇಜರ್ ನೋಡಿದಾಗ ಡೈರೆಕ್ಟರವರ ಮುಖ ಗಂಭೀರವಾಗಿತ್ತು. ಅವರಿಗೆ ಪವಿತ್ರಳ ಕಣ್ಣೀರು ಬೇಸರ ತಂದಿತ್ತು. ರಾಜೇಂದ್ರನನ್ನು ತಾವೇ ಕರೆತಂದು ಪವಿತ್ರಳ ಮುಂದೆ ನಿಲ್ಲಿಸಿದರು.

'ನೋಡಿ, ನೀವು ನಮ್ಮ ಮಗೂ ಕಣ್ಣಲ್ಲಿ ನೀರು ಹಾಕಿಸಿದಿರಿ. ಮೊದಲೇ ಆ ಹುಡುಗಿಗೆ ಹೊಸದು ನೀವೆಲ್ಲಾ ಹೀಗೆ ಮಾಡಿದರೆ!' ರಾಜೇಂದ್ರ ಪವಿತ್ರಳತ್ತ ನೋಡಿದ. ತುಂಬಿದ್ದ ತೊರೆಗಳಂತಿದ್ದ ಅವಳ ಕಣ್ಣಲ್ಲಿ ಕಣ್ಣು ಬೆರಸಿದ.

'ಪಾಪೂ, ಚಾಕಲೇಟ್ ಬೇಕೋ ? ಲಾಲಿಪಪ್ ಬೇಕೋ ?' ಎಂದು ಮ್ಯಾನೇಜರ್‌ನ ಬಗಲಿನಲ್ಲಿದ್ದ ಜೇಬಿನಲ್ಲಿ ತಡಕಾಡಿ ಒಂದು ಚಾಕ

ಲೇಟು ತೆಗೆದು ಸುಲಿದು ಅವಳ ಬಾಯಿಗಿಟ್ಟಿದ್ದ. ನಗು ತಡೆಯಲಾರದೆ ನಕ್ಕಾಗ ಪವಿತ್ರಳ ಕಣ್ಣೀರು ಕೆನ್ನೆಯ ಮೇಲೆ ಹರಡಿತ್ತು.

'ಗುಡ್, ಗುಡ್' ರಾಜೇಂದ್ರ ಅವಳ ಭುಜದ ಸುತ್ತ ಕೈಹಾಕಿ ಕೊಂಡು ಡೈರೆಕ್ಟರ್‌ರವರ ಮುಂದೆ ಕರೆದು ತಂದಿದ್ದ.

'ಏನ್ಸಾರ್, ಮಗೂನ ತುಂಬಾ ನರ್ವಸ್ ಮಾಡ್ಬಿಟ್ಟಾ. ನೋಡ್ತಾ ಇರಿ ಹೇಗೆ ಅಭಿನಯಿಸ್ತಾರೆ! ನನ್ನ ಮರಳು ಮಾಡಿಬಿಡ್ತಾರೆ. ಅಯ್ಯೋ ಹೋಯ್ತು ನನ ಹೃದಯ, ಕಳೆದುಹೋಯ್ತು' ಎಂದು ನಟಿಸಿದಾಗ ಎಲ್ಲರೂ ನಕ್ಕಿದ್ದರು. ಸನ್ನಿವೇಶ ತಿಳಿಯಾಗಿತ್ತು. ಮಾಲತಮ್ಮನ ಹತ್ತಿರ ಸುಂದರರಾಜ್ ಪಿಸುಗುಟ್ಟಿದ್ದ.

'ನಮ್ಮ ಗುರೂ ಯಾವಾಗ್ಲೂ ಹಾಗೇ, ಯಾರ್ಯಾದ್ರೂ ಕೀಟಲೆ ಮಾಡಿ ಅಳಿಸದಿದ್ರೆ ಆಗೋಲ್ಲ. ಹಾಗೆ ಅಳಿಸಿ ನಗ್ಸಿ ಫ್ರೆಂಡ್ ಮಾಡ್ಕೊಂಡು ಅವರ ಕೈಲಿ ಫಸ್ಟ್ ಕ್ಲಾಸ್ ಆಗಿ ಆಕ್ಟ್ ಮಾಡ್ಸಿಬಿಡ್ತಾರೆ ನೋಡ್ತಾ ಇರಿ.'

ಅವನೆಂದ ಹಾಗೆಯೇ ಪವಿತ್ರ ಅಭಿನಯಿಸುವಾಗ ಬಹಳ ತಾಳ್ಮೆ ಯಿಂದ ಅವಳಿಗೆ ತಾನೇ ಕೆಲವು ಭಂಗಿ, ಭಾವಗಳನ್ನು ಹೇಳಿಕೊಟ್ಟಿದ್ದ. ಆ ದಿನದ ಶೂಟಿಂಗ್ ಮುಗಿಯುವ ವೇಳೆಗೆ ಪವಿತ್ರ, ರಾಜೇಂದ್ರ ಬಹಳ ಸ್ನೇಹ ಸಲಿಗೆ ಬೆಳೆಸಿಕೊಂಡಿದ್ದರು. ಊಟಕ್ಕೆ ಕೂಡುವಾಗ ಬೇಕಾಗಿ ಅವಳನ್ನು ತನ್ನ ಪಕ್ಕದಲ್ಲೇ ಕೂಡಿಸಿಕೊಂಡಿದ್ದ. ಪವಿತ್ರಳಿಗೆ ಹೆದರಿಕೆ, ಭಯ ಮಾಯವಾಗಿ ಸರಾಗವಾಗಿ ಅಭಿನಯಿಸಲು ಧೈರ್ಯ ಬಂದಿತ್ತು.

ನಾಯಕಿಯಾಗಿದ್ದ ಚಂದ್ರಿಕಾ ಬಂದಾಗ ಪರಿಸರವೇ ಬದಲಾಗಿ ಹೋಗಿತ್ತು. ಪವಿತ್ರ ಎಲ್ಲರ ಕಣ್ಣಿನಿಂದ ದೂರವಾಗಿದ್ದಳು. ರಾಜೇಂದ್ರ ಪೂರ ಪವಿತ್ರಳನ್ನು ಮರೆತಂತಿತ್ತು. ಅವನು ಚಂದ್ರಿಕಾಳ ಸಮೀಪದಲ್ಲಿ ಕುಳಿತು ಮೆಲುಮಾತಾಡುತ್ತಿದ್ದ. ಅವನಾಡಿದ ಮಾತಿಗೆಲ್ಲಾ ಅವಳು ನಗುತ್ತಿದ್ದಳು. ಪ್ರಣಯ ದೃಶ್ಯಗಳನ್ನು ಮಾಡುವ ಮುನ್ನ ಅದನ್ನು ರಿಹರ್ಸಲ್ ಮಾಡುವಾಗ ಸಂಭಾಷಣೆಯನ್ನು ಬಾಯಿಗೆ ಬರುವಂತೆ ನಾಲ್ಕಾರು ಬಾರಿ ಹೇಳಿಕೊಳ್ಳುತ್ತಾ ರಾಜೇಂದ್ರ ಚಂದ್ರಿಕಾಳ ಬಳಿಗೆ ಬಂದು ಆ ಸಂಭಾಷಣೆ ಹೇಳಿದಾಗ ಅವಳು ಹುಸಿಮುನಿದು ಎದ್ದು ಬೇರೆಯ ಕಡೆ ಹೋಗಿ ಕುಳಿತಿದ್ದಳು. ಆದರೆ ಆ ಪ್ರಣಯ ಸನ್ನಿವೇಶ ಅಭಿನಯಿಸುವಾಗ ಇಬ್ಬರೂ ತನ್ಮಯರಾಗಿ ಅಭಿನಯಿಸಿ ಎರಡೇ ಟೇಕ್‌ನಲ್ಲಿ ಓಕೇ ಆಗಿತ್ತು. ಪವಿತ್ರನ ಮನಸ್ಸು ಒಳಗೆ ಕುದಿಯಿತು. ಚಂದ್ರಿಕಾ ಒಂದು ಬಾರಿಯೂ

ಅವಳತ್ತ ತಿರುಗಿಯೂ ನೋಡಿರಲಿಲ್ಲ. ಅವಳ ಬಳಿ ಹೋಗಿ ಕುಳಿತು ಮಾತು ಬೆಳೆಸಲು ಮಾಲತಮ್ಮ ಹವಣಿಸಿ ಸೋತಿದ್ದರು. ಅವರನ್ನು ಕಡೆಗಣ್ಣಿನಿಂದಲೂ ನೋಡಲಿಲ್ಲ. ಚಂದ್ರಿಕಾ, ಪವಿತ್ರಾ ಇಬ್ಬರೂ ಒಂದು ದೃಶ್ಯದಲ್ಲಿ ರಾಜೇಂದ್ರನ ಜೊತೆಗೆ ಬರಬೇಕಾದಾಗ ಚಂದ್ರಿಕಾ ಉದಾಸೀನ ದಿಂದ ಪವಿತ್ರಳತ್ತ ನೋಡಿದಳು. ತನಗಿಂತ ವಯಸ್ಸಿನಲ್ಲಿ ಕಿರಿಯಳು ತನಗಿಂತಲೂ ಅವಳು ಚೆಲುವೆ ಎಂದರಿತಾಗ ಚಂದ್ರಿಕಾಳ ಕಣ್ಣುಗಳು ಗಂಭೀರವಾಗಿದ್ದವು. ತನ್ನ ಉಡಿಗೆಗಿಂತ ಪವಿತ್ರಳ ಉಡುಪು ಚೆನ್ನಾಗಿರುವು ದೆಂದೆನಿಸಿತ್ತು.

'ನಂಗೆ ತುಂಬಾ ತಲೆನೋವು ಈ ಸೀನ್ ನಾಳೆ ತೊಗೊಂಡ್ರೆ ಆಗೋಲ್ವಾ ಸಾರ್ ?' ಎಂದು ಡೈರೆಕ್ಟರ್‌ರವರನ್ನು ಕೇಳಿದ್ದಳು. ಡೈರೆ ಕ್ಟರ್ ಅನುಭವಿ.

'ಇಲ್ಲವ್ಮಾ, ಇವೊತ್ತು ಮುಗಿಸಿ ಬಿಡೋಣ' ಎಂದಾಗ ಚಂದ್ರಿಕಾ ಅವರನ್ನು ಪಕ್ಕಕ್ಕೆ ಕರೆದಿದ್ದಳು.

'ನನ್ನ ಡ್ರೆಸ್ ತುಂಬಾ ಸಿಂಪಲ್ ಆಯಿತಲ್ಲಾ. ಅವಳದು ತುಂಬಾ ಚಮುಕ್ ಇದೆ.'

'ಎಲ್ಲಾದ್ರೂ ಉಂಟೇ, ನಿಮಗೆ ಈಗ ಹಾಗನ್ನಿಸುತ್ತೆ. ಆದರೆ ನಿಮ ಗಿರೋ ಲುಕ್ಸ್ ಅವಳಿಗೆಲ್ಲಿದೆ? ಇನ್ನು ಕಸುಗಾಯಿ!' ಎಂದು ಉಬ್ಬಿಸಿ ದಾಗ ಚಂದ್ರಿಕಾಗೆ ಕೊಂಚ ನೆಮ್ಮದಿಯಾಗಿತ್ತು.

ಕೊನೆಗಣ್ಣಿನಿಂದ ನೋಡುತ್ತಿದ್ದ ಪವಿತ್ರಸಿಗೆ ಅದು ತಿಳಿದಿತ್ತು. ಅವಳ ಸಮೀಪದಲ್ಲಿದ್ದ ರಾಜೇಂದ್ರ ಕಣ್ಣು ಹೊಡೆದಿದ್ದ.

'ನೀನು ತುಂಬಾ ಚೆನ್ನಾಗಿದ್ದೀಂತ ಎಲ್ಲರಿಗೂ ಹೊಟ್ಟೆ ಉರಿ' ಮೆಲ್ಲ ನುಸುರಿದ.

ಅನಂತರ ಚಂದ್ರಿಕಾಳ ಬಳಿ ಹೋಗಿ ಹೇಳಿದ್ದ.

'ಓಹ್ ನಿನ್ನ ಅಲಂಕಾರದ ಮುಂದೆ ಎಲ್ಲರದೂ ನಿವಾಳಿಸಬೇಕು. ಓ ನನ್ನ ಪ್ರೇಯಸಿ!' ನಾಟಕೀಯವಾಗಿ ಅಭಿನಯಿಸಿ ಗಲಾಟೆಯಾಗ ಬಹುದಾದ ಸನ್ನಿವೇಶವನ್ನು ತಿಳಿಗೊಳಿಸಿದ್ದ. ಅಂದಿನ ಶೂಟಿಂಗ್ ಮುಗಿಸು ವವರೆಗೆ ಚಂದ್ರಿಕಾ ಕೊಂಚ ಬಿಗುವಾಗೇ ಇದ್ದಳು. ಮುಗಿಸಿ ಹೋಗುವಾಗ ಸೆರಗು ಬೀಸಿ ಹೋದಾಗ ಅಲ್ಲಿದ್ದ ಡೈರೆಕ್ಟರ್, ಮ್ಯಾನೇಜರ್, ಅಸಿಸ್ಟೆಂಟ್ ಡೈರೆಕ್ಟರ್ ಮಾತನಾಡಿಕೊಳ್ಳುತ್ತಿದ್ದರು.

'ಮೂವತ್ತು ವರ್ಷ ಆಯ್ತು ಸಾರ್ ಅವಳಿಗೆ. ಹದಿನಾರು ವರ್ಷದ ಹುಡುಗೀ ತರಹಾ ಕಾಣ್ಸೋದೂಂದ್ರೆ ಹೇಗೆ ಸಾರ್ ?'

'ಏನ್ಮಾಡೋದು ಹೆಸರಿನ ಮೇಲೆ ಓಡುತ್ತೆ. ಹೊಸ ಮುಖ ಹಾಕ್ಕೊಂಡ್ರೆ ಯಾರು ನೋಡ್ತಾರೆ!'

'ನಾಳೆ ಶೂಟಿಂಗ್‌ಗೆ ಬರೋಕೆ ಖಂಡಿತ ತರಲೆ ಮಾಡ್ತಾಳೆ ನೋಡ್ತಾ ಇರಿ. ಕೊಟ್ಟಿರೋ ಅಡ್ವಾನ್ಸ್ ಸಾಲದೂಂತಾನೋ, ಕಾಲ್‌ಶೀಟ್ ಅದಲು ಬದಲಾಗಿದೇಂತಾನೋ ಅಂತೂ ಏನಾದ್ರೂ ತೊಂದ್ರೆ ಮಾಡೇ ಮಾಡ್ತಾಳೆ.

ಅದಕ್ಕೆ ಹೇಳಿದ್ದು ಸಾರ್. ಗಲಾಟೆ ಯಾಕೆ? ಇದೇ ತರಹ ಕಾಸ್ಟ್ಯೂಮ್ ಅವಳಿಗೊಂದು ರೆಡಿಮಾಡಿದ್ರಾಯ್ತು ಸಾರ್. ಜಾಣತನ ದಲ್ಲಿ ಕೆಲಸ ಮಾಡಿಸ್ಕೋಬೇಕು!'

ರಾಜೇಂದ್ರನೂ ಅದನ್ನೆಲ್ಲಾ ಕೇಳಿ ಮನದಲ್ಲೇ ನಕ್ಕಿದ್ದ.

'ಹುಷಾರು, ನಾಳೆ ಮುಖ ಪರಚಿಬಿಟ್ಟಾರೂ!' ಎಂದು ಪವಿತ್ರಳ ಕಿವಿಯಲ್ಲಿ ಉಸುರಿದ್ದ.

ಆದರೆ ಚಂದ್ರಿಕಾ ಬಂದ ಕೂಡಲೇ ತನ್ನನ್ನು ಮರೆತನೇಕೆ? ಎಷ್ಟು ಬೇಗ ಬಣ್ಣ ಬದಲಾಯಿಸಿದ್ದ! ಇದೇ ಅಲ್ಲವೇ ಬಣ್ಣದ ಬದುಕು? ಅದರ ಸಂಪೂರ್ಣ ಪರಿಚಯ ಮಾರನೆಯ ದಿನವಾಗಿತ್ತು.

ಪವಿತ್ರಳಂತೆಯೇ ಸಹನಟಿಯಾದ ಸಹನಾಳದು ಕೆಲವು ಸನ್ನಿವೇಶ ಗಳಿತ್ತು. ಅವಳು ಆ ಚಿತ್ರದಲ್ಲಿ ಕ್ಲಬ್ ಡ್ಯಾನ್ಸರ್. ಖಳನಾಯಕನ ಜೊತೆ ಗಾತಿ. ಪವಿತ್ರಳನ್ನು ಕಂಡಾಗ ಹಾರ್ದಿಕವಾಗಿ ನಕ್ಕಿದ್ದಳು. ಚಂದ್ರಿಕ ಕೊಂಚ ಗಂಭೀರವಾಗಿಯೇ ಶೂಟಿಂಗಿಗೆ ಬಂದಿದ್ದರೂ ಭಾರಿಯಾದ ಉಡುಪು ಅವಳಿಗಾಗಿ ಸಿದ್ಧವಾಗಿತ್ತು. ಹೆಚ್ಚು ಮೈತೋರುವ ಲಾವಣ್ಯ ಮಯವಾದ ಉಡುಪು. ಸಹನಾಗೆ ಹಿಂದಿನ ದಿನ ನಡೆದ ಸಂಗತಿಯೂ ಯೂನಿಟ್ಟಿನವರ್‍ಯಾರಿಂದಲೋ ತಿಳಿದಿತ್ತು. ಪವಿತ್ರಳನ್ನು ನಿಕೃಷ್ಟವಾಗಿ ನೋಡುತ್ತಿದ್ದ ಚಂದ್ರಿಕಾಳತ್ತ ನೋಡಿ ನಕ್ಕಳು.

'ಪವಿತ್ರಾ, ನೀನೇನೂ ಕೇರ್ ಮಾಡಬೇಡಾ! ನಾನು ಈ ಫೀಲ್ಡ್‌ನಲ್ಲಿ ಬಹಳ ಅನುಭವಿಸಿದ್ದೀನಿ. ಆ ನಾಯಕನಿಗಿಂತ ಹೆಚ್ಚು ವರ್ಷಗಳಾಯಿತು ರಂಗಕ್ಕಿಳಿದು. ಆದರೆ ಮೊದಲಿನಿಂದಲೂ ನಂಗೆ ಇದೇ ರೋಲು ಕೊಟ್ಟು, ನಾನು ಡ್ಯಾನ್ಸರ್ ಇಮೇಜ್ ಉಳಿಸಿಕೊಳ್ಳಬೇಕಾಯಿತು. ಎಲ್ಲಾ ಪ್ರೊಡ್ಯೂಸರ್, ಡೈರೆಕ್ಟರ್‌ಗಳಿಗೂ ನನ್ನ ಈ ಪಾತ್ರವೇ ಬೇಕು!

ಹಾಳು ಇಮೇಜ್ ಬೆಳೆಸಿಕೊಳ್ಳಬಾರದು. ಈ ಚಂದ್ರಿಕಾ ಹೇಗೆ ಅಂದ್ಕೊಂಡಿದ್ದೀಯಾ ಒಂದು ಚಿತ್ರದಲ್ಲಿ ನನಗೆ ಅವಳಿಗಿಂತ ಹೆಚ್ಚು ಭಾವಪೂರ್ಣವಾದ ಅಭಿನಯಕ್ಕೆ ನಾನು ತುಂಬಾ ಚೆನ್ನಾಗಿ ಮಾಡಿದೆನೆಂದು ಡೈರೆಕ್ಟರ್ ಹೊಗಳಿದ್ದರು. ಅದೇನು ಅವಳಿಗೆ ಮರುಳು ಮಾಡಿದಳೋ ಮುಂದಿನ ಷೆಡ್ಯೂಲ್ ಹೊತ್ತಿಗೆ ನನ್ನನ್ನು ತೆಗೆದು ಬೇರೆಯವಳನ್ನು ಹಾಕಿಕೊಂಡಿದ್ದರು, ನನ್ನ ಬದಲಿಗೆ. ನಾನು ಡೈರೆಕ್ಟರ್ ಮನೆಗೆ ಕೇಳಿಕೊಂಡಿದ್ದೆ ಯಾಕೆ ಹೀಗಾಯ್ತೂಂತ. ಅವರು ನಿನಗೆ ಆ ಪಾತ್ರ ಸರಿಹೊಂದೋಲ್ಲ ಅದಕ್ಕೆ ಬೇರೆಯವರಿಗೆ ಕೊಡಬೇಕಾಯ್ತು. ಮುಂದಿನ ಚಿತ್ರದಲ್ಲಿ ನಿಂಗೇ ಒಳ್ಳೆಯ ಪಾತ್ರ ಕೊಡ್ತೀನೀಂತ ಭರವಸೆ ಕೊಟ್ಟಿದ್ರು. ಅದಕ್ಕಿನ್ನೂ ಕಾಲ ಬಂದೇ ಇಲ್ಲ. ಅವಳೇನೂ ಸಾಮಾನ್ಯಳಲ್ಲ ಹುಷಾರಾಗಿರು!' ಎಂದು ಎಚ್ಚರಿಕೆ ನೀಡಿದ್ದಳು.

ಬೆಚ್ಚಿ ಬೆದರಿದ ಪವಿತ್ರ ಕೇಳಿದ್ದಳು. 'ಎಲ್ಲಾ ನಾಯಕಿಯರೂ ಹಾಗೇನಾ?'

'ಛೇ ಛೇ! ಎಲ್ಲರೂ ಹಾಗೇನಿಲ್ಲ. ಇಂದೂಶ್ರೀಯಂತೂ ದೇವರಂತಹವರು. ಬಾಯಿತುಂಬಾ ಮಾತನಾಡಿಸುತ್ತಾರೆ. ಯಾರಾದರೂ ಹೊಸ ಪ್ರೊಡ್ಯೂಸರ್ಸ್ ಬಂದರೆ ಪರಿಚಯಿಸಿ ನಮಗೂ ಒಂದು ಪಾತ್ರ ಗಿಟ್ಟಿಸಿ ಕೊಡ್ತಾರೆ. ಚೆನ್ನಾಗಿ ಅಭಿನಯಿಸಿದರೆ ಬೆನ್ನು ಚಪ್ಪರಿಸಿ ತುಂಬಾ ಚೆನ್ನಾಗಿ ಮಾಡುತ್ತೀ ನಿಂಗೆ ಒಳ್ಳೆ ಭವಿಷ್ಯ ಇದೆ ಎಂದು ಹುರಿದುಂಬಿಸುತ್ತಾರೆ. ಅವರ ಹಾಗೆಯೇ ಕಲಾವತಿ, ಭಾವನಾ ಕೂಡ' ಸಹನಾ ತನ್ನ ಅನುಭವ ಹೇಳಿದ್ದಳು. ರಾಜೇಂದ್ರನ ಬಗ್ಗೆ ಮಾತನಾಡುತ್ತಾ ಅತಿ ಭಕ್ತಿಯಿಂದ ಹೇಳಿದ್ದಳು.

'ತುಂಬಾ ಹಾಸ್ಯ ಪ್ರವೃತ್ತಿ ನೋಡಿದರೆ ತುಂಬಾ ಜಂಬ, ಅಹಂಕಾರ ಎನಿಸುತ್ತದೆ. ಆದರೆ ಮನುಷ್ಯ ಬೆಣ್ಣೆಯಂತೆ ಮೃದು.'

'ಸುನೀಲ್ ಕುಮಾರ್ ಓದಿ ಬರೆದು ಅಭಿನಯದಲ್ಲಿ ಡಿಪ್ಲೋಮ ಪಡೆದು ಒಳ್ಳೆಯ ಹಣವಂತರ ಮನೆಯಿಂದ ಬಂದಿರುವವನು. ಅವನ ಬಳಿ ಮಾತನಾಡುವುದೇ ಕಷ್ಟ. ತನ್ನ ಪಾತ್ರ ತಾನು ಮಾಡಿ ಮುಗಿಸಿ ಯಾರೊಡನೆಯೂ ಹೆಚ್ಚು ಬೆರೆಯದೇ ಹೊರಟುಹೋಗುತ್ತಾನೆ. ಅವನನ್ನು ಕಂಡರೆ ಡೈರೆಕ್ಟರುಗಳೂ ಹೆದರುತ್ತಾರೆ. ಅವನೊಡನೆ ತನಗೆ ಒಂದು ಪಾತ್ರವೂ ಸಿಕ್ಕಿಲ್ಲವೆಂದೂ ಹೇಳಿದ್ದಳು.

ರಾಜೇಂದ್ರ ಅಂದು ಬಹಳ ಗಂಭೀರವಾಗಿಯೇ ಇದ್ದ. ಶೂಟಿಂಗ್ ಮುಗಿಸಿ ಹೋಗುವ ಮುನ್ನ ಪವಿತ್ರಳ ಕೈಗೊಂದು ಚಾಕಲೇಟ್ ತುರುಕಿ ಹೋಗಿದ್ದ. ಪವಿತ್ರ ಅದನ್ನು ಮುಷ್ಟಿಯಲ್ಲಿ ಬಹಳ ಹೊತ್ತು ಹಿಡಿದೇ ಸಂತಸಗೊಂಡಿದ್ದಳು. ಕೊನೆಗೆ ಅದು ಕರಗಿ ನೀರಾಗುವ ಹಾಗಾದಾಗ ತೆಗೆದು ಬಾಯಿಗಿಟ್ಟುಕೊಂಡಳು. ಅಷ್ಟು ಸಿಹಿಯಾದ ಚಾಕಲೇಟನ್ನು ತಿಂದೇ ಇರಲಿಲ್ಲವೆನಿಸಿತ್ತು. ಮಾಲತಮ್ಮ ಎಲ್ಲವನ್ನೂ ಕಂಡಿದ್ದರೂ ಸುಮ್ಮನಿದ್ದರು. ಆ ಚಿತ್ರದ ಹೊರಾಂಗಣ ಚಿತ್ರೀಕರಣದ ಹೊತ್ತಿಗೆ ಸಹನಾ, ಪವಿತ್ರ ಬಹಳ ಸಲಿಗೆ ಬೆಳೆಸಿಕೊಂಡಿದ್ದರು. ರಾಜೇಂದ್ರ ಪವಿತ್ರನಿಗೆ ಚಾಕಲೇಟು, ಯಾವುದಾದರೊಂದು ಹೂವು ಕೈಗೆ ತಂದಿಡುತ್ತಿದ್ದ. ಆಗಾಗ ಅವಳತ್ತ ಕಣ್ಣು ಹರಿಸಿ ಅವಳ ಕಣ್ಸೆರೆ ಹಿಡಿದು ಮೋಹಕವಾಗಿ ನಗುತ್ತಿದ್ದ.

ಹೊರಾಂಗಣ ಚಿತ್ರೀಕರಣಕ್ಕಾಗಿ ತಂಗಿದ್ದ ಸ್ಥಳದಿಂದ ನಾಲ್ಕು ಫರ್ಲಾಂಗ್ ದೂರದಲ್ಲಿ ಅಮ್ಮನವರ ದೇವಸ್ಥಾನವಿತ್ತು. ಅದನ್ನು ನೋಡಲು ಮಾಲತಮ್ಮ ಇನ್ನಿತರರ ಜೊತೆ ಹೊರಟಾಗ ಪವಿತ್ರ ಹಿಂದುಳಿದಳು. ಅವಳ ಜೊತೆ ಸಹನಾ ಇರುವೆನೆಂದಾಗ ಮಾಲತಮ್ಮ ಧೈರ್ಯವಾಗಿ ಯೂನಿಟ್ಟಿನವರೊಂದಿಗೂ ಇತರ ಸಹ ನಟಿಯರ ಜೊತೆ ಹೊರಟ್ಟಿದ್ದರು. ರಾಜೇಂದ್ರ ಇಳಿದುಕೊಂಡಿದ್ದ ಹೋಟೆಲ ಮುಂದಿನ ಆವರಣದಲ್ಲೇ ಕುರ್ಚಿಯಲ್ಲಿ ಒಬ್ಬನೇ ವ್ಯೆಚಿಲ್ಲಿ ಯೋಚಿಸುತ್ತಾ ಕುಳಿತಿದ್ದ. ಅವನನ್ನು ಕಂಡಾಗ ಪವಿತ್ರಳಿಗೆ ಅವನ ಬಳಿ ಹೋಗಿ ಕುಳಿತು ಅವನ ಏಕಾಕಿತನವನ್ನು ದೂರ ಮಾಡಲಿಚ್ಛಿಸಿದಳು. ಹಾಗೆಯೇ ಅವನನ್ನು ವ್ಯೆಮರೆತು ನೋಡುತ್ತಿದ್ದಾಗ ಅವನೂ ತಿರುಗಿ ಅವಳತ್ತ ನೋಡಿ ನಕ್ಕಿದ್ದ. ಕಣ್ಣಿನಲ್ಲೇ ಕರೆದಿದ್ದ. ಸಹನಾಳತ್ತ ನೋಡಿದಾಗ ಪವಿತ್ರಳ ಕೈ ಜಿಗಟಿದಳು.

'ಹೋಗು, ಕರೀತಾ ಇದ್ದಾರೆ. ನಿನ್ನೇನೂ ತಿಂದು ಹಾಕೋಲ್ಲ !'

ಪವಿತ್ರ ಅಳುಕುತ್ತಲೇ ಅವನ ಬಳಿಗೆ ಬಂದಿದ್ದಳು. ಅದೇತಾನೇ ಸ್ನಾನ ಮಾಡಿದ್ದಳು. ಅವಳ ಮುಖ ಯಾವ ಮೇಕಪ್ಪೂ ಇಲ್ಲದೇ ಶುಭ್ರವಾಗಿತ್ತು. ಅವಳುಟ್ಟಿದ್ದ ಸಾಧಾರಣ ಸೀರೆ ಅವಳ ಸರಳ ಸೌಂದರ್ಯಕ್ಕೆ ಮೆರಗು ನೀಡಿತ್ತು.

'ಬಾ ಪವಿತ್ರ ಕೂತ್ಕೋ ಇಲ್ಲಿ.' ಎಂದು ರಾಜೇಂದ್ರ ಅವಳಿಗೆ ತನ್ನ ಮುಂದಿದ್ದ ಕುರ್ಚಿ ತೋರಿದ್ದ.

ಅವಳು ಕುಳಿತುಕೊಂಡಾಗ ಯಾವ ಮಾತೂ ಆಡದೇ ಅವಳನ್ನೇ

ನೋಡುತ್ತಾ ಕುಳಿತ. ಪವಿತ್ರಳಿಗೆ ಮುಜುಗರವಾಗಿ ಕೇಳಿದಳು.

'ಏನು ಕರೆದದ್ದು ?'

'ಯಾಕೇ ಅಂದರೆ ನನಗೆ ನೀನು ನನ್ನ ಕಣ್ಣೆದುರಿಗೆ ಇರಬೇಕೆಂದಾಸೆ ಅದಕ್ಕೇ !' ಎಂದು ನಕ್ಕಿದ್ದ.

'ನಾನು ಕೊಟ್ಟ ಚಾಕಲೇಟ್ ತಿಂದು ನೀನು ತುಂಬಾ ಸ್ವೀಟ್ ಆಗ್ತಾ ಇದ್ದೀಯಾ !' ಎಂದು ಹೇಳಿದಾಗ ಅವಳಿಗೆ ನಾಚಿಕೆಯೆನಿಸಿತ್ತು.

'ನಾನು ಪ್ರತಿದಿನ ನಿಂಗೆ ಚಾಕಲೇಟ್ ಕೊಡ್ತೀನಿ. ನೀನುಮಾತ್ರ ನಂಗೆ ಏನೂ ಕೊಡೋದೇ ಇಲ್ಲಾ !' ಎಂದಾಗ ಪವಿತ್ರ ತಾನು ತಿನ್ನುತ್ತಿದ್ದ ಕಿತ್ತಲೇ ಹಣ್ಣನ್ನೇ ಅವನ ಕೈಗಿತ್ತಳು.

'ಈ ಹಣ್ಣಿನಷ್ಟೇ ನೀನು ರಸವಾಗಿದ್ದೀಯಾ. ಪವಿತ್ರಾ ನಂಗೆ ನಿನ್ನದೇ ಧ್ಯಾನವಾಗಿಬಿಟ್ಟಿದೆ ಈಚೀಚೆಗೆ ! ಏನು ಮಾಡಲಿ ?' ಎಂದಾಗ ಅವಳಿಗೆ ಭೂಮಿ ಆಗಸವೆರಡೂ ಬೆರೆತುಹೋದಂತಾಗಿತ್ತು.

ಹೋಟಲಿನ ಸಿಬ್ಬಂದಿಗಳು, ಯೂನಿಟ್ಟಿನ ಕೆಲವರೂ ಅಲ್ಲಿಯೇ ಓಡಾಡುತ್ತಿದ್ದರಿಂದ ಅವನು ಅವಳತ್ತ ನೋಡಿ ಮಾತನಾಡುತ್ತಿದ್ದನೇ ಹೊರತು ಅವಳನ್ನು ಸ್ಪರ್ಶಿಸುವ ಸಾಹಸ ಮಾಡಲಿಲ್ಲ.

'ನೀನು ಯಾವ ಪುರುಷನಿಗಾದರೂ ಒಳ್ಳೆಯ ಪತ್ನಿಯಾಗುತ್ತೀ ! ನೀನು ಪವಿತ್ರಳಾಗಿಯೇ ಉಳಿ. ನಿನ್ನ ಹೃದಯ,ಮನಸ್ಸು ಪವಿತ್ರವಾಗಿಯೇ ಉಳಿದಿರಲಿ !' ಎಂದು ಹೇಳಿ ಅವನು ಸರಕ್ಕನೆದ್ದು ಹೊರಟು ಹೋದಾಗ ಪವಿತ್ರಳಿಗೆ ಬೆರಗಾಗಿತ್ತು.

ಆದರೆ ಎಲ್ಲರೂ ದೇವಸ್ಥಾನದಿಂದ ಬಂದಾಗ ಎಲ್ಲರೊಡನೆ ಬೆರೆತು ಮಾತನಾಡಿ ನಗುತ್ತಿದ್ದ ರಾಜೇಂದ್ರ. ಅವಳನ್ನು ಬೇಕಾಗಿಯೇ 'ಪಾಪೂ' 'ಪಾಪೂ' ಎಂದು ಕರೆದು ಹಾಸ್ಯಮಾಡಿದ್ದ.

ಅವನ ಪರಿವೆಯೇ ಅವಳಿಗರ್ಥವಾಗಲಿಲ್ಲ. ಅನಂತರ ಚಿತ್ರದ ರಶಸ್ ನೋಡಿದಾಗ ಡಬ್ಬಿಂಗ್‌ಗಾಗಿ ಬಂದಿದ್ದ ಅವನು ಅವಳ ಪಕ್ಕದಲ್ಲೇ ಕುಳಿತು ಹೇಳಿದ್ದ.

'ಒಳ್ಳೆಯ ಕ್ಯಾರೆಕ್ಟರಿಸ್ಟಿಕ್ ಮುಖವಿದೆ ನಿಂಗೆ. ಒಳ್ಳೆ ತಾರೆಯಾಗುತ್ತೀ !'

ಹಾಗೆಯೇ ಆ ಚಿತ್ರ ಬಿಡುಗಡೆಯಾದಾಗ ಎಲ್ಲರೂ ಅವಳ ಪಾತ್ರವನ್ನು ಮೆಚ್ಚಿದ್ದರು. ಅನೇಕರು ಅವಳಿಗೆ ಪಾತ್ರ ನೀಡಲು ಮುಂದೆ ಬಂದಿದ್ದರು.

ರಾಜೇಂದ್ರನೊಂದಿಗೆ ಮತ್ತೆರಡು ಮೂರು ಚಿತ್ರಗಳಲ್ಲಿ ಅಭಿನಯಿಸಿದ್ದಳು. ಅವ್ಯಾಹತವಾಗಿ ಅವರಿಬ್ಬರ ಸ್ನೇಹ ಆಳವಾಗಿ ಬೇರೂರಿ ಪ್ರೇಮಕ್ಕೆಡೆ ಗೊಟ್ಟಿತ್ತು. ಯಾರೂ ನೋಡದಿದ್ದಾಗ ಅವಳ ಕೈ ಸವರುವುದೋ ಮೇಜಿನ ಕೆಳಗೆ ಅವಳ ಕಾಲುಗಳೊಡನಾಡುವುದೋ, ಅಂಗೈಯನ್ನು ಕೈಯಲ್ಲಿ ಹಿಡಿದು ಮೃದುವಾಗಿ ಅದುಮುವುದೋ ಮಾಡುತ್ತಿದ್ದ ರಾಜೇಂದ್ರ.

ಕೊನೆಗೊಂದು ದಿನ ಶೂಟಿಂಗ್ ನಡೆಯುತ್ತಿದ್ದಾಗ ಆದೇ ತಾನೇ ಡ್ರೆಸ್ ಮಾಡಿಕೊಂಡು ತಯಾರಾಗಿದ್ದ ಪವಿತ್ರಳನ್ನು ಅವನು ಒಂಟಿಯಾಗಿ ಭೇಟಿಯಾಗಿದ್ದು ಪ್ರತಿಮಾ ಸ್ಟುಡಿಯೋದಲ್ಲಿ. ಅವನು ಹಾಕಿದ್ದ ಕಾಸ್ಟ್ಯೂಂ ಕೊಂಚ ಅಳ್ಳಕವಾದುದರಿಂದ ಅದನ್ನು ಸರಿಪಡಿಸಲು ಚಿನ್ನ ವೀರಪ್ಪ ತೆಗೆದುಕೊಂಡು ಹೋದಾಗ ಗ್ರೀನ್ ರೂಮಿನಲ್ಲಿ ಕೊಂಚ ವಿಶ್ರಾಂತಿ ಪಡೆಯಲು ಬಂದಾಗ ಅವನಿಗೆ ಅಲ್ಲಿ ಪವಿತ್ರ ಇರುವುದು ಗೊತ್ತಿರಲಿಲ್ಲ. ಆಕಸ್ಮಿಕವಾಗಿ ಅವಳ ತಾಯಿಯ ನೆರಳಿಲ್ಲದೇ ಅವಳೊಬ್ಬಳೇ ಸಿಕ್ಕಿದ್ದು ಅವನಿಗಚ್ಚರಿ. ಅವಳ ಮೇಕಪ್‌ಮ್ಯಾನ್ ಆಗಿದ್ದ ಅರಸಪ್ಪನ ಕೈಗೆ ಇಪ್ಪತ್ತು ರೂ ಕೊಟ್ಟು ಹೊರಗೆ ಕಳುಹಿಸಿದ್ದ. ಮಾಲತಮ್ಮ ಪ್ರೊಡ್ಯೂಸರ್ ಹಿರಣ್ಯಪ್ಪನವರ ಜೊತೆ ಮಾತುಕತೆ ನಡೆಸಿದ್ದರು. ಗ್ರೀನ್ ರೂಮಿನ ಹೊರಗೆ ಅರಸಪ್ಪನಿಗೆ ಕಾವಲಿರುವಂತೆ ಹೇಳಿ ಬಾಗಿಲು ಮುಂದೆ ಮಾಡಿದ್ದ. ಪವಿತ್ರಳತ್ತ ತಿರುಗಿ ಮೋಹಕವಾಗಿ ನಕ್ಕು ಕೈ ಚಾಚಿದಾಗ ಪವಿತ್ರ ಹಿಂದೆ ಮುಂದೆ ನೋಡದೇ ಅವನ ತೆರೆದ ಬಾಹುಗಳತ್ತ ನಡೆದಿದ್ದಳು. ಬಹಳ ದಿನಗಳಿಂದ ಅದುಮಿಟ್ಟಿದ್ದ ಒಲವು, ಬಯಕೆಗಳು ಹುಚ್ಚೆದ್ದು ಕುಣಿದಿದ್ದವು. ಒಲವಿನ ನಿವೇದನೆಯಾದ ಮೇಲೆ ರಾಜೇಂದ್ರ ಅವಳನ್ನು ಎದೆಗಪ್ಪಿ ಹೇಳಿದ್ದ.

'ಪವಿತ್ರ ನಾನು ನೀನೂ ಎಲ್ಲಾದ್ರೂ ಓಡಿಹೋಗಿಬಿಡೋಣಾ ಬರ್ತೀಯಾ ?'

'ನಿಮ್ಮ ಜೊತೆಗಾದ್ರೆ ನಾನೆಲ್ಲಾದ್ರೂ ಬರ್ತೀನಿ' ಎಂದಿದ್ದಳು.

ಅರಸಪ್ಪ ಬಾಗಿಲು ಬಡಿದು ಎಚ್ಚರಿಕೆ ಕೊಟ್ಟಿದ್ದರಿಂದ ಇಬ್ಬರೂ ದೂರ ಸರಿದಿದ್ದರು.

ಒಳಗೆ ಬಾಗಿಲು ತಳ್ಳಿಕೊಂಡು ಬಂದ ಮಾಲತಮ್ಮ ಅನುಮಾನದಿಂದ ಇಬ್ಬರತ್ತಲೂ ನೋಡಿದ್ದರು. ಅವರಿಗೇನನಿಸಿತೋ ಏನೋ ಚಿತ್ರೀ

ಕರಣ ಮುಗಿಯುವವರೆಗೂ ಪವಿತ್ರಳ ನೆರಳಾಗಿದ್ದರು. ಮನೆಗೆ ಬಂದವರೇ ಪವಿತ್ರಳನ್ನು ತಮ್ಮ ಬಳಿ ಕೂಡಿಸಿಕೊಂಡು ಬುದ್ಧಿ ಹೇಳಿದ್ದರು.

'ಪಾಪೂ, ನಿಂಗಿನ್ನು ಚಿಕ್ಕವಯಸ್ಸು, ಯಾರು ನಿನ್ನ ಹೊಗಳಿದರೂ ಒಳ್ಳೆಯವರು, ಯಾರು ನಿನ್ನ ಮೆಚ್ಚಿಕೊಂಡರೂ ಅವರು ನಿನ್ನ ಪ್ರೀತಿಸು ಸ್ತಾರೆ ಅಂದ್ಕೋತೀ. ಅದೆಲ್ಲಾ ಈಗಲೇ ಬೇಡಾ ಪಾಪೂ. ಮೊದಲು ನಿನ್ನ ಅಭಿನಯದತ್ತ ಗಮನಕೊಡು. ಒಳ್ಳೇ ಹೆಸರು ಮಾಡು. ಹೇರಳ ಸಂಪಾದಿಸು, ಕೀರ್ತಿ, ಯಶಸ್ಸು ಗಳಿಸು. ಅನಂತರ ನೀನು ಯಾವುದಕ್ಕೂ ಅರಿಸಿಕೊಂಡು ಹೋಗಬೇಕಾಗಿಲ್ಲ. ಎಲ್ಲವೂ ನಿನ್ನ ಕಾಲಡಿ ಬಿದ್ದಿರುತ್ತೆ. ಆಗ ನೀನು ಯಾರನ್ನಾದ್ರೂ ಆಳಬಹುದು. ಈಗ ಅದ್ಯಾವುದರ ಗೊಡವೆಗೂ ಹೋಗಬೇಡಾ. ಆ ರಾಜೇಂದ್ರನ್ನ ಮೀರಿಸುವಂತವರು ಸಿಗ್ತಾರೆ.'

ಪವಿತ್ರಳಿಗೆ ತಾಯಿಯ ಮಾತು ರುಚಿಸಲಿಲ್ಲ. ಅವಳ ಮನಸ್ಸು ತಿಳಿದಿದ್ದ ಮಾಲತಮ್ಮ ಯಾವಾಗಲೂ ಎಚ್ಚರದಿಂದಿರತೊಡಗಿದ್ದರು. ಅವಳ ಕನಸಿನಲ್ಲಿ ರಾಜೇಂದ್ರ, ಜಾಗೃತಾವಸ್ಥೆಯಲ್ಲೂ ರಾಜೇಂದ್ರ.

* * *

ಪವಿತ್ರಳಿಗೆ ಎಚ್ಚರವಾದಾಗ ಮಾಲತಮ್ಮ ಎಬ್ಬಿಸುತ್ತಿದ್ದರು.

'ಪಾಪೂ, ಏಳು ಐದೂವರೆಯಾಯಿತು. ಬೇಗ ವ್ಯಾಯಾಮ ಮಾಡಿ ಸ್ನಾನ ಮುಗಿಸಿಬಿಟ್ಟರೆ ರೀಟಾ ಬರುವ ಹೊತ್ತಿಗೆ ಸರಿಯಾಗುತ್ತೆ.'

ಪವಿತ್ರ ಮತ್ತೂ ಮುದುರಿ ಮೃದುವಾದ ಕಂಬಳಿಯಲ್ಲಿ ಮೈ ಹುದುಗಿ ಮಲಗಿದ್ದಳು.

'ಊಂ ...ನಂಗೆ ಇನ್ನೂ ನಿದ್ದೆ. ಆರು ಗಂಟೆಗೆ ಎಬ್ಬಿಸು. ವ್ಯಾಯಾಮ ಮಾಡೋಲ್ಲ ಇವೊತ್ತು.'

ಮಾಲತಮ್ಮ ನಿಟ್ಟುಸಿರಿಟ್ಟರು.

'ಪಾಪೂ, ಪಾಪೂ...ಎಚ್ಚರ ಮಾಡ್ಕೋ. ವ್ಯಾಯಾಮ ಮಾಡ್ದೇ ಇದ್ರೆ ಹೇಗೆ ? ನಿನ್ನ ಫಿಗರ್ ಬಗ್ಗೆ ಎಚ್ಚರವಹಿಸಬೇಡ್ವಾ ? ಸ್ವಿಮ್ ಸೂಟ ನಲ್ಲಿ ಆಗಲೇ ತೊಡೆ ಬಹಳ ದಪ್ಪ ಕಾಣುತ್ತೆ.'

ಪವಿತ್ರ ಕಣ್ಣು ಹೊಸಕುತ್ತಾ ಎದ್ದಳು. ಹೊಟ್ಟೆ ಹಸಿವಿನಿಂದ ಚುರು ಚುರು ಎನ್ನುತಿತ್ತು. ಒಳಗೆ ಅಯ್ಯರ್ ಮಾಡುತ್ತಿದ್ದ ಮೆಂತ್ಯದ

ದೋಸೆಯ ಗಮಗಮ ಮೂಗಿಗೆ ಬಡಿಯಿತು.

'ವ್ಯಾಯಾಮ ಮಾಡೋಕ್ಮುಂಚೆ ಒಂದು ದೋಸೆ, ಒಂದ್ಲೋಟ ಕಾಫಿ ಕೊಡ್ತೀಯಾ ?' ಪವಿತ್ರ ಆಸೆ ತಡೆಯಲಾರದೇ ಕೇಳಿದಾಗ ಮಾಲ ತಮ್ಮನ ಮುಖ ಮೃದುವಾಯಿತು.

'ಬೇಡ್ವೇ ಪಾಪೂ, ಬಾಯಿ ಚಪಲ ನಾಲ್ಕು ದಿನ ಬಿಗಿ ಹಿಡಿ. ತೂಕ ಒಂದೇ ಇರ್ಬೇಕೂಂತ ಬ್ಯೂಟಿಷಿಯನ್ ಮೇಡಂ ಹೇಳಲಿಲ್ವಾ ?' ಪವಿತ್ರಳ ಮುಖ ಕುಂದಿತು. ಮೇಡಂ ರೇವಲ್ ಹೇಳಿದ್ದು ನಿಜ.

ಒಂದು ಕೆ. ಜಿ. ಜಾಸ್ತಿಯಾಯಿತೆಂದರೆ ಮುಖದಲ್ಲಿ ವ್ಯತ್ಯಾಸ ಬಂದುಬಿಡುತ್ತೆ. ತಾನು ಕೊಂಚ ಗ್ಲಾಮರ್ ಕಡಿಮೆ ಮಾಡಿಕೊಂಡರೆ ಸಾಕು ತನ್ನ ಸ್ಥಳವನ್ನಾಕ್ರಮಿಸಿಕೊಳ್ಳಲು ಎಷ್ಟು ಮಂದಿ ಕಾದಿದ್ದಾರೆ. ಆಗಲೇ ರಮ್ಯಳ ಹೊಸ ತಾರೆ, ಜೂನಿಯರ್ ಪವಿತ್ರ ಎಂದೇ ಎಷ್ಟೊ ಮಂದಿ ಹೆಸರಿಸುತ್ತಿದ್ದಾರೆ.

ಮೈಕೊಡವಿ ಎದ್ದು ನಿಂತಳು.

'ಕಾಫಿಯಾದ್ರೂ ಕೊಡ್ತೀಯಾ ?'

'ಬೇಡಾ ಪಾಪೂ, ಕಾಫೀಗೂ ಮೈ ಬರುತ್ತಂತೆ. ಬಿಸಿನೀರಿಗೆ ಜೇನು ತುಪ್ಪ ನಿಂಬೆ ಹಣ್ಣಿನ ರಸ ಹಾಕಿಕೊಡ್ತೀನಿ, ಕುಡಿದುಬಿಡು.'

ಮಾಲತಮ್ಮ ಎದ್ದು ಹೊರಟಾಗ ಪವಿತ್ರ ತನಗೆ ತಾನೇ ನಕ್ಕಳು. ಏನು ಗಳಿಸಿ ಏನು ಸುಖ ? ತಿಂದರೆ ಮೈ ಬರುತ್ತೆ. ಮಲಗಿದರೆ ಬರುತ್ತೆ. ಕೂತರೆ ಕಾಲು ದಪ್ಪ ಆಗುತ್ತೆ !

ಅಷ್ಟರಲ್ಲಿ ಫೋನಿನಕರೆ ಗಂಟೆ ಬಡಿದುಕೊಂಡಿತು. ಪವಿತ್ರ ತೆಗೆದು ಕೊಳ್ಳಲು ಬಗ್ಗಿದಾಗ ತಾಯಿ ಹೇಳಿದ ಮಾತು ಜ್ಞಾಪಕ ಬಂದಿತು.

'ನಿನ್ನ ದನಿ ಈಗ ಎಲ್ಲರಿಗೂ ಗೊತ್ತಾಗಿ ಹೋಗಿದೆ. ಫೋನ್ ರಿಸೀವ್ ಮಾಡ್ಬೇಡ್ವೇ. ನಾವ್ಯಾರಾದ್ರೂ ಮಾತಾಡ್ತೀವಿ !'

ಕರೆಗಂಟೆ ಒಂದೇ ಸಮನೇ ಬಡಿದುಕೊಂಡಾಗ .ಅವಳಿಗೆ ತಲೆ ಚಿಟ ಚಿಟ ಎನಿಸುತಿತ್ತು. ಮನೆಯಲ್ಲಿ ಇನ್ನೂ ಯಾರು ಎದ್ದಿರುವ ಹಾಗೆ ಕಾಣುವುದಿಲ್ಲ. ಅಮ್ಮ ಎಲ್ಲಿ ಹೋದಳೋ ! ಕಿವಿ ಮುಚ್ಚಿ ಕುಳಿತಳು. ಕೊನೆಗೂ ಮಾಲತಮ್ಮ ಬಂದು ಫೋನು ಕೈಗೆತ್ತಿಕೊಂಡಾಗ ಕಿವಿ ಮುಚ್ಚಿದ ಕೈ ತೆಗೆದಳು. ತಾಯಿ ತಂದಿತ್ತಿದ್ದ ನಿಂಬೆ ಹಣ್ಣಿನ ಪಾನಕ ಜೇನುತುಪ್ಪ ನಿಧಾನವಾಗಿ ಒಲ್ಲದ ಮನಸ್ಸಿನಿಂದ ಕುಡಿಯುತ್ತಾ ಕುಳಿತಾಗ

ತಾಯಿ ಮಾತ್ನಾಡುತ್ತಿದ್ದುದರ ಕಡೆಗೂ ಮನಸ್ಸಿತ್ತು.

'ಹಲೋ, ನಾನೇ ಮಾತಾಡ್ತಾ ಇರೋದು. ಎಲ್ಲಿ, ಈಗ ಅವಳು ತುಂಬಾ ಬಿಸಿ. ವಿಪರೀತ ಕಾಲ್‌ಶೀಟ್ಸ್ ಇದೆ. ಆಗಲಿ ನೋಡೋಣ. ನೆನ್ನೆ ತಾನೇ 25 ಸಾವಿರ ಅಡ್ವಾನ್ಸ್ ಕೊಟ್ಟುಹೋಗಿದ್ದಾರೆ. ಹದಿನೈದು ಸಾವಿರಾನೇ ? ಆಗೋಲ್ಲಪ್ಪಾ....ಇಪ್ಪತ್ತೈದರ ಕಡಿಮೆ ಆಗೋಲ್ಲ. ಹೀರೋ ಯಾರು ?'

ಕುಡಿದು ಖಾಲಿ ಮಾಡಿದ ಗ್ಲಾಸನ್ನು ಟೇಬಲ್ಲಿನ ಮೇಲಿಟ್ಟು ವ್ಯಾಯಾಮದತ್ತ ಗಮನ ಹರಿಸಿದರೂ ಕಿವಿ ತಾಯಿಯ ಮಾತುಗಳನ್ನಾಲಿಸುತ್ತಿದ್ದವು.

'ರಾಜೇಂದ್ರ ಬೇಡಾ. ಅವನ ಜೊತೆ ಅವಳು ಮಾಡೋಕೆ ಇಷ್ಟ ಪಡೋಲ್ಲ. 'ಎಲ್ಲರೂ ಬರೀ ರಾಜೇಂದ್ರನ ಹಿರೋಯಿನ್ ಅಂತಾರೆ' ಅಂತಾಳೆ. ಸುನೀಲ್‌ಕುಮಾರ್ ಜೊತೆ ಆಗ್ಲೇ ಒಂದೆರಡು ಆಫರ್ಸ್ ಬಂದಿದೆ. ನೋಡಿ ...ಯೋಚನೆ ಮಾಡಿ. ರಾಜೇಂದ್ರ ಮಾತ್ರ ಬೇಡಾ.'

ಪವಿತ್ರಳ ಹೃದಯದಲ್ಲಿ ಅಮ್ಮನ ಬಗ್ಗೆ ಹೊಗೆಯಾಡಿತು. ತನ್ನ, ರಾಜೇಂದ್ರನ ಸಂಬಂಧವನ್ನು ಕಡಿದು ಹಾಕಲೆಂದೇ ಈ ನಾಟಕ. ಐದು ಸಾವಿರ ಕೊಟ್ಟರೂ ಒಪ್ಪಿಕೊಳ್ಳುತ್ತಿದ್ದ ಅಮ್ಮ ಇಪ್ಪತ್ತೈದು ಸಾವಿರ ಕೇಳಿದ ಕಾರಣ ? ತಾನು ತನಗೆ ಯಾವ ಹೀರೋ ಬೇಕು, ಯಾರೂ ಬೇಡಾ ಅನ್ನುವ ಸ್ಥಿತಿಯಲ್ಲಿರುವೆನೇ ? ಅಮ್ಮನೇಕೆ ಹೀಗಾಡುತ್ತಿದ್ದಾಳೆ.

'ಸಂಜೆ ಬಂದ ಮಾತಾಡಿ. ನಾನು ಎಲ್ಲಾ ವ್ಯವಹಾರಾನೂ ಪವಿತ್ರಾನ ಸೆಕ್ರೆಟರಿ ಮಾಧವ್ ಕೈಗೆ ಬಿಡುವುದು. ಅವರು ಸಂಜೆ ಆರು ಗಂಟೆಗೆ ಸಿಕ್ತಾರೆ. ನಾನು ಹೇಳಿದ ಶರತ್ತು ಒಪ್ಪುವ ಹಾಗಿದ್ದರೆ ಮಾತು ಮುಂದುವರಸಿ. ಇಲ್ಲದಿದ್ರೆ ನಿಮಗೂ ಸಮಯ ಹಾಳು, ನಮಗೂ ಸಮಯ ಹಾಳು.'

ಪವಿತ್ರ ಆಲೋಚಿಸಿದಳು, ಹಿಂದಿನ ದಿನ ದೇವರಾಜ್ ಕೊಟ್ಟಿರುವ ಹಣದ ಪ್ರತಿಕ್ರಿಯೆಯಿದು. ಮಾಧವ್ ಯಾವಾಗ ತನ್ನ ಸೆಕ್ರೆಟರಿಯಾದ ! ಮಾಡುವ ಕೆಲಸವೆಲ್ಲ ತಾಯಿ. ಹೆಸರಿಗೆ ಮಾದೂ, ರಾಜೇಂದ್ರನನ್ನು ಹೇಗಾದರೂ ತನ್ನಿಂದ ದೂರ ಮಾಡಬೇಕೆಂದು ಅಮ್ಮ ಹಟ ತೊಟ್ಟಿರುವ ಹಾಗಿದೆ. ತಾನು ಅವನಿಗೆ ಭಾಷೆಯಿತ್ತಿದ್ದಂತೆ ದೇವರಾಜ್‌ರವರನ್ನು ಹೇಗೆ ಕೇಳುವುದು ? ತನ್ನ ತಾಯಿಯೂ ಅಡ್ಡಿ ಬಂದಳು. ಆದರೆ ಮುಂಗಡ ಹಣ

ತೆಗೆದುಕೊಂಡಿರುವುದರಿಂದ ಅವರು ಹೇಳಿದಂತೆ ಅಮ್ಮ ಕೇಳಲೇಬೇಕಾಗು ತ್ತದೆ. ತಾನೇ ದೇವರಾಜನನ್ನು ರಮಿಸಿ ರಾಜೇಂದ್ರನಿಗೆ ಪಾತ್ರ ನೀಡಲು ಒಪ್ಪಿಸಬೇಕು. ಯಾಂತ್ರಿಕವಾಗಿ ವ್ಯಾಯಾಮ ಸಾಗಿತ್ತು. ವ್ಯಾಯಾಮ ಮುಗಿಸುವ ವೇಳೆಗೆ ರೋಜಿ ಎದ್ದು ಬಂದು ಅವಳಿಗೆ ಮಸಾಜ್ ಮಾಡಿ ಸ್ನಾನ ಮಾಡಿಸಲು ಸಿದ್ಧವಾಗಿ ಬಂದಳು. ಮಸಾಜ್ ಮಾಡುತ್ತಿದ್ದ ರೋಜಿ ಯನ್ನು ಕೇಳಿದಳು.

'ರೋಜಿ ...ನಂಗೊಂದು ಚೂರು ಮೆಂತ್ಯದ ದೋಸೆ ತಂದು ಕೊಡ್ತೀಯಾ ? ತುಂಬಾ ಹಸಿವು. ಬಾಯಿ ಕೆಟ್ಟುಹೋಗಿದೆ.'

'ಅಮ್ಮ ನೋಡಿದ್ರೆ ನನ್ನ ಕೊಂದುಬಿಡ್ತಾಳೆ' ರೋಜಿ ಪಿಸುಗುಟ್ಟಿ ದಳು.

'ಅವಳಿಗೆ ಗೊತ್ತಾಗದಂತೆ ತಂದುಕೊಂಡು. ಒಂದು ದಿನ, ಒಂದು ಹೊತ್ತು ಚೂರು ದೋಸೆ ತಿಂದರೆ ನಾನೇನೂ ದಪ್ಪ ಆಗೋಲ್ಲ.'

ತಂಗಿಯ ಬಯಕೆ ಕಂಡು ರೋಜಿಗೆ ಮನಸ್ಸು ಮುದುಡಿತು. ತಾವೆಲ್ಲಾ ತಿಂದು ತೇಗುವಾಗ ಅರೆಹೊಟ್ಟೆ ಬರಿಯ ಹೊಟ್ಟೆಯಲ್ಲಿರುವ ತಂಗಿಯ ಬಗೆಗೆ ಮನ ಮಿಡಿಯಿತು.

'ನೀನು ಸ್ನಾನ ಮಾಡುವಂತೆ ಬಚ್ಚಲು ಮನೆಗೆ ಹೋಗು. ನಾನು ಮೆಲ್ಲಗೆ ಯಾರಿಗೂ ತಿಳಿಯದಂತೆ ತಂದ್ಕೊಡ್ತೀನಿ.'

ಪವಿತ್ರ ಬಚ್ಚಲು ಮನೆ ಬಾಗಿಲು ಮುಂದೆ ಮಾಡಿ ರೋಜಿಗಾಗಿ ಕಾದು ಕುಳಿತಳು. ಸೆರಗಿನಲ್ಲಿ ಮುಚ್ಚಿ ಎರಡು ದೋಸೆ ಹಿಡಿದು ಬಂದಳು. ರೋಜಿ 'ಬೇಗ ತಿನ್ನು '

'ಒಂದೇ ಸಾಕು ಕಣೇ ರೋಜಿ. ಆಮೇಲೆ ವೈಟ್ ಜಾಸ್ತಿಯಾದ್ರೆ' ಪವಿತ್ರ ಅನುಮಾನಿಸಿದಳು.

'ಒಂದು ತಿಂದ್ರೇನು, ನಾಲ್ಕು ತಿಂದರೇನು ತೂಕ ಹೆಚ್ಚೋ ಸ್ವಭಾವ ಇದ್ರೆ ಆಗೋದೇ ! ಆಸೆ ಪಟ್ಟಿದ್ದೀ ತಿಂದ್ಬಿಡು. ಇನ್ಯಾವ ಕಾಲಕ್ಕೆ ನಿಂಗೆ ಇದು ಸಿಗೋದು.

ಆತುರಾತುರವಾಗಿ ತಿನ್ನುತ್ತಿದ್ದ ತಂಗಿಯನ್ನು ಕಂಡು ರೋಜಿಗೆ ಕಣ್ಣಲ್ಲಿ ನೀರು ಬಂತು.

'ನಿಧಾನವಾಗಿ ತಿನ್ನು. ಯಾರೂ ಬರದ ಹಾಗೆ ನಿಂತಿದ್ದೀನಿ.' ಎರಡು ದೋಸೆ ತಿಂದು ನೀರು ಕುಡಿದಾಗ ಪವಿತ್ರಳ ಜೀವಕ್ಕೆ ಹಿತವೆನಿಸಿತು. ವೈ

ಕೈ ಕವಿದಿದ್ದ ಆಯಾಸ, ಬೇಸರ, ನೀರಸವೆಲ್ಲಾ ಹೋಗಿ ಹೊಸ ಚೈತನ್ಯ ಬಂದಂತಾಯಿತು. ತನಗೆ ಯಾವುದನ್ನಾದರೂ ಎದುರಿಸುವ ಶಕ್ತಿಯಿದೆ ಎಂದೆನ್ನಿಸಿತು. ಸ್ನಾನ ಮಾಡಿಸುತ್ತಿದ್ದ ರೋಜಿಗೆ ಹೇಳಿದಳು.

'ರೋಜೀ ರಾಜೇಂದ್ರನ್ನ, ನನ್ನಿಂದ ದೂರ ಮಾಡ್ಬೇಕೊಂತ ಅಮ್ಮ ತುಂಬಾ ಪ್ರಯತ್ನ ಪಡ್ತಾ ಇದ್ದಾಳೆ. ಅವನನ್ನು ಕಂಡರೆ ನನಗೆ ಪ್ರಾಣ. ಅವನಿಲ್ಲದೇ ನಾನು ಹೇಗೆ ಬದುಕಲಿ?'

'ಪಾಪೂ. ನಿಂಗೆ ಬುದ್ಧಿ ಇಲ್ಲಾ ಅನ್ನೋದು ಅದಕ್ಕೆ. ಕಣ್ಣಿಗೆ ಎಣ್ಣೆ ಬಂದಾಗ ಕಣ್ಣು ಮುಚ್ಕೋಬೇಕಮ್ಮಾ. ರಾಜೇಂದ್ರ ಎಷ್ಟು ಒಳ್ಳೆಯವ ನಾದರೂ ಅವನು ಮದುವೆಯಾಗಿರೋನು. ನೀನು ಅವನ್ನ ನಂಬ್ಕೊಂಡ್ರೆ ಆಗುತ್ತಾ? ಒಳ್ಳೆ ಚಾನ್ಸು ಬರ್‍ತಾ ಇದೆ. ಹಣ, ಹೆಸರು ಮಾಡ್ಕೋ. ಅವನ ಹಿಂದೆ ಬಿದ್ದು ಯಾಕೆ ಬದುಕು ಹಾಳು ಮಾಡ್ಕೋತಿ?"

ರೋಜೀ ಹೇಳಿದಾಗ ಪವಿತ್ರ ಅಕ್ಕನ ಮುಖ ನೋಡಿದಳು. ಯಾಕೊ ಇವಳು ತಾಯಿಯ ಹಾಗಾಗ್ಬಿಟ್ಟಳು. ಇವರಿಗೇನು ಗೊತ್ತು ಪ್ರೇಮ, ಒಲವಿನ ಬೆಲೆ!

'ನಂಗೆ ಹಣ, ಹೆಸರಿಗಿಂತ ನನ್ನ ಒಲವು ಮುಖ್ಯಾನೇ ರೋಜಿ. ಅವನು ಹೆಂಡತೀನ್ನ ಡೈವೋರ್ಸ್ ಮಾಡಿಬಿಟ್ಟು ನನ್ನ ಮದುವೆ ಮಾಡ್ಕೋ ತಾನಂತೆ.'

'ಕೈಹಿಡಿದ ಹೆಂಡತೀನ ವಿನಾ ಕಾರಣ ಡೈವೋರ್ಸ್ ಮಾಡಲು ತಯಾರಾಗಿರೋನು ನಾಳೆ ನಿನಗಿಂತ ಚೆನ್ನಾಗಿರೋ ಹುಡುಗಿ ಸಿಕ್ಕರೆ ನಿನ್ನ ಡೈವೋರ್ಸ್ ಮಾಡಿ ಅವಳ್ನ ಕಟ್ಕೊಳ್ಳೊಲ್ಲಾನ್ನೋದು ಏನು ಗ್ಯಾರಂಟಿ?'

ರೋಜಿಯ ಮಾತು ಕ್ಷಣಕಾಲ ನಿಜವೆನಿಸಿತ್ತು. ಆದರೂ ರಾಜಾ, ರಾಜೇಂದ್ರ ಅವನು ಅಂತಹವನಲ್ಲ. ಅವನಪ್ಪುಗೆಯಲ್ಲಿ, ಅವನ ಚುಂಬನ ದಲ್ಲಿ ಯಾವ ಮೋಸವೂ ಇಲ್ಲ. ಅವನೆಂದೂ ತನಗೆ ದ್ರೋಹ ಬಗೆಯುವು ದಿಲ್ಲ. ಅವನು ದ್ರೋಹವೆಸಗದಂತೆ ತಾನು ನೋಡಿಕೊಳ್ಳಬಹುದು.

'ರೋಜಿ, ನಂಗೊಂದು ಉಪಕಾರ ಮಾಡ್ತೀಯಾ?' ಎಂದು ಪವಿತ್ರ ಕೇಳಿದಾಗ ರೋಜಿ ಅವಳ ಬೆನ್ನುಜ್ಜುತ್ತಾ ಹೇಳಿದಳು.

'ನನಗಿಂತ ಲಲ್ಲಿನ ಕೇಳು. ಅವಳಿಗೊಂದು ಬಣ್ಣದ ಸೀರೆ, ಒಂದಿಷ್ಟು ಕೈಗೆ ಹಣ ಕೊಡೋಹಾಗಿದ್ರೆ ಏನು ಬೇಕಾದ್ರೂ ಮಾಡ್ತಾಳೆ. ಅಮ್ಮ ಅವಳನ್ನು ಅಷ್ಟು ತನಿಖೆ ಮಾಡೋಲ್ಲ. ನಾನು ಏನು ಮಾಡಿದ್ರೂ ನಿನ್ನ

ಜೊತೆ ನಾನೇ ಹೆಚ್ಚು ಇರೋದ್ರಿಂದ ಅಮ್ಮ ನನ್ನ ಕಂಡ್ರೆ ಅನುಮಾನ ಪಡ್ತಾಳೆ.'

ಪವಿತ್ರನಿಗೂ ಅದೇ ಸರಿಯೆನಿಸಿತು. ಲಲ್ಲೀ ಚತುರೆ. ರೋಜಿಗಿಂತ ಬುದ್ಧಿವಂತಳು. ಯಾವ ಕಾರ್ಯ ಮಾಡಬೇಕಾದರೂ ಸ್ವಂತ ಬುದ್ಧಿ ಖರ್ಚು ಮಾಡಿಕೊಂಡು ಹೇಗೋ ಅಂತೂ ಕಾರ್ಯ ಸಾಧಿಸುತ್ತಿದ್ದಳು.

'ರೋಜಿ, ನಾನು ಡ್ರೆಸ್ ಮಾಡ್ಕೋತಾ ಇರ್ತೀನಿ. ಲಲ್ಲಿನ ಇಲ್ಲಿಗೆ ಏನಾದ್ರೂ ನೆವದಿಂದ ಕಳಿಸಿಕೊಡು.'

ರೋಜಿ ಆಗಲೆಂದು ಸಮ್ಮತಿಸಿದಳು. ಮಾಲತಮ್ಮ ಶೂಟಿಂಗಿಗೆ ಹೋಗುವ ಮುನ್ನ ಪವಿತ್ರಳಿಗಾಗಿ ತೆಗೆದುಕೊಂಡು ಹೋಗಬೇಕಾದ ವಸ್ತುಗಳನ್ನು ಪರಿಶೀಲಿಸುತ್ತಿದ್ದಳು.

'ಅಮ್ಮಾ ಲಲ್ಲಿ ಎಲ್ಲಿ? ಸ್ವಲ್ಪ ಪಾಪೂಗೆ ಸಹಾಯ ಮಾಡ್ಬಾರ್ದಾ ಅವಳು? ಅವಳ ತಲೆ ಒರೆಸು ಬಾ ಅನ್ನು. ರೀಟಾ ಈಗ ಬಂದ್ಬಿಡ್ತಾಳೆ.'

ಆ ಕೇಳಿಸುತ್ತಾ ಅಂದಿನ ಪೇಪರ್ ಓದುತ್ತಿದ್ದ ಲಲಿತ ಅಕ್ಕನತ್ತ ನೋಡಿದಳು. ಇದೇನು ಇಂದು ಹೊಸ ಪರಿ?

'ಹೋಗೇ ಲಲ್ಲೀ. ಅವಳ ತಲೇಂತೆ ಒರೆಸು ಹೋಗು' ಮಾಲತಮ್ಮ ಹೇಳುತ್ತಲೇ ಲಲ್ಲಿ ಮೈಮುರಿದು ಎದ್ದಳು.

ಪವಿತ್ರ ಲಲಿತಳ ಕೈಗೆ ತನ್ನ ತಿಳಿಹಸಿರು ಬಣ್ಣದ ಶಿಫಾನ್ ಸೀರೆಯಿತ್ತಳು. ಪರ್ಸಿನಲ್ಲಿ ಒಂದುವಾರದ ಕೆಳಗೆ ರೀಟಾಗೆ ಕೊಡಬೇಕಾಗಿದ್ದ ಹಣಕೊಟ್ಟು ಉಳಿದ ಐವತ್ತು ರೂಗಳನ್ನು ಕೊಟ್ಟಳು.

'ಲಲ್ಲೀ, ನಂಗೊಂದು ಉಪಕಾರ ಮಾಡ್ತೀಯಾ? ಪ್ಲೀಸ್ ರಾಜೇಂದ್ರನ ಮನೆಗೆ ಹೋಗಿ ಇವೊತ್ತು ಗಾಯತ್ರಿ ಸ್ಟುಡಿಯೋನಲ್ಲಿ ಲಂಚ್ ಟೈಂಗೆ ಬರೋಕೆ ಹೇಳಿ ಬರ್ತೀಯಾ? ನೀನು ಯಾರೂಂದ್ರೆ ನನ್ನ ಅಕ್ಕಾಂತ ಹೇಳು. ಅವರೇನೂ ತಪ್ಪು ತಿಳ್ಕೋಳಲ್ಲ. ಅಮ್ಮಂಗೆ ಒಂದು ಚೂರು ಸುಳಿವು ಕೊಡಬಾರದು. ದುಡ್ನಲ್ಲಿ ನಿಂಗೇನು ಬೇಕೋ ನೀನು ತೋಗೋ.'

ಲಲ್ಲಿಗೆ ಬಹಳ ಸಂತಸವೇ ಆಯಿತು. 'ಖಂಡಿತ ಮಾಡ್ತೀನಿ. ನಿರ್ಯೋಚನೆಯಿಂದಿರು ಪಾಪೂ.'

ರೀಟಾ ಬಂದಿದ್ದರಿಂದ ಮಾತು ಅಲ್ಲಿಗೇ ಮುಗಿಯಿತು. ಕೂದಲನ್ನು ನಯವಾಗಿ ಬಾಚಿ, ಸಣ್ಣ ಸಣ್ಣ ಭಾಗಗಳಾಗಿ ಬೇರ್ಪಡಿಸಿ ಕರ್ಲರ್ಸ್ ಹಾಕಿ

ಕೂದಲಿನ ಶೃಂಗಾರಕ್ಕೆ ರೀಟಾ ಸಜ್ಜುಗೊಳಿಸುವ ಹೊತ್ತಿಗೆ ಮಾಲತಮ್ಮ ಬಂದರು.

'ಪಾಪ್ಪೂ, ದೇವರಾಜ್ ನಿಂಗೇಂತ ಎಷ್ಟು ಸೀರೆ ಕಳ್ಸಿದ್ದಾರೆ ಗೊತ್ತಾ? ಒಂದೊಂದು ಒಂದೊಂದು ತರಹ ಚೆನ್ನಾಗಿದೆ. ನಿನ್ನ ನೋಡೋಕೆ ರಾತ್ರಿ ಎಂಟು ಗಂಟೆಗೆ ಬರ್ತ್ತಾರಂತೆ. ನೀನೇನಾದ್ರೂ ಹೇಳಿ ಬೇಗ ಡಬ್ಬಿಂಗ್ ಮುಗಿಸಿಕೊಳ್ಳಬೇಕು.'

ರಾತ್ರಿಯೇಕೆ ಬರಬೇಕು. ತನಗೆ ಶೂಟಿಂಗ್ ಮುಗಿಸಿ ಬಂದಿರುವುದ ರಿಂದ ಸಾಕಾಗಿರುವುದಿಲ್ಲವೇ ? ಮಾಲತಮ್ಮ ಸೀರೆಗಳನ್ನು ತಂದು ಪವಿತ್ರಳ ಮುಂದಿಟ್ಟಾಗ ಪವಿತ್ರ ಅದರ ಬಗ್ಗೆ ಆಸಕ್ತಿ ತೋರಲಿಲ್ಲ.

'ನಾನು ಈ ಸೀರೆಯೆಲ್ಲಾ ಯಾವಾಗ ಉಡುವುದು ! ಬೆಳಗಿನಿಂದ ರಾತ್ರಿಯವರೆಗೆ ಚಿತ್ರಗಳಿಗೆ ತಕ್ಕಂತೆ ಉಡುಪು. ರಾತ್ರಿ ಬಂದ ಮೇಲೆ ಮಲಗಿದರೆ ಸಾಕಾಗಿರುತ್ತೆ. ಇನ್ನು ಇವುಗಳ್ನ ಯಾವಾಗ ಉಟ್ಕೊಂಡು ಮೆರೀಲಿ ?'

'ಹಾಗೆ ಹೇಳ್ಬೇಡಾ ಪಾಪ್ಪೂ, ದೇರ್ ಈಸ್ ನೋ ಬಿಸಿನೆಸ್ ಲೈಕ್ ಷೋ ಬಿಸಿನೆಸ್. ನಾಳೆ ಪೇಪರ್, ಮ್ಯಾಗಜೀನ್‌ಗಳಲ್ಲಿ ನಿನ್ನ ಚಿತ್ರಗಳು ಬಂದಾಗ ಈ ಸೀರೆಗಳುಟ್ಟಿದ್ದ ಚಿತ್ರಗಳಾದರೆ ಚೆನ್ನ. ನೂರಾರು ಜನ ಪೇಪರಿನೋರು, ಮ್ಯಾಗ್‌ಜೈನ್‌ರವರು ನಿನ್ನ ಸಂದರ್ಶನಕ್ಕೆ ಬರ್‍ತಾರೆ. ಆಕಸ್ಮಾತ್ ನೀನು ಯಾವುದಾದರೂ ಫಂಕ್ಷನ್‌ಗೆ ಹೋಗಬೇಕಾಗಿ ಬರು ತ್ತೇಂತ ಇಟ್ಕೋ. ಆಗ ಬೇಕಾಗುತ್ತೆ' ರೀಟಾ ಹೇಳಿದಳು.

ಆದರೆ ಈ ಸೀರೆಗಳನ್ನುಟ್ಟು ರಾಜೇಂದ್ರನ ಮುಂದೆ ನಿಲ್ಲುವುದಾದರೆ ತನ್ನನ್ನು ನೋಡಿ ಹಿಗ್ಗುವನು. ಅವನು ಹಿಗ್ಗಿದಾಗ ತನಗೂ ಹಿಗ್ಗು

'ರಾತ್ರಿ ದೇವರಾಜ್‌ರವರು ಬರುವಾಗ ನೀನು ಈ ಕಡಲ ನೀಲಿ ಸೀರೆ ಉಟ್ಕೋ. ಈ ಕಲರ್ ನಿಂಗೆ ತುಂಬಾ ಚೆನ್ನಾಗಿ ಒಪ್ಪುತ್ತೆ.' ಮಾಲತಮ್ಮ ಹೇಳಿದಾಗ ಪವಿತ್ರ ನಕ್ಕಳು.

'ಅಮ್ಮಾ ನೀನೇ ನಂಗಿಂತ ಒಳ್ಳೆ ತಾರೆಯಾಗ್ತಾ ಇದ್ದೀ, ಸಮಯ ಸಿಕ್ಕಿದ್ರೆ.'

'ಸಾಕು ಹುಡುಗಾಟ. ಬೇಗ ಡ್ರೆಸ್ ಮಾಡೂ ರೀಟಾ' ಮಾಲ ತಮ್ಮ ಮೆಲ್ಲನೇ ಅಲ್ಲಿಂದ ದೂರ ಸರಿದರು.

ಒಳಗೆ ಬಂದ ರೋಜಿ ಪವಿತ್ರಳ ಕಣ್ಸೆರೆ ಹಿಡಿದು ನಕ್ಕಳು.

'ಆಯ್ತಮ್ಮ ಪಾಪೂ, ನಿನ್ನ ಕೆಲ್ಸ ?'

'ಓಹೋ, ತಿಳಿಹಸಿರು ಷಿಫಾನ್ ಸೀರೆ' ಅರವತ್ತು ಚಿಲ್ರೆ ಹಣ.... ಅಷ್ಟೇ' ಪವಿತ್ರ ಹೇಳಿದಾಗ ರೋಜಿ ನಸುನಕ್ಕಳು.

'ಏನಿದ್ರೂ ರಿಸಲ್ಟ್ ಲಂಚ್ ಟೈಮಿಗೆ ಗೊತ್ತಾಗೋದೂ.'

ಕೊನೆಗೆ ಶೂಟಿಂಗಿಗೆ ಕರೆದೊಯ್ಯಲು ಯೂನಿಟ್ಟಿನ ಕಾರು ಬಂದಾಗ ಪವಿತ್ರ ಲಲ್ಲಿಯ ಹತ್ತಿರ ಬಂದು ಪಿಸುಗುಟ್ಟಿದಳು.

'ಲಲ್ಲಿ ಹುಷಾರು, ಮನೇಲೇ ಸಿಕ್ತಾರೆ. ಇವೊತ್ತು ಅವರು ಫ್ರೀಯಾಗಿರ್ತಾರಂತೆ, ಮಧ್ಯಾಹ್ನದವರೆಗೆ.'

'ಏನೇ ಅದೂ ಪಾಪೂ ?'

ಮಾಲತಮ್ಮನಿಗೆ ಅನುಮಾನ.

'ಏನಿಲ್ಲಮ್ಮಾ ಸೀರೆಗಳೆಲ್ಲಾ ಸರಿಯಾಗಿ ತೆಗೆದಿಡೂಂತ ಹೇಳ್ತಾ ಇದ್ದೆ.'

ಳಗೇನು ಹೇಳೋದೂ. ನಾನೇ ತೆಗೆದು ಒಳಗಿಟ್ಟಿದ್ದೀನಿ' ಮಾಲತಮ್ಮ ಹೇಳಿದಾಗ ಪವಿತ್ರ ನಾಲಿಗೆ ಕಚ್ಚಿಕೊಂಡಳು. ಅಮ್ಮ ಅಯ್ಯರ್‌ಗೆ ಹೇಳುತ್ತಿದ್ದಳು.

'ದೇವರಾಜ್ ಬರ್ತಾರೆ. ಏನಾದ್ರೂ ವಿಶೇಷವಾಗಿ ತಿನ್ನೋಕೆ ಮಾಡಿರ್ಲಿ. ನಾನು ಲಂಚ್ ಬ್ರೇಕ್ನಲ್ಲಿ ಬಂದು ಎಲ್ಲಾ ಸಾಮಾನು ಕೊಟ್ಟು ಬರ್ತೀನಿ. ನಿಂಗೆ ಯಾಕೆ ಅದರ ಯೋಚನೆ ಬಿಡು.'

ಮಾಲತಮ್ಮನಿಗೆ ಒಳಗೇ ಸಂತಸ. ಕೊನೆಗೂ ಪವಿತ್ರ ತನ್ನ ದಾರಿಗೆ ಬರುತ್ತಿದ್ದಾಳೆ. ಪವಿತ್ರಳಿಗೆ ಲಂಚ್ ಬ್ರೇಕ್ನಲ್ಲಿ ತಾಯಿ ಹೊರಗೆ ಹೋಗುವುದು ಸಂತಸದ ಸಂಗತಿ.

'ಹೌದಮ್ಮಾ, ನೀನು ಮನೇಲೇ ಇದ್ದು ಏನಾದ್ರೂ ಮಾಡಿಸು. ರೋಜೀನ್ನ ಕಳಿಸು ಮಧ್ಯಾಹ್ನ ನನ್ನ ಜೊತೆ ಇರ್ತಾಳೆ.'

'ಆಗ್ಲಿ, ಅದ್ನ ಆಮೇಲೆ ಯೋಚಿಸ್ತೀನಿ' ಮಾಲತಮ್ಮ ಹೇಳಿದರು.

ಕಾರು ಸ್ಟುಡಿಯೋ ತಲುಪಿದಾಗ ಹೊರ ಆವರಣದಲ್ಲೇ ಹೊಸದೊಂದು ಕಾರು ನಿಂತಿತ್ತು. ಮೇಕಪ್ಪಿನ ಅರಸಪ್ಪ ಮಾಲತಮ್ಮನ ಕಿವಿಯಲ್ಲಿ ಉಸುರಿದ.

'ಸುನೀಲ್ ಕುಮಾರ್ ಬಂದಿದ್ದಾರೆ. ಅದೇನೋ ಡೈರೆಕ್ಟರ್ ಜೊತೆ ಮಾತಾಡ್ತಾ ಇದ್ದಾರೆ. ಷಣ್ಮುಗಂ, ರವೀಂದ್ರನಾಥ್ ಕೂಡ ಬಂದಿದ್ದಾರೆ.

ನಮ್ಮ ಚಿಕ್ಕಮ್ಮಾವ್ರನ್ನ ನೋಡೋಕೇ ಇರಬೇಕು.'

ಸುನೀಲ್ ಕುಮಾರ್ ಈಗ ಬಹಳ ಬೇಡಿಕೆಯುಲ್ಲಿರುವ ನಟ. ತನ್ನನ್ನು ನೋಡಲು ಬಂದಿರುವುದೇ ? ಅದೇಕೋ ಪವಿತ್ರಳಿಗೆ ಅದು ಸರಿಬರಲಿಲ್ಲ. ಅನುಮಾನಿಸುತ್ತಲೇ ಒಳಗೆ ನಡೆದಾಗ ಅಸಿಸ್ಟೆಂಟ್ ಡೈರೆಕ್ಟರ್, ಮ್ಯಾನೇಜರ್ ಅವಳ ಬಳಿಗೆ ಬಂದರು.

'ನಿಮ್ಮನ್ನ ಸುನೀಲ್ ಕುಮಾರ್ ನೋಡೋಕೆ ಬಂದಿದ್ದಾರೆ, ಕರೀತಾ ಇದ್ದಾರೆ.'

'ಯಾಕಂತೆ ?' ಪವಿತ್ರ ಕೇಳಿದಾಗ ಯಾರೂ ಉತ್ತರಿಸಲಿಲ್ಲ.

ಅನುಮಾನಿಸುತ್ತಲೇ ತಾಯಿಯ ಮುಖ ನೋಡಿದಳು. ಹೋಗು ವಂತೆ ಕಣ್ಣಿನಲ್ಲೇ ಸಂಜ್ಞೆ ಮಾಡಿದರು ಮಾಲತಮ್ಮ. ಅಸಮಾಧಾನದಿಂದಲೇ ಪವಿತ್ರ ಎರಡನೇ ಫ್ಲೋರಿನ ಸೆಟ್ಟಿನತ್ತ ನಡೆದಳು. ಮಾಲತಮ್ಮ ನಿಧಾನ ವಾಗಿ ಅವಳನ್ನು ಹಿಂಬಾಲಿಸಿದರು.

ಅವಳು ಮೊದಲು ಕಂಡ ವ್ಯಕ್ತಿ ಖ್ಯಾತ ನಿರ್ದೇಶಕ ಸತ್ಯಕಾಮ್. ಅವನ ಧೀರ ಗಂಭೀರ ವ್ಯಕ್ತಿತ್ವ ಕಾಣುತ್ತಲೇ ಪವಿತ್ರಳಿಗೆ ಬಾಯಿಕಟ್ಟಿ ದಂತಾಯಿತು. ಅವರ ನೇರವಾದ ದಿಟ್ಟನೋಟವನ್ನು ಎದುರಿಸಲಾರದೇ ಅವಳೇ ತಲೆತಗ್ಗಿಸಿದಳು. ಇವರೇಕೆ ಇಲ್ಲಿ ಬಂದಿರುವರು ? ಅವರ ಹಿಂದೆಯೇ ನಿಂತಿದ್ದ ಸಿನಿಮಾಟೋಗ್ರಾಫರ್ ಕಾಮಿಸ್ಕಣಿ ಅವರ ಕಿವಿಯಲ್ಲುಸುರಿದರು.

'ಅವಳೇ ಸಾರ್ ಪವಿತ್ರ !'

ಸತ್ಯಕಾಮ್‌ರವರ ಮುಖದಲ್ಲಿ ಅಚ್ಚರಿ ಮೂಡಿ ಕಣ್ಣುಗಳು ತೀಕ್ಷ್ಣ ವಾದುವು.

'ಬನ್ನಿ, ಬನ್ನಿ, ಪವಿತ್ರ. ನಿಮಗೋಸ್ಕರಾನೇ ಕಾಯ್ತಾ ಇದ್ವಿ !' ಪ್ರೊಡ್ಯೂಸರ್ ಗಂಗಾಧರಯ್ಯನವರೇ ಬಂದು ಕರೆದರು.

ಪವಿತ್ರ ನಿರ್ವಿಕಾರಳಾಗಿ ಕೈಮುಗಿದಳು. ಅದೇಕೋ ಎಷ್ಟು ಪ್ರಯತ್ನಪಟ್ಟರೂ ಮುಗುಳ್ನಗು ಮೂಡಿಬರದೆ ಮುಖ ಗಂಭೀರವಾಗಿಯೇ ಉಳಿಯಿತು. ಮಾಲತಮ್ಮನೇ ನಗುನಗುತ್ತಾ ಎಲ್ಲರಿಗೂ ಕೈ ಮುಗಿದರು.

'ಇವರು ಪವಿತ್ರರವರ ತಾಯಿ'ಗಂಗಾಧರಯ್ಯ ಸತ್ಯಕಾಮ್‌ರವರಿಗೂ ಕಾಮಿಸ್ಕಣಿಯವರಿಗೂ ಪರಿಚಯ ಮಾಡಿಕೊಟ್ಟರು.

'ಇಲ್ಲೇ ಬರ್‍ರಿ...ಇಲ್ಲೇ ಕೂಡ್ರಿ. ನನ್ನ ಮಾತು ಖರೇ ಆತು ನೋಡ್ರೀ...ಈಕೀನೇ ಅಗ್ಬೇಕೊಂತೇಳಿ ನಾನು ತಾಕೀತು ಮಾಡಿದ್ದೇರಿ...

ಛಲೋ ಆತು ಆಕೀನೆ ಬಂದದ್ದು !' ಸಹ ಪ್ರೊಡ್ಯೂಸರ್ ಆದ ಜಮ ಖಂಡಿ ಪವಿತ್ರಳತ್ತ ನೋಡಿ ನಕ್ಕರು.

ಅವರ ಸ್ನೇಹಮಯ ಸ್ವಭಾವವೆಂದರೆ ಮೊದಲಿನಿಂದಲೂ ಪವಿತ್ರಳಿಗೆ ಒಂದು ಬಗೆಯ ಆದರ. ಎಲ್ಲ ಹಣ ಹೂಡುವವರೊಂದಿಗೆ ತಮ್ಮ ಹಣ ಹೂಡಿ ಚಿತ್ರಗಳನ್ನು ತಯಾರಿಸಿ ಗಳಿಸಿದ್ದಕ್ಕಿಂತ ಕಳೆದುಕೊಂಡದ್ದೇ ಹೆಚ್ಚೆನ್ನಬಹುದು. ಆದರೂ ಮನುಷ್ಯ ನಗ-ನಗುತ್ತಲೇ ಎಲ್ಲರೊಂದಿಗೂ ಬೆರೆಯುತ್ತಿದ್ದರು ಯಾರೊಂದಿಗೂ ಹೂಡಿದ ಹಣ ಕಳೆಯಿತೆಂದು ದುಃಖ ತೋಡಿಕೊಂಡವರಲ್ಲ. ಗಳಿಸಿದಾಗ ಬಂತೆಂದು ಹಿಗ್ಗಿದವರಲ್ಲ. ಪವಿತ್ರ ಅವರತ್ತ ನೋಡಿ ನಕ್ಕಾಗ ಸತ್ಯಕಾಮ್ ಕಾಯ್ಕಿಣಿಯವರ ಕಿವಿ ಯಲ್ಲಿ ಉಸುರಿದರು.

'ಫೇಸ್ ತುಂಬಾ ಇಮ್ಮೊಬೈಲ್ ಅಂದುಕೊಂಡಿದ್ದೆ. ಷೀ ಕ್ಯಾನ್ ಸ್ಮೈಲ್ ! ಅವಳ ಮುಖದ ಬೆಸ್ಟ್ ಪಾರ್ಟ್ ಎಂದರೆ ಅವಳ ಕಣ್ಣುಗಳು. ಸುಲಭವಾಗಿ ಅವಳ ಭಾವನೆಗಳನ್ನು ಅಭಿವ್ಯಕ್ತಪಡಿಸುತ್ತವೆ. ಅದಕ್ಕೆ ನೆಕ್ಸ್ಟ್ ಅಂದರೆ ಸೆನ್ಸಿಟಿವ್ ಮೂಗು ಮತ್ತು ಬಾಯಿ. ದಿ ರೆಸ್ಟ್ ವಿಕ್ಯಾನ್ ಸ್ಟಫ್ ಇಟ್ !'

'ಹೌದು ಸರ್, ಅದಕ್ಕೇ ನಾನು ಹೇಳಿದ್ದು. ಸುನೀಲ್‌ಕುಮಾರ್‌ನ ಟ್ರಂಪ್ ಇಟ್ಕೊಂಡ ಮೇಲೆ ಇವಳ ರೋಲ್ಸ್ ಸ್ವಲ್ಪ ಬ್ರೈಟ್ ಆಗಿದ್ರೂ ಆಯ್ತು ಬಿಡಿ.' ಕಾಯ್ಕಿಣಿಯವರು ಹೇಳಿದರು.

'ನಾನೂ, ನೀವು ಒಪ್ಪಿದರೆ ಆಗಲಿಲ್ಲ. ನಮ್ಮ ಹೀರೋ ಒಪ್ಪ ಬೇಕಲ್ಲ.' ಸತ್ಯಕಾಮ್‌ರವರ ಗಮನವೆಲ್ಲ ಗಂಗಾಧರಯ್ಯ, ಜಮಖಂಡಿ ಯವರ ಜೊತೆ ಕುಳಿತು ಮಾತನಾಡುತ್ತಿದ್ದ ಪವಿತ್ರಳ ಮುಖಭಾವದತ್ತ ಇತ್ತು.

'ಅವರ್ನ ಕರೀತೀನಿ ಬಂದು ನೋಡ್ಲಿ !

ಕಾಯ್ಕಿಣಿ ಗ್ರೀನ್ ರೂಮಿನತ್ತ ಹೆಜ್ಜೆ ಹಾಕಿದರು. ಸತ್ಯಕಾಮ್ ನಿಧಾನವಾಗಿ ಪವಿತ್ರಳತ್ತ ಬಂದರು ಕೊನೆಗಣ್ಣಿನಿಂದಲೇ ಅವರನ್ನು ಗಮನಿ ಸಿದ್ದ ಪವಿತ್ರಳಿಗೆ ಒಳಗೇ ನಡುಕ ಸತ್ಯಕಾಮ್ ಖ್ಯಾತ ನಿರ್ದೇಶಕರು, ಅವರು ಅನೇಕ ನಟ ನಟಿಯರ ರೂವಾರಿ. ಅವರ ಮೂಸೆಗೆ ಸಿಕ್ಕ ಕಬ್ಬಿಣವೂ ಚಿನ್ನವಾಗುತಿತ್ತು. ಆದರೆ ಮನುಷ್ಯ ಬಹಳ ಶಿಸ್ತಿನ, ಮುಂಗೋಪದ ಪ್ರತೀಕವೆಂದು ಕೇಳಿದ್ದಳು. ತನ್ನನ್ನೇ ಗಮನಿಸುತ್ತಿದ್ದ ಅವರನ್ನು ಕಂಡು

ಅವಳಿಗೆ ಅಳುಕುಂಟಾಗಿತ್ತು. ತನ್ನ ಬಳಿಗೆ ಬಂದು ಎದುರಿಗೆ ಕುರ್ಚಿಯೊಂದನ್ನು ಎಳೆದುಕೊಂಡು ಕುಳಿತಾಗ ಪವಿತ್ರ ಅವರತ್ತ ನೋಡುವ ಸಾಹಸ ಮಾಡಲಿಲ್ಲ. ಹಿಂದೆಯೇ ಕುಳಿತಿದ್ದ ಮಾಲತಮ್ಮ ಅವಳ ಸೊಂಟ ಜಿಗಟಿದರು.

'ನಿನ್ನ ಹೆಸರೇನು ?' ಸತ್ಯಕಾಮ್ ಕೇಳಿದಾಗ ಪವಿತ್ರ ತಬ್ಬಿಬ್ಬಾದಳು. ತಡವರಿಸಿ ಉತ್ತರಿಸಿದಳು. 'ಪವಿತ್ರ.'

'ನಾನು ಕೇಳಿದ್ದು ನಿಜವಾದ ಹೆಸರು!' ಸತ್ಯಕಾಮ್ ಗಂಭೀರವಾಗಿಯೇ ಕೇಳಿದರು.

'ಅದೇ ನನ್ನ ನಿಜವಾದ ಹೆಸರು. ಮುದ್ದಿಗೆ 'ಪಾಪೂ' ಅಂತಾರೆ! ಎಂದಾಗ ಸತ್ಯಕಾಮ್ ಮೊದಲ ಬಾರಿಗೆ ನಸುನಕ್ಕರು.

'ನಾಮಕರಣವಾದ ಹೆಸರಿಟ್ಟುಕೊಂಡು ಚಿತ್ರಗಳಲ್ಲಿ ಮಾಡುವವರು ಬಹಳ ಕಡಿಮೆ ಮಂದಿ. ನಿನ್ನ ಹೆಸರನ್ನು ಯಾವ ಡೈರೆಕ್ಟರ್, ಪ್ರೊಡ್ಯೂಸರ್ ಏಕೆ ಬದಲಾಯಿಸಲಿಲ್ಲವೋ ? ಅದೇ ಸರಿಯಾದ ಹೆಸರೆಂದು ಸುಮ್ಮನಿದ್ದಿರಬೇಕು!'

ನೀನು ಚಿತ್ರನಟಿಯಾಗಬೇಕೆಂದು ಮೊದಲಿನಿಂದ ಹಂಬಲವಿತ್ತೆ ?'

'ಅಯ್ಯೋ ಅಯ್ಯೋ, ಇಷ್ಟು ಚಿಕ್ಕ ಮಗುವಾಗಿದ್ದಾಗಲಿಂದಲೂ ಡ್ಯಾನ್ಸು, ಡ್ರಾಮ ಅಂದ್ರೆ ಪ್ರಾಣ ಅವಳಿಗೆ. ನಾನು ದೊಡ್ಡ ತಾರೆ ಆಗ್ತೀನಿಂತ ಕುಣಿಯೋಳು' ಮಾಲತಮ್ಮ ಮಾತಿಗೆ ಸೇರಿದಾಗ ಸತ್ಯಕಾಮ್‌ರವರಿಗೆ ಅದು ರುಚಿಸಲಿಲ್ಲ.

'ಪವಿತ್ರ ಅದನ್ನು ಹೇಳಬೇಕು.' ಮೊಟಕಾಗಿ ಹೇಳಿದರು.

'ನಂಗೆ ಅಭಿನಯಿಸಲು ಆಸೆ, ಅದರಲ್ಲೂ ಹೃದಯಸ್ಪರ್ಶಿ ಪಾತ್ರಗಳಲ್ಲಿ ಅಭಿನಯಿಸುವುದೆಂದರೆ ಬಹಳ ಇಷ್ಟ. ಚಿಕ್ಕಂದಿನಿಂದ ಇತ್ತು ಅಷ್ಟೇ. ಚಿತ್ರರಂಗಕ್ಕಿಳಿದುದು ಆಕಸ್ಮಿಕವಷ್ಟೆ!' ಪವಿತ್ರ ನುಡಿದಳು.

'ಅಚ್ಛಾ!' ಸತ್ಯಕಾಮ್ ಹೇಳುತ್ತಿರುವಂತೆಯೇ ಸುನಿಲ್‌ಕುಮಾರ್ ಗ್ರೀನ್ ರೂಮಿನಿಂದ ಹೊರಬಂದ. ಎತ್ತರವಾದ ಆಳು. ಪ್ರಖರವಾದ ಕಿಡಿಗಣ್ಣುಗಳು. ಭಾವಪೂರ್ಣವಾದ ಮಂದಸ್ಮಿತ ಮುಖ, ತಲೆಯ ಮೇಲೆ ಸೊಂಪಾದ ಅಲೆಗೂದಲಿನ ನಿಡುಕ್ರಾಪ್. ಎಣ್ಣೆಗೆಂಪಿನ ಆರೋಗ್ಯ ಹೊರಚಿಮ್ಮುವ ಮೈಬಣ್ಣ, ಕುಡಿಮೀಸೆಯ ಕೆಳಗಿದ್ದ ಮಾಟವಾದ ಬಾಯಿ, ಹಾಕಿಕೊಂಡಿದ್ದ ಅಚ್ಚ ಬಿಳಿಪು ಜುಬ್ಬ, ಉಟ್ಟ ಗರಿಮುರಿಯಾದ ಬಿಳಿಯ

ಮಲ್ಲಿನ ಚುಂಗಿನ ಪಂಚೆ, ಒತ್ತು ಹುಬ್ಬುಗಳ ನಡವಿದ್ದ ಕುಂಕುಮ, ಅದರ ಕೆಳಗಿನ ನೇರವಾದ ಮಾಟವಾದ ಮೂಗು.

'ಪ್ರಣಾಮಗಳು ಸರ್ವರಿಗೂ!' ಎಲ್ಲರತ್ತ ನೋಡಿ ಕೈಮುಗಿದು ನಸುನಕ್ಕ.

'ಬಾರಪ್ಪಾ ದೊರೆ!' ಗಂಗಾಧರಯ್ಯನವರು ಹೃತ್ಪೂರ್ವಕವಾಗಿ ಎದ್ದುನಿಂತು ಅವನನ್ನು ಕರೆದರು. ಸರಕ್ಕನೆ ಜಮಖಂಡಿ, ಮಾಲತಮ್ಮ ಮತ್ತಿತರರು ನಿಂತರು. ಸತ್ಯಕಾಮ ಕೈಕಟ್ಟಿ ಕುಳಿತೇ ಇದ್ದರು. ಅವನ ಕಣ್ಣುಗಳು ಪವಿತ್ರಳ ಮೇಲೆ ಕ್ಷಣಕಾಲ ನಿಂತು ಬೇರತ್ತ ಸರಿಯಿತು. ಪವಿತ್ರ ಅನುಮಾನಿಸುತ್ತಲೇ ಎದ್ದುನಿಂತಳು. ಸುನಿಲ್‌ಕುಮಾರ್ ಸತ್ಯಕಾಮ್‌ರವರತ್ತ ಬಂದು ಬಗ್ಗಿ ಅವರ ಕಾಲು ಮುಟ್ಟಿ ನಮಸ್ಕರಿಸಿದ.

'ಏಳಯ್ಯಾ ದೊರೆ. ನನಗ್ಯಾಕೆ ನಮಸ್ಕರಿಸುತ್ತೀ. ಆ ಭಗವಂತನಿಗೆ ಕೈ ಮುಗಿ. ಏನಾದರಾಗಲೀ, ದೇವರು ಒಳ್ಳೆಯದು ಮಾಡಲಿ. ಗುರು ಹಿರಿಯರೆಂದರೆ ಭಯ ಭಕ್ತಿ ಇಟ್ಟಿದ್ದೀಯಾ! ಬಹಳ ಸಂತೋಷ!' ಅವನನ್ನು ಕೈ ಹಿಡಿದೆಬ್ಬಿಸಿ ಅವನನ್ನು ತಬ್ಬಿಕೊಂಡು ಬೆನ್ನು ಚಪ್ಪರಿಸಿದರು.

'ಏನ್ಸಾರ್, ನೀವು ಹಾಗನ್ನುತ್ತೀರಿ. ತಾವು ದೊಡ್ಡವರು. ನಾನೇನಿದ್ದರೂ ತಮ್ಮ ಮಾರ್ಗದರ್ಶನದಲ್ಲಿ ಮುಂದೆ ಬರಲೆತ್ನಿಸುತ್ತಿರುವ ಒಬ್ಬ ಸಣ್ಣ ಕಲಾವಿದ!' ಸುನಿಲ್ ನಗುತ್ತಾ ಉತ್ತರಿಸಿದಾಗ ಕ್ಷಣಕಾಲ ಪವಿತ್ರಳಿಗೆ ಸುನೀಲ್‌ಕುಮಾರ್ ಅತ್ಯಂತ ಆಕರ್ಷಕವಾಗಿ ಕಂಡ.

'ಆ ರೀತಿ ಮಾತನಾಡುವುದು ನಿನ್ನ ದೊಡ್ಡ ಗುಣ. ಆ ಮಾತು ಹಾಗಿರಲಿ. ಇಲ್ಲಿ ನೋಡು, ಇವರು ಯಾರು ಗೊತ್ತೆ?' ಪವಿತ್ರಳತ್ತ ಕೈ ತೋರಿಸಿದರು. ಸುನಿಲ್‌ಕುಮಾರ್ ಅವಳತ್ತ ನೋಡಿ ನಸುನಕ್ಕು ತಲೆ ಯಾಡಿಸಿದ.

'ನನಗೆ ಪರಿಚಯವಿಲ್ಲ!'

'ಇವಳು ಪವಿತ್ರ ಅಂತ. ಅಪ್ ಕಮ್ಮಿಂಗ್ ಚಿತ್ರನಟಿ. ಹೊಸ ಪ್ರತಿಭೆಯ ಒಂದು ಆಶಾಕಿರಣ ನಮ್ಮ ಹೊಸ ಫಿಲಂ 'ಚಿತ್ರಾಂಗದಾ'ದಲ್ಲಿ ಹೀರೋಯಿನ್ ರೋಲ್ ಕೊಡಬೇಕಂದಿದ್ದೇನೆ. ನೀನು ಏನು ಹೇಳುತ್ತೀಯೆ?'

ಸುನಿಲ್ ಕುಮಾರ್ ಅಧೀರನಾಗಿ ನಕ್ಕ. 'ನನ್ನ ಮಾತೇನು ಸರ್, ನೀವು ತೀರ್ಮಾನಿಸಿದಂತಾಗಲಿ!'

'ಹಾಗಲ್ಲಯ್ಯ, ನಾಳೆ ನೀನು ಯಾವ ವಿಧವಾದ ಬೇಸರ ವ್ಯಕ್ತಪಡಿಸಬಾರದು, ಅದಕ್ಕೆ ಹಾಗೆ ಹೇಳಿದೆ!' ಸತ್ಯಕಾಮ್ ಹೇಳಿದಾಗ ಪವಿತ್ರಳಿಗೆ ಮುಖಭಂಗವಾದಂತಾಯಿತು.

ಹೀರೋ ತನ್ನ ಜೊತೆ ಮಾಡಲು ಬೇಸರಪಡಬಾರದೇ? ತಾನೇನು ಅವನನ್ನು ಮೆಚ್ಚುವ ಮನರಂಜಿಸುವ ವ್ಯಕ್ತಿಯೇ ಅಥವಾ ನಿರ್ಜೀವ ವಸ್ತುವೇ? ಹೆಸರು, ಹಣ ಇದ್ದರೆ ಅವರಿಗೆಲ್ಲಾ ತನ್ನನ್ನು ಕೀಳಾಗಿ, ಯಃಕಶ್ಚಿತ್ತಾಗಿ ಕಾಣಬೇಕೇ?

'ರಂಜನಿ, ಸುಪ್ರಿಯ, ಜಯಕೀರ್ತಿ ಎಲ್ಲರನ್ನೂ ನೋಡಿದೆ. ಆದರೆ ನಿನ್ನ ಜೊತೆ ನಟಿಸಲು ಅವರಿಗೆ ಕೊಂಚ ವಯಸ್ಸಾದಂತೆ ಕಾಣಿಸುತ್ತಾರೆ. ಅದಕ್ಕೆ ನಿನ್ನ ಜೊತೆ ಹೊಸ ಪ್ರತಿಭಾವಂತ ತಾರೆಯೊಬ್ಬಳಿಗೆ ಚಾನ್ಸು ಕೊಟ್ಟರೆ ಅವಳಿಗೂ ಅದೃಷ್ಟದ ಬಾಗಿಲು ತೆರೆದೀತು, ನಿನ್ನ ಇಮೇಜು ಹೆಚ್ಚೀತು ಎನ್ನಿಸಿತು.... ನೀನು ಬೇಡವೆನ್ನುವ ಹಾಗಿದ್ದರೆ ಮೊದಲೇ ನಿರ್ಧರಿಸಿದಂತೆ ಕಲಾಕುಸುಮಳನ್ನೇ ಹಾಕಿಕೊಳ್ಳೋಣ. ಆದರೆ ನಮ್ಮ ಭಾಷೆ ಬಾರದು. ಎಲ್ಲವನ್ನೂ 'ಡಬ್' ಮಾಡಬೇಕಾದೀತು.' ಗಂಗಾಧರಯ್ಯ ಮಧ್ಯೆ ಮಾತು ಸೇರಿಸಿದರು.

'ಅಲ್ಲದೇ ಕಲರ್ ಫಿಲಂನಲ್ಲಿ ಆಕೆ ಅಷ್ಟೇನೂ ಬೆಳ್ಳಗೆ...' ಮಾತು ಅಷ್ಟಕ್ಕೇ ನಿಲ್ಲಿಸಿದಾಗ ಜಮಖಂಡಿಯವರು ಹೇಳಿದರು.

'ಅಯ್ಯೋ ಬಿಡ್ರೀ ಮಾರಾಯ್ರೆ, ಆಕೆ ಅಗ್ದಿ ಬರೋಬರ್ರಿ ನನ್ನ 'ಕಲರ್ರೀ ಅದಾರ್ರಿ.' ಎಂದಾಗ ಎಲ್ಲರೂ ಜಮಖಂಡಿಯವರತ್ತ ನೋಡಿ ನಕ್ಕರು.

'ಅದಕಲ್ರಿ ಜಮಖಂಡಿಯವ್ರೆ, ಸ್ಟಾರ್ ವಾಲ್ಯೂ ಕಣ್ರೀ. ಬೇರೆ ಭಾಷೆಗಳಲ್ಲಿ ಅವ್ಳು ಒಳ್ಳೆ ಹೆಸ್ರು ಸಂಪಾದಿಸಿದ್ದಾಳೆ. ಅವಳ ನಾಕೈದು ಚಿತ್ರಗಳು ಬಾಕ್ಸ್ ಆಫೀಸ್ ಹಿಟ್ ಆಗಿದೆ' ಗಂಗಾಧರಯ್ಯ ನುಡಿದರು.

'ನೋಡಿ ನಮಗೇನಿದ್ರೂ, ಕಥೆ ಹೆಂಗಾರ ಇರ್ಲಿ. ನಾವು ಹೂಡಿದ ಹಣ ವಾಪಸ್ಸು ಬರೋದು ಗ್ಯಾರಂಟಿ ಇರ್ಬೇಕ್ರೀ.'

'ಭಲೋ ಅದೆ ನಿಮ್ಮ ಮಾತು ಸಾಹೇಬ್ರಾ. ನಮ್ಮ ಸತ್ಯಕಾಮ ಅಹ್ದೂರಿ ಡೈರೆಕ್ಟರ್ ಅದಾರ್ರೀ. ಅಂತ ಬಾದ್ದೂರಿ ಇರ್ಲಿಕ್ಕೇ ನಿಮ್ಗೆ ಕಾಳಜಿ ಬ್ಯಾಡ್ರಿ ಗಂಗಾಧರಯ್ಯನೋರೆ!' ಜಮಖಂಡಿ ಹೇಳಿದಾಗ ಪವಿತ್ರ ಅವರೆಲ್ಲರ ಗುಂಪಿನಿಂದ ದೂರ ಸರಿದು ನಿಂತಳು. ಈ ಗುಂಪಿನಲ್ಲಿ

ತಾನೊಂದು ಗೂಡು ತಪ್ಪಿ ಬಂದ ಹಕ್ಕಿ. ಇಲ್ಲಿರಬಾರದು.

ಸತ್ಯಕಾಮ ಅವಳನ್ನು ತಡೆದರು.

'ಇರಮ್ಮ ಮಗೂ....ನಮ್ಮ ಮಾತು ಹಾಗೆಯೇ, ಒಂದು ನಿಮಿಷ' ಗಂಗಾಧರಯ್ಯನತ್ತ ತಿರುಗಿದರು. 'ನಿಮ್ಮ ಇನ್‌ವೆಸ್ಟ್‌ಮೆಂಟ್ ಬಗ್ಗೆ ಇಲ್ಲಿ ಚರ್ಚೆ ಬೇಡಾ. ನಂಗೆ ಬೇಕಾಗಿರೋದು ಹೀರೋ–ಹೀರೋಯಿನ್ ರವರ ಸೌಹಾರ್ದತೆ, ಕೋ–ಆಪರೇಷನ್. ಇನ್ನು ಮಿಕ್ಕ ವಿಷಯ ಆಮೇಲೆ ಹೋಟೆಲ ರೂಮಿನಲ್ಲಿ ಮಾತಾಡೋಣ.'

'ಸರಿ. ಸರಿ. ನಿಮ್ಮ ಮಾತು ಖರೇರಿ' ಜಮಖಂಡಿ ಸುಮ್ಮನಾದರು.

'ನಾನು ಇವರ ಚಿತ್ರಗಳನ್ನು ಯಾವ್ದೂ ನೋಡಿಲ್ಲ ಸಾರ್' ಸುನಿಲ್ ಕುಮಾರ್ ಹೇಳಿದಾಗ ಗಂಗಾಧರಯ್ಯ ಅತಿ ನಮ್ರರಾಗಿ ಹೇಳಿದರು.

'ಅದಕ್ಕೆ ಚಿಂತೆ ಬೇಡಾ. ನಾನು ನಿಮಗೋಸ್ಕರ ಸ್ಕ್ರೀನಿಂಗ್ ಮಾಡಿಸ್ತೀನಿ ಬಿಡಿ, ನಾಳೇನೆ...'

ಪವಿತ್ರ ಅವಡುಗಚ್ಚಿ ತಾಯಿಯತ್ತ ನೋಡಿದಳು. 'ಅಮ್ಮಾ, ಇದೇನು ತರಕಾರಿ ವ್ಯಾಪಾರ ನಡೀತಾ ಇರೋಹಾಗಿದೆ.'

'ಶ್ ಶ್ ಸುಮ್ನಿರೇ ಪಾಪೂ ಸ್ವಲ್ಪ. ನಿಂಗೆ ಸ್ವಲ್ಪಾನೂ ತಾಳ್ಮೆ ಇಲ್ಲ. ನಾನೆಲ್ಲಾ ಮಾತಾಡ್ತೀನಿ. ನೀನು ಸುಮ್ಮನಿರು' ಮಾಲತಮ್ಮ ಪಿಸುದನಿಯಲ್ಲೇ ಗದರಿದರು.

'ಒಂದು ನಿಮಿಷ ಹೀಗೆ ಬರ್ತೀರಾ ಸಾರ್' ಸುನಿಲ್‌ಕುಮಾರ್ ಕರೆದಾಗ ಸತ್ಯಕಾಮ್, ಸುನಿಲ್‌ಕುಮಾರ್ ಇಬ್ಬರೂ ಸೆಟ್ಟಿನ ಉತ್ತರದ ಮೂಲೆಗೆ ಹೋಗಿ ಕ್ಯಾಮೆರಾಗಳ ಹಿಂದೆ ನಿಂತು ಎರಡು ನಿಮಿಷ ಮಾತನಾಡಿದರು. ಗಂಗಾಧರಯ್ಯ ಮಾಲತಮ್ಮನತ್ತ ನೋಡಿ ನಕ್ಕರು.

'ಅವರು ಒಪ್ಪಿಬಿಟ್ಟರೆ, ನಿಮ್ಮ ಮಗಳ ಅದೃಷ್ಟದ ಬಾಗಿಲು ತೆರೆಯಿತೆಂದುಕೊಳ್ಳಿ. ಈ ಚಿತ್ರ ಭಾರೀ ವರ್ಣಚಿತ್ರ ಇಪ್ಪತ್ತು ಲಕ್ಷ ಎಸ್ಟಿಮೇಟಾಗಿದೆ.' ಮಾಲತಮ್ಮ ಒಳಗೇ ಉಬ್ಬಿದರು. 'ಅವರೊಪ್ಪಿದರೆ ಆಯಿತಾ ನಾನು ಒಪ್ಪುವುದು ಬೇಡವಾ' ಎಂದು ಕೇಳುವ ಮನಸ್ಸಾಯಿತು ಪವಿತ್ರಳಿಗೆ.

'ಇಂಥ ಅದೃಷ್ಟ ನೋಡ್ರೀ ತಾಯಾರಾ...ನೂರಕ್ಕೆ ಒಂದ್ಸಲ ಬರಾಕ್ಹತ್ತಿದ್ರೆ ಆಯ್ತೂರಿ. ಹಂಗಾ ಹಿಂಗಾ ಮಾಡ್ದೇ ಒಪ್ಕಂಬಿಡ್ರೀ ನೀವೂನೇ... ನಾ ಹೇಳಾದು ಖರೇ ಅದೇ ಅಲ್ಲಾ ಗಂಗಾಧರಯ್ನೋರೆ' ಜಮಖಂಡಿ ಹೇಳಿದರು.

ಕ್ಯಾಮೆರಾ ಮುಸುಗಿನಾಚೆಯಿಂದ ಸತ್ಯಕಾಮ್, ಕಾಯ್ಕಿಣಿ, ಸುನಿಲ್ ಕುಮಾರ್ ಹೊರಬಂದರು. ಸತ್ಯಕಾಮ್‌ರವರ ಮುಖ ಪ್ರಸನ್ನವಾಯಿತು. ಸುನಿಲ್ ಕುಮಾರನ ಮುಖದಲ್ಲಿ ಅದೇ ಮಂದಸ್ಮಿತ ಹೊರ ತೆರೆ. ಪವಿತ್ರಳ ಮುಂದೆ ನಿಂತು ಕೈ ಮುಗಿದ.

'ತಮ್ಮ ಪರಿಚಯವಾದುದು ಬಹಳ ಸಂತೋಷ. ಮತ್ತೆ ಭೇಟಿಯಾಗೋಣ.' ಎಲ್ಲರತ್ತ ತಿರುಗಿ ನಸುನಕ್ಕು ಕೈ ಮುಗಿದು ಗ್ರೀನ್ ರೂಮಿನತ್ತ ನಡೆದ.

'ನೋಡೀ, ಅವನನ್ನು ಒಪ್ಪಿಸಿಯಾಯಿತು. ಮಾತು ಮುಂದುವರೆಸೋಣಾ' ಎಂದು ಕಾಯ್ಕಿಣಿ ಹೇಳಿದಾಗ ಪವಿತ್ರಳಿಗೆ ಸಹನೆಯ ಕಟ್ಟೆಯೊಡೆಯಿತು.

'ನನಗೆ ಶೂಟಿಂಗಿಗೆ ತಡವಾಯಿತು ನಾನು ಹೋಗಬೇಕು' ಎಂದು ಹೇಳಿಯೇಬಿಟ್ಟಳು. ಗಂಗಾಧರಯ್ಯ, ಜಮಖಂಡಿ, ಕಾಯ್ಕಿಣಿ ಒಬ್ಬರ ಮುಖ ಒಬ್ಬರು ನೋಡಿಕೊಂಡರು.

'ಕ್ಷಮಿಸಿ, ನಿಮಗೆ ಶೂಟಿಂಗಿರುವ ವಿಷಯ ಮರೆತೇಬಿಟ್ಟಿದ್ದೆ. ನೀವು ಹೋಗಬಹುದು. ನಿಮ್ಮ ತಾಯಿಯವರೊಡನೆ ನಾವು ಮಾತನಾಡುತ್ತೇವೆ' ಗಂಗಾಧರಯ್ಯ ಹೇಳಿದರು. ಅವರೇ ತಾನೇ ನಿಮ್ಮ ಎಲ್ಲಾ ವ್ಯವಹಾರಗಳನ್ನು ನೋಡಿಕೊಳ್ಳುವವರು !'

ಮಾಲತಮ್ಮ ಉಬ್ಬಿಹೋದರು. 'ನಿಧಾನವಾಗಿ ಆಗಲಿ ಬಿಡಿ. ನಾನು ಆಮೇಲೆ ಬಂದು ಕಾಣುತ್ತೇನೆ.'

'ಹಾಗೇ ಮಾಡಿ, ಮಧ್ಯಾಹ್ನದ ಊಟದ ಹೊತ್ತಿಗೆ ನೀವಿಬ್ಬರೂ ನಮ್ಮ ಅತಿಥಿಗಳಾಗಬೇಕು' ಎಂದರು ಸತ್ಯಕಾಮ್.

'ಛೇ, ಹಾಗೆ ಬೇಡಾ. ಆ ಪ್ರೊಡಕ್ಷನ್ ಯೂನಿಟ್ಟಿನವರಿಗೆ ಸರಿಬರದು' ಕಾಯ್ಕಿಣಿ ಜಮಖಂಡಿಯವರತ್ತ ನೋಡಿದರು. 'ಆಮೇಲೆ ಮನಸ್ತಾಪವೇಕೆ ?'

'ಅದೆಲ್ಲಾ ಯೋಚನೆ ಬೇಡಾ. ನಾನೂ ಏನಾದರೂ ಉಪಾಯ ಮಾಡಿ ಹಾಗೂ ಹೀಗೂ ಅವರನ್ನು ಒಪ್ಪಿಸಿ ನಮ್ಮ ಪಾಪೂನ್ನೂ ಕರೆದುಕೊಂಡು ಬರ್ತೀನಿ. ನೀವು ನಿಶ್ಚಿಂತರಾಗಿರಿ. ಲಂಚಿಗೆ ಮುಂಚೆ ಯಾರ ಕೈಲಾದರು 'ಒಂದು ನಿಮಿಷ ಬಂದು ಹೋಗಬೇಕಂತೆ' ಅಂತ ಹೇಳಿ ಕಳಿಸಿದರೆಸಾಕು' ಮಾಲತಮ್ಮ ನಿರಾಯಾಸವಾಗಿ ಹೇಳಿಬಿಟ್ಟರು.

ಪವಿತ್ರಳಿಗೆ ಆಕಾಶವೇ ಕಳಚಿ ಬಿದ್ದಹಾಗಾಯಿತು. ಲಂಚ್‌ಬ್ರೇಕಿಗೆ ರಾಜೇಂದ್ರನಿಗೆ ಬಂದು ನೋಡುವಂತೆ ಹೇಳಿಕಳಿಸಿಯಾಗಿದೆ. ತನಗಾಗಿ ಅವನು ಬಂದೇ ಬರುತ್ತಾನೆ. ಈ ಅಮ್ಮನಿಗೆ ಕೊಂಚವೂ ಬುದ್ಧಿಯಿಲ್ಲ ! ಸಿಡಿಮಿಡಿಗೊಂಡಳು.

'ಬರ್‍ತೀನಿ ಸಾರ್' ಮಾಲತಮ್ಮ ಎಲ್ಲರಿಗೂ ಕೈಮುಗಿದರು. 'ನೀವೆಲ್ಲಾ ದೊಡ್ಡ ಮನಸ್ಸು ಮಾಡಿ ನಮ್ಮ ಪಾಪೂ ಭವಿಷ್ಯ ರೂಪಿಸಬೇಕು. ಅವಳೇನಿದ್ದರೂ ನಿಮ್ಮ ಮಡಿಲಿನ ಮಗು !' ವಿಮನಸ್ಕಳಾಗಿ ನಿಂತಿದ್ದ ಪವಿತ್ರಳನ್ನು ಎಚ್ಚರಿಸಿದರು. 'ನಮಸ್ಕಾರಾಂತ ಹೇಳು ಪಾಪೂ. ಆಮೇಲೆ ಬಂದು ನೋಡ್ತೀನೀಂತ ಹೇಳು. ಹಿ...ಹಿ...ಅವಳಿಗೆ ಬಹಳ ನಾಚಿಕೆ, ಸಂಕೋಚ, ನಿಮ್ಮಂತಹ ದೊಡ್ಡ ಮನುಷ್ಯರನ್ನು ಕಂಡರಂತೂ ಹೆದರೇಬಿಡ್ತಾಳೆ.' ತನ್ನ ತಾಯಿಯ ನಾಟಕೀಯತೆ, ಬುದ್ಧಿವಂತಿಕೆ ಮಾತುಗಳನ್ನು ಕೇಳದಿದ್ದ ಪವಿತ್ರ ನಸುನಕ್ಕು ಕೈ ಮುಗಿದಳಷ್ಟೆ.

ಸೆಟ್ಟಿಗೆ ಮರಳಿದಾಗ ರವಿಕೃಷ್ಣ ಕೊಂಚ ಖಾರವಾಗಿಯೇ ಹೇಳಿದ.

'ನೀವು ಇಷ್ಟು ತಡಮಾಡಿದರೆ ಇವೊತ್ತಿನ ಶೆಡ್ಯೂಲ್ ಮುಗಿದ ಹಾಗೆಯೇ. ಬೇಗ ಮೇಕಪ್ ಮುಗಿಸಿ, ಕಾಸ್ಟ್ಯೂಂ ಹಾಕಿಕೊಂಡು ಬನ್ನಿ.'

ಪವಿತ್ರಳಿಗೆ ಸಹಾಯಕವಾಗಿ ಅರಸಪ್ಪ, ಮಾಲತಮ್ಮ, ಜೂನಿಯರ್ ಕಲಾವಿದೆಯೊಂದಿಬ್ಬರು ನಿಂತು ಬೇಗ ಬೇಗ ಸಿದ್ಧಗೊಳಿಸಿದರು. ತಯಾರಾಗಿ ಹೊರಟುಬರುವಾಗ ಪವಿತ್ರ ತಾಯಿಯನ್ನು ತಡೆದು ನಿಲ್ಲಿಸಿಕೊಂಡಳು.

'ಒಂದು ನಿಮಿಷ ಅಮ್ಮಾ, ನೀನು ಲಂಚ್ ಟೈಂಗೆ ಬರ್‍ತೀನೀಂತ ಹೇಳಿದ್ಯಲ್ಲಾ, ಏನಾದರೂ ಗಲಾಟೆಯಾದರೆ ! ನೀನು ಹೋಗಿ ಮಾತಾಡಿಕೊಂಡು ಬಾ, ನಾನಿಲ್ಲೇ ಇರುತ್ತೇನೆ.'

'ಅದೆಲ್ಲಾ ನನಗೆ ಬಿಡು. ದಿನದಿನಕ್ಕೆ ನಿನ್ನ ಮೌಲ್ಯ ಹೆಚ್ಚುತ್ತಿದೆ. ಯಾರಿಗೂ ನೀನು ಹೆದರಬೇಕಾಗಿಲ್ಲ. ಅದರ ಬಗ್ಗೆ ನೀನು ಯೋಚಿಸಲೂ ಬೇಡಾ ! ಮೊದಲು ಶೂಟಿಂಗ್ ಮುಗಿಯಲಿ.'

'ಆಲ್ ಲೈಟ್ಸ್, ಸೀನ್ ನೈನ್, ಟೇಕ್ ಒನ್ .. ಆಕ್ಷನ್....' ಎಂದಾಗ ಯಾಂತ್ರಿಕವಾಗಿ ಅಭಿನಯಿಸಿದಳು ಪವಿತ್ರ. ಅವಳ ಆಸೆಯ ತೊರೆ ಬತ್ತಿ ಹೋಗಿತ್ತು. ನಾಲ್ಕು ಟೇಕ್‌ಗಳಾದರೂ ಸರಿಹೋಗದೇ

'ಕಟ್, ಕಟ್' ಎಂದು ನಿರ್ದೇಶಕರು ಅಸಮಾಧಾನದಿಂದಲೇ ಹೇಳಿದಾಗ ಪವಿತ್ರ ತುಟಿ ಕಚ್ಚಿ ಬಂದ ಅಳು ತಡೆದುಕೊಂಡಳು. ಮನದಲ್ಲಿ ಕ್ಷೋಭೆ ಯಿದ್ದರೆ ಈ ಪ್ರಣಯ ದೃಶ್ಯವನ್ನು ಅಭಿನಯಿಸುವುದಾದರೂ ಹೇಗೆ ?

'ನೋಡಿ ಇನ್ನೊಂದು ಚಾನ್ಸ್ ಅಷ್ಟೇ. ಈ ಶಾಟ್ ಓಕೇ ಆಗಲೇ ಬೇಕು. ಇವತ್ತೇನಾಗಿದೆ ನಿಮಗೆ ಪವಿತ್ರ ? ಎರಡು ಟೇಕ್‌ಗಳಲ್ಲಿ ಓಕೆ ಆಗೋಗ್ತಿತ್ತು !' ರವಿಕೃಷ್ಣ ವ್ಯಾಕುಲತೆಯಿಂದಲೇ ಕೇಳಿದ.

'ಯಾಕೋ ಮನಸ್ಸಿಗೆ ಸರಿಯಿಲ್ಲ. ನನಗೆ ಐದು ನಿಮಿಷ ವಿಶ್ರಾಂತಿ ಕೊಟ್ಟರೆ ಮಾಡುತ್ತೇನೆ' ಪವಿತ್ರ ಹೇಳಿ ಎಲ್ಲರಿಂದ ದೂರವಾಗಿ ನಿಂತು ಮನಸ್ಸು ತಿಳಿಮಾಡಿಕೊಳ್ಳಲೆತ್ನಿಸಿದಳು. ಒಂದು ವೇಳೆ ಲಂಚ್ ಟೈಮಿನಲ್ಲಿ ರಾಜೇಂದ್ರ ಬಂದರೆ ತನಗಾಗಿ ಕಾದಿರುವಂತೆ ಒಂದು ಚೀಟಿ ಬರೆದಿಟ್ಟು ಹೋಗಿಬಿಡಬೇಕು. ಅರಸಪ್ಪ ತನ್ನ ನೆರವಿಗಿರುವವರೆಗೆ ತನಗೆ ಭಯವೇಕೆ ? ತಾನು ಸುಮ್ಮನೇ ಯೋಚಿಸುವುದು ತರವಲ್ಲ. ಇಲ್ಲದಿದ್ದರೆ ಎರಡು ನಿಮಿಷ ಹೋದ ಶಾಸ್ತ್ರ ಮಾಡಿ ಬಂದುಬಿಡಬೇಕು. ಆಗ ಇಬ್ಬರಿಗೂ ತೊಂದರೆ ಯಾಗುವುದಿಲ್ಲ. ಉದ್ವೇಗಗೊಂಡಿದ್ದ ಮನಸ್ಸನ್ನು, ಕ್ಷೋಭೆಯನ್ನು ಕೊಂಚ ಶಮನ ಮಾಡಿಕೊಂಡಳು. ತನ್ನ ಬದುಕೇ ಒಂದು ದೊಡ್ಡ ಅಭಿನಯ, ಇಲ್ಲಿ ಅಭಿನಯಿಸುವುದ್ಯಾವುದೂ ತನ್ನ ಬದುಕಿನಲ್ಲಾಗಿರಲಿಲ್ಲ. ಹಾಗೆಂದ ಮೇಲೆ ಅದಕ್ಕಾಗಿ ಅಭಿನಯಿಸುವಾಗ ಸೋಗಿನ ಅಭಿನಯ ಸಾಗದೇ ? ತಾನು ಅಂತರಂಗವನ್ನು ಬಚ್ಚಿಟ್ಟುಕೊಂಡು ಅಭಿನಯಿಸುವುದು ಕಲಿಯ ಬೇಕು. ಹೀಗೆ ಭಾವುಕಳಾಗಿದ್ದರೆ ಏನೂ ಸಾಧಿಸಲು ಸಾಧ್ಯವಿಲ್ಲ. ತನ್ನ ಅಳಲಿನ ಹೊರೆ ಒಂದೇ ಎರಡೆ ? ಅತ್ತ ಮನೆಯಲ್ಲಿ ಎಲ್ಲರ ಸುಖಕ್ಕಾಗಿ ತನ್ನ ದುಡಿತ. ಅಲ್ಲಿ ತಾನೊಂದು ಹಣ ತಯಾರಿಸುವ ಯಂತ್ರ. ತಾಯಿಯ ಕೈಯ್ಯಲ್ಲಿ ತಾನೊಂದು ಸೂತ್ರದ ಬೊಂಬೆ. ದೇವರಾಜ್‌ರವರಿಗೆ ತನ್ನನ್ನು ಇಪ್ಪತ್ತೈದು ಸಾವಿರ ರೂಪಾಯಿಗೆ ಮಾರಿದಂತೆಯೇ ! ರಾಜೇಂದ್ರ ತನ್ನೊಲವಿನ ಮಹಾಪೂರ. ಆದರೆ ಅವನೊಂದು ದಡ, ತಾನೊಂದು ದಡ. ಈಗ ಮತ್ತೊಂದು ಬಲೆ. ದೊಡ್ಡ ಮೀನಿನ ಗಾಳ ತನ್ನತ್ತ. ಪವಿತ್ರ ನಕ್ಕಳು. ಇದೆಲ್ಲಾ ಅದಲು ಬದಲಾಗಬೇಕು. ಇದೆಲ್ಲಾ ಅಭಿನಯ ಕ್ಯಾಮೆರಾ ಎದುರಿಸುವಾಗ ಮಾತ್ರ ! ನೈಜತೆ ತನ್ನ ಬದುಕಿನ ತುಣುಕಾಗಬೇಕು. ಅದನ್ನು ನೋಡುವ ತನ್ನ ಅಭಿಮಾನಿಗಳು, ಲಕ್ಷಾಂತರ ಜನ ನಂಬುವುದೂ ಅದನ್ನೇ. ತನ್ನ ನಿಜ ಜೀವನ, ತನ್ನ ತೆರೆಯ ಮರೆಯ

ಜೀವನ ಅವರ್‍ಯಾರಿಗೂ ತಿಳಿದಿರುವುದಿಲ್ಲ. ಅದೇನಾದರೂ ತನ್ನೊಬ್ಬಳದು ಮಾತ್ರ. ಅದು ಮರೆಯಾಗಿರಲೇ ಬೇಕು ಇಲ್ಲದಿದ್ದರೆ ಇಲ್ಲಿರುವವರೆಲ್ಲಾ ಕತೆ ಕಟ್ಟುತ್ತಾರೆ. ನಕ್ಕಳು. ಹಿಂತಿರುಗಿ ಬಂದು ನಿಂತು ತನ್ನ ಸಂಭಾಷಣೆಯತ್ತ ಕಣ್ಣಾಡಿಸಿ ಮೈ ಕೊಡವಿ ಹೇಳಿದಳು.

'ನಾನು ರೆಡಿ.'

'ಆಲ್ ಲೈಟ್ಸ್, ಸೀನ್ ನೈನ್, ಟೇಕ್ ಫೈವ್...ಆಕ್ಷನ್....' ಶೂಟಿಂಗ್ ನಡೆದಿತ್ತು.

ಪವಿತ್ರ ಮತ್ತೆಲ್ಲೂ ಎಡವಲಿಲ್ಲ.

ಲಂಚ್‌ಬ್ರೇಕಿನ ಹೊತ್ತಿಗೆ ಲೈಟ್ ಬಾಯ್ ಕೃಷ್ಣಪ್ಪ ಬಂದು ಪವಿತ್ರ, ಮಾಲತಮ್ಮನ ಬಳಿ ನಿಂತ.

'ಸುನಿಲ್‌ಕುಮಾರ್‌ರವರು ನಿಮ್ಮನ್ನ ನೋಡಬೇಕಂತೆ. ಐದು ನಿಮಿಷ ಬಂದು ಹೋಗಬೇಕಂತೆ.'

ಸೆಟ್ಟಿನಲ್ಲಿ ಇದ್ದಕ್ಕಿದ್ದಂತೆ ನಿಶ್ಶಬ್ದ. ಸುನಿಲ್‌ಕುಮಾರ್ ಪವಿತ್ರಳಿಗಾಗಿ ಹೇಳಿ ಕಳುಹಿಸುವುದೆಂದರೆ! ಡೈರೆಕ್ಟರ್‌ರವರ ಹತ್ತಿರ ಹೋಗಿ ಮಾಲತಮ್ಮ ಮೆಲುದನಿಯಲ್ಲಿ ಹೇಳಿದರು

'ಹೇಗಿದ್ದರೂ ಈಗ ಲಂಚ್ ಬ್ರೇಕ್. ಬೇಗ ಹೋಗಿ ಬಂದು ಬಿಡ್ತೀವಿ. ಇಲ್ಲದಿದ್ದರೆ ನಿಮ್ಮ ಶೂಟಿಂಗಿಗೆ ತೊಂದರೆಯಾಗುತ್ತೆ. ನಿಮಗೆ ತೊಂದರೆ ಕೊಡಲು ನಾನು ಇಚ್ಛಿಸುವುದಿಲ್ಲ' ಎಂದಾಗ ನಿರ್ದೇಶಕರು ಕೂಡಲೇ ಒಪ್ಪಿದರು. ಅವರಿಗೂ ಅದೇ ಸರಿಯೆನಿಸಿತು.

'ಅವರ ಸೀಕ್ವೆನ್ಸ್ ಬರುವುದಕ್ಕೆ ಅರ್ಧ ಗಂಟೆ ಮುಂಚೆ ನಾನು ಹೇಳಿ ಕಳಿಸುತ್ತೇನೆ, ಹೋಗಿ ಬನ್ನಿ' ಎಂದರು.

ಎರಡನೇ ಫ್ಲೋರಿನತ್ತ ಮಾಲತಮ್ಮ ಬಿರುಸಾಗಿ ನಡೆದಾಗ ಪವಿತ್ರಳಿಗೆ ಕಾಲು ಬಾರದಾಯಿತು. ಅವಳಿಗೆ ಅರಸಪ್ಪನೊಂದಿಗೆ ಏನೂ ಹೇಳಲೂ ಆಗಿರಲಿಲ್ಲ. ಮಧ್ಯ ಎರಡು ನಿಮಿಷ ಗ್ರೀನ್ ರೂಮಿಗೆ ಹೋಗಿ ಬಂದಾಗ ಅವನೆಲ್ಲೂ ಕಂಡಿರಲಿಲ್ಲ. ಚೀಟಿ ಬರೆದಿಟ್ಟರೆ ಬೇರೆ ಯಾರ ಕೈಗಾದರೂ ಸಿಕ್ಕಿಬಿಟ್ಟರೆ. ಅಲ್ಲಿಯೇ ನಿಂತಿದ್ದ ರವಿಕೃಷ್ಣನಿಗೆ ಹೇಳಿದಳು.

'ನನ್ನನ್ನು ಹುಡುಕಿಕೊಂಡು ಯಾರಾದರೂ ಬಂದರೆ ಗ್ರೀನ್ ರೂಮಿನಲ್ಲಿರುವಂತೆ ಹೇಳಿ. ಬಂದುಬಿಡುತ್ತೇನೆ.'

'ಬರಬೇಕು, ಬರಬೇಕು ಹೊಸ ನಾಯಕಿ' ಸತ್ಯಕಾಮ್ ನಗು ಮುಖದಿಂದಲೇ ಸ್ವಾಗತಿಸಿದರು 'ನಿಮಗೆ ತೊಂದರೆಯಾಗೋಲ್ಲ ತಾನೇ ?'

'ಎಲ್ಲಾದರೂ ಉಂಟೇ ? ತಮ್ಮಂತಹ ಮಹಾನುಭಾವರ ಮಾತಿಗೆ ಯಾರಾದರೂ ಎದುರಾಡುವುದು ಸಾಧ್ಯವೇ ?' ಮಾಲತಮ್ಮ ನಕ್ಕರು. 'ಅಲ್ಲಿ ಎಲ್ಲರೂ ನಮ್ಮ ಪವಿತ್ರನ ಅದೃಷ್ಟವನ್ನು ಹೊಗಳುವವರೇ.'

ಗಂಗಾಧರಯ್ಯ ಗಂಟಲು ಸರಿಮಾಡಿಕೊಂಡರು. ಜಮಖಂಡಿ, ಅವರು ಇಬ್ಬರೂ ಮೆಲುದನಿಯಲ್ಲಿ ಒಂದೆರಡು ಮಾತಾಡಿಕೊಂಡರು. ಸುನಿಲ್‌ಕುಮಾರ್ ಈಗ ತನ್ನ ಕಾಸ್ಟ್ಯೂಂನಲ್ಲಿದ್ದ. ಕಂದುಬಣ್ಣದ ಫುಲ್ ಸೂಟಿನಲ್ಲಿ ಅತ್ಯಂತ ಮನಮೋಹಕವಾಗಿ ನಗುತ್ತ ನಿಂತಿದ್ದ.

'ಬನ್ನಿ ಪವಿತ, ಊಟಕ್ಕೆ ನಿಮ್ಮ ಸ್ವೀಟ್ ಕಂಪೆನಿಗಾಗಿ ಕಾಯುತ್ತಾ ಇದ್ದೇನೆ, ಎಂದು ಪವಿತ್ರಳತ್ತ ನೋಡಿ ಹಾರ್ದಿಕ ಸ್ವಾಗತ ಬಯಸಿದ.

ಪವಿತ್ರಳ ಮನಸ್ಸು ಕೊಯ್ದಾಡಿತು ತಾನು ಮಾಡುತ್ತಿರುವುದು ಸರಿಯೇ ?

ಮಾತೆಲ್ಲ ಬರಿಯ ಸೋಗು. ಎಲ್ಲರೂ ಸುನಿಲ್ ಕುಮಾರನ ಚಿತ್ರಗಳ ಬಗ್ಗೆ ಮಾತುಕತೆ ಅವನ ಅಭಿನಯದ ಬಗ್ಗೆ ಹಾಡಿ ಹೊಗಳುವಿಕೆ. ಅವನು ಮಾತಾಡಿದ್ದಕ್ಕೆಲ್ಲಾ ನಗು. ಎಲ್ಲರೂ ಅವನಿಗೆ ಉಪಚಾರ ಮಾಡುವವರೇ.

ಪವಿತ್ರಳಿಗೆ ಒಳಗೇ ಆತಂಕ. ಅಲ್ಲಿ ರಾಜೇಂದ್ರ ಬಂದು ತನ್ನನ್ನು ಕಾಣಲಾರದೇ ಕೋಪಿಸಿಕೊಂಡು ಹೋಗಬಹುದು. ತನ್ನ ಮೇಲೆ ಅಪಾರ್ಥ ಕಲ್ಪಿಸಿಕೊಳ್ಳಬಹುದು ಅವಳಿಗೆ ಎದುರಿಗಿಟ್ಟಿದ್ದ ಊಟ, ತಿಂಡಿ ಒಂದೂ ಗಂಟಲಲ್ಲಿ ಇಳಿಯಲಿಲ್ಲ ಏನೋ ಉತ್ಕಂಟತೆ. ಮಾಲತಮ್ಮನಿಗೆ ಎಲ್ಲಿಲ್ಲದ ಸಂತಸ ಸತ್ಯಕಾಮ್, ಜಮಖಂಡಿ ಗಂಗಾಧರಯ್ಯನವರೊಡನೆ ಸರಸ ಗಾಂಭೀರ್ಯವಾಗಿ ಮಾತನಾಡುತ್ತಾ ಬಡಿಸುತ್ತಿದ್ದುದೆಲ್ಲಾ ತಿಂದು ಮುಗಿಸಿದ್ದಲ್ಲದೇ ವ್ಯವಹಾರದ ಬಗ್ಗೆಯೂ ಒಂದು ರೀತಿಯಲ್ಲಿ ಒಪ್ಪಂದ ಮಾಡಿಕೊಂಡಿದ್ದರು.

'ದೇವರಾಜ್‌ರವರ ಎರಡು ಚಿತ್ರಗಳಿಗೆ ಅವರು ಬುಕ್ ಮಾಡಿಕೊಂಡು ಮುಂಗಡ ಹಣ ಕೊಟ್ಟಿದ್ದಾರೆ. ಚಿತ್ರದ ಕತೆಯನ್ನು ನಿರ್ಧರಿಸಿಲ್ಲ. ಅನಂತರ ಇನ್ನು ಮಿಕ್ಕ ವಿಷಯಗಳ ನಿರ್ಧಾರವಾಗಬೇಕು. ನಿಮಗೆ ತಿಳಿದಂತೆ ಅವರು ವಿಜಯೇಂದ್ರರವರ ಕೈಯಲ್ಲೇ ನಿರ್ದೇಶಿಸುವುದು.'

ಜಮಖಿಂಡಿಯವರು ತಂಬಾಕು ಬಾಯಿಗೆ ಹಾಕಿಕೊಳ್ಳುತ್ತಾ ಹೇಳಿದರು 'ಅಲ್ಲಿ ಏನಾದ್ರೂ ಉಸಾಬರಿ ಮಾಡ್ಲಿಕ್ಕುಂಟು. ನಿಸೂರು ಯೋಚ್ನೆ ಮಾಡಕತ್ತಿದ್ರ್ಯಾಯ್ತು.'

ಗಂಗಾಧರಯ್ಯ ಮೀಸೆಯ ಮೇಲೆ ನಯವಾಗಿ ಕೈಯ್ಯಾಡಿಸಿದರು. 'ಎಷ್ಟು ಮುಂಗಡ ಕೊಟ್ಟಿದ್ದಾರೆ ಅದನ್ನ ಹಿಂತಿರುಗಿಸಿಬಿಡಿ. ಅಷ್ಟು ನಾನು ಕೊಟ್ಟುಬಿಡ್ತೀನಿ.'

ಮಾಲತಮ್ಮನಿಗೆ ಉಭಯಸಂಕಟ. ಕಾರು, ಬಂಗಲೆ, ಕಾಶ್ಮೀರ ಪ್ರವಾಸ ಎಲ್ಲಾ ರದ್ದಾದರೆ · ಸತ್ಯಕಾಮ್ ಚಿಂತಾಕ್ರಾಂತರಾದರು.

'ಹಾಗೆಲ್ಲ ಹಿಂತಿರುಗಿಸಿಬಿಟ್ಟರೆ ಮಾತಿನ ಬೆಲೆಯೇನಾಯಿತು. ಹಾಗೆ ಬೇಡಾ. ಏನಾದರೂ ನೆವವೊಡ್ಡಿ ತಪ್ಪಿಸಿಕೊಂಡುಬಿಡಬೇಕಷ್ಟೆ.'

ಕಾಯ್ಕಿಣಿಯವರು ಮಧ್ಯೆ ಬಾಯಿ ಹಾಕಿದರು. 'ಅಂದಹಾಗೆ, ಪವಿತ್ರಾಗೂ ರಾಜೇಂದ್ರನಿಗೂ ತುಂಬಾ ಸಲಿಗೇಂತ ಕತೆ ಹಬ್ಬಿಸ್ತಾ ಇದ್ದಾರೆ. ಅಲ್ದೇ ದೇವರಾಜ್, ವಿಜಯೇಂದ್ರ ಅವನನ್ನು ಬಿಟ್ಟರೆ ಬೇರೆ ಹೀರೋಗೆ ಚಾನ್ಸ್ ಕೊಡೋಲ್ಲ. ರಾಜೇಂದ್ರ ಮಾಡೋ ಚಿತ್ರದಲ್ಲೂ ನಾಯಕಿ, ನಮ್ಮ ಸುನಿಲ್‌ಕುಮಾರ್ ಚಿತ್ರದಲ್ಲಿ ನಾಯಕಿ ·ಅದು ಹೇಗೆ ಸಾಧ್ಯವಾದೀತು ?'

ಪವಿತ್ರ ಒಳಗೇ ಬೆಂಕಿಯಾದಳು ರಾಜೇಂದ್ರನ ಬಗ್ಗೆ ಎಷ್ಟು ಸುಲಭವಾಗಿ ಮಾತನಾಡುತ್ತಾರೆ! ಅವರವರ ಪ್ರತಿಭೆ ಅವರವರಿಗಿದೆ. ಸುನಿಲ್ ಕುಮಾರನನ್ನು ಮೀರಿಸುವ ಮತ್ತೊಬ್ಬ ಬಂದರೆ ಆಗ ಅವನೂ ರಾಜೇಂದ್ರನಂತೇ ನಾಯಕನ ಪಾತ್ರಕ್ಕಾಗಿ ಅವರಿವರನ್ನು ಕೇಳಲೇಬೇಕಾಗುತ್ತದೆ. ಇಂದು ತನಗೆ ಬಂದಿದೆಯೆಂದು ಮೆರೆಯಬಾರದು ತಾನು ಈ ರೀತಿಯ ಕಟ್ಟುಪಾಡಿಗೆ ಒಳಸೇರಬಾರದು. ಇಬ್ಬರೊಂದಿಗೂ ನಾಯಕಿಯಾದರೆ ಏನು ತಪ್ಪು ?

ಮಾಲತಮ್ಮ ಇನ್ನೂ ಸಂದಿಗ್ಧದಲ್ಲೇ ಇದ್ದರು.

'ನೀವು ಮುಂಚೆ ನಮಗೆ ತಿಳಿಸಿಬಿಟ್ಟಿದ್ದರೆ ನಾವು ಯಾವುದಕ್ಕೂ ಇನ್ನೊಬ್ಬರ ಹತ್ತಿರ ಕರಾರು ಮಾಡಿಕೊಳ್ಳುತ್ತಿರಲಿಲ್ಲ. ಅದೂ ಅಲ್ಲದೇ ಪಾಪೂನ ಕಾಶ್ಮೀರಕ್ಕೆ ಕರೆದೊಯ್ಯಬೇಕೆಂದಿದ್ದಾರೆ ಕಾರು, ಬಂಗಲೆಯ ಆಸೆ ತೋರಿಸಿದ್ದಾರೆ.' ನಯವಾಗಿ ತಮ್ಮ ತಾಳ ಹಾಕಿದರು.

'ಅಷ್ಟೇ ತಾನೇ? ನಮ್ಮ ಚಿತ್ರದ ಶೂಟಿಂಗ್ ಅರ್ಧ ಭಾಗದ

ಹೊರಾಂಗಣವೆಲ್ಲಾ ಕಾಶ್ಮೀರದಲ್ಲೇ ಆಗುವುದು. ಕಾರು, ಬಂಗಲೆ ಅದೆಲ್ಲಾ ದೊಡ್ಡ ವಿಷಯವೇ? ನಮ್ಮ ಜಮಖಂಡಿಯವರ ದೊಡ್ಡ ಬಂಗಲೆ ಹಾಗೇ ಖಾಲಿ ಬಿದ್ದಿದೆ. ಅದನ್ನೇ ನೀವು ಉಪಯೋಗಿಸಿಕೊಳ್ಳಿ. ಬೀಗ ಹಾಕಿಟ್ಟಿರುವ ಬದಲು ನೀವು ಹೋಗಿದ್ದರೆ ಮನೆಗೆ ಜೀವ ಬಂದೀತು.' ಗಂಗಾಧರಯ್ಯ ನಕ್ಕರು, 'ಕಾರೇನು ಚಿತ್ರ ಮುಗಿದು ನೂರು ದಿನ ಓಡಿಬಿಡಲಿ ನಾನೇ ಕೊಡಿಸಿಬಿಡ್ತೀನಿ.'

ಮಾಲತಮ್ಮನಿಗೆ ಸ್ವರ್ಗ ಒಂದೇ ಗೇಣಾಗಿಯಿತ್ತು. ಸುನಿಲ್‌ಕುಮಾರನ ಜೊತೆ ನಾಯಕಿ. ಕಾಶ್ಮೀರದಲ್ಲಿ ಶೂಟಿಂಗ್, ಜಮಖಂಡಿಯವರ ಬಂಗಲೆ, ಶತದಿನ ಓಡಿದರೆ ಕಾರು.

ಸುನಿಲ್‌ಕುಮಾರನ ಮುಖದ ಮೇಲೆ ಸ್ನಿಗ್ಧ ಮಂದಹಾಸ. ಅವನಾಗಲೇ ಅರಿತಿದ್ದ. ಪವಿತ್ರ ತಾಯಿಯ ಕೈಯಿನ ಸೂತ್ರದ ಬೊಂಬೆಯೆಂದು.

'ನೀವು ಎಲ್ಲಾ ಮಾತಾಡ್ತಾ ಇದ್ದೀರಿ. ನಮ್ಮ ಹೀರೋಯಿನ್‌ನ ಒಂದು ಮಾತು ಕೇಳಬೇಡವೇ?' ಪವಿತ್ರಳತ್ತ ನೋಡಿ ಕಣ್ಣು ಮಿಟುಕಿಸಿದ.

ಸತ್ಯಕಾಮ್ ಅವಳನ್ನೇ ಕೇಳಿದರು. 'ಏನಮ್ಮಾ ಮಗು, ನನ್ನ ಚಿತ್ರದಲ್ಲಿ ನಿನಗೆ ಪಾತ್ರ ಮಾಡಲು ಇಷ್ಟವಿಲ್ಲವೇ?'

ಪವಿತ್ರಳಿಗೆ ಬಾಯಿಕಟ್ಟಿದಂತಾಯಿತು. ಅವರಂತಹ ನಿರ್ದೇಶಕರ ಕೈಕೆಳಗೆ ಪಾತ್ರವಹಿಸುವುದೊಂದು ಹೆಮ್ಮೆ. ಆದರೆ ರಾಜೇಂದ್ರನಿಗೆ ತಾನೆಂತಹ ದ್ರೋಹ ಮಾಡುತ್ತಿರುವೆ.

ಪವಿತ್ರಳ ಮೌನ ಕಂಡ ಮಾಲತಮ್ಮ ಅವಳ ಪರವಾಗಿ ಉತ್ತರಿಸಿದರು.

'ಅವಳು ಯಾವುದಕ್ಕೂ ಏನೂ ಹೇಳುವುದೇ ಇಲ್ಲ. 'ಅಮ್ಮಾ ನೀನಿರಬೇಕಾದರೆ ನನ್ನೇನು ಕೇಳುತ್ತೀ. ನೀನು ಹೇಗೆ ಹೇಳಿದರೆ ಹಾಗೆ' ಅನ್ನುತ್ತಾಳೆ. ಅಲ್ವೇ ಪಾಪೂ?'

ತಾಯಿಯ ಜಾಣ್ಮೆಗೆ ಪವಿತ್ರ ನಸುನಗಲೇ ಬೇಕಾಯಿತು. ಆ ನಸುನಗು ಒಪ್ಪಿಗೆಯೆಂದೇ ನಂಬಿದರು. ಆದರ ಹಿಂದಿದ್ದ ಕಂಗಾಳ ನೋವಿನ ಸತ್ಯದ ಬಗ್ಗೆ ಯಾರಿಗೂ ತಿಳಿಯಲಿಲ್ಲ.

'ನಾಳೆ ಬಂದು ಎಲ್ಲಾ ಸೆಟಲ್ ಮಾಡ್ಬಿಡ್ತೀವಿ.' ಗಂಗಾಧರಯ್ಯ ಹೇಳಿದರು.

'ಎಲ್ಲಾ ನಿರ್ಣಯವಾದ ಕೂಡಲೇ ಪಬ್ಲಿಸಿಟಿಕೊಡಬೇಕೂ. ಪಬ್ಲಿ

ಸಿಟಿಯುವರಿಂದಲೇ ಡಿಸ್ಟ್ರಿಬ್ಯೂಷನ್ ಬೇಗ ಆಗೋದು. ಡಿಸ್ಟ್ರಿಬ್ಯೂಟರ್ಸ್ ಒಪ್ಪಿದರೆ, ನವುಗೆ ಹಣಕ್ಕೆ ಕೊರತೆಯಿಲ್ಲ. ಧೈರ್ಯವಾಗಿ ಚಿತ್ರ ತೆಗೆದು ಬಿಡಬಹುದು. ನಾಳೆ ಎಲ್ಲಾ ನಿರ್ಧರಿಸಿ ನಾಡಿದ್ದು ಪ್ರೆಸ್ಸಿಗೆ ಕೊಟ್ಟುಬಿಡ ಬೇಕು.'

'ಹಾಗೇ ಮಾಡಿ. ನಾಳೆ ಮಧ್ಯಾಹ್ನದ ಮೇಲೆ ಶೂಟಿಂಗ್ ಹೇಗಿದ್ದರೂ ಇಲ್ಲ.' ಮಾಲತಮ್ಮ ಎಲ್ಲರಿಗೂ ಹೇಳಿ ಬೇಗನಿಂದ ನಮಸ್ಕರಿಸಿ ಹೊರಟರು

'ನಿಮ್ಮ ಜೊತೆ ನಟಿಸಲು ನಮ್ಮ ಪಾಪುವಿಗೆ ಸದವಕಾಶ ಸಿಕ್ಕಿದ್ದು ಅವಳ ಪುಣ್ಯ.' ಸುನಿಲ್‌ಕುಮಾರನಿಗೆ ಕೈ ಮುಗಿದರು. ಪವಿತ್ರ ಮಾತ್ರ ಯಾರಿಗೂ ಏನೂ ಹೇಳದೆ ಮೌನವಾಗಿ ಕೈ ಮುಗಿದು ತಾಯಿಯನ್ನು ಹಿಂಬಾಲಿಸಿದಳು.

ಇವರಿಬ್ಬರೂ ಅತ್ತ ಹೋದ ಕೂಡಲೇ ಗಂಗಾಧರಯ್ಯ ಖಾರವಾಗಿಯೇ ನುಡಿದರು.

'ಆ ದೇವರಾಜ್ ಎಂತಹವನು ಗೊತ್ತಾ ? ಎಳೇ ಹುಡುಗಿಯರ್ನ ಮುಂದೆ ತಂದು ತಾರೆಯರನ್ನಾಗಿ ಮಾಡ್ತೀನೀಂತ ಆಸೆ ಹುಟ್ಸಿ ತನಗೆ ಬೇಕಾದ ಹಾಗೆ ಆಟ ಆಡ್ತಾನೆ. ಹುಡುಗಿ ಮುದ್ದಾಗಿದೆ. ಜೊತೆಗೆ ಪ್ರತಿಭೆ ಯಿದೆ. ಪರ್ಮನೆಂಟಾಗಿ ಇಟ್ಕೊಂಡು ಕಾಸು ಮಾಡಿಕೊಳ್ಳಬೇಕೂಂತ ಆಟ ಆಡ್ತಾ ಇದ್ದಾನೆ.'

'ಆ ಮಾತು ಬೇಡ ಬಿಡ್ರಿ ಮಾರಾಯ್ರೇ. ಆಕೀನ ನಮ್ಮ ಕಡೀಕೆ ಮಾಡ್ಕಂಡ್ರೆ ಬರೋಬ್ಬರಿ ಆತು ಬಿಡ್ರಿ ಹಂಗಾರೆ' ಜಮಖಂಡಿ ತಂಬಾಕು ಉಗಿದರು. 'ನನ್ನ ಮನೀ ಅದೂಂತ ಯಾರ ಹೇಳಿದ್ರಿ ನಿಮ್ಗ ? ಭೋಗ್ಯ ಆಗಿ ಕುಂತದ ಅದು. ಅದೆಲ್ಲಾ ನೇರ ಆಗ್ಲಿಕ್ಕೆ ಎರಡು ವರ್ಷ ಸಮ ಆದೀತು. ಅಲ್ಲೀವರ್‍ಗೂ ಆಕಿ ಇರ್‍ಲಿ ಬಿಡೀ ಮಾರಾಯ್ರೇ.'

'ದೇವರಾಜ್ ಇಪ್ಪತ್ತೈದು ಸಾವಿರ ಕೊಟ್ಟಿದ್ದಾರಂತೆ. ನಾವು ಅದ್ರಲ್ಲಿ ಅರ್ಧ ಕೊಟ್ಟು ಮುಂಗಡಾಂತ ಹೇಳೋಣ. ಚಿತ್ರ ಮುಗಿದ ಕೂಡಲೇ ಇನ್ನು ಮಿಕ್ಕಿದ್ದು ಪೂರ ಕೊಟ್ಟುಬಿಟ್ಟರಾಯಿತು. ನಾವು ಮೂವತ್ತು ಸಾವಿರಕ್ಕೆ ಒಪ್ಪಿಸೋಣಾ.'

ನಿರ್ಮಾಪಕರ ಮಾತು ಹಾಗೆ ನಡೆಯುತ್ತಿದ್ದರೆ ಸತ್ಯಕಾಮರ ಮನಸ್ಸು ಮತ್ತೊಂದು ರೀತಿಯಲ್ಲಿ ಓಡುತ್ತಿತ್ತು. ಪ್ರತಿಭೆಯಿರುವ ಹೊಚ್ಚ

ಹಸಿರು ಹುಡುಗಿ. ತಮ್ಮ ಕೈಯಲ್ಲಿ ತಾನಾಗಿ ಬಂದಿರುವ ಶಿಲ್ಪ ಇದನ್ನು ಎಂತಹ ಭವ್ಯಮೂರ್ತಿಯನ್ನಾಗಿ ಮಾಡಬಹುದು. ಆ ಮುಖದಲ್ಲಿ ಅವಳು ಅಡಗಿಸಿಕೊಳ್ಳುತ್ತಿದ್ದ ಭಾವನೆಗಳು. ಕಣ್ಣುಗಳಲ್ಲೇ ಭಾವನೆಗಳಿಗೆ ರೂಪು ನೀಡುವ ವೈಖರಿ, ಆ ಬೊಗಸೆ ಕಂಗಳು ಆ ಭಾವಪೂರಿತ ನೋಟ, ನವರಸಗಳನ್ನು ನಿರಾಯಾಸವಾಗಿ ಪ್ರತಿಬಿಂಬಿಸಬಹುದಾದ ಮುಖ. ಅದಕ್ಕೆ ಒಪ್ಪವಿಟ್ಟಂತೆ ಚೆಲುವು. ಮೈಮಾಟ ಅವಳನ್ನು ತಾವು ಅಪೂರ್ವ ನಟಿಯನ್ನಾಗಿ ಮಾಡಲೇಬೇಕು ಸುನಿಲ್‌ಕುಮಾರ್‌ನೊಂದಿಗೆ ಅವಳು ಮಾಡುವಾಗ ಅವನ ಹೊಂಗಿರಣದಲ್ಲಿ ಮಿಂಚುವುದು ನಿಮಿತ್ತ ಮಾತ್ರವಾಗಬೇಕು. ಮುಂದೆ ತಾವು ತೆಗೆಯುಬೇಕೆಂದುಕೊಂಡಿರುವ ಚಿತ್ರಗಳಲ್ಲಿ ಅವಳನ್ನು ವಿವಿಧ ರೀತಿಗಳಲ್ಲಿ ಚಿತ್ರಿಸಿ ದೊಡ್ಡ ಕಲಾವಿದೆಯನ್ನಾಗಿ ಮಾಡಬೇಕು ರಾಜೇಂದ್ರ, ಸುನಿಲ್‌ಕುಮಾರ್ ನಂತಹವರು ಎಷ್ಟು ಮಂದಿ ಅವಳ ಬದುಕಿನಲ್ಲಿ ಬಂದು ಹೋಗಬೇಕೋ

ಪವಿತ್ರ ಮಾಲತಮ್ಮ, ಸೆಟ್ಟಿಗೆ ಹಿಂತಿರುಗಿದಾಗ ಅಲ್ಲೊಂದು ಸಣ್ಣ ಗಲಭೆಯೇ ನಡೆದಿತ್ತು. ರಾಜೇಂದ್ರ ಪವಿತ್ರಳ ಗ್ರೀನ್ ರೂಮಿನಲ್ಲಿ ಅವಳಿಗಾಗಿ ಕಾದು ಬೇಸತ್ತು, ಎಲ್ಲರೂ ತನಗೆ ಅವಮಾನಿಸಲು ಹೂಡಿರುವ ಆಟವೆಂದು ರೇಗಿ ಹೊರಬಿದ್ದಿದ್ದ. ರವಿಕೃಷ್ಣ ಎಷ್ಟು ಹೇಳಿದರೂ ನಿಲ್ಲದೇ ಹೊರಟು ಹೋಗಿದ್ದ

'ಏನ್ರೀ ನೀವು ಅವರ್ನ 'ಬಾ' ಅಂತ ಹೇಳಿ ಹೊರಟುಹೋದ್ರಿ. ನಮ್ಮ ಮಾನ ಹೋಯ್ತು.' ರವಿಕೃಷ್ಣ ಹೇಳಿದಾಗ ಪವಿತ್ರಳ ಕಣ್ಣುಗಳಲ್ಲಿ ನೀರು ಚಿಮ್ಮಿತು.

'ಅವಳ್ಯಾಕೆ ಬಾ ಅಂದಿದ್ಳು? ಅವಳು ಅವನ ಜೊತೆ ಮಾತೂ ಆಡಲಿಲ್ಲ. ನನಗೆ ಗೊತ್ತಿಲ್ವೇ? ಹಿಂದೆ ಅವಳ ಹತ್ತಿರ ಅತೀ ಸಲಿಗೆಯಿಂದ ವರ್ತಿಸಿದ್ದ ಅಂತ ನಾನೇ ಅವನನ್ನ ಅವಳ ಹತ್ತಿರ ಸೇರಿಸೋಲ್ಲ. ಹಾಗಿರ್ಬೇಕಾದ್ರೆ ಅವನಿಗ್ಯಾರು ಹೇಳಿ ಕಳಿಸಿದ್ರು?' ಮಾಲತಮ್ಮ ರೇಗಿದರು.

'ಇಲ್ಲಾ ಅವರು ಖಂಡಿತ ಹಾಗೇ ಹೇಳಿದರು. ಇವರೇ ಇಲ್ಲಿಗೆ ಬಂದು ನೋಡೂಂತ ಹೇಳಿಕಳಿಸಿದ್ರೂಂತ. ಸಾಲದಕ್ಕೆ ಅವರಿವರು ಮಾತಾಡ್ತಾ ಇದ್ರು. ದೇವರಾಜರ ಎರಡು ಚಿತ್ರಗಳಲ್ಲಿ ಪವಿತ್ರಾನೇ ಮಾಡೋದ್ರಿಂದ

ರಾಜೇಂದ್ರರವರಿಗೂ ರೋಲು ಕೊಡಿಸ್ತೀನೀಂತ ಪ್ರಾಮಿಸ್ ಮಾಡಿದ್ದಂತೆ.'

ಅಲ್ಲಿದ್ದ ಚಿತ್ರದ ಯೂನಿಟ್ಟಿನಲ್ಲೊಬ್ಬರು ಹೇಳಿದಾಗ ಮಾಲತಮ್ಮ ಕಿಡಿಕಿಡಿಯಾದರು.

'ಯಾರ ಕೈಲಿ ಹೇಳಿ ಕಳಿಸ್ತಾಳೆ. ಮನೇಲಿ ಫೋನು ಅವಳು ಮುಟ್ಟೋಲ್ಲ. ನನ್ನ ಬಿಟ್ಟು ಯಾರೂ ಅವಳ ಜೊತೆ ಬರೋಲ್ಲ. ಸಿನಿಮಾ ದವರನ್ನು ಕಂಡಿರುವವಳು ನಾನೊಬ್ಬಳೇ. ನನ್ನ ಇನ್ನುಳಿದ ಮಕ್ಕಳಿಗೇನೂ ಗೊತ್ತಿಲ್ಲ. ಇದೆಲ್ಲಾ ಅವನು ಇವಳ ಹೆಸರು ಕೆಡಿಸೋಕೆ ಕಟ್ತಾ ಇರೋ ಆಟ ಅಷ್ಟೆ.'

ಪವಿತ್ರಳಿಗೆ ಯಾರಿಗೆ ಏನು ವಿವರಣೆ ಕೊಡುವುದು ತಿಳಿಯಲಿಲ್ಲ.

'ಅಮ್ಮಾ ಹಾಗೆಲ್ಲಾ ಮಾತಾಡಬೇಡಾ. ಯಾರ ಹೆಸರು ಯಾರೂ ಕೆಡಿಸಬಾರದು. ನೀನು ಹೀಗೆಲ್ಲಾ ಹೇಳಿದರೆ ನಾಳೆ ಅವರ ಹೆಸರು ಕೆಡೋಲ್ವಾ?' ತಾಯಿಯನ್ನು ಬೇಡಿಕೊಂಡಳು.

'ಕೆಡಲಿ ಬಿಡು. ತಿಳೀದ ಹುಡುಗಿ ಹೆಸರು ಕೆಡಿಸಿ, ಭವಿಷ್ಯಾನೇ ಹಾಳು ಮಾಡೋಕೆ ನಿಂತಿದ್ದಾನೆ. ನಾನೂ ಹೇಳ್ತೀನಿ ನಿನ್ನ ಮೊದಲನೇ ಒಂದೆರಡು ಚಿತ್ರಗಳಲ್ಲಿ ನಿನ್ನ ಜೊತೆ ಹೇಗೆ ವರ್ತಿಸಿದಾಂತ.'

ಅಲ್ಲಿದ್ದ ಕೆಲವು ಪತ್ರಿಕೆಯವರು ಏನೋ ಬರೆದುಕೊಂಡರು. ಯಾರೋ ಕ್ಯಾಮೆರಾ ಕ್ಲಿಕ್ ಮಾಡಿದರು. ಪವಿತ್ರ ಓಡಿಹೋಗಿ ಗ್ರೀನ್ ರೂಮಿನ ಬಾಗಿಲು ಹಾಕಿಕೊಂಡು ಕುಳಿತು ಅಳಲು ಪ್ರಾರಂಭಿಸಿದಳು. ಮತ್ತೆ ಆರಂಭಿಸಬೇಕಾಗಿದ್ದ ಮಧ್ಯಾಹ್ನದ ಶೂಟಿಂಗ್ ಇದರಿಂದ ಮತ್ತೊಂದು ಗಂಟೆ ಕಾಲ ನಿಧಾನವಾಯಿತು. ಅವರಿವರು ಸೇರಿ ಮಾಲ ತಮ್ಮನ ಕೋಪ ಇಳಿಸಿ, ಗ್ರೀನ್ ರೂಮಿನ ಕದ ತೆರಸಿ, ಪವಿತ್ರಳ ಉದ್ವಿಗ್ನತೆ ಕಡಿಮೆ ಮಾಡಿಸಿ ಸಮಾಧಾನ ಪಡಿಸಿ ಶೂಟಿಂಗ್ ಮುಗಿದರೂ ಎಲ್ಲರಿಗೂ ಏನೋ ಕಳವಳ ತಮ್ಮ ಚಿತ್ರದ ಚಿತ್ರೀಕರಣದಲ್ಲಿ ಎಲ್ಲರಿಗೂ ಇದು ನಡೆದುದರಿಂದ ನಾಳೆ ಚಿತ್ರಕ್ಕೆ ಏನಾದರೂ ಮಸಿ ಬಳಿಯುವ ಸಂಗತಿ ಯಾದರೆ! ಒಂದು ವೇಳೆ ಇದರಿಂದ ಒಳ್ಳೆಯ ಪಬ್ಲಿಸಿಟಿ ಆಗಬಹುದು. ಆದರೆ ಪವಿತ್ರಳ ಬಗ್ಗೆ ಇಲ್ಲ ಸಲ್ಲದ ಪುಕಾರು ಹಬ್ಬಿದರೆ ಚಿತ್ರದ ನಿರ್ಮಾಪಕರು, ನಿರ್ದೇಶಕರ ಬಗ್ಗೆಯೂ ಇಲ್ಲ ಸಲ್ಲದ ಅಪಪ್ರಚಾರವಾದೀತು.

ಅವರೆಣಿಸಿದ್ದಂತೆ ಮಾರನೆಯ ದಿನವೇ ಪತ್ರಿಕೆಗಳಲ್ಲಿ ವಿಷಯ ರಂಗು ರಂಗಾಗಿ ಪ್ರಕಟಿಸಲ್ಪಟ್ಟಿತ್ತು. 'ತಾರೆಯೊಬ್ಬಳ ಪವಿತ್ರ ಪ್ರೇಮವೆಂದು

ನಂಬಿ ಬಂದ ಹಿರಿಯ ನಾಯಕನೊಬ್ಬನಿಗೆ ಅರ್ಧ ಚಂದ್ರ'–'ತಾರೆಯ ತಾಯಿಯಿಂದ ನಾಯಕನೊಬ್ಬನಿಗೆ ಅರ್ಧಚಂದ್ರ' ಇದಲ್ಲದೆ ಅಲ್ಲಿ ನಡೆದ ಸಂಗತಿಯನ್ನು ರಸವತ್ತಾಗಿ ಬರೆದಿದ್ದರು. ರಾಜೇಂದ್ರ ಕೆರಳಿ ಪತ್ರಿಕೆಯವರನ್ನು ಫೋನಿನಲ್ಲಿ ಮಾತಾಡಿ ಡಿಫಮೇಶನ್ ಕೇಸು ಹಾಕುತ್ತೇನೆಂದು ಹೆದರಿಸಿದ್ದ. ಪವಿತ್ರ ಪೇಪರಿನಲ್ಲೇ ಮುಖ ಮುಚ್ಚಿ ಬಿಕ್ಕಿಬಿಕ್ಕಿ ಅತ್ತಳು.

ಪತ್ರಿಕೆಯವರು ಬೇಕುಬೇಕಾಗಿ ನನ್ನ ಮಗಳ ಮೇಲೆ ಇಲ್ಲಸಲ್ಲದ ಅಪಪ್ರಚಾರ ಮಾಡುತ್ತಿದ್ದಾರೆ. ಇದರಲ್ಲಿ ಯಾರದೋ ಅವಳನ್ನು ಕಂಡರಾಗದವರ ಕೈವಾಡವಿದೆ. ಎಂದು ಮಾಲತಮ್ಮ ಪತ್ರಿಕೆಗೆ ದೂರಿತ್ತರು. ರೆಕ್ಕೆ, ಪುಕ್ಕ ಬಾಲ ಎಲ್ಲ ಬೆಳೆದು ಎಲ್ಲ ಕಡೆಯೂ ಅದೇ ವಿಷಯವಾಗಿ ಹೋಯಿತು

'ರಾಜೇಂದ್ರ ಪವಿತ್ರಳ ಮೇಲೆ ಕಣ್ಣು ಹಾಕಿದ್ನಂತೆ, ಪವಿತ್ರಾನೇ ಆಟ ಆಡ್ತಿರಬೇಕು ಹೇಗಿದ್ರೂ ಹೆಸರು ಮಾಡಿರೋ ನಟ, ಅವನ್ನ ಹಿಡಿದ್ರೆ ತನಗೆ ಚಾನ್ಸು ಸಿಗುತ್ತೇಂತ' 'ಇದೆಲ್ಲಾ ಬರಿಯ ಪಬ್ಲಿಸಿಟಿ ಸ್ಟಂಟ್, ದೇವರಾಜ್, ಪವಿತ್ರಾಗೂ ಬಹಳ ಹಿಂದಿನ ನಂಟಂತೆ. ಅವಳು ರಾಜೇಂದ್ರನಿಗೆ ಮುಂದಿನ ಚಿತ್ರಗಳಲ್ಲಿ ಅವನಿಗೆ ಹೀರೋ ಪಾತ್ರ ಕೊಡಬೇಕೂಂತ ಹೇಳಿದ್ಲಂತೆ' 'ಆ ಅವಳ ಅಮ್ಮ ಇದ್ದಾಳೆ ನೋಡಿ ಚಿನಾಲಿ. ಮಗಳ್ನ ಉಪಯೋಗಿಸ್ಕೊಂಡು ತಾನು ಮಾಡ್ತಾಳಂತೇರಿ.'

ಪವಿತ್ರಳಿಗಂತೂ ಜೀವ ಹಿಡಿಯಾಗಿ ಬಿಟ್ಟಿತು. ತನ್ನ ವೈಯಕ್ತಿಕ ಬದುಕು ಸಮಾಜದ ಎಲ್ಲರ ಬಾಯಲ್ಲೂ ಬಂದು ತಾನೊಂದು ಸಮಾಜದ ಸ್ವತ್ತು. ತಾನೇನು ಮಾಡಿದರೂ ಅವರೆಲ್ಲ ಆಡಿಕೊಳ್ಳಬಹುದು. ಅವರವರ ಜೀವನದಲ್ಲಿರುವ ಏಕಾಂತತೆ ತನಗಿಲ್ಲವಾಯಿತೇ ? ತನ್ನನ್ನು ಹಾಡಿಹೊಗಳುವಾಗ ಈ ಎಲ್ಲ ಜನ ಬೇಕಾಗುತ್ತದೆ. ಆದರೆ ತನ್ನ ವೈಯಕ್ತಿಕ ಬದುಕಿನ ಬಗ್ಗೆ ಹೀಗೆಲ್ಲಾ ಆಡಿಕೊಂಡರೆ ತಾನು ಬದುಕುವುದಾದರೂ ಹೇಗೆ ? ಉಪ್ಪು ತಿಂದ ಮೇಲೆ ನೀರು ಕುಡಿಯಲೇಬೇಕು. ಪತ್ರಿಕೆಗಳು ಇದನೆಲ್ಲಾ ಪ್ರಕಟಿಸ ಬೇಕಾದ ಪ್ರಮೇಯವೇನಿತ್ತು ಅತ್ತೂ ಅತ್ತೂ ಕೊರಗಿದಳು. ರೋಜಿ, ಲಲ್ಲಿ ಇಬ್ಬರೂ ಎಲ್ಲರಿಗೂ ಹಿಡಿಶಾಪ ಹಾಕಿದರು. ಮಾಲತಮ್ಮನಿಗಂತೂ ಎಲ್ಲರೂ ತಮ್ಮ ಪಾಪುವಿನ ಬದುಕನ್ನು ನಾಶಮಾಡಲು ಬಂದ ನರ ರಾಕ್ಷಸರೆಂದೇ ಭಾವಿಸಿದರು. ತನಗೆ ತಾನೇ ಸಮಾಧಾನ ತಂದುಕೊಂಡು ಪವಿತ್ರ ನಿಧಾನವಾಗಿ ಯೋಚಿಸತೊಡಗಿದಳು. ಈ ರೀತಿಯ ಗಾಳಿ ಮಾತಿ

ನಿಂದ ರಾಜೇಂದ್ರನ ಭವಿಷ್ಯ ಪೂರಾ ಹಾಳಾದಂತೆಯೇ. ತನಗೇನೋ ಒಂದು ಬಗೆಯ ಕೆಟ್ಟ ಪ್ರಚಾರ ಸಿಕ್ಕಿದೆ. ತನ್ನ ಮಾತಿನಂತೆ ಅವನು ಬಂದು ಈ ಸಂದಿಗ್ಧದಲ್ಲಿ ಸಿಕ್ಕಿಹಾಕಿಕೊಂಡಾಯಿತು. ನೋಡಿದರೆ ತಪ್ಪು ತನ್ನದೇ. ತಾನೇ ಹೋಗಿ ಇವನ ಬಳಿ ಕ್ಷಮಾಪಣೆ ಕೇಳಿಕೊಳ್ಳಬೇಕು. ಇದು ಯಾರಿಗೂ ತಿಳಿಯದಂತೆ, ಕೊನೆಗೆ ತನ್ನ ತಾಯಿಗೂ ತಿಳಿಯದಂತೆ ಆಗಬೇಕು. ಇದಕ್ಕೆ ಸಹಾಯಕನಾಗಬಲ್ಲವನು ಅರಸಪ್ಪನೊಬ್ಬನೇ. ಅವನಿಲ್ಲದಿದ್ದಲ್ಲಿ ರೀಟಾಳನ್ನು ಹೇಗಾದರೂ ಒಲಿಸಿಕೊಳ್ಳಬೇಕು. ಇವೆ ರಡೇ ದಾರಿ.

ಈ ಗಲಾಟೆಯಲ್ಲಿ ದೇವರಾಜ್‌ರಿತ್ತ ಇಪ್ಪತ್ತೈದುಸಾವಿರ ಹಿಂತಿರುಗಿಸ ಬೇಕೆಂದು ಹೇಳಿದ್ದ ಗಂಗಾಧರಯ್ಯ ಕೊಂಚ ಹಿಂದೇಟು ಹಾಕಿದರು.

'ಈ ತರಲೆ, ಗಲಾಟೆಯೆಲ್ಲ ಕಡಿಮೆಯಾಗಲಿ ಆಮೇಲೆ ನಮ್ಮ ಚಿತ್ರದ ಬಗ್ಗೆ ವಿಚಾರ ಮಾಡೋಣ. ಇಲ್ಲದಿದ್ದರೆ ಸುನಿಲ್‌ಕುಮಾರ್ ಮತ್ತು ರಾಜೇಂದ್ರ ಇವರ ಬಗ್ಗೆ ಭಿನ್ನಾಭಿಪ್ರಾಯವಿದೆಯೆಂದು ಸುದ್ದಿ ಹರಡೀತು.'

ಇದನ್ನೇ ಕಾಯುತ್ತಿದ್ದ ಮಾಲತಮ್ಮ ಒಂದೇ ಏಟಿಗೆ ಎರಡು ಹಕ್ಕಿ ಗಳನ್ನು ಹೊಡೆಯಲು ಹವಣಿಸಿದರು.

-'ಪಾಪ ನಮ್ಮ ಪಾಪೂವಂತೂ ಕಂಗೆಟ್ಟು ಹೋಗಿದ್ದಾಳೆ. ಅವಳಿಗೆ ಯಾವುದಕ್ಕೂ ಮನಸಿಲ್ಲ. ಮದ್ರಾಸಿಗೆ ಕರೆದೊಯ್ದು ಯಾರಾದರೂ ಒಳ್ಳೆಯ ಡಾಕ್ಟರಿಗೆ ತೋರಿಸಬೇಕು.' ಎಂದು ದೇವರಾಜ್‌ಗೆ ಹೇಳಿದ ಕೂಡಲೇ ಅವರು ಒಪ್ಪಿದುದಲ್ಲದೇ ತಮ್ಮ ಕಾರನ್ನು ಅವಳನ್ನು ಕರೆ ದೊಯ್ಯಲೇ ಇರಿಸಿದರು. ಪವಿತ್ರ ಸಿಡಿಮಿಡಿಗೊಂಡಳು.

'ಏನಮ್ಮಾ ಇದೆಲ್ಲಾ. ನಾಳೆ ನನಗೆ ಯಾವುದೋ ದೊಡ್ಡ ರೋಗ ವಿದೆಯೆಂದು ಹರಡುತ್ತಾರೆ ಅದೂ ಅಲ್ಲದೇ ನೀನು ಗಂಗಾಧರಯ್ಯನವರ ಹತ್ತಿರ ದೇವರಾಜ್‌ರವರು ಮುಂಗಡ ಕೊಟ್ಟ ಹಣ ಹಿಂತಿರುಗಿಸುವೆನೆಂದು ಹೇಳಿ ಈಗ ನೋಡಿದರೆ ಅವರ ನೆರವನ್ನೇ ಕೇಳುತ್ತಿದ್ದೀಯಲ್ಲಾ. ಇದು ಸರಿಯಲ್ಲ.'

'ಸರಿ, ತಪ್ಪು ಅದೆಲ್ಲಾ ಈ ರಂಗದಲ್ಲಿ ಪ್ರಶ್ನಿಸುವವರ್‍ಯಾರು ? ಅವರ ವರ ಮೂಗಿನ ನೇರಕ್ಕೆ ಅವರು ನಡೆಯುತ್ತಾರೆ. ಅವರವರಿಗೆ ಸರಿಹೊಂದು ವಂತೆ ಹೇಳಿಕೆ ಕೊಡುತ್ತಾರೆ. ಇರಲಿ ಬಿಡು. ನಾಲ್ಕು ದಿನ ಮದ್ರಾಸಿಗೆ ಹೋಗಿದ್ದರೆ ಈ ಅಪಪ್ರಚಾರದ ಬಿಸಿ ಕಡಿಮೆಯೂ ಆಗುತ್ತೆ. ನಿನಗೆ

ಮೊದಲಿನಿಂದಲೂ ಪ್ರೋತ್ಸಾಹ ಕೊಟ್ಟ ದೇವರಾಜ್‌ರವರ ಮನಸ್ಸಿಗೂ ಸಂತೋಷವಾಗುತ್ತದೆ.'

ಪವಿತ್ರಳ ವ್ಯೆಯ್ಯಾರಿದು ಹೋಯಿತು.

'ನನ್ನ ನಾಯಿಗೆ ತಿಂಡಿ ಹಂಚುವಂತೆ ಎಲ್ಲರಿಗೂ ಒಪ್ಪಿಸುತ್ತೀಯಾ? ನಾನು ದೇವರಾಜ್‌ರವರನ್ನು ಸಂತೋಷಪಡಿಸಬೇಕೇ ನಾನೇನು ಮಾರು ಕಟ್ಟೆಯ ಹೆಣ್ಣೇ?'

'ಅದಕ್ಕೇ ನಿನ್ನ ಹುಚ್ಚು ಹುಡುಗಿ ಅನ್ನೋದು. ಸುಮ್ಮನಿರು, ನಿನಗೆ ತಿಳಿಯೋಲ್ಲ. ನಿನ್ನ ಆರೋಗ್ಯದ ಬಗ್ಗೆ ಹೇಳಿರುವುದರಿಂದ ಅವರೇನೂ ಮಾಡುವುದಿಲ್ಲ. ಬಿಡು. ಅದರ ಬಗ್ಗೆ ನಾನು ಎಚ್ಚರಿಕೆ ವಹಿಸುತ್ತೇನೆ. ನನ್ನೊಡನೆ ಸಹಕರಿಸು ಸಾಕು.'

ಮಾಲತಮ್ಮ ಹೇಳಿದಾಗ ಪವಿತ್ರ ತಾಯಿಯ ದೂರಾಲೋಚನೆ, ದುರಾಲೋಚನೆಗಳ ಬಗ್ಗೆ ಅಸಹ್ಯಪಟ್ಟುಕೊಂಡಳು. ಮನಸ್ಸಿನಲ್ಲೇ ಕೊರೆಯುತ್ತಿದ್ದ ಮಾತನ್ನು, ಅವಳ ಮುಂದಿಡಲು ಇದೇ ಸಮಯವೆಂದರಿತಳು.

'ನಾನು ರಾಜೇಂದ್ರನ್ನ ಪ್ರೀತಿಸ್ತೀನಿ, ಅವರೂ ಅಷ್ಟೆ. ನನ್ನಿಂದ ನೀನು ಅವರನ್ನು ದೂರಮಾಡಕೂಡದು. ಹಾಗಾದರೆ ಒಪ್ಪುತ್ತೀನೆ.'

'ಗಂಡಸರ ಬಯಕೆಗೂ, ಪ್ರೀತಿಗೂ ನಿನಗೆ ವ್ಯತ್ಯಾಸಗೊತ್ತಿಲ್ಲ ಪಾಪೂ. ರಾಜೇಂದ್ರನಿಗೆ ಕೈಹಿಡಿದ ಹೆಂಡತಿಯಿದ್ದಾಳೆ, ಮಕ್ಕಳಿದ್ದಾರೆ. ನಿನ್ನ ಮೇಲಿನ ಆಸೆಯಿಂದ ಹೀಗೆ ಹೇಳಿರಬಹುದು ಅಥವಾ ತನ್ನ ಇಳಿದು ಹೋಗುತ್ತಿರುವ ಹೆಸರು ಉಳಿಸಿಕೊಂಡು ನಿನ್ನಿಂದ ಮೇಲೆ ಬರಲು ಯತ್ನಿಸುತ್ತಿರಬೇಕು. ಹಗಲು ಕಂಡ ಬಾವಿಯಲ್ಲಿ ಇರುಳು ಬೀಳಬಾರದು. ಅವನನ್ನು ಮರೆತುಬಿಡು' ಮಾಲತಮ್ಮ ಬುದ್ಧಿ ಹೇಳಿದರು.

'ಅವರನ್ನು ಮರೆಯುವ ಬದಲು ನಾನು ವಿಷ ತೆಗೆದುಕೊಂಡು ಸಾಯುತ್ತೇನೆ. ನನ್ನಿಂದಲೇ ಈ ಗಲಾಟೆಯೆಲ್ಲಾ ಆದುದು.'

ಪವಿತ್ರ ತಾಯಿಯ ಮುಂದೆ ಎಲ್ಲ ವಿವರವಾಗಿ ಹೇಳಿ ಅತ್ತಾಗ ಮಾಲತಮ್ಮ ದಂಗಾದರು. ತನ್ನ ಎಳೆಯ ಬುದ್ಧಿಯ ಮಗಳು ಇಲ್ಲಿಯವರೆಗೆ ಹೋಗುವಳೆಂಬ ಅರಿವಿರಲಿಲ್ಲ. ಅವಳಿಗೆ ತಾವು ನಿಜದ ಸಾಕ್ಷಾತ್ಕಾರ ಮಾಡಿಸಲೇಬೇಕು. ಆಗಲೇ ಅವಳಿಗೆ ಬುದ್ಧಿ ಬರುವುದು. ಅವಳ ಮುಂದೆ ತಾವು ಕೋಪಗೊಳ್ಳಬಾರದು.

'ಪಾಪೂ, ನೀನು ಹೇಳುವುದು ಸರಿ. ರಾಜೇಂದ್ರನ ಹುಟ್ಟಿದ ಹಬ್ಬಕ್ಕೆ

ಹೋಗಬೇಕೆಂದು ಹೇಳುತ್ತಿದ್ದೆಯಲ್ಲವೇ ? ಅವನ ಹೆಂಡತಿ ಕರೆದರೆ ಖಂಡಿತ ಹೋಗಿ ಕ್ಷಮಾಪಣೆ ಕೇಳಿಕೊಳ್ತಿನಿ. ಈಗ ಸುಮ್ಮನಿರು' ಎಂದು ಸಮಾಧಾನ ಹೇಳಿ ಲಲ್ಲಿ, ರೋಜಿಯರನ್ನು ಗಟ್ಟಿಯಾಗಿ ಕರೆದು ತರಾಟೆಗೆ ತೆಗೆದುಕೊಂಡರು.

'ನನ್ನ ಮಕ್ಕಳಾಗಿ ನನಗೇ ಮಣ್ಣು ತಿನ್ನಿಸ್ತೀರಾ. ಅವಳ ಅನ್ನ ತಿಂದು ಅವಳ ಬದುಕು ಹಾಳು ಮಾಡ್ತೀರಾ ? ಹೀಗೆ ಇನ್ನು ಮುಂದೆ ನೋಡಿದರೆ ನಿಮ್ಮನ್ನ ದೂರ ಇಟ್ಟು ತಿಂಗಳಿಗೆ ಇಷ್ಟು ಹಣಾಂತ ಕಳಿಸಿ ಬಿಡ್ತೀನಿ. ಎಲ್ಲಾದರೂ ಹಾಳಾಗಿ ಹೋಗಿ. ಮಾಧೂ ಬರಲಿ, ನಿಮಗೆ ಮಾಡಿಸ್ತೀನಿ' ಎಂದು ಹೆದರಿಸಿದರು.

*   *   *   *

ಹುಟ್ಟಿದ ಹಬ್ಬದ ಸಮಾರಂಭ ಅದ್ದೂರಿಯಾಗೇ ನಡೆದಿತ್ತು. ಅನೇಕ ಹಿರಿಯ ನಿರ್ಮಾಪಕರೂ, ನಿರ್ದೇಶಕರೂ, ತಾರೆಯರು, ನಾಯಕ ನಟರೂ, ಚಲನಚಿತ್ರದ ಅನೇಕ ಗಣ್ಯವ್ಯಕ್ತಿಗಳು ಬಂದು ರಾಜೇಂದ್ರನಿಗೆ ಅಭಿನಂದಿಸಿ ಉಡುಗೊರೆಯನ್ನೋ, ಹೂವಿನ ಗುಚ್ಛಗಳನ್ನೋ ಅರ್ಪಿಸಿ ಕೆಲವರು ಅವನನ್ನು ಆಲಂಗಿಸಿಯೋ, ಕೈಕುಲುಕಿಯೋ ಹೋಗುತ್ತಿದ್ದರು. ರಾಜೇಂದ್ರ ಪಾರ್ಟಿಗಾಗಿ ಬಹಳ ಹಣ ಖರ್ಚು ಮಾಡಿದ್ದ. ಮದ್ಯದ ತರತರಹದ ಬಾಟಲುಗಳು ಅಗಲೇ ಟೇಬಲ್ಲಿನ ಮೇಲೆ ಅಣಿಯಾಗಿತ್ತು. ತಂಪು ಪಾನೀಯಗಳು ಮತ್ತೊಂದೆಡೆ. ಒಂದು ಪಕ್ಕಕ್ಕೆ ಬಫೆಗಾಗಿ ಶಾಖಾ ಹಾರಿಗಳಿಗಾಗಿಯೂ, ಮಾಂಸಾಹಾರಿಗಳಿಗಾಗಿಯೂ ಪ್ರತ್ಯೇಕವಾಗಿ ಏರ್ಪಾಡುಗಳು ನಡೆದಿದ್ದವು. ತಾರೆಯರಲ್ಲಿ ಕೆಲವರು ಒಂದೆಡೆ ಕುಳಿತು ಮೆಲುನಗುತ್ತಾ, ಹರಟುತ್ತಾ, ಕುಲುಕುಲು ನಗುತ್ತಾ, ವಯ್ಯಾರವಾಗಿ ಭಾವ ಭಂಗಿಗಳನ್ನು ಪ್ರದರ್ಶಿಸುತ್ತಾ ಯಾರ ಕಣ್ಣು ತಮ್ಮತ್ತ ಹರಿದಿದೆಯೋ ತುದಿಗಣ್ಣಿನಲ್ಲಿ ಗಮನಿಸುತ್ತಿದ್ದರು. ಮತ್ತೆ ಕೆಲವರು ಸಹನಟರೊಂದಿಗೆ, ಸ್ನೇಹಿತರೊಂದಿಗೆ ನಗುತ್ತಾ ತಮ್ಮದೇ ಒಂದು ಗುಂಪು ಮಾಡಿಕೊಂಡಿದ್ದರು. ಕೆಲವು ನಟರು ನಿರ್ದೇಶಕ, ನಿರ್ಮಾಪಕರೊಂದಿಗೆ ಅತ್ಯಂತ ಗೌರವಯುತರಾಗಿ ನಡೆದುಕೊಳ್ಳುತ್ತಾ ಅವರೊಂದಿಗೇ ನಗುತ್ತಾ ಮಾತನಾಡುತ್ತಿದ್ದರು. ಅಲ್ಲಿ ನೆರೆದಿದ್ದವರ ಉಡುಪೆಲ್ಲಾ ಒಂದೊಂದು ಬಗೆಯ ಆಕರ್ಷಣೆ. ಕೆಲವರು ಸರಳವಾಗಿದ್ದು ಇವರು ನಟನಟಿಯರೇ

ಎಂದು ಅನುಮಾನ ಬರುತ್ತಿತ್ತು. ಮತ್ತೆ ಕೆಲವರು ಅತೀವ ತೋರಿಕೆಯ ಉಡುಪು ಧರಿಸಿ ಎಲ್ಲರ ಕಣ್ಣುಗಳೂ ತಮ್ಮತ್ತ ಹರಿಯುವಂತೆ ಆಕರ್ಷಿಸಿದ್ದರು. ಕೆಲವರು ಮದ್ಯ ಸೇವನೆಯಲ್ಲಿ ತೊಡಗಿದ್ದರೆ ಮತ್ತೆ ಕೆಲವರು ತಂಪುಪಾನೀಯ ಹಿಡಿದು ಯಾವುದೋ ಮಾತುಕತೆ ಗಹನವಾಗಿ ನಡೆಸಿದ್ದರು. ಆದರೆ ಅಲ್ಲಿ ಬಂದವರೆಲ್ಲಾ ಒಂದೇ ವಿಷಯ ಮಾತನಾಡುತ್ತಿದ್ದುದು, ಚಲನಚಿತ್ರರಂಗದ ವಿಷಯ. ವೈಯಕ್ತಿಕ ವಿಷಯಗಳಿಗೆ ಆ ಸ್ಥಳ ಸಲ್ಲದು. ಸರ್ಕಾರದ ಧೋರಣೆ, ಮನರಂಜನೆ ತೆರಿಗೆ, ಪ್ರದರ್ಶನ ಗೃಹಗಳ ತೊಂದರೆ, ಸೆನ್ಸಾರ್ ಬೋರ್ಡಿನ ರಾಜಕೀಯ, ಅಜ್ಞಾನ, ಇವುಗಳೇ ಹೊರತು ಯಾವ ವೈಯಕ್ತಿಕ ವಿಷಯವಿಲ್ಲ. ಒಬ್ಬರನ್ನೊಬ್ಬರು ಒಳಗೇ ಎಷ್ಟು ದ್ವೇಷಿಸಿದರೂ, ಅಸೂಯೆ ಪಟ್ಟರೂ ತುಟಿಗಳಮೇಲೆ ನಗೆ ಲೇಪನ, ಮಾತಿನಲ್ಲಿ ಜೇನಿನ ಲೇಪನ ಎಲ್ಲವೂ ಸೋಗು.

ರಾಜೇಂದ್ರ ಬಿಳಿಯ ಶೇರ್ವಾನಿ, ಕುರ್ತಾ ಹಾಕಿದ್ದರೂ ಕಾಯ್ದುಕೊಂಡು ಬಂದಿದ್ದ ಅಂಗಸೌಷ್ಟವ, ಯೌವ್ವನದಿಂದ ಎತ್ತಿಕಾಣುತ್ತಿದ್ದ. ಇಷ್ಟು ಲಕ್ಷಣವಾಗಿರೋ ನಾಯಕ, ಈಚೀಚೆಗೆ ಇವನ ಚಿತ್ರಗಳು ಬಾಕ್ಸಾಫೀಸಿನಲ್ಲಿ ಗೋತ ಹೊಡೆಯಲು ಕಾರಣವೇನಿರಬಹುದು? ಅನೇಕ ನಿರ್ದೇಶಕ, ನಿರ್ಮಾಪಕರು ಒಳಗೊಳಗೇ ಯೋಚಿಸುತ್ತಿದ್ದರು. ಅವನ ಬಗ್ಗೆ ಜನ ಆಗಲೇ ನೋಡಿ ಸಾಕಾಗಿ ಬೇಸರಪಟ್ಟಿರುವುದರಿಂದಲೋ ಒಳ್ಳೆಯ ಪಾತ್ರಗಳು ದೊರೆಯದಿದ್ದರಿಂದಲೋ, ಒಳ್ಳೆಯ ಚಿತ್ರ ಕಥೆ, ಅವನಿಗೆ ತಕ್ಕಂತ ಪಾತ್ರಗಳು ಒಂದು ವೇಳೆ ದೊರೆತರೂ ಹೊಸ ಮುಖಗಳನ್ನೂ, ವೈವಿಧ್ಯತೆಯನ್ನೂ ಅಪೇಕ್ಷಿಸುವ ಜನಸಮೂಹವಿರುವುದರಿಂದಲೋ ಒಳ್ಳೆಯ ನಾಯಕಿಯರು ಸಿಗದಿರುವುದರಿಂದಲೋ, ಅವನಿಗಿಂತ ಲಕ್ಷಣವಾದ ಒಳ್ಳೆಯ ನಟರು ಬಂದು ಪೈಪೋಟಿ ಬಂದುದರಿಂದಲೋ ಯಾರಿಗೂ ಸ್ಪಷ್ಟವಾಗಿ ತಿಳಿಯದು.

ಒಂದು ಘಳಿಗೆ ಎಲ್ಲವೂ ಸ್ತಬ್ಧ. ಪವಿತ್ರ ತಿಳಿನೀಲಿಯ ಒಡಲೆಲ್ಲ ಜರಿಯ ಚುಕ್ಕಿಗಳಿದ್ದ ತೆಳುವಾದ ಷಿಫಾನ್ ಸೀರೆಯುಟ್ಟು ಅತ್ಯಂತ ಆಕರ್ಷಕವಾಗಿ ಅಲಂಕರಿಸಿಕೊಂಡು ಬಂದಿದ್ದಳು. ಎತ್ತಿಕಟ್ಟಿದ ತುರುಬಿನ ಒಂದು ಪಕ್ಕಕ್ಕೆ ಹಾಗೆಯೇ ಬಿಟ್ಟಿದ್ದ ಉದ್ದಕೂದಲಿನ ಜೊಂಪೆ, ತುರುಬಿನ ಮಧ್ಯೆ ಅಲ್ಲಲ್ಲಿ ಮುತ್ತಿನ ಮಣಿಗಳು, ಕಿವಿಯಲ್ಲಿ ಹೊಳೆಯುತ್ತಿದ್ದ ಚಿನ್ನ ಮುತ್ತಿನ ತೂಗೂಯ್ಯಾಲೆ, ಕತ್ತಿಗೆ ಸುತ್ತಿದ್ದ ಚೋಕರ್, ಪಾರದರ್ಶಕ

ಸೀರೆಯ ಮರೆಯಲ್ಲಿ ಕಂಡುಬರುತ್ತಿದ್ದ ದೇಹ ಸಿರಿ ಎಲ್ಲರ ಗಮನ ಅವಳತ್ತ! ಅವಳ ಗಮನವೆಲ್ಲಾ ಅವನತ್ತ! ಅವಳು ಬಂದುದನ್ನು ಮೂಲೆಯಲ್ಲಿ ಯಾರೊಡನೆಯೋ ಮಾತನಾಡುತ್ತಿದ್ದ ರಾಜೇಂದ್ರನ ಪತ್ನಿ ಪ್ರಮದ ಕ್ಷಣ ಕಾಲ ಅವಳನ್ನೇ ದಿಟ್ಟಿಸಿದಳು. ಇವಳೇ ಅಲ್ಲವೇ ತನ್ನ ಪತಿಯನ್ನು ಬಲೆಗೆ ಹಾಕಿಕೊಂಡವಳು! ಪವಿತ್ರ ರಾಜೇಂದ್ರನತ್ತ ನೋಡಿ ನಕ್ಕಾಗ ಅವನು ಕಂಡೂ ಕಾಣದ ಹಾಗೆ ಮುಖ ತಿರುಗಿಸಿದ ಕ್ಷಣಕಾಲ ಅಪ್ರತಿಭಳಾದರೂ ಅದನ್ನು ತೋರಗೊಡದೇ ಅವನಿಗೆ ಪುಷ್ಪಗುಚ್ಛವನ್ನರ್ಪಿಸುತ್ತಾ ನಕ್ಕಳು.

'ಹುಟ್ಟಿದ ಹಬ್ಬದ ಶುಭಕಾಮನೆಗಳು....' ಅವನ ಮುಖ ಗಂಭೀರ ವಾಯಿತು. ಹಿಂದಿನ ಸಲ ತನ್ನ ಹೆಂಡತಿಯೇ ಹೋಗಿ ದೀಪಾವಳಿಗಾಗಿ ಕರೆದಾಗ, ಬರದೇ ಮನೆಯಿಂದಲೇ ತನಗೆ ಶುಭಸಂದೇಶ ಕಳಿಸಿದ್ದಳು ಪವಿತ್ರ. ಅವಳಿಗಾಗಿ ಹಾತೊರೆದು ತಾನು ಪಾರ್ಟಿಯ ಮಧ್ಯದಲ್ಲೇ ಏನೋ ಸಬೂಬು ಒಡ್ಡಿ ಅವಳಿದ್ದ ಡಬ್ಬಿಂಗ್ ಸೆಕ್ಷನ್‌ಗೆ ಧಾವಿಸಿ, ಅವಳನ್ನು ಏಕಾಂತದಲ್ಲಿ ಅಲ್ಲಪ್ಪನಿಂದ ಕರೆಸಿಕೊಂಡು ಮುತ್ತಿನ ಮಳೆಗರೆದಿರಲಿಲ್ಲವೇ?

'ಪವಿತ್ರ, ಇವೊತ್ತು ನಿನ್ನ ಮುಖ ನೋಡದೇ ಹೇಗಿರಲಿ? ಮನೆಯಲ್ಲಿ ಸಾವಿರ ದೀಪಗಳಿದ್ದರೂ ಈ ನಿನ್ನ ಕಣ್ಣುಗಳ ಜ್ಯೋತಿ ನೋಡದಿದ್ದರೆ ನನಗೆ ದೀಪಾವಳಿ ಹೇಗಾದೀತು?' ಎಂದು ನುಡಿದಿರಲಿಲ್ಲವೇ?

ಆದರೆ ಇಂದು ತಾನು ಹೇಳಿದೊಂದೇ ಮಾತಿನಿಂದ ತಾನಾಗಿಯೇ ತನ್ನ ಮನೆಯ ಬಾಗಿಲಿಗೆ ಬಂದಿದ್ದಾಳೆ. ತನಗೆ ಗ್ರೀನ್ ರೂಮಿಗೆ ಬರಲು ಹೇಳಿಕಳಿಸಿ, ಅವಳು ತನ್ನ ಎದುರಾಳಿಯಾಗಿದ್ದ ಸುನಿಲ್‌ಕುಮಾರ್ ನೊಂದಿಗೆ ಚಕ್ಕಂದವಾಡುತ್ತಾ ಕುಳಿತಿರಲಿಲ್ಲವೇ? ತನಗೆ ಅವಮಾನಿಸಲೇ ಅವಳು ಹೀಗೆ ಮಾಡಿರುವುದು. ಅಲ್ಲದೇ ದೇವರಾಜ್‌ರವರನ್ನು ಕೇಳಿ ತನಗೆ ತನ್ನ ಮುಂದಿನ ಚಿತ್ರಗಳಲ್ಲಿ ನಾಯಕನ ಪಾತ್ರ ಕೊಡಿಸಲು ಯತ್ನಿಸುವುದಾಗಿ ಮಾತು ಕೊಟ್ಟವಳು ಈಗ ಗಂಗಾಧರಯ್ಯ, ಜಮಖಂಡಿ, ಸತ್ಯ ಕಾಮ್‌ರವರ ಮೂಗಿನ ನೇರಕ್ಕೆ ಹೋಗಿ ದೇವರಾಜ್‌ರವರ ಎರಡು ಚಿತ್ರಗಳ ಕಾಲ್‌ಶೀಟುಗಳನ್ನೇ ಮುಂದೆ ತಳ್ಳಿರಲಿಲ್ಲವೇ? ದೇವರಾಜ್‌ರವರೇ ಸುನಿಲ್‌ಕುಮಾರನನ್ನು ನಾಯಕನನ್ನಾಗಿರಿಸಿಕೊಂಡು ಪವಿತ್ರಳನ್ನು ನಾಯಕಿಯಾಗಿ ಮಾಡಿ ಮುಂದಿನ ಎರಡು ಚಿತ್ರಗಳನ್ನು ತಯಾರಿಸುವೆ ನೆಂದು ಪತ್ರಿಕಾ ಗೋಷ್ಠಿಯಲ್ಲಿ ಹೇಳಿರಲಿಲ್ಲವೇ? ಇದೆಲ್ಲಾ ಇವಳ ನಾಟಕ! ತನಗೆ ಚಿತ್ರರಂಗದಲ್ಲಿ ಭದ್ರವಾಗಿ ನೆಲೆಯೂರಬೇಕಿತ್ತು. ಆಗ ತಾನು

ಹಿರಿಯ ನಟಿ. ತನ್ನನ್ನು ಅವಲಂಬಿಸಿದ್ದಳು. ಈಗ ಇವಳೇ ಜನಪ್ರಿಯ ಹೊಸ ನಾಯಕಿ. ತಾನು ಅವಳನ್ನು ಅವಲಂಬಿಸಿರುವುದರಿಂದ ತನ್ನನ್ನು ಕಡೆಗಾಣಿಸಿದ್ದಾಳೆ. ಇವಳು ಇಲ್ಲಿ ಬರಲು ಕಾರಣ ತನ್ನನ್ನು ಅಭಿನಂದಿಸ ಲಲ್ಲ. ತನ್ನ ದೊಡ್ಡಸ್ತಿಕೆ, ಜನಪ್ರಿಯತೆ ತೋರಿಸಿಕೊಳ್ಳಲು! ರಾಜೇಂದ್ರ ಹಲ್ಲು ಮುಡಿ ಕಚ್ಚಿ 'ಥ್ಯಾಂಕ್ಸ್' ಎಂದು ಅವಳಿಂದ ಪುಷ್ಪಗುಚ್ಛ ಸ್ವೀಕರಿಸು ವಷ್ಟರಲ್ಲಿ ಅಲ್ಲಿ ನೆರೆದಿದ್ದ ಮುಕ್ಕಾಲು ಜನ ಅವಳತ್ತ ಧಾವಿಸಿದ್ದರು. ಅವನ ಹುಟ್ಟಿದ ಹಬ್ಬದ ಪಾರ್ಟಿಯಲ್ಲಿ ಅವನಿಗೇ ಪ್ರಾಶಸ್ತ್ಯವಿರಲಿಲ್ಲ.

'ಪವಿತ್ರಾ, ನಿಮ್ಮ ಮುಂದಿನ ಚಿತ್ರ ಯಾವುದು?' 'ಸುನಿಲ್ ಕುಮಾರ್‌ನೊಂದಿಗೆ ನಾಲ್ಕು ಚಿತ್ರಗಳು ಬುಕ್ಕಾಗಿದೆಯಂತೆ ಹೌದೇ?'

'ನಾವೂ ಒಂದು ಫಾರ್ಮುಲಾ ಚಿತ್ರ ತಯಾರಿಸಬೇಕೆಂದಿದ್ದೇವೆ. ನಿಮ್ಮನ್ನೂ ಸುನಿಲ್‌ಕುಮಾರ್‌ನನ್ನೂ ಹಾಕಿಕೊಳ್ಳಬೇಕೆಂಬ ಯೋಜನೆ ಯಿದೆ' ಅವರ ಮಾತು ಕೇಳಿ ರಾಜೇಂದ ಒಳಗೇ ತಳಮಳಿಸಿದ

'ಪವಿತ್ರಾ ತುಂಬಾ ಚೆನ್ನಾಗಿ ಕಾಣಿಸ್ತಾ ಇದ್ದೀರಿ ಆಕಾಶದಿಂದ ಇಳಿದು ಬಂದ ಅಪ್ಸರೆ ಅಂದುಕೊಂಡುಬಿಟ್ಟೆವು!'

'ಪವಿತ್ರಾ ಮೊನ್ನೆ ಸೆಟ್ಟಿನಲ್ಲಿ ನಿಮ್ಮ ಶಾಟ್ಸ್ ನೋಡಲು ಬಂದಿದ್ದೆ. ತುಂಬಾ ಚೆನ್ನಾಗಿ ಮಾಡಿದ್ರಿ. ಆ ಫಿಲ್ಮ್ ಹಿಟ್ ಆಗೇ ಆಗುತ್ತೆ!'

ಕೆಲವು ಸಹ ನಟ ನಟಿಯರ, ಚಿತ್ರರಂಗ ಪ್ರವೇಶಿಸಲಿಚ್ಛಿಸುತ್ತಿದ್ದ ವರು ಅವಳನ್ನು ಹಾಡಿ ಹೊಗಳಿ ಅವಳಿಂದೊಂದು ಪಾತ್ರ ಗಿಟ್ಟಿಸಲು ಯತ್ನಿಸುತ್ತಿರುವರೆಂದುಕೊಂಡು ಕಿಡಿಯಾದ, ಪ್ರಮೋದಳತ್ತ ನಡೆದ.

ಪ್ರಮೋದ ಕೈಯಲ್ಲಿ ತಂಪು ಪಾನೀಯ ಹಿಡಿದು ನಗುನಗುತ್ತಾ ಪವಿತ್ರಳತ್ತ ಬಂದಳು.

'ಓಹ್ಹೋ, ಅಂತೂ ದೊಡ್ಡ ಮನಸ್ಸು ಮಾಡಿ ಈ ಮನೆಗೆ ಬಂದಿರಿ. ತೊಗೊಳ್ಳಿ. ಸಧ್ಯ ಇವ್ರೊತ್ತು ನಿಮಗೆ ಜ್ಞಾಪಕ ಇತ್ತಲ್ಲಾ. ನಾನು ಗಲ್ಲಾ ಟೀಲಿ ನಿಮ್ಮನ್ನ ಕರೆಯೋದೂ ಮರ್ತೇಬಿಟ್ಟೆ!' ಅವಳ ಮಾತು ತನ್ನನ್ನು ಅಪಮಾನಿಸಲೆಂದೇ ಬಂದಿದ್ದಾಳೆ ಎಂದು ತಿಳಿದಳು ಪವಿತ್ರ. ರಾಜೇಂದ್ರ ಮತ್ತು ತನ್ನ ಬಗ್ಗೆ ಅವಳಿಗೆ ಯಾವಾಗಲೂ ಮಾತ್ಸರ್ಯವಿದ್ದೇ ಇತ್ತು. ಈಗ ಹಗೆ ತೀರಿಸಿಕೊಳ್ಳಲು ಸರಿಯಾದ ಸಮಯ!

'ಇಲ್ಲ ನೀವು ಮರೆತರೂ ರಾಜೇಂದ್ರ ಮರೆಯಲಿಲ್ಲ. ನನಗೆ ಹೇಳಿ ದ್ದರು' ಪವಿತ್ರ ಹೇಳಿದಾಗ ಪ್ರಮೋದ ಉಕ್ಕಿ ಬಂದ ಕೋಪ ನುಂಗಿದಳು.

'ಈಗ ತಾನೇ ಅವರು ಹೇಳಿದರು. ಪವಿತ್ರನ್ನ ವಿಚಾರಿಸಿಕೋ ಹೋಗು. ನನಗೆ ತುಂಬಾ ಕೆಲಸವಿದೆ. ಬಂದವರಿಗೆಲ್ಲಾ ಉಪಚಾರ ಮಾಡಬೇಕು ಎಂದರು ಅದಕ್ಕೆ ಬಂದೆ. ಬನ್ನಿ ಪವಿತ್ರ. ಅಲ್ಲಿ ಈ ಕಡೆ ಮೂಲೆಯಲ್ಲಿ ಕುಳಿತುಕೊಳ್ಳೋಣ. ನಿಮ್ಮ ಹತ್ತಿರ ತುಂಬಾ ಮಾತನಾಡ ಬೇಕಾಗಿದೆ.'

ಪವಿತ್ರಳನ್ನು ಕೈಹಿಡಿದು ಒಳಗೆ ಕರೆದೊಯ್ದಳು. ಅವರಿಬ್ಬರೂ ನಿರ್ಗಮಿಸಿದ ಮೇಲೆ ಎಲ್ಲರೂ ಮತ್ತೆ ಅವರ ಗಮನ ರಾಜೇಂದ್ರನತ್ತ ಹರಿಸಿ ದರು. ರಾಜೇಂದ್ರ ಗೆಲುವಿನಿಂದ ನಗುತ್ತಾ ಅವರೊಡನೆ ಬೆರೆತ.

ಇಲ್ಲೇ ಕೂತಿರಿ, ಈಗ ಬಂದೆ' ಪ್ರಮದ ಪವಿತ್ರಳನ್ನು ಒಳಗಡೆ ಕೊಠಡಿಯಲ್ಲಿ ಕೂಡಿಸಿ ಹೊರಗೆ ಬಂದಳು.

ಪವಿತ್ರಳಿಗೆ ಅಚ್ಚರಿ ರಾಜೇಂದ್ರನ ಪತ್ನಿಯೇ ತನ್ನನ್ನು ಈ ರೀತಿ ಆದರಿಸಬೇಕಾದರೆ ಏನೋ ನಡೆದಿರಬೇಕು. ರಾಜೇಂದ್ರನಿಗೆ ತನ್ನನ್ನು ವಿವಾಹವಾಗಲು ಸಮ್ಮತಿಸಿರಬಹುದೇ ? ಇಲ್ಲವೇ ತಮ್ಮಿಬ್ಬರ ಸಂಬಂಧ ಒಪ್ಪಿ ಸ್ನೇಹದಿಂದಿರಲು ಒಪ್ಪಿರಬಹುದೇ ? ರಾಜೇಂದ್ರನಿಗೆ ತನ್ನ ಮೇಲಿ ರುವ ಒಲವು ಅರಿತು ತನ್ನ ಸೋಲೊಪ್ಪಿಕೊಂಡಿರಬಹುದೇ ? ಅಂದರೆ ತಾನು ಬಂದ ಕೂಡಲೇ ರಾಜೇಂದ್ರ ಮುಖ ತಿರುಗಿಸಿದುದೇಕೆ ? ಎಲ್ಲರೂ ನೋಡಿ ಕತೆ ಕಟ್ಟದಿರಲೆಂದೇ ? ಅವನೇ ಹೇಳಿರಲಿಲ್ಲವೇ ?

'ಎಲ್ಲರ ಮುಂದೆ ಎಷ್ಟು ನಾಟಕವಾಡಿದರೂ, ನಾನು ನೀನುಇಬ್ಬರೇ ಇದ್ದಾಗ ಆ ನಾಟಕವೆಲ್ಲಾ ನಡೆಯೋಲ್ಲ. ಜನರ ಕಣ್ಣಿಗೆ ಮಣ್ಣೆರಚ ಬೇಕು, ನಮ್ಮ ಒಲವು ಭದ್ರವಾಗಬೇಕಾದರೆ' ಎಂದು. ರಾಜೇಂದ ಬಂದು ತನ್ನನ್ನು ಕಾಣಬಹುದು. ಎಲ್ಲರ ಮುಂದೇಕೆಂದು ಈ ಕೊಠಡಿಯಲ್ಲಿ ಕುಳಿ ತಿರುವಂತೆ ತಿಳಿಸಲು ಪ್ರಮದಳಿಗೆ ಹೇಳಿರಬೇಕು. ತಾನೇ ಕಂಡಿರಲಿಲ್ಲವೇ, ಪ್ರಮದ ಅವನು ಗುಟ್ಟು ಗುಟ್ಟಾಗಿ ಮಾತಾಡಿಕೊಂಡದ್ದು.

ಪವಿತ್ರ ಆತಂಕ, ಉದ್ವೇಗಗಳನ್ನು ಅದುಮಿಟ್ಟುಕೊಂಡುರಾಜೇಂದ್ರ ನಿಗೆ ಕಾಯುತ್ತಾ ಕುಳಿತಳು. 'ಈಗ ಬಂದೆ' ಎಂದು ಹೋದ ಪ್ರಮ ದಳೂ ಬರಲಿಲ್ಲ. ರಾಜೇಂದ್ರನೂ ಬರಲಿಲ್ಲ. ಹೊರಗೆ ನಗು, ಮಾತು ಅಲೆ ಅಲೆಯಾಗಿ ಬರುತಿತ್ತು. ಕೈಲಿದ್ದ ತಂಪು ಪಾನೀಯ ಕುಡಿದು ಮುಗಿಸಿ ದಳು. ಮನೆಯಲ್ಲಿ ತನ್ನ ತಾಯಿ ಧಾರಾಳ ಮನಸ್ಸಿನಿಂದ ತನಗೆ ರಾಜೇಂದ್ರನ ಬಳಿಗೆ ಬರಲು ಅನುಮತಿ ನೀಡಿದ್ದರು. ಇಂದು ಅವ

ನೊಂದಿಗೆ ಅತ್ಯಂತ ಹರ್ಷದಾಯಕ ಸಮಯ ಕಳೆಯಬೇಕೆಂದು ಬಂದದ್ದು. ಇದೇನು ರಾಜೇಂದ್ರ ಬರಲೇ ಇಲ್ಲ. ಮೆಲ್ಲನೇ ಎದ್ದು ಬಂದು ಬಾಗಿಲು ಬಳಿ ನಿಂತು ನೋಡಿದಳು. ಕೇಕೆ ಹಾಕಿಕೊಂಡು ನಗುತ್ತಿದ್ದರು. ಕೈಯ್ಯಲ್ಲಿ ತಟ್ಟೆ ಹಿಡಿದು ತಿಂಡಿ ತಿನಿಸು ತಿನ್ನುತ್ತಿದ್ದರು, ಕುಡಿಯುತ್ತಿದ್ದರು. ಅವರ ಮಧ್ಯೆ ರಾಜೇಂದ್ರ ಯಾವುದೋ ಪಾತ್ರಾಭಿನಯ ಮಾಡುತ್ತಿದ್ದ. ಅವನ ಪಕ್ಕದಲ್ಲೇ ಪ್ರಮದ ನಗುತ್ತಾ ನಿಂತಿದ್ದಳು. ಯಾರಿಗೂ ಪವಿತ್ರಳತ್ತ ಗಮನವಿರಲಿಲ್ಲ. ಅವಳು ಬಾಗಿಲು ದಾಟಿ ಪಾರ್ಟಿಯ ಅಂಗಳಕೆ ಬಂದಾಗಲೂ ಯಾರಿಗೂ ಅವಳತ್ತ ಗಮನವಿರಲಿಲ್ಲ. ಪವಿತ್ರಳಿಗೆ ಅವಮಾನದಿಂದ ಮೈ ಸಣ್ಣಗೆ ನಡುಗುತಿತ್ತು. ತಾನು ಬಂದುದು ರಾಜೇಂದ್ರನನ್ನ ಕ್ಷಮೆ ಕೋರಲು. ತಮ್ಮಿಬ್ಬರ ಪ್ರೇಮದ ಬೆಸುಗೆ ಭದ್ರಪಡಿಸಲು. ಅವನೇ ತನ್ನನ್ನು ನಿರ್ಲಕ್ಷಿಸಿದರೆ! ತಾನು ಸುನಿಲ್‌ಕುಮಾರನೊಂದಿಗೆ ಅಭಿನಯಿಸುವುದು ಅವನಿಗಿಷ್ಟವಿಲ್ಲವೆಂದು ಗೊತ್ತು. ತನ್ನ ಮೇಲೆ ಕೋಪವಿದೆಯೆಂದೂ ಗೊತ್ತು. ದೇವರಾಜ್ ಅವನನ್ನು ತಮ್ಮ ಚಿತ್ರಗಳಲ್ಲಿ ನಾಯಕನ ಪಾತ್ರಕ್ಕೆ ತೆಗೆದುಕೊಳ್ಳಲು ಸಾಧ್ಯವಿಲ್ಲವೆಂದೂ ಅವನಿಗೆ ಗೊತ್ತಿರಬಹುದೇ ? ಆದರೆ ತಮ್ಮ ಒಲವಿನ ಮುಂದೆ ಅದೆಲ್ಲಾ ಎಷ್ಟರದು. ಅವನ ಒಲವಿನ ಬಲವಿದೆಯಾದರೆ ತಾನು ಎಲ್ಲವನ್ನೂ ಗಾಳಿಗೆ ತೂರಿ ಅವನೊಡನೆ ಒಂದಾಗಿಹೋಗಲು ಸಿದ್ಧಳಿರಲಿಲ್ಲವೇ ? ಇಷ್ಟೆಯೇ ರಾಜೇಂದ್ರನ ಒಲವು! ಅವನಿಗೆ ಪಾತ್ರ ಕೊಡಿಸಲಾರದುದಕ್ಕಾಗಿ ಅವನು ತನ್ನನ್ನು ತುಚ್ಛವಾಗಿ ಕಂಡು ಅವಮಾನಿಸಬಹುದೇ ?

ಅವಳನ್ನು ಕಂಡ ದಿಗ್ದರ್ಶಕ ರಾಮಾನುಜಂ ಅಚ್ಚರಿಗೊಂಡರು.

'ಅರೇ, ಇಷ್ಟು ಹೊತ್ತು ಎಲ್ಲಿ ಹೋಗಿದ್ದಿರಿ ? ಬನ್ನಿ....ಊಟ ಮಾಡಿ.'

'ಇಲ್ಲಾ ನನಗೆ ಅರ್ಜೆಂಟ್ ಕಾಲ್ ಬಂದಿತ್ತು, ಹೋಗಬೇಕು. ದಯವಿಟ್ಟು ಕ್ಷಮಿಸಿ' ಪವಿತ್ರ ಹೇಳಿದಾಗ ಎಲ್ಲರ ಕಣ್ಣು ಅವಳತ್ತ ಹರಿದಿತ್ತು. ಆದರೆ ಅವರತ್ತ ನೋಡದೇ ಪವಿತ್ರ ಸರಸರನೆ ಹೊರಗೆ ನಡೆದಳು. ತನಗಾಗಿ ಕಾದಿದ್ದ ದೇವರಾಜ್‌ರವರ ಕಾರಿನತ್ತ ಧಾವಿಸಿದಳು. ಡ್ರೈವರ್ ಆರ್ಮುಗಂಗೆ ಹೇಳಿದಳು.

'ಬೇಗ ಹೋಗಬೇಕು ಆರ್ಮುಗಂ. ನಾಳೆ ಬೆಳಿಗ್ಗೆಯೇ ಮದ್ರಾಸಿಗೆ ಸೇರಿ ಹೋಗಬೇಕು !' ಕಾರು ಮನೆಯತ್ತ ಧಾವಿಸಿತು. ನಿರ್ಮಲವಾಗಿದ್ದ

ತಿಳಿಗೊಳದಂತೆ ಸ್ವಚ್ಛವಾಗಿದ್ದ ಅವಳ ಮನಸ್ಸು ಕಲಕಿಹೋದ ಕೆಸರಿನ ತೊರೆಯಾದಂತಾಗಿತ್ತು.

ಮನೆಯೊಳಗೆ ಬಂದೊಡನೆಯೇ ಎಲ್ಲರತ್ತ ನೋಡಿದಳು. ಅವಳು ಅಷ್ಟು ಬೇಗ ಹಿಂತಿರುಗುವಳೆಂದು ಯಾರೂ ತಿಳಿದಿರಲಿಲ್ಲ.

'ಯಾಕೆ, ಇಷ್ಟು ಬೇಗ ಮುಗಿದು ಹೋಯಿತಾ ?' ಮಾಲತಮ್ಮ ಕೇಳಿದಾಗ ಪವಿತ್ರ ಅಳುತ್ತಿದ್ದ, ಕಲಕಿ ಹೋದ ಹೃದಯವನ್ನು ತನ್ನೊಳಗೆ ಬಚ್ಚಿಟ್ಟುಕೊಂಡು ಮೇಲೆ ತೋರಿಕೆಯ ನಗು ನಕ್ಕಳು.

'ವಿಪರೀತ ಜನಾಮ್ಮ, ಎಲ್ಲರೂ ನನ್ನ ಮುತ್ತಿಕೊಂಡುಬಿಟ್ಟರು. ಇನ್ನು ಹೆಚ್ಚು ಹೊತ್ತಿದ್ದರೆ ಕಷ್ಟಾಂತ ಬೇಗ ಬಂದುಬಿಟ್ಟೆ. ಬೆಳಗ್ಗೆ ಮದ್ರಾಸಿಗೆ ಬೇರೆ ಹೋಗಬೇಕೆಂದು ಹೇಳಿದ್ದೀ !'

ಮಾಲತಮ್ಮ ಸಂತಸದಿಂದ ಹಿಗ್ಗಿದರು ತನ್ನ ಮಗಳು ಕೊನೆಗೂ ದಾರಿಗೆ ಬರುತ್ತಿದ್ದಾಳೆ !

'ಸುನಿಲ್‌ಕುಮಾರ್ ಫೋನು ಮಾಡಿದ್ದರು. ಏನಾದರೂ ಹೇಳ ಬೇಕೇ ಎಂದು ಕೇಳಿದ್ದಕ್ಕೆ ನಿನ್ನೊಂದಿಗೇ ಹೇಳಬೇಕಾದ ವಿಷಯ ಅದು ಎಂದರು' ಮಾಧು ಹೇಳಿದ.

ಪವಿತ್ರ ಅರೆಕ್ಷಣ ಶಿಲೆಯಂತೆ ನಿಂತಳು. ಒಬ್ಬ ನಾಯಕ ತನ್ನನ್ನು ಎತ್ತಿ ಹಿಡಿದು ಈಗ ಆಚೆ ತಳ್ಳಿದ್ದಾಗಿತ್ತು. ಈಗ ಇವನೊಬ್ಬ. ಇವನೇನು ಮಾಡಬೇಕೆಂದಿರುವನೋ ! ಆಗಲಿ, ಎಲ್ಲವೂ ತನ್ನ ಬದುಕಿನಲ್ಲಿ ಸವಾಲಾಗಿ ಬರಲಿ. ತಾನು ಅದನ್ನು ಎದುರಿಸುವ ಛಲ ಸಾಧಿಸಿಕೊಳ್ಳಬೇಕು. ತನ್ನ ಪವಿತ್ರ ಪ್ರೇಮವನ್ನು ಕಿತ್ತೊಗೆದ ರಾಜೇಂದ್ರನ ಮೇಲಿನ ಕೋಪ ಹೊಗೆಯಾಡಿತು. ತಾನು ಸುನಿಲ್‌ಕುಮಾರ್‌ನೊಂದಿಗೆ ಒಲವಿನ ನಾಟಕವಾಡಿ ರಾಜೇಂದ್ರನನ್ನು ಪಾತಾಳಕ್ಕೆ ತಳ್ಳಬೇಕು. ಕ್ರೋಧ ಉಕ್ಕಿ ಹರಿಯಿತು.

'ಮಾಧೂ, ಸುನಿಲ್‌ಕುಮಾರ್‌ಗೆ ರಿಂಗ್ ಮಾಡು. ನಾನು ಬಂದು ಮಾತನಾಡುತ್ತೇನೆ !' ಪವಿತ್ರ ಹತ್ತಿರದಲ್ಲಿದ್ದ ಕುರ್ಚಿಯಲ್ಲಿ ಕುಸಿದಳು.

ಅಂದು ಪವಿತ್ರಳ ಚಿತ್ರ 'ಎರಡು ಅಧ್ಯಾಯು'ಗಳು ಬಿಡುಗಡೆಯಾಗ ಲಿದ್ದು ಪ್ರೀಮಿಯರ್ ಶೋಗಾಗಿ ಅನೇಕ ಗಣ್ಯವಕ್ತಿಗಳನ್ನೂ, ವಿಶೇಷ

ಆಹ್ವಾನಿತರನ್ನೂ, ಪ್ರೆಸ್ಸಿನವರನ್ನೂ ಆಹ್ವಾನಿಸಲಾಗಿತ್ತು. ರಾಜೇಂದ್ರ, ಪವಿತ್ರಳ ಮಧ್ಯದ ಬಿರುಕನ್ನು ಅನೇಕ ಪತ್ರಿಕೆಗಳು ಪ್ರಕಟಿಸಿದ್ದರಿಂದ ಎಲ್ಲರಿಗೂ ಪವಿತ್ರಳ ಬಗ್ಗೆ ಇವ್ಮನಸ್ಸು. ಕೆಲವರು ಅವಳಿಗಾಗಿ ಮರುಗಿದ್ದರೂ ಮತ್ತೆ ಕೆಲವರು ರಾಜೇಂದ್ರನ ಹೆಸರು ಕೆಡಿಸಲು ಹೂಡಿದ ಆಟವೆಂದೂ ಮಾತಾಡಿಕೊಳ್ಳುತ್ತಿದ್ದರು. ದೇವರಾಜ್ ಅವರ ಬೆನ್ನೆಲುಬಾಗಿದ್ದರೂ ಅವಳಿಗೆ ಸಭೆಗಳನ್ನೂ, ಜನರನ್ನು, ಪತ್ರಕರ್ತರನ್ನು ಎದುರಿಸಲೇ ಅಂಜಿಕೆ. ಪ್ರೈಮಿಯರ್ ಶೋಗೇ ಬರುವುದೇ ಇಲ್ಲವೆಂದಾಗ ಮಾಲತಮ್ಮ ದೇವರಾಜ್‌ರವರಿಗೆ ಫೋನು ಮಾಡಿ ಕರೆಸಿಕೊಂಡಿದ್ದರು. ಸತ್ಯಕಾಮ್, ಗಂಗಾಧರಯ್ಯ, ಜಮುಖಂಡಿ ಮತ್ತು ಅನೇಕ ಚಿತ್ರರಂಗದ ಗಣ್ಯರು, ನಿರ್ಮಾಪಕರು, ನಿರ್ದೇಶಕರು ಪವಿತ್ರಳ ಈ ಚಿತ್ರದಲ್ಲಿನ ಅಭಿನಯ, ಜನಪ್ರಿಯತೆ, ಯಶಸ್ಸಿನ ಮೇಲೆ ಅವಳನ್ನು ತಮ್ಮ ಚಿತ್ರಗಳಿಗೆ ಹಾಕಿಕೊಳ್ಳಲು ಕಾದಿದ್ದರೆಂದು ಮಾಲತಮ್ಮನಿಗೆ ಗೊತ್ತಿತ್ತು. ಪವಿತ್ರ ಬರದೇ ಮನೆಯಲ್ಲೇ ಉಳಿದರೆ ಅವಳ ಬಗ್ಗೆ ಜನರಿಗಿದ್ದ ಭಾವನೆಗಳಿಗೆ ಸೊಪ್ಪು ಹಾಕಿದಂತಾಗುತ್ತದೆ ಯೆಂಬ ಹೆದರಿಕೆ. ಪವಿತ್ರಳಿಗೆ ರಾಜೇಂದ್ರನಿಂದ ಅವಮಾನಿತಳಾಗಿ ಚಿತ್ತಸ್ವಾಸ್ಥ್ಯವನ್ನು ಕಳೆದುಕೊಂಡು ಅವನು ತನಗೆ ಮಾಡಿದ ಮೋಸದಿಂದ ಶೋಕತಪ್ತಳಾಗಿ ಅವನ ಮೇಲಿನ ಸೇಡಿಗಾಗಿ ತಾಯಿಯ ಇಚ್ಛೆಯಂತೆ ದೇವರಾಜ್‌ರವರಿಗೆ ಮಣಿದಾಗಿತ್ತು. ಎರಡು ವಾರಗಳ ಕಾಲ ಮದ್ರಾಸಿನಲ್ಲಿ ಕಾಮಾಲೆಗಾಗಿ ಚಿಕಿತ್ಸೆಯ ನೆಪವೊಡ್ಡಿ ತಂಗಿದ್ದು ಅಲ್ಲಿ ದೇವರಾಜರ 'ರಾಣಿ'ಯಾಗಿದ್ದಳು. ಕಣ್ಣಿಗೆ ಕಂಡದ್ದು, ಮನ ಬಯಸಿದ್ದು ದೇವರಾಜ್ ಅವಳಿಗೀಯಲು ಸಿದ್ಧರಾಗಿದ್ದರು. ಬೆಂಗಳೂರಿಗೆ ಹಿಂತಿರುಗುವಷ್ಟರಲ್ಲಿ ಅವಳಿಗಾಗಿಯೇ ದೊಡ್ಡ ಬಂಗಲೆ, ಓಡಾಡಲು ಕಾರು ಅವಳಿಗಾಗಿಯೇ ರೀಟಾಳಿಗೆ ಕೈ ತುಂಬಾ ಸಂಬಳ ಕೊಟ್ಟು ಪವಿತ್ರಳ ಅಲಂಕಾರ, ವಸ್ತ್ರ ಸಂಯೋಜನೆ, ವೈಯಕ್ತಿಕ ವಿಚಾರಗಳ ಮೇಲ್ವಿಚಾರಕಳಾಗಿ ಗೊತ್ತು ಮಾಡಲ್ಪಟ್ಟು 'ಪರ್ಸನಲ್ ಸೆಕ್ರೆಟರಿ'ಯ ಪಟ್ಟಕ್ಕೇರಿಸಲಾಗಿತ್ತು. ಇದೆಲ್ಲಾ ಮಾಲತಮ್ಮನ ಚಿತಾವಣೆ. ರೀಟಾಳಿಗೆ ತಿಳಿಯದ ವಿಷಯವಿರಲಿಲ್ಲ. ಅವಳನ್ನು ಬಿಟ್ಟರೆ ಬೇರೆಯವರಲ್ಲಿ ಹೋಗಿ ಪವಿತ್ರಳ ಬಗ್ಗೆ ಅವರಿವರು ಕೇಳಿದಾಗ ಎಲ್ಲವನ್ನೂ ಹೇಳಿಬಿಟ್ಟರೆ ಗುಲ್ಲಾಗುವುದೆಂಬ ಅಳುಕು ಬೇರೆ. ಕಾಮಿನಿ, ರಜನಿ, ಪರಭಾಷಾತಾರೆಯರಾಗಿ ಬಂದು ವಿಶೇಷ ಸ್ಥಾನಗಳನ್ನು ಆಕ್ರಮಿಸಿಕೊಳ್ಳುತ್ತಿದ್ದ ನೀಲಶ್ರೀ, ಧನಶ್ರೀ, ಮೋಹಿನಿರಾಜ್ ಇವರುಗಳು

ರೀಟಾಳನ್ನು ತಮ್ಮ ಸೌಂದರ್ಯ ತಜ್ಞೆಳನ್ನಾಗಿ ನೇಮಿಸಿಕೊಳ್ಳಲು ಕರೆಯುತ್ತಿರುವರೆಂಬ ವದಂತಿ ಅವರ ಕಿವಿಗೆ ಬಿದ್ದಿತ್ತು. ಅವರೆಲ್ಲರಲ್ಲಿ ಒಬ್ಬಳು ರೀಟಾಳನ್ನು ಗೊತ್ತುಮಾಡಿಕೊಂಡರೂ ಪವಿತ್ರಳ ಭವಿಷ್ಯ ಹಾಳಾದೀತೆಂಬ ಭಯವಿತ್ತು. ಅದಕ್ಕೆ ದೇವರಾಜ್‌ರವರಿಗೆ ಮೊದಲೇ ತಿಳಿಸಿ, ರೀಟಾಳನ್ನೂ ತಮ್ಮೊಂದಿಗೆ ಕರೆದೊಯ್ದಿದ್ದಲ್ಲದೇ ಬರಿಯ ಸೌಂದರ್ಯ ಮಾತ್ರವಲ್ಲದೆ ಪರ್ಸನಲ್ ಸೆಕ್ರೆಟರಿಯ ಸ್ಥಾನಕ್ಕೂ ಏರಿಸಿ ಕೈತುಂಬಾ ಸಂಬಳ ಕೊಡಲಾಗಿತ್ತು. ಹಣಕಾಸಿನ ವ್ಯವಹಾರ, ಕಾಲ್‌ಶೀಟುಗಳ ವಿತರಣೆಯೆಲ್ಲ ಮಾಲತಮ್ಮನೇ ಮಾಡುತ್ತಿದ್ದರೂ ಹೆಸರಿಗೆ ರೀಟಾಳ ವ್ಯವಸ್ಥೆ.

ಮಾಲತಮ್ಮ ಹೊಸ ವರಸೆ ಪ್ರಾರಂಭಿಸಿದ್ದಳು 'ತಾಳಿ, ನಾನು ರೀಟಾಳನ್ನ ಕೇಳಿ ನಾಳೆ ತಿಳಸ್ತೀನಿ. ಈಗ ಎಲ್ಲಾ ಅವಳೇ ನೋಡಿಕೊಳ್ಳುತ್ತಾಳೆ' ಎನ್ನುತ್ತಿದ್ದರು

ಸೆಟ್ಟಿನ ಮೇಲೆ ಯಾವಾಗಲೂ ಉಪಸ್ಥಿತರಾಗಿರುತ್ತಿದ್ದ ಅವರು ತಮ್ಮ ಇರುವಿಕೆಗೆ ಹೊಸ ಬಣ್ಣ ಕಟ್ಟಿದ್ದರು. 'ನಾನಿದ್ದರೆ ಅವಳಿಗೆ ಧೈರ್ಯವಂತೆ, ಅವಳು ನಾನು ಬರಲೇಬೇಕಂತ ಹಟ ಹಿಡಿದಿದ್ದಾಳೆ. ಅದಕ್ಕೆ ಬರೋದು.'

ರೀಟಾಳ ಕೈಯಲ್ಲಿ ಎರಡುವಾರಗಳ ಕಾಲ ಪರಿಣಿತಳಾದ ಪವಿತ್ರಳ ವ್ಯಕ್ತಿತ್ವಕ್ಕೆ ಬೇರೆ ರೂಪು ಬಂದಿತ್ತು. ರೀಟಾಳ ಕೈಚಳಕ, ದೇವರಾಜ್‌ರವರ ಸಂಬಂಧದಿಂದ ಎಳಸುತನ, ಬಾಲಿಶಮುಖ, ಮುಗ್ಧಸ್ನಿಗ್ಧ ವ್ಯಕ್ತಿತ್ವವೇ ಮಾಯವಾಗಿ ಪವಿತ್ರ ಇದ್ದಕ್ಕಿದ್ದಂತೆ ಅತ್ಯಂತ ಗಂಭೀರ, ಸುಂದರ ಹೆಂಗಸಾಗಿ ಮಾರ್ಪಟ್ಟಿದ್ದಳು. ಆದರೂ ಹೃದಯಾಂತರಾಳದಲ್ಲಿ ಅವಳ ಕೊರಗು ಒಳಗೇ ಕೊರೆಯುತಿತ್ತು. ಬದಲಾದ ಬದುಕು, ತನ್ನ ಬಗೆಯ ಪ್ರಚಾರ ಅಪಪ್ರಚಾರ, ರಾಜೇಂದ್ರನ ಅಭಿಮಾನಿಗಳಿಂದ ತನಗುಂಟಾಗಬಹುದಾದ ಅಪಮಾನ ಇವುಗಳನ್ನು ನೆನೆದು ಪವಿತ್ರ ಅಂದು ಪ್ರೈಮಿಯರ್ ಶೋಗೆ ಬರುವುದಿಲ್ಲವೆಂಬ ಹಟ ಹಿಡಿದಳು. ದೇವರಾಜ್ ಬರುತ್ತಲೇ ಪವಿತ್ರ ಹೆಚ್ಚು ಮಾತಾಡದೇ ಒಪ್ಪಿಕೊಂಡಿದ್ದಳು. ಕಾರಣ ಅವರ ಬಗ್ಗೆ ಹೆದರಿಕೆ, ಭಕ್ತಿ, ಭಯ ಗೌರವದಿಂದಲ್ಲ. ತನ್ನ ಕಿರಿಯ ವಯಸ್ಸಿಗೆ, ತನ್ನ ತಂದೆಯ ವಯಸ್ಸಾಗಿದ್ದ ಅವರೊಡನಾಟ ಅವಳಿಗೆ ಏನೋ ಮುಜುಗರ, ಅಸಹ್ಯ. ಆತ ಬರದೇ ದೂರವಿದ್ದರೆ ಸಾಕೆನಿಸುತ್ತಿತ್ತು. ರಾಜೇಂದ್ರನ ಮೇಲಿನ ರೋಷದಿಂದ ತನ್ನ ಬದುಕಿನ ಕೋಟೆಗೆ ತಾನೇ ಮುಳ್ಳಿನ ಬೇಲಿ ಹಾಕಿಕೊಂಡಿದ್ದಾ

ಗಿತ್ತು. ಈಗ ಅದಕ್ಕಾಗಿ ಪಶ್ಚಾತ್ತಾಪಪಟ್ಟು ಕಿತ್ತೊಗೆಯಲು ಆಶಿಸಿತ್ತು ಅವಳ ಮನಸ್ಸು. ಅವರು ಬಂದು ತನ್ನ ರಮಿಸಿ, ಬೆದರಿಸಿ ಕಳಿಸುವುದಕ್ಕೆ ಮುಂಚೆ ತಾನೇ ಹೋದರೆ ವಾಸಿಯೆನಿಸಿತ್ತು. ಅದೂ ಅಲ್ಲದೇ ದೇವರಾಜರ ಕೊನೆಯ ತಮ್ಮನಿಗೆ ರೋಜಿಯನ್ನು ಕೊಟ್ಟು ಮದುವೆ ಮಾಡಲು ಮಾಲ ತಮ್ಮ ಮಾತುಕತೆ ನಡೆಸಿದ್ದರು. ಅವಿಭಕ್ತ ಕುಟುಂಬದಲ್ಲಿದ್ದ ದೇವರಾಜ್ ರವರಿಗೆ ಇದರಿಂದ ಎಷ್ಟು ತೊಂದರೆಗಳು ನಿವಾರಣೆಯಾಗಿತ್ತು. ಆದರೆ ಪವಿತ್ರಳ ಮನಸ್ಸು ರೋಸಿತ್ತು.

'ಅದ್ಯಾಕೆ ಪಾಪೂ, ಪ್ರೀಮಿಯರ್ ಶೋಗೆ ಹೋಗುವುದಿಲ್ಲವಂತೆ. ಹಾಗೆ ಮಾಡಬೇಡಾ ನೀನು ಹೋಗಲೇಬೇಕು. ಬೇಕಾದರೆ ನಾನೇ ಕರೆ ದೊಯ್ಯುತ್ತೇನೆ.' ಎಂದು ದೇವರಾಜ್ ಬಂದು ಅವಳ ಮಂಚದ ಮೇಲೆ ಕುಳಿತಾಗ ಬೆಂಕಿಗೆ ಬಿದ್ದ ಹುಳದಂತೆ ಅವಳು ಒಳಗೇ ಮಿಡುಕಿದಳು.

'ಇಲ್ಲ ಹೋಗ್ತೀನಿ. ನಿಮಗೆ ತೊಂದರೆ ಬೇಡಾ, ನಾನೇ ಹೋಗು ತ್ತೇನೆ. ರೋಜಿ, ರೀಟಾ, ಮಾಧು ನನ್ನ ಜೊತೆ ಬರ್ತಾರೆ. ಅಮ್ಮ ಸುಮ್ಮನೆ ಗದ್ದಲ ಮಾಡುತ್ತಾಳೆ.' ಪವಿತ್ರ ಹೇಳಿದಾಗ ದೇವರಾಜ್ ಅವಳ ಕೈ ಮೆಲ್ಲನೆ ಅದುಮಿದರು.

'ನನ್ನ ರಾಣಿ ಯಾರಿಗೂ ಹೆದರಬಾರದು. ಎಲ್ಲರೂ ನಿನ್ನ ನೋಡಿ ಹೊಟ್ಟೆ ಉರಿದುಕೊಳ್ಳಬೇಕು, ಹಾಗೆ ಹೋಗಿ ಬಾ. ನನ್ನ ಬೆನ್ಜ್ ಕಾರನ್ನು ಕಳುಹಿಸಿಕೊಡುತ್ತೇನೆ.' ಎಂದಾಗ ಪವಿತ್ರ ಕೈಯನ್ನು ಸರಕ್ಕನೆ ಎಳೆದು ಕೊಂಡಳು.

'ನಂಗೆ ಹೊತ್ತಾಯಿತು ಇನ್ನೂ ಡ್ರೆಸ್ ಮಾಡಿಕೋಬೇಕು!'

ದೇವರಾಜ್‌ರವರೊಡನೆ ಇರುವುದಕ್ಕಿಂತ ಸಮಾಜವನ್ನೆದುರಿಸಲು ಸಿದ್ಧವಾದಳು.

ಬಿಳಿಯ ಬೆನ್ಜ್ ಕಾರಿನಲ್ಲಿ ಬಂದಿಳಿದ ಪವಿತ್ರಳನ್ನು ಕಂಡಾಗ ಎಲ್ಲರೂ ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವ ಹಾಗಿತ್ತು. ಎಲ್ಲರನ್ನೂ ನೋಡಿ ನಕ್ಕು ಕೈ ಬೀಸಿ ತನ್ನ ಮಾದಕ ನಗೆ ಬೀರಿ, ತಲೆಯೆತ್ತಿ ಧೀರಳಾಗಿ ನಡೆದು ಬಂದುದೇ ಎಲ್ಲರಿಗೂ ಅಚ್ಚರಿ. ಆ ನಾಚಿಕೆ, ಆ ಚಡಪಡಿಕೆ ಮಾಯ ವಾಗಿತ್ತು. ಅವಳ ಆಕರ್ಷಕ ಅಲಂಕಾರ, ಅವಳ ದಿಟ್ಟತನ, ಸ್ವಸ್ಥೈರ್ಯ

ರಜನಿ, ಕಾಮಿನಿ, ಸುಹಾಸಾರಿಗೇ ಒಗಟಾಗಿತ್ತು. ಎಲ್ಲ ನಿರ್ಮಾಪಕರೂ ನಿರ್ದೇಶಕರೂ, ಪತ್ರಕರ್ತರೂ ಅವಳತ್ತ ಧಾವಿಸಿದಾಗ ಪವಿತ್ರಳಿಗೆ ತಿಳಿದಿತ್ತು, ಇನ್ನು ಮುಂದೆ ಈ ರಂಗದಲ್ಲಿ ತಾನು ಇವರೆಲ್ಲರ ಸ್ವತ್ತು ಎಂದು. ಮಧ್ಯಾಂತರದಲ್ಲಿ ಪತ್ರಕರ್ತರೆಲ್ಲಾ ಅವಳತ್ತ ಓಡಿದ್ದರು.

'ನಿಮಗೆ ಹೊಸ ಚಿತ್ರಗಳು ಯಾವುದಿದೆ ?'

'ನಿಮ್ಮ ಮುಂದಿನ ಚಿತ್ರ ಯಾವುದು ?'

'ನೀವು ಸುನಿಲ್‌ಕುಮಾರ್ ಜೊತೆ 'ಚಿತ್ರಾಂಗದ' ಮಾಡ್ತೀರಂತೆ. ಅವರ್ಜೊತೆ ನೀವು ಮಾಡೋಕೆ ಪ್ರಾರಂಭ ಆದಮೇಲೆ ರಾಜೇಂದ್ರರಾವ್ ಜೊತೆ ಮಾಡೋಲ್ವಾ ?'

'ಮದ್ರಾಸಿನಲ್ಲಿ ಸಿಗೋ ಟ್ರೀಟ್‌ಮೆಂಟ್ ಇಲ್ಲಿ ಸಿಕ್ತಾ ಇರ್ಲಿಲ್ವೇ ?'

'ದೇವರಾಜ್ ನಿಮ್ಮ ಗಾಡ್ ಫಾದರ್ ಅಂತೆ ಹೌದೇ ?'

ಅವರ ಪ್ರಶ್ನೆಗಳಿಗೆಲ್ಲಾ ಪವಿತ್ರಳ ಉತ್ತರ ಬಹಳ ಸಮಂಜಸವಾಗಿ ಮೊಟಕಾಗಿತ್ತು. ಯಾವ ಮಾತಿಗೂ ಸಿಕ್ಕಿಹಾಕಿಕೊಳ್ಳದೇ ನಗುನಗುತ್ತಲೇ ಉತ್ತರಿಸಿದಳು. ಆದರೆ ಅವಳು ಎಲ್ಲರಿಂದಲೂ ನಿಜ ಮರೆಮಾಚಿದ್ದಳು. ಎಷ್ಟೋ ಮಂದಿ ಪತ್ರಕರ್ತರಿಗೆ ನಿಜ ಸಮಾಚಾರ ತಿಳಿದಿದ್ದರೂ ತಿಳಿಯದಂತೆ ಪ್ರಶ್ನಿಸಿದ್ದರು.

ಮಾರನೆಯ ದಿನ ಎಲ್ಲ ಪತ್ರಿಕೆಗಳಲ್ಲೂ ಪವಿತ್ರಳ ಬಗ್ಗೆ ಬರಹಗಳು, ಅವಳದೇ ಫೋಟೋ ಅವಳ ಬಗ್ಗೆಯೇ ಮಾತು. ಮಾಲತಮ್ಮನನ್ನಂತೂ ಹಿಡಿಯುವವರೇ ಇರಲಿಲ್ಲ. ಎಷ್ಟು ಬಾರಿ ಓದಿದರೂ ಸಾಲದು. ಎಷ್ಟು ಸಲ ಚಿತ್ರಗಳನ್ನು ನೋಡಿದರೂ ಸಾಲದು.

'ಪಾಪೂ, ನೀನು ಇನ್ನು ಮುಂದೆ ದೊಡ್ಡ ನಟಿ. ಇನ್ನೇನಿದ್ದರೂ ನಿರ್ದೇಶಕರೂ, ನಿರ್ಮಾಪಕರೂ ಈ ಮನೆ ಬಾಗಿಲಿಗೆ ನಿನ್ನ ನೋಡಲು ಅಪಾಯಿಂಟ್‌ಮೆಂಟ್ ತೆಗೆದುಕೊಂಡು ಬರಬೇಕು. ನೋಡ್ತಾ ಇರು— ನಾನು ಹೇಗೆ ಎಲ್ರನ್ನೂ ಬಗ್ಗಿಸ್ತೀನಿಂತ.'

'ಅಮ್ಮಾ, ನೋಡೂ, ಹೆಸರು ಬಂತೂಂತ ಅಹಂಕಾರದಿಂದ ಮೇರಿ ಬಾರದಮ್ಮ. ಇದೆಲ್ಲಾ ಗಾಳಿ ಬೆಲೂನಿನಂತೆ. ಬಣ್ಣಬಣ್ಣದಿಂದ ಮೇಲೆ ಹಾರಾಡುವವರೆಗೂ ಚೆನ್ನ. ಗಾಳಿ ಹೋಗಿ ಕೆಳಗಿಳಿದುಬಿಟ್ಟರೆ ಎಲ್ಲರೂ ತುಳಿದುಕೊಂಡೇ ಓಡಾಡುತ್ತಾರೆ.'

ಪವಿತ್ರ ತಾಯಿಗೇ ಬುದ್ಧಿ ಹೇಳುವ ಹಾಗಾಗಿದ್ದಳು.

'ಏನೋ ವೇದಾಂತ ಹೇಳ್ಬೇಡಾ. ಆದೆಲ್ಲಾ ದುಡ್ಡು ಬಂದಾಗ ಮೆರೆದು ಕೆಟ್ಟ ಚಾಳಿಗಳ್ನ ಬೆಳೆಸಿಕೊಂಡು ಜೀವನ ಹಾಳು ಮಾಡಿಕೊಂಡು ಹಣ ಕಳೆದುಕೊಳ್ಳೋರಿಗೆ. ನನಗೆ, ನಿನಗಲ್ಲ. ನಿಂಗೆ ಬರೋ ಹಣ ಎಲ್ಲಾ ಹೇಗೆ ಉಪಯೋಗಿಸ್ತೀನಿ ನೋಡ್ತಾ ಇರು. ನೀನು ಕೊನೇವರ್ಗೂ ಸುಖವಾಗಿರಬೇಕೂ ಹಾಗೆ ಮಾಡ್ತೀನಿ. ಆಗ ನಿನ್ನ ಯಾರೂ ತುಳಿಯೋಲ್ಲ. ಆಗ್ಲೂ ನಿನ್ನ ಮುಂಬಾಗಿಲಿಗೆ ಬರಬೇಕು.'

ಅವರು ಮಾತನಾಡುತ್ತಿರುವಂತೆಯೇ ಶಕ್ತಿವಾನ್ ಫಿಲಂಸ್‌ನ ರೆಡ್ಡಿಯವರು ಬಂದರೆಂದು ರೀಟಾ ತಿಳಿಸಿದಳು. ಮಾಲತಮ್ಮ ಜಾಗ ಬಿಟ್ಟು ಕದಲಲಿಲ್ಲ.

'ರೀಟಾ, ಯಾಕೆ ಬಂದಿದ್ದಾರೇಂತ ಕೇಳು.'

ಪವಿತ್ರ ರೆಡ್ಡಿಯವರನ್ನು ಬಲ್ಲವಳಾಗಿದ್ದಳು. ತಲೆ ಹಣ್ಣಾದ ಹಳೆಯ ನಿರ್ಮಾಪಕ. ವಯಸ್ಸಿನ ತೊಂದರೆಯಿಂದ ವರ್ಷಕ್ಕೊಂದೋ, ಎರಡು ವರ್ಷಕ್ಕೊಂದೋ ಪೌರಾಣಿಕ ಚಿತ್ರಗಳನ್ನು ಮಾತ್ರ ಮಾಡುತ್ತಿದ್ದವರು. ಪೌರಾಣಿಕ ಚಿತ್ರಗಳೆಂದರೆ ಗಲ್ಲಾ ಪೆಟ್ಟಿಗೆಯಲ್ಲಿ ಸೋಲಿಲ್ಲವಾದ್ದರಿಂದ ಬಹಳ ಹಣ ಹೆಸರೂ ಗಳಿಸಿದ್ದರು. ಆದರೆ ತಾಯಿ ಈಗ ಅವರನ್ನು ಹಾಗೆ ಮಾತನಾಡಿಸಿದ್ದು ಸರಿ ಬೀಳಲಿಲ್ಲ.

'ಪಾಪ, ಮುದುಕರು ಬಂದಿದ್ದಾರೆ. ನೀನೇ ಹೋಗಿ ವಿಚಾರಿಸಬಾರದಾ?'

'ಸುಮ್ನಿರೇ, ನಿಂಗೆ ತಿಳ್ಯೋಲ್ಲ. ಅವರು ಬಂದ ತಕ್ಷಣ ಹೋಗಿ ಅವರ ಮುಂದೆ ನಿಂತರೆ ನೀನು ಅವರ ಅಂತಸ್ತಿನಲ್ಲಿ ನಾಲ್ಕು ಮೆಟ್ಟಲುಗಳು ಕೆಳಗಿಳಿದಂತೆಯೇ ತಿಳ್ಕೋ. ಮುದುಕರಾದ್ರೇನು, ಯುವಕರಾದ್ರೇನು? ಈ ಉದ್ಯಮದಲ್ಲಿ ಎಲ್ರೂ ಆಸೆಪಡೋದು ಹಣ, ಹೆಸರು ಎರ್ಡೇ....' ಮಾಲತಮ್ಮ ಗೊಣಗಿದರು.

ರೀಟಾ ಬಂದು ತಿಳಿಸಿದಳು.

'ಪವಿತ್ರನ್ನ ಯಾವುದೋ ಪೌರಾಣಿಕ ಚಿತ್ರಕ್ಕೆ ನಾಯಕಿಯಾಗಿ ಮಾಡಲು ಸಾಧ್ಯವೇ ಎಂದು ಕೇಳಲು ಬಂದಿದ್ದಾರೆ. ಯಾವುದೋ ಸ್ಥಳ ಮಹಾತ್ಮೆಯ ಚಿತ್ರವಂತೆ. ಆ ಸ್ಥಳದ ಮಹಾದೇವಿಯ ಪಾತ್ರವಂತೆ.'

'ಆಗ್ಲಿ, ಕೂತ್ಕೊಳ್ಳಿ ಬರ್ತಾರೆ. ಒಳಗೆ ಯಾರೋ ನಿರ್ಮಾಪಕರ ಜೊತೆ ಮಾತಾಡ್ತಾ ಇದ್ದಾರೇಂತ ಹೇಳು' ಮಾಲತಮ್ಮ ಹೇಳಿದಾಗ

ಪವಿತ್ರ ಕಿಡಿಗಣ್ಣಿನಿಂದ ತಾಯಿಯತ್ತ ನೋಡಿ ತನ್ನ ರೂಮಿಗೆ ಹೋಗಿ ಬಾಗಿಲು ಹಾಕಿಕೊಂಡಳು.

ತನ್ನ ಜೀವನದಲ್ಲಿ ಎಷ್ಟು ತಿರುವುಗಳು ಒಲವಿನ ಬದುಕು ಅರ್ಧ ದಾರಿಯಲ್ಲೇ ಅವಸಾನಗೊಂಡಿತ್ತು. ಯಶಸ್ಸಿನ ತಿರುವು ಈಗ ಮುಂದೆ ಕಾಣುತ್ತಿದೆ. ಹಿಂದಿನಂತೆ ನಾನು ಅತಿ ಆಶಾವಾದಿಯಾದರೆ ಖಂಡಿತ ಮತ್ತೆ ಎಡವುವುದು ಸಹಜ. ನಾಲ್ಕಾರು ಚಿತ್ರಗಳಲ್ಲಿ ಹಣ ಮಾಡಿಕೊಂಡು ಯಾರಾದರೂ ತನ್ನನ್ನು ಪ್ರೀತಿಸುವವನನ್ನು ಕೈಹಿಡಿದು ಗೃಹಿಣಿಯಾಗಿ ಹಾಯಾಗಿದ್ದು ಬಿಡಬೇಕು. ಇರಲೊಂದು ಚಿಕ್ಕಮನೆ, ಎರಡು ಮಕ್ಕಳ ಚಿಕ್ಕ ಸಂಸಾರ. ಹೊರಗೆ ಶ್ರಮಿಸಿ ದುಡಿದು ಬರುವ ಪತಿ. ಅವನಿತ್ತುದ್ದನ್ನೆ ಬಳಸಿ ಸಂಸಾರ. ತನ್ನ ದುಡ್ಡೇನಿದ್ದರೂ ಮಕ್ಕಳ ವಿದ್ಯಾಭ್ಯಾಸ, ಅವರ ಭವಿಷ್ಯಕ್ಕಾಗಿ ಮಗ ಇಂಜನೀಯರ್, ಮಗಳು ಡಾಕ್ಟರಾಗ ಬೇಕು. ಇಲ್ಲದಿದ್ದರೆ ಬಹಳ ಓದಿ ಡಾಕ್ಟರೇಟ್ ಪಡೆಯಬೇಕು. ಗೌರವ ಪ್ರಶಸ್ತಿಗಳನ್ನು ಪಡೆಯಬೇಕು ಈ ರಂಗದಲ್ಲಿ ಬರುವ ಗೌರವ ಪ್ರಶಸ್ತಿಗಳು ಇದ್ದರೂ ಗೌರವ ಮನ್ನಣೆಯಿಲ್ಲ. ಹೊರಗೆ ಹೊರಟರೆ ಅಭಿಮಾನಿಗಳ ದೊಂಬಿ, ಕೆಲವರ ಚುಚ್ಚು, ಅಶ್ಲೀಲ ಮಾತು, ನಗೆಪಾಟಲು, ಕಟ್ಟುಕತೆ, ಚಿತ್ರರಂಗದಿಂದ ಮರೆಯಾದ ಮೇಲೆ ಗೌರವ ಮನ್ನಣೆಯೂ ಮಾಯ ಆದರೆ, ಆ ಪ್ರಶಸ್ತಿ ಗೌರವ ಎಂದೂ ಅಳಿಸಬಾರದು. ಟ್ಯಾಗೂರ್, ಸಾರಾಬಾಯ್, ಬಾಬಾ, ರಾಮನ್, ವಿಶ್ವೇಶ್ವರಯ್ಯ, ಒಬ್ಬೊಬ್ಬರೇ ಇರುವುದು? ಅವರ ಹೆಸರು ಅಮರವಾಗಿಲ್ಲವೇ? ಆದರೆ ಎಷ್ಟು ನಟ, ನಟಿಯರ ಹೆಸರು ಅಮರವಾಗಿ, ಹಚ್ಚಹಸಿರಾಗಿ ನೆನಪಿನಲ್ಲಿ ನಿಂತಿದೆ? ಒಂದು ತಲೆಮಾರಿನ ಹಿಂದಿನ ನಟನಟಿಯರನ್ನು ಮುಂದಿನ ತಲೆಮಾರಿನವರು ಮರೆತೇಬಿಡುತ್ತಾರೆ. ಹೊಸನೀರು ಬಂದು ಹಳೆಯ ನೀರನ್ನು ಕೊಚ್ಚಿ ಹೋದಂತೆ. ತಾನೆಂದೂ ತನ್ನ ಮಕ್ಕಳನ್ನು ಚಿತ್ರರಂಗಕ್ಕೆ ಕಳಿಸಬಾರದು. ಅದರ ಬಣ್ಣದ ಬದುಕು, ಬವಣೆ ತನಗೊಬ್ಬಳಿಗೇ ಸಾಕು.

ಹೊರಗೆ ತಾಯಿಯ ದನಿ ಕೇಳುತಿತ್ತು.

'ನೋಡಿ ಈಗ್ತಾನೇ ಮಾತಾಡ್ತಾ ಇದ್ದೆ. ಐವತ್ತು ಸಾವಿರ ನಗದು ಕೊಡೋಕೆ ತಯಾರಿದ್ದಾರೆ. ನೀವು ನಾಲ್ಕು ತಿಂಗಳಲ್ಲಿ ಚಿತ್ರ ಮುಗಿಸ್ತೀನೀಂತ ಹೇಳ್ತಾ ಇದ್ದೀರಿ. ನಾನು ಅವಳ ಕಾಲ್ ಶೀಟ್ ಎಲ್ಲಾ ಮತ್ತೆ ಬದಲಾಯಿಸ್ಬೇಕು. ಯೋಚ್ನೆ ಮಾಡಿ ನೋಡಿ. ನಮ್ಮ ಪವಿತ್ರ ದುಬಾರಿ

ಅನ್ನಿಸಿದ್ರೆ ನಿಮಗೇನು ಬಿಡಿ. ಬೇಕಾದಷ್ಟು ಜನ ಐದು ಸಾವಿರ, ಐದು ನೂರಿಗೂ ಮಾಡಲೂ ಸಿದ್ಧರಿದ್ದಾರೆ, ಚಾನ್ಸ್ ಸಿಕ್ಕರೆ ಸಾಕೂಂತಾ ಅವರನ್ನೇ ತೆಗೆದುಕೊಳ್ಳಬಹುದು.'

ರೆಡ್ಡಿಯವರು ಬಹಳ ಮೆಲ್ಲಗೆ ಮಾತನಾಡುತ್ತಿದ್ದರಿಂದ ಅವಳಿಗೆ ಸರಿಯಾಗಿ ಕೇಳಿಸುತ್ತಿರಲಿಲ್ಲ.

'ಅದೇ ಹೇಳಲಿಲ್ವೇ? ಸತ್ಯಕಾಮ್‌ರವರು 'ಚಿತ್ರಾಂಗದ' ಮುಂದಿನ ತಿಂಗಳು ಪ್ರಾರಂಭಿಸ್ತಾರೆ ಸುನೀಲ್‌ಕುಮಾರ್ ಜೊತೆ ಮಾಡ್ತಾ ಇದ್ದಾಳೆ. ಅವರಂತೂ ಇವಳಿಗೆ ಬ್ಲಾಂಕ್ ಚೆಕ್ ಕೊಟ್ಟಿದ್ದಾರೆ ಅಲ್ದೇ ಚಿತ್ರ ನೂರು ದಿನಗಳು ಓಡಿದ್ರೆ ಒಂದು ಹೊಸ ಫಾರಿನ್ ಕಾರು ತೆಗೆದುಕೊಡ್ತೀನಿ ಅಂದಿದ್ದಾರೆ. ಗಂಗಾಧರಯ್ಯ, ಜಮಖಂಡಿ ಅವ್ರು ನಿಮ್ಗೆ ಗೊತ್ತು ಅವರು ಎಷ್ಟು ಸೌಂಡ್ ಪಾರ್ಟೀಂತ' ರೆಡ್ಡಿಯವರ ಮೆಲು ಮಾತು. ಉತ್ತರ ಅದಕ್ಕೆ.

'ಆಗೋದಿಲ್ಲ. ನಾಳೀನೇ ನಲ್ವತ್ತು ಸಾವಿರ ಕ್ಯಾಷ್ ತಂದುಕೊಡಿ. ಚಿತ್ರ ಮುಗಿದ ಮೇಲೆ ರಿಲೀಸ್‌ಗೆ ಮುಂಚೆ ಹತ್ತು ಸಾವಿರ ಕೊಡಿ. ನಾನು ಬಹಳ ಅನುಭವಿಸಿದ್ದೀನಿ. ಅಡ್ವಾನ್ಸ್ ಕೊಟ್ಟು ಹೋಗಿ, ಮುಹೂರ್ತದ ಹೊತ್ತಿಗೆ ಒಂದು ಚೂರು ಕೊಟ್ಟು ಶಾಸ್ತ್ರ ಮಾಡಿ ರಿಲೀಸ್ ಹೊತ್ಗೆ ಮಿಕ್ಕಿದ್ದು ಕೊಡ್ತೀನೀಂತ ಹೇಳಿ ಆಗ್ಲೂ ತಾರಮಯ್ಯಾಂತ ಕೈ ಆಡ್ಸಿ ಬಿಡ್ತಾರೆ ಹೇಗಿದ್ರೂ ನಾವು ಕೋರ್ಟು ಕಛೇರಿಗೆ ಹೋಗೋಲ್ಲಾಂತ ಗೊತ್ತು. ಹಾಗೆ ಹೋದ್ರೆ ನಮ್ಮ ಮೇಲೆ ಇಲ್ಲ ಸಲ್ಲದ ಗುಲ್ಲು. ರಿಲೀಸ್ ಆದಮೇಲೆ, ನಮ್ಮ ಕಡೆ ತಿರುಗಿಯೂ ನೋಡೋಲ್ಲ. ಅಕಸ್ಮಾತ್ ಮುಂದಿನ ಚಿತ್ರಕ್ಕೆ ಬೇಕಾಗಿರೋ ಹಾಗಿದ್ರೆ ಮತ್ತೆ ಹಳೇ ಬಾಕಿ ಕೊಟ್ಟು, ಅಡ್ವಾನ್ಸ್ ಶಾಸ್ತ್ರ ಮಾಡ್ತಾರೆ. ನಂಗದೆಲ್ಲಾ ಸರೀ ಬರೋಲ್ಲ.'

ಅಷ್ಟರಲ್ಲಿ ರೀಟಾ ಒಳಗೆ ಬಾಗಿಲು ತಳ್ಳಿಕೊಂಡು ಬಂದಳು.

'ಪವಿತ್ರಾ ಪೌರಾಣಿಕ ಚಿತ್ರದಲ್ಲಿ ನೀನೇ ಹೀರೋಯಿನ್. ಜನನ ಉದ್ಧಾರ ಮಾಡೋಕೆ ಭೂಮಿಯಲ್ಲಿ ಅವತರಿಸುವ ಪಾರ್ವತಿಯ ರೋಲ್ ಅಂತೆ. ಇನ್ನು ಮಿಕ್ಕ ಸ್ಟಾರ್ಸ್ ಎಲ್ಲಾ ಬೇಕಾದಷ್ಟು ಜನ! ಮಲ್ಟಿ ಸ್ಟಾರ್ ಅಂತೆ, ಕಲರ್ ಅಂತೆ, ಸಿನಿಮಾ ಸ್ಕೋಪ್ ಅಂತೆ! ನಾಳೀನೇ ಬಂದು ಅಡ್ವಾನ್ಸ್ ಕೊಟ್ಟಿಡ್ತಾರಂತೆ.'

ಪವಿತ್ರ ಸೊಟ್ಟಗೆ ನಕ್ಕಳು.

'ಚಿತ್ರದಲ್ಲಾದ್ರೂ ಏನಾದ್ರೂ ಒಳ್ಳೆಯ ಕೆಲಸ ಮಾಡೋ ಪಾತ್ರ ಸಿಕ್ತಲ್ಲಾ ಸಧ್ಯ! ನಂಗೆ 'ಚಿತ್ರಾಂಗದ' ಇದೆ. ಅಮ್ಮನಿಗೆ ಗೊತ್ತಾ?'

'ನಿಮ್ಮ ತಾಯಿಯಂತೂ ಸತ್ಯಕಾಮ್‌ರವರ 'ಚಿತ್ರಾಂಗದ'ಕ್ಕೆ ಏನೂ ತೊಂದರೆ ಬರದ ಹಾಗೆ ಶೆಡ್ಯೂಲ್ ಹಾಕೇ ಹಾಕ್ತಾರೆ ನೋಡ್ತಾ ಇರು!'

ಹತ್ತು ನಿಮಿಷಗಳ ನಂತರ ಮಾಲತಮ್ಮ ಹಿಗ್ಗುತ್ತಾ ಒಳಗೆ ಬಂದರು.

'ಅಲ್ಲಾ, ಮುದ್ಕನ್ನ ನೋಡು ಹತ್ತು ಸಾವಿರ ಕೊಡ್ತಾನಂತೆ ನಿನ್ನ ಏನು ಅಂದ್ಕೊಂಡಿದಾನೆ! ನಾಳೆ ಚಿತ್ರ ದುಡ್ಡು ಮಾಡಿದ್ರೆ ಅದ್ರಲ್ಲಿ ನಿಂಗೇನಾದ್ರೂ ಪಾಲು ಕೊಡ್ತಾನಾ? ಏನಿದ್ರೂ ಎಲ್ಲಾ ಈಗ್ಲೇ ವಸೂಲು ಮಾಡಿಕೊಳ್ಳಬೇಕು.'

ಪವಿತ್ರಳಿಗೆ ತಾಯಿಯ ನಡವಳಿಕೆ ಕೊಂಚವೂ ಹಿಡಿಸಲಿಲ್ಲ.

'ಚಿತ್ರಾಂಗದ ಕೈಲಿರಬೇಕಾದ್ರೆ ಮತ್ತೆ ದೊಡ್ಡ ಚಿತ್ರಕ್ಕೆ ಹೇಗಮ್ಮಾ ಸೈನ್ ಹಾಕೋದು? ಸತ್ಯಕಾಮ್ ಏನಂದ್ಕೋತಾರೆ?'

'ನೀನು ಸುಮ್ನಿರು. ಆ ಮಾತು ಕತೆ ಆಡಿ ಎಷ್ಟು ದಿನ ಆಯ್ತು. ಅವರೇನಾದ್ರೂ ಬಂದು ಅಗ್ರಿಮೆಂಟ್ ಮಾಡ್ಕೊಂಡು ಹೋದ್ರಾ? ನಾಳೆ ಆ ಚಿತ್ರ ಮಾಡೋಲ್ಲ ಈಗ ಅಂತ ಅಂದ್ರೂ ಆಯ್ತು. ನಿಂಗೊತ್ತಿಲ್ಲ. ಒಬ್ಬರಿಗೊಬ್ಬರಿಗೆ ಪೈಪೋಟಿ ಹತ್ತಿಸಿ ನಾವು ಹಣ, ಹೆಸರು ಮಾಡಿಕೋಬೇಕು. ನಾಳೆ ನಲ್ವತ್ತು ಸಾವಿರ ತಂದು ಕೊಡ್ತಾರೆ. ಮಾಧು ಅದೇನೋ ಟೆಕ್ಸ್‌ಟೈಲ್ ಇಂಡಸ್ಟ್ರೀ ಪ್ರಾರಂಭಿಸ್ತೀನಿ ಅಂತಿದ್ದ. ಅವನಿಗೊಂದಿಷ್ಟು ಕೊಟ್ಟು ನಲವತ್ತು ಸಾವಿರ ನಾಲ್ಕು ಲಕ್ಷ ದುಡಿಯೋ ಹಾಗೆ ಮಾಡ್ತೀನಿ'

ಮಾಲತಮ್ಮ ಹಿಗ್ಗಿದರು.

'ಅಲ್ಲಮ್ಮಾ, ದೇವರಾಜರದ್ದೇ ಎರಡು ಚಿತ್ರಗಳಿವೆಯಲ್ಲ!' ಪವಿತ್ರ ಎಚ್ಚರಿಸಿದಳು. 'ಅವರಿಂದ ಹಣ, ಮನೆ, ಕಾರು, ಅಂತಸ್ತು ಎಲ್ಲಾ ಬಂದಾಯ್ತು. ಸ್ಟೋರಿ, ಸ್ಕ್ರೀನ್ ಪ್ಲೇಗೆ ಕೂತ್ಕೋಬೇಕೂಂತಿದ್ರು.'

ಮಾಲತಮ್ಮ ಪವಿತ್ರಳ ಮುಖ ನೋಡಿದರು.

'ದೇವರಾಜ್‌ರವರನ್ನು ಬಗ್ಗಿಸಬೇಕಾದವಳು ನೀನು. ಇವೊತ್ತು ರಾತ್ರಿ ಬಂದಾಗ ನಯವಾಗಿ ಹೇಳು. ನಿಮ್ಮ ಚಿತ್ರಗಳು ಈಗ ಬೇಡ, ತುಂಬಾ ಕಾಂಪಿಟೇಷನ್ ಆಗುತ್ತೆ. ಚಿತ್ರಾಂಗದ, ಈ ದೇವಿ ಮಹಾತ್ಮೆ ಮುಗಿದು ಹೋಗಲಿ. ನನ್ನ ಚಿತ್ರಗಳೇ ನನ್ಗೆ ಸ್ಪರ್ಧೆ ನಡೆಸಬಾರ್ದೂಂತ.

ಏನಿದ್ರೂ ನೀನು ಅವರ್ನ ಹೇಗೆ ಗೆಲ್ತೀಯೋ ಅದರ ಹಾಗೆ ನಾಳೆ ಇನ್ನೂ ರೋಜಿ ಮದ್ವೆ ಆಗ್ಬೇಕೂ. ಲಲ್ಲಿಗೊಂದು ದಾರಿ ಮಾಡ್ಬೇಕೂ. ಶ್ಯಾಮ್, ಮಧೂನ ಒಂದು ನೆಲೆಗೆ ತರ್ಬೇಕೂ. ನಿನ್ನ ಮೇಲೆ ಇದೆ ನೋಡು ಇವ ರೆಲ್ಲರ ಜವಾಬ್ದಾರಿ. ಇನ್ನೂ ಕಿಟ್ಟು, ಪುಟ್ಟ ಓದಿ ಮುಂದೆ ಬರ್ಬೇಕೂ !'

ಪವಿತ್ರಳಿಗೆ ಒಮ್ಮೆಗೇ ಸಿಡಿಲೆರಗಿದಂತಾಯಿತು. ಇವರೆಲ್ಲರ ಬದುಕು ನೇರ್ಪು ಮಾಡಲು ತಾನು ದುಡಿಯಬೇಕು. ಇತರರ ಕೈಗೊಂಬೆಯಾಗ ಬೇಕು. ಇವರಿಗೆಲ್ಲಾ ಮಾಡಿದ ಮೇಲೆ ತನಗೆ ಉಳಿಯುವುದು ಹಣವೇ? ಯೌವನವೇ? ಆಸೆ ಆಕಾಂಕ್ಷೆಗಳೇ? ತನ್ನ ತಾಯಿ ತನ್ನ ಬಗ್ಗೆ ಏಕೆ ಯೋಚಿಸುವುದಿಲ್ಲ? ಏನಿದ್ದರೂ ಇವರೆಲ್ಲರಿಗೂ ತಾನು ಹಣ ತಯಾರಿಸುವ ಯಂತ್ರದಂತೆ.

'ನೋಡು ಆ ಯೋಚನೆಯೆಲ್ಲಾ ನನಗೆ ಬಿಡು. ನೀನಾಯ್ತು ನಿನ್ನ ಚಿತ್ರರಂಗ, ಅಭಿನಯವಾಯ್ತು, ಹಾಯಾಗಿದ್ದು ಬಿಡು. ಇನ್ನು ಮಿಕ್ಕಿದ್ದು ನಾನೆಲ್ಲಾ ನೋಡ್ಕೋತೀನಿ' ಮಾಲತಮ್ಮ ಮಗಳ ಕೆನ್ನೆ ತಟ್ಟಿದರು. 'ರೆಸ್ಟ್ ತೊಗೋ. ಇನ್ನು ಚಿತ್ರೀಕರಣ ಪ್ರಾರಂಭ ಅಂದ್ರೆ ರೆಸ್ಟ್ ಸಿಕ್ಕೋಲ್ಲ

ಪವಿತ್ರ ಹಾಸಿಗೆಯ ಮೇಲುರುಳಿಕೊಂಡಳು. ವಿಶಾಲವಾದ ಮಂಚ,

ಅದರ ಮೇಲೆ ತೂಗಾಡುತ್ತಿದ್ದ ನೀಲಿಯ ತೆರೆ. ಮೆತ್ತನೆಯ ದಿಂಬು ಗಳು, ಮೆತ್ತನೆಯ ಫೋಮಿನ ಹಾಸಿಗೆ–ತನ್ನ ರೂಮು ಎಷ್ಟು ಅಂದವಾಗಿದೆ! ಕಿಟಕಿಯ ನೆಟ್ ಪರದೆಗಳು, ರೂಮಿಗೆ ಹವಾನಿಯಂತ್ರಣ, ನೆಲಕ್ಕೆ ಬೆಲೆ ಬಾಳುವ ಕಾರ್ಪೆಟ್, ಸ್ಟೀಲಿನ ಬೀರುಗಳ ತುಂಬಾ ತನ್ನ ಸೀರೆಗಳು, ಉಡುಪುಗಳು, ಡ್ರೆಸ್ಸಿಂಗ್ ಟೇಬಲ್ಲಿನ ಮೇಲೆ ಎಷ್ಟೊಂದು ಅಲಂಕಾರ ಸಾಮಗ್ರಿಗಳು, ಪ್ರತಿದಿನ ರಾತ್ರಿ ತನ್ನ ಬಳಿಗೆ ಬರುವಾಗಲೂ ದೇವರಾಜ್ ರವರು ಬರಿಗೈಯಲ್ಲಿ ಬರುತ್ತಿರಲಿಲ್ಲ. ತನಗೇನಾದರೂ ಉಡುಗೊರೆ ತಂದೇ ತರುತ್ತಿದ್ದರು, ಸೆಂಟುಗಳು, ಕಾಸ್ಟ್ಯೂಮ್ ಒಡವೆಗಳು, ಸೀರೆಗಳು ಉಡುಪುಗಳು, ತನ್ನನ್ನು ಭೋಗಿಸಲು ಬರಿಯ ಕೈಯಲ್ಲಿ ಅವರಿಗೆ ಬರಲು ಸರಿತೋರುತ್ತಿರಲಿಲ್ಲವೇನೋ! ತನ್ನನ್ನು ತಾನೇ ಎಂದೂ ಅವರಿಗರ್ಪಿಸಿ ಕೊಂಡಿಲ್ಲ ದಿನನಿತ್ಯದಎಷ್ಟೋ ಕಾರ್ಯ ಕರ್ತವ್ಯಗಳಲ್ಲಿ ಅದೂ ಒಂದಾಗಿತ್ತು. ತನಗೆ ಆಯಾಸವೆಂದರೆ ದೇಹಾಲಸ್ಯವೆಂದರೆ ಎಂದೂ ಬಲಾತ್ಕರಿಸುತ್ತಿರಲಿಲ್ಲ. ಹೇಗಿದ್ದ ತನ್ನ ಬದುಕು ಹೇಗಾಯಿತು? ಮುಂದೆ ರೋಜೀ, ಲಲ್ಲಿ,

ಮಾಧೂ, ಶ್ಯಾಮ್ ಇವರುಗಳ ಭವಿಷ್ಯ ರೂಪಿಸಬೇಕು.

ರೀಟಾ ಅಳುಕುತ್ತಾ ಬಂದಳು. 'ಪಾಪ್ರೂ, ನಾನು ಬೇಗ ಹೋಗ ಬೇಕು ಮನೇಲಿ ಮಗ, ಮಗಳು ಕಾಯ್ತಾ ಇರ್ತಾರೆ. ನನ್ನ ಪತಿಯೂ ಫ್ಯಾಕ್ಟರಿಯಿಂದ ಬಂದಿರ್ತಾರೆ. ಮಗಳಿಗೇಕೋ ಒಂದೆರಡು ದಿನಗಳಿಂದ ಮೈ ಸರಿಯಿಲ್ಲ ..'

'ಹೋಗು ರೀಟಾ—ನಾನೆಲ್ಲಾ ರೋಜಿ ಕೈಲಿ ಮಾಡಿಸ್ಕೋತೀನಿ. ಕೂದಲಿನ ಕಂಡೀಷನ್ ಮಾಡಿಸಿಕೊಳ್ತೀನಿ.'

'ಆದ್ರೆ ನಿಮ್ಮ ತಾಯಿ ಏನಾದ್ರೂ ಅಂದ್ರೆ ! ದುಡಿಯುವ ಹೆಣ್ಣಿಗೆ ಕೆಲಸ ಮುಖ್ಯ. ಆಮೇಲೆ ಸಂಸಾರ. ಸಂಸಾರಾಂತ ಕೈ ಹಿಸಿಕಿಕೊಂಡು ಕಣ್ಣೀರು ಹಾಕಿದ್ರೆ ಯಾರ್ಕೇಳ್ತಾರೆ ಇಲ್ಲಿ. ಕೆಲಸಕ್ಕೆ ಸೇರಿದ್ಮೇಲೆ ಎಲ್ಲಕ್ಕೂ ಸಿದ್ಧ ಇರ್ಬೇಕೂಂತ ರೇಗಿದ್ರು ಮೊನ್ನೆ !'

'ಅದನ್ನು ನಾನು ನೋಡಿಕೊಳ್ಳುತ್ತೇನೆ. ನಿನ್ನ ಮಗಳನ್ನು ನಿನ್ನ ಪತಿಯನ್ನು ನೀನು ಕಾಯಿಸುವುದು ಸರಿಯಲ್ಲ. ನಿನ್ನ ಮಗಳಿಗಾಗಿ ನಿನ್ನ ಪ್ರೀತಿ ಕಿಂಚಿಂತ್ ಕಡಿಮೆಯಾಗಬಾರದು !' ಪವಿತ್ರ ಹೇಳಿದಾಗ ರೀಟಾಳ ಕಣ್ತುಂಬಿ ಬಂತು.

'ಪವಿತ್ರಾ, ನನ್ನ ಮಗಳು ನಿನ್ನ ಹಾಗೆ ದೊಡ್ಡ ತಾರೆಯಾಗಲಿ ಅಂತ ನಾನು ತುಂಬಾ ಆಸೆ ಇಟ್ಕೊಂಡಿದ್ದೀನಿ !'

ಪವಿತ್ರ ಹಾವು ಮುಟ್ಟಿದಂತೆ ಕೈ ಹಿಂದಕ್ಕೆಳೆದುಕೊಂಡಳು. 'ಬೇಡಾ ರೀಟಾ ಯಾವ ತಾಯಿಯೂ ಮಗಳಿಗಾಗಿ ಅದನ್ನು ಬಯಸುವುದು ಬೇಡಾ! ಅವಳೇ ಇಷ್ಟಪಟ್ಟು ಆ ದಾರಿ ಹಿಡಿದರೆ ಸರಿ. ನೀನು ನಿನ್ನ ಆಸೆಗಾಗಿ ಆ ದಾರಿಗೆ ಎಳೆಯಬೇಡಾ ! ರೀಟಾ. ಹೋಗು ಮನೆಗೆ ಹೋಗು ! ಹೊತ್ತಾಯಿತು !' ಪವಿತ್ರ ಅವಳಿಂದ ಮುಖ ತಿರುಗಿಸಿ ದಿಂಬಿನಲ್ಲಿ ಮುಖ ಮುಚ್ಚಿಕೊಂಡಳು.

'ಪವಿತ ನಿನ್ನ ವ್ಯಾಯಾಮ !' ರೀಟಾ ತೊದಲಿದಾಗ.

'ಇವೊತ್ತು ನನಗೆ ಅದರ ಅವಶ್ಯಕತೆಯಿಲ್ಲ. ನಾಳೆಯಿಂದ ನಾನೇ ಮಾಡುತ್ತೇನೆ' ಎಂದಳು ಪವಿತ್ರ.

ಅಂದು ರಾತ್ರಿ ದೇವರಾಜ್ ಬಂದಾಗ ರಾತ್ರಿ ಹತ್ತು ಗಂಟೆಯ ಮೇಲಾಗಿತ್ತು. ಪವಿತ್ರ ಒಂದು ಸಣ್ಣ ನಿದ್ದೆ ತೆಗೆದಾಗಿತ್ತು. ಮಾಲತಮ್ಮ ಕಣ್ಣು ಹೊಸಕುತ್ತಾ ಬಂದು ನಾಲ್ಕು ಮಾತಾಡಿ ತಮ್ಮ ಕೊಠಡಿಗೆ

ಹೋಗಿದ್ದರು. ಮಾಧೂ, ಶ್ಯಾಮ್, ರೋಜಿ, ಲಲ್ಲಿ, ಪುಟ್ಟಿ, ಕಿಟ್ಟಿ ಎಲ್ಲಾ ಆಗಲೇ ಕನಸಿನ ಲೋಕದಲ್ಲಿದ್ದರು. ಅಯ್ಯರ್ ಅಡಿಗೆ ಮನೆಯ ಬಾಗಿಲಲ್ಲಿ ತೂಕಡಿಸುತ್ತಾ ಕುಳಿತಿದ್ದರು. ದೇವರಾಜ್‌ರವರಿಗೆ ಮಜ್ಜಿಗೆಯೋ, ಹಾಲೋ, ತಿಳಿಸಾರೋ ಬೇಕಾದರೆ ತಂದು ಕೊಡಬೇಕಿತ್ತು. ಏನೂ ಬೇಡದಿದ್ದರೆ ತಾನು ಮಲಗಬಹುದಿತ್ತು. ಪವಿತ್ರ ಏನಾದರೂಬಂದು ಹೇಳಬೇಕು ಅಲ್ಲಿಯವರೆಗೂ ಮಲಗುವ ಹಾಗಿಲ್ಲ.

ದೇವರಾಜ್ ಅಂದು ಪವಿತ್ರಳಿಗಾಗಿ ತಂದ ಉಡುಗೊರೆ ನಾಲು ಪುಸ್ತಕಗಳು. 'ಪವಿತ್ರಾ, ಇವೊತ್ತು ಈ ಕಾದಂಬರಿಗಳನ್ನು ನೋಡಿದಾಗ ನೀನು ಓದಲೇಬೇಕೂಂತ ನನಗನ್ನಿಸಿತು. ಕೊಂಡು ತಂದೇಬಿಟ್ಟೆ. ಇವುಗಳನ್ನು ಓದಿ ನಿನಗೆ ಯಾವುದು ಚೆನ್ನಾಗಿದೇಂತ ಅನ್ನುತ್ತೆ ಹೇಳು ಅದನ್ನೇ ಚಿತ್ರ ಮಾಡ್ತೀನಿ.'

ಪವಿತ್ರಳಿಗೆ ಬಹಳ ದಿನಗಳ ಮೇಲೆ ತನ್ನ ಇಷ್ಟಾರ್ಥ ನೆರವೇರಿತ್ತು. ಮೊದಲಿನಿಂದಲೂ ಕತೆ, ಕಾದಂಬರಿ ಓದುವ ಹುಚ್ಚು. ಆದರೆ ಓದಿನ ಕಾರಣ ಅಷ್ಟಾಗಿ ಆಗುತ್ತಿರಲಿಲ್ಲ. ಆಮೇಲೆ ಚಿತ್ರರಂಗ ಪ್ರವೇಶ. ಓದಿದಂತೆಯೇ ! ಈಗ ಚಿತ್ರಕ್ಕಾಗಿಯೇ ಕತೆ, ಕಾದಂಬರಿಗಳೆಂದರೆ ! ಅವಳಿಗೆ ಸಂತಸವಾಯಿತು. ಪುಸ್ತಕಗಳ ತಲೆಬರಹಗಳನ್ನು ಮೆಲ್ಲನೆ ಸವರಿ ಒಂದೊಂದು ಪುಸ್ತಕವನ್ನು ತಿರುಗಿಸಿ ನೋಡಿದಳು.

'ಇದೇನು ಎಲ್ಲಾ ಒಬ್ಬರೇ ಬರೆದ ಕಾದಂಬರಿಗಳು !'

'ಹೌದು ಪವಿತ್ರ. ಆತ ಬಹಳ ಚೆನ್ನಾಗಿ ಬರೀತಾನೆ. ಈ ನಾಲ್ಕು ಕಾದಂಬರಿಗಳನ್ನ ನಾನು ಮೆಚ್ಚಿದೆ. ಅದಕ್ಕೆ ತಂದೆ. ನೀನು ಓದಿ ಮುಗಿಸು, ಒಂದು ದಿನ ನಾನೇ ಆ ಸಾಹಿತೀನ್ನ ಇಲ್ಲಿಗೆ ಕರೆದುಕೊಂಡು ಬರ್ತೀನಿ !'

'ಆಗ್ಲಿ ಓದ್ತೀನಿ !' ಪವಿತ್ರ ಪುಸಕ್ತಗಳನ್ನು ಎದೆಗೊತ್ತಿಕೊಂಡಳು.

'ಈಗ್ಲೇ ಓದೋಕೆ ಪ್ರಾರಂಭಿಸಲಾ ?'

'ನಿನ್ನಿಷ್ಟ ಚಿನ್ನಾ....ಆದರೆ ತಕ್ಷಣ ಬೇಡಾ. ನಾನು ನಿನಗಾಗಿ ಬಂದಿರೋದು ಗೊತ್ತಿಲ್ವೆ ಹೇಗೆ ? ಹೇಗಿದ್ದರೂ ಬೇಗ ನಿದ್ರೆ ಬರೋಲ್ಲಾಂತಿ. ಆಗ ಓದು '

ಪವಿತ್ರ ಆವರಿಗೆ ಮಣಿಯಲೇ ಬೇಕಾಯಿತು.

'ವಸಂತಕುಮಾರ್' ಸಾಹಿತಿಯ ಹೆಸರನ್ನೂ ಒಂದೆರಡು ಬಾರಿ ಮೌನವಾಗಿ ಮೆಲುಕುಹಾಕಿದಳು. ಪುಸ್ತಕದ ಹಾಳೆಗಳನ್ನು ತಿರುವಿಹಾಕ ತೊಡಗಿದಳು. ಹಾಗೆಯೇ ಒಂದೆರಡು ಪುಟಗಳನ್ನು ಓದಿದಳು. ಕುತೂ ಹಲ ಕೆರಳಿ ಮತ್ತೆ ಮೊದಲಿನಿಂದ ಓದಲು ಪ್ರಾರಂಭಿಸಿದಳು. ಓದುತ್ತಾ ಓದುತ್ತಾ ಹಾಗೆಯೇ ಅದರಲ್ಲೇ ಲೀನವಾಗಿ ಹೋದಳು. ಅದು ಇಬ್ಬರು ಸಹೋದರಿಯರ ಕತೆ. ಪುರುಷನೊಬ್ಬನ ಪ್ರೇಮಪಾಶಕ್ಕೆ ಅಕ್ಕ ಸಿಲುಕಿ ಅವನನ್ನೇ ನಂಬಿ ಸರ್ವಸ್ವವನ್ನು ಅವನಿಗರ್ಪಿಸಿಕೊಂಡಾಗ ಅವನು ಅವ ಳನ್ನು ಮೋಸಗೊಳಿಸಿ ಹೇಳದೇ ಕೇಳದೇ ಊರೇಬಿಟ್ಟು ತೆರಳುತ್ತಾನೆ ಅಕ್ಕ ನಿಗೆ ತನ್ನ ತಪ್ಪಿನ ಅರಿವಾಗಿ ಪ್ರಪಂಚವನ್ನು ಎದುರಿಸುವ ಧೈರ್ಯ ಸಾಲದೇ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಅದನ್ನು ಕಂಡ ತಂಗಿ ಅಕ್ಕನ ಅಕಾಲ ಮರಣಕ್ಕೆ ಕಾರಣನಾದವನಿಗೆ ಬುದ್ಧಿ ಕಲಿಸಬೇಕೆಂದು ಪಣತೊಟ್ಟು ಅವನನ್ನು ಹುಡುಕಿಕೊಂಡು ಹೋಗಿ ಅವನನ್ನು ತನ್ನ ಮೋಹದ ಬಲೆ ಯಲ್ಲಿ ಕೆಡವಿಕೊಂಡು ಅವನ ಹಣ, ಅವನ ಅಂತಸ್ತು ಸೂರೆಗೊಂಡು ಅವನು ದಾರುಣ ಸ್ಥಿತಿಗಿಳಿದು, ತನ್ನ ತಪ್ಪನ್ನು ಗ್ರಹಿಸಿ ಅವಳ ಕ್ಷಮೆ ಕೇಳುತ್ತಾನೆ. ಅಷ್ಟರಲ್ಲಿ ಕಾರಿನ ಆಕಸ್ಮಿಕದಲ್ಲಿ ಕಣ್ಣುಗಳನ್ನು ಕಳೆದು ಕೊಳ್ಳುತ್ತಾನೆ. ಅವನ ಸ್ಥಿತಿಗೆ ಮರುಗಿ ತಂಗಿ ಅವನನ್ನು ಮದುವೆಯಾಗಿ ಅವನ ದಾರಿದೀಪವಾಗಲು ಮತ್ತೆ ಪಣ ತೊಡುತ್ತಾಳೆ. ಹೆಣ್ಣು ಎಷ್ಟೇ ರಣಚಂಡಿಯಾದರೂ ಕ್ಷಮೆ ಅವಳ ಅತ್ಯಂತ ಹಿರಿಯ ಗುಣವೆಂದು ಮೂಡಿ ಬಂದಿದ್ದ ಆ ಕಾದಂಬರಿ ಅವಳಿಗೆ ಹಿಡಿಸಿತು. ಓದಿ ಮುಗಿಸಿದಾಗ ಕತೆ ಕಣ್ಣಿಗೆ ಕಟ್ಟಿದಂತಿತ್ತು. ಆ ಕಾದಂಬರಿಯನ್ನು ಚಿತ್ರ ಮಾಡಿದಲ್ಲಿ ತಾನು ತಂಗಿಯ ಪಾತ್ರ ವಹಿಸಿದರೆ ಎಷ್ಟು ಚೆನ್ನ! ತನ್ನನ್ನು ನಂಬಿಸಿ ಮೋಸ ಮಾಡಿದ ರಾಜೇಂದ್ರ ಅವಳ ಕಣ್ಣುಗಳ ಮುಂದೆ ಮೂಡಿಬಂದ. ಅವನಿಗೆ ಬುದ್ಧಿ ಕಲಿಸಿ ಕೊನೆಗೆ ತನ್ನಿಂದಲೇ ಅವನು ಬದುಕಬೇಕಾಗಬೇಕು! ದೇವರಾಜ್‌ಗೆ ಹೇಳಬೇಕು. ಈ ಕಾದಂಬರಿಯನ್ನೇ ಚಿತ್ರ ಮಾಡಲೆಂದು! ಆ ಸಾಹಿತಿ ಹೇಗಿರಬಹುದು? ಹೆಣ್ಣಿನ ಮನಸ್ಸು, ಹೃದಯವನ್ನು ಎಷ್ಟು ಸಹಜ ಸುಂದರವಾಗಿ ಎಳೆಎಳೆಯಾಗಿ ಬಿಡಿಸಿದ್ದ! ಅಂದಮೇಲೆ ಅವನು ಹೆಣ್ಣನ್ನು ಅರಿತಿರಬೇಕು! ಅವಳಿಗಾಗಿ ಒಂದು ವಿಶೇಷ ಸ್ಥಾನ ಬದುಕಿನಲ್ಲಿ ಕೊಟ್ಟಿರಬೇಕು! ಅವನ ಬಗ್ಗೆಯೂ ಅವಳಿಗೆ ಕುತೂಹಲ ಕೆರಳಿತು. ಅವನು ಬಂದಾಗ ಅವನ ಪರಿಚಯ ಮಾಡಿಕೊಳ್ಳಬೇಕು. ಆಗಲೇ

ದೇವರಾಜ್‌ರವರನ್ನು ಕೇಳಬೇಕೆಂದರೆ ಅವರು ಗಾಢನಿದ್ರೆಯಲ್ಲಿದ್ದರು. ಬೆಳಗಿನ ಝಾವವಾಗುತ್ತಾ ಬಂದುದರಿಂದಲೂ, ರಾತ್ರಿಯೆಲ್ಲಾ ನಿದ್ದೆಗೆಟ್ಟು ಓದುತ್ತಿದ್ದರಿಂದ ಅವಳಿಗೆ ತೂಕಡಿಕೆ ಆರಂಭವಾಗಿತ್ತು. ಪುಸ್ತಕ ಮುಚ್ಚಿಟ್ಟು ಹಾಗೆಯೇ ಮಲಗಿದಳು. ಮತ್ತೆ ಅವಳಿಗೆ ಎಚ್ಚರವಾದಾಗ ದೇವರಾಜ್ ಹೊರಟು ಹೋಗಿದ್ದರು. 'ತಿರುವು' ಕಾದಂಬರಿ ಹಾಗೆಯೇ ಹಾಸಿಗೆಯ ಮೇಲೆ ತೆರೆದು ಬಿದ್ದಿತ್ತು.

ಶೂಟಿಂಗಿಗೆ ಹೊತ್ತಾಯಿತೆಂದು ಗಡಬಡಿಸಿ ಏಳಲೇಬೇಕಾಯಿತು. ಎಂದಿನಂತೆ ದಿನಚರಿ ಯಾಂತ್ರಿಕವಾಗಿ ನಡೆದಿತ್ತು ಎಡೆಬಿಡುವಿಲ್ಲದೆ ಕಾರ್ಯಗಳ ಒತ್ತಡದಿಂದ ಪವಿತ್ರಳ ಮನಸ್ಸಿನಿಂದ 'ತಿರುವು' ಆ ಕಾದಂಬರಿ, ಕಾದಂಬರಿಕಾರ ದೂರವಾಗಿದ್ದ.

'ಚಿತ್ರಾಂಗದ'ಕ್ಕಾಗಿ ತಯಾರಿ ಅದ್ಧೂರಿಯಿಂದ ನಡೆಯುತ್ತಿತ್ತು. ಅದಕ್ಕಾಗಿ ಸೆಟ್ಟುಗಳ ನಿರ್ಮಾಣಕ್ಕಾಗಿ ಕಲಾವಿದ ಜೋಶಿಯ ಹವಣಿಕೆ ನಡೆದಿತ್ತು. ಆ ಸೆಟ್ಟುಗಳ ರೇಖಾಚಿತ್ರಗಳನ್ನು ಆಗಲೇ ಸಿದ್ಧಪಡಿಸಿಕೊಂಡಾಗಿತ್ತು. ಚಿತ್ರಾಂಗದಳ ಉಡುಪು, ವಸ್ತ್ರ ವಿನ್ಯಾಸಕ್ಕಾಗಿ ಆಗಲೇ ಪ್ರಸಿದ್ಧ ಶ್ರೀಮತಿ ವೀಣಾ ಜೋಸೆಫ್ ಪವಿತ್ರಳ ಮೈ ಅಳತೆ ತೆಗೆದುಕೊಂಡು ಹೋಗಿದ್ದಳು. ಅವಳ ಮುಖದ ಅಲಂಕಾರ ಕೇಶವಿನ್ಯಾಸಗಳಿಗಾಗಿ ರೀಟಾಗೆ ಆಗಲೇ ಮುಂಗಡ ತರಬೇತಿ ಕೊಡತೊಡಗಿದ್ದರು. ಇದರ ಮಧ್ಯೆ 'ದೇವಿ ಮಹಾತ್ಮೆ'ಗಾಗಿ ಮುಂಗಡ ಹಣ ನೀಡಿದ್ದ ಚಿತ್ರಕತೆ ಸಂಭಾಷಣೆ, ಹಾಡುಗಳ ಧ್ವನಿ ಮುದ್ರಣ ಅವಸರದಿಂದ ನಡೆದಿದ್ದವು. ಎರಡು ಅದ್ಧೂರಿ ಚಿತ್ರಗಳ ನಾಯಕಿಯಾಗಿ ಪವಿತ್ರಳಿಗೆ ಉಸಿರಾಡುವುದಕ್ಕೂ ಬಿಡುವಿಲ್ಲದಷ್ಟು ಒತ್ತಡ! ಸಾಲದ್ದಕ್ಕೆ ಸತ್ಯಕಾಮ್, ಸುನಿಲ್‌ಕುಮಾರ್‌ರೊಂದಿಗಿರಬೇಕಾದುದರಿಂದ ಅತ್ಯಂತ ಜಾಗರೂಕತೆಯಿಂದಿರಬೇಕಾಗಿತ್ತು. ಅವರಲ್ಲಿ ಒಂದು ಮಾತಾಡಿದರೆ ಹೆಚ್ಚು, ಒಂದು ಮಾತಾಡಿದರೆ ಕಡಿಮೆ. ಒಮ್ಮೆ ಸುನಿಲ್ ಕುಮಾರ್ ಹೇಳಿದ ಹಾಸ್ಯಪ್ರಸಂಗಕ್ಕೆ ಎಲ್ಲರೂ ನಕ್ಕರೂ ಅದೇಕೋ ಅವಳಿಗೆ ನಗು ಬರಲಿಲ್ಲ. ಅವಳು ನಗದೇ ಇದ್ದುದು ಕಂಡು ಸುನಿಲ್ ಕುಮಾರ್ ಅಚ್ಚರಿಯಿಂದ ನೋಡಿದ್ದ.

'ಯಾಕೆ, ನಿಮಗೆ ನನ್ನ ಜೋಕ್ ಅರ್ಥವಾಗಲಿಲ್ಲವೇ ?' ಎಂದು ಕೇಳಿದಾಗ ಪವಿತ್ರ ತಬ್ಬಿಬ್ಬಾಗಿದ್ದಳು.

'ಅರ್ಥ ಆಯಿತು' ಎಂದಾಗ ಮತ್ತೂ ಅಚ್ಚರಿಯಿಂ ಅವಳತ್ತ

ನೋಡಿದುದಲ್ಲದೇ ಅಂದೆಲ್ಲಾ ಅವಳ ಬಳಿ ಮಾತೇ ಆಡಿರಲಿಲ್ಲ ತನಗೆ ಅರ್ಥ ವಾಗಲಿ, ಬಿಡಲಿ, ಸರಿಯೋ ತಪ್ಪೋ, ಅಂತೂ ಹಿರಿಯ ನಾಯಕ ನಟನೆಂದ ಮೇಲೆ ಒಪ್ಪಿಕೊಳ್ಳಲೇಬೇಕು, ನಗಲೇಬೇಕು. ಅದು ತನಗಿನ್ನೂ ಹೊಸದು. ಸತ್ಯಕಾಮ್‌ರವರ ದಿಗ್ದರ್ಶನವೂ ಅದೇ ರೀತಿ. ಅವರ ಕ್ಲಿಷ್ಟತಮವಾದ ಕೆಲವು ಸನ್ನಿವೇಶಗಳನ್ನು ಪವಿತ್ರ ಅರಿಯಲಾರದೇ ತೊಳಲುತ್ತಿದ್ದಳು. ಕಣ್ಣುಗಳು, ತುಟಿಗಳು, ಮುಖಭಾವ ಇವುಗಳ ಮೇಲೆ ಹೆಚ್ಚು ಗಮನ ವಿಡುತ್ತಿದ್ದ ಅವರ ಸೂಚನೆಗಳಿಗನುಸಾರವಾಗಿ ಅಭಿನಯಿಸಲು ಕಷ್ಟವಾಗು ತ್ತಿತ್ತು. ಒಮ್ಮೆ ಕಣ್ಣುಗಳಲ್ಲಿ ದುಃಖ, ತುಟಿಯಂಚಿನಲ್ಲಿ ಕಿರುನಗೆ ತೋರ ಬೇಕೆಂದಾಗ ಹಾಗೆ ಅಭಿನಯಿಸಲಾರದೇ ಪವಿತ್ರ ಒದ್ದಾಡಿದಳು. ಕೊನೆಗೆ ಸತ್ಯಕಾಮ್ ಕೋಪಾವಿಷ್ಟರಾಗಿ ರೇಗಿದ್ದರು.

'ಎಲ್ಲರಿಗೂ ದೊಡ್ಡ ತಾರೆಯಾಗುವಾಸೆ ಒಂದು ಸಣ್ಣ ಭಾವುಕ ಸನ್ನಿವೇಶವನ್ನು ಅಭಿನಯಿಸಲಾರದೇ ಹೋದಲ್ಲಿ ನೀನೆಂತಹ ಅಭಿನೇತ್ರಿ?'

ಪವಿತ್ರ ಅವಮಾನದಿಂದ ಕಣ್ಣೀರು ಮಿಡಿದಾಗ ಅವರು ತಣ್ಣಗಾಗಿ ದ್ದರು.

'ಅತ್ತರೆ ಬರುವುದಿಲ್ಲ. ಪ್ರಯತ್ನಿಸಿ ಮಾಡಿ ತೋರಿಸಿ 'ಸೈ' ಎನಿಸಿ ಕೊಳ್ಳಬೇಕು! ನೀನು ಈ ಸನ್ನಿವೇಶದಲ್ಲಿ ಸರಿಯಾಗಿ ಮಾಡಿಬಿಟ್ಟರೆ ಇವತ್ತು ನಿನಗೆ ಶೂಟಿಂಗ್‌ನಿಂದ ಬಿಡುಗಡೆ ಮಾಡಿ ಫುಲ್ ರೆಸ್ಟ್ ಕೊಡು ತ್ತೇನೆ!' ಎಂದು ಹುರಿದುಂಬಿಸಿದ್ದರು.

ಕನ್ನಡಿಯಲ್ಲಿ ಮುಖ ನೋಡಿಕೊಂಡು ಕಣ್ಣಿಗೆ ಗ್ಲಿಸರಿನ್ ಹಚ್ಚಿ ಆ ಭಾವ ಬರುವಂತೆ ನಾಲ್ಕೈದು ಬಾರಿ ಪ್ರಯತ್ನಿಸಿ ಕೊನೆಗೆ ಅತ್ಯುತ್ತಮವಾಗಿ ಅಭಿನಯಿಸಿ 'ಭೇಷ್' ಎಂದು ಸತ್ಯಕಾಮ್‌ರವರಿಂದ ಶಹಬಾಸ್‌ಗಿರಿ ಪಡೆ ದಾಗ ಅವಳಿಗೆ ಅತೀವ ಸಂತಸವಾಗಿತ್ತು. ಪ್ರತಿಯೊಂದು ಸನ್ನಿವೇಶದಲ್ಲೂ ತಾನು ಹೀಗೇ ಅಭಿನಯಿಸಿ ಭೇಷ್ ಎನಿಸಿಕೊಳ್ಳಬೇಕೆಂಬಾಸೆ ಮೂಡಿತ್ತು. ಸುನಿಲ್‌ಕುಮಾರ್ ನಿರಾಯಾಸವಾಗಿ ಪ್ರತಿ ಸನ್ನಿವೇಶವನ್ನೂ ಒಂದೇ ಟೇಕ್ ಅಥವಾ ಎರಡೇ ಟೇಕ್‌ಗಳಲ್ಲಿ ಮುಗಿಸಿ ಭೇಷ್ ಎನಿಸಿಕೊಳ್ಳುತ್ತಿದ್ದ. ಸಂಭಾಷಣೆಯನ್ನಂತೂ ತಪ್ಪದೇ, ಶುದ್ಧ ಸ್ವಚ್ಛವಾಗಿ ಹೇಳುತ್ತಿದ್ದ. ಪ್ರೇಮ ಪ್ರಕರಣದಲ್ಲಾಗಲೀ, ಇನ್ನಿತರ ಕ್ಲಿಷ್ಟ ಸನ್ನಿವೇಶಗಳನ್ನು ನಿರಾಯಾಸದಿಂದ ಅಭಿನಯಿಸುತ್ತಿದ್ದ. ಇದಕ್ಕೆ ಕಾರಣ ಅವನ ಅಭಿನಯ ಕಲೆಯೋ ಅಥವಾ ಅವನು ಹೇಗೆ ಮಾಡಿದರೂ ಅದೇ ಚೆನ್ನವೆಂದು ಕ್ಯಾಮೆರಾಮೆನ್,

ದಿಗ್ದರ್ಶಕರು, ಪ್ರೊಡ್ಯೂಸರ್ ಒಪ್ಪುತ್ತಿದ್ದುದರಿಂದಲೋ ಅವಳಿಗೆ ತಿಳಿಯದಾಯಿತು. ಒಲವಿನ ಸನ್ನಿವೇಶಗಳಲ್ಲಿ ಅವನ ಅಭಿನಯ ಎಷ್ಟು ಸಹಜವಾಗಿರುತ್ತಿತ್ತೆಂದರೆ ಪವಿತ್ರಳಿಗೆ ನಿಜವಾಗಿಯೂ ಅವನು ಅವಳನ್ನು ಅದೇ ಆರಾಧನಾಭಾವದಿಂದಲೇ ನೋಡುತ್ತಿರುವನೋ ಅಥವಾ ಅಭಿನಯಿಸುತ್ತಿದ್ದಾನೆಯೋ ತಿಳಿಯುತ್ತಿರಲಿಲ್ಲ. ಅಂತಹ ಸಮಯದಲ್ಲಿ ಅವಳೂ ಮೈ ಚಳಿ ಬಿಟ್ಟು ಮೈ ಮರೆತು ಅಭಿನಯಿಸುತ್ತಿದ್ದಳು. ಆದರೆ ಮಾಲತಮ್ಮನಿಗೆ ಒಂದೇ ಆತಂಕ.

'ಅದ್ಯಾಕೆ ಅವನು ಹಾಗೆ ನಿನ್ನ ಹಿಡ್ಕೋಬೇಕಿತ್ತು? ಚಿತ್ರೀಕರಣಕ್ಕಾಗಿ ಸುಮ್ಮನೇ ಮೆಲ್ಲಗೆ ಹಿಡ್ಕೋಬಹುದಿತ್ತು. ಮುಖದ ಹತ್ತಿರ ಮುಖ ತಂದು ನಿನ್ನನ್ನ ಹಾಗೆ ನೋಡೋದೂ, ಕೈ ಮೈ ಸವರೋದು ನನಗೆ ಸರಿಬರೋಲ್ಲ! ನೀನೇ ಹಾಗೆ ಬೇಡಾ ಅನ್ನಬೇಕು!' ಎಂದಿದ್ದರು.

'ಅಲ್ಲಮ್ಮಾ ಅಭಿನಯಿಸಲು ಹಣ ತೆಗೆದುಕೊಂಡು ಅವರು ಹೇಳಿದಂತೆ ಮಾಡದಿದ್ದರೆ ಹೇಗಮ್ಮಾ? ಅದೂ ಅಲ್ಲದೇ ಚಿತ್ರಗಳ ಪಾತ್ರಗಳೇ ಹಾಗಿರಬೇಕಾದರೆ ಮಡಿಮಡಿಯಾಗಿ ಹೇಗಮ್ಮಾ ಅಭಿನಯಿಸೋದು? ಸತ್ಯಕಾಮ್‌ರವರಿಗೆ ಎಲ್ಲವೂ ಉತ್ತಮ ಮಟ್ಟದ್ದೇ ಆಗಿರಬೇಕಲ್ಲಾ!' ಎಂದಾಗ ಮಾಲತಮ್ಮ ತಮ್ಮ ಮನದಿಂಗಿತ ವ್ಯಕ್ತಪಡಿಸಿದರು.

'ಇಲ್ಲಿ ಸ್ಟುಡಿಯೋದಲ್ಲಿ, ಕ್ಯಾಮರಾ ಮುಂದೆ ಹೇಗಾದರೂ ಆಗಲಿ. ಆದರೆ ಇನ್ನು ಮಿಕ್ಕಕಡೆ ಹಾಗೆ ನಡೆದುಕೊಂಡರೆ ನಾನು ಸುಮ್ಮನಿರುವುದಿಲ್ಲ. ನೆನ್ನೆ ನೋಡಿದೆನಲ್ಲಾ ನಿನ್ನ ಜೊತೆ ಮಾತನಾಡುತ್ತಾ ನಿನ್ನ ಕುರ್ಚಿಯ ಹಿಂದೆ ಕೈ ಬಳಸಿದ್ದೇಕೆ? ನಿನ್ನ ಮೂಗು ಹಿಂಡಿದ್ದೇಕೆ? ಕಿವಿಯಲ್ಲಿ ಪಿಸುಗುಟ್ಟಿದ್ದೇಕೆ? ಇದೆಲ್ಲಾ ನನಗೆ ಸರಿ ಬರುವುದಿಲ್ಲ!'

ಪವಿತ್ರ ಅವರ ಅಧೈರ್ಯ, ಆತಂಕಗಳನ್ನು ಕಂಡು ನಕ್ಕಿದ್ದಳು.

'ಅಮ್ಮಾ, ನೀನು ಹೆದರಬೇಡಾ. ನಾನು ಹಾಗೆ ಯಾವ ಚಿತ್ರರಂಗದ ವ್ಯಕ್ತಿಗೂ ಮಾರುಹೋಗುವುದಿಲ್ಲ. ಈಗ ಸದ್ಯಕ್ಕೆ ನನ್ನ ವೃತ್ತಿಯೇ ಮುಖ್ಯ. ಅದೂ ಅಲ್ಲದೇ ಹಾಗೆ ಮಾಡಿದರೆ ತಪ್ಪಿಲ್ಲಾಮ್ಮಾ. ನಾವಿಬ್ಬರೂ ಕೆಲವು ಸಂದರ್ಭಗಳಲ್ಲಿ ಚಳಿಬಿಟ್ಟು ಅಭಿನಯಿಸಬೇಕಾದ್ದಲ್ಲಿ ಅಷ್ಟು ಸಲಿಗೆಯಾದರೂ ಇರಬೇಡವೇ? ಕದ್ದು ಮಾಡಲಿಲ್ಲವಲ್ಲಾ. ಎಲ್ಲರೆದುರಿಗೂ ರಾಜಾರೋಷವಾಗಿ ಮಾಡಲಿಲ್ಲವೇ? ಅದರಲ್ಲಿ ಯಾವ ಕೀಳು ಮನೋಭಾವವೂ ಇಲ್ಲಾಮ್ಮಾ. ನಾವು ಸ್ವಲ್ಪ ಮಾಡಬೇಕಮ್ಮಾ. ನಿನಗದು

ಅರ್ಥವಾಗುವುದಿಲ್ಲ.'

ಮಗಳನ್ನು ಎದುರುಹಾಕಿಕೊಳ್ಳಲು ಮಾಲತಮ್ಮ ಅಂಜುತ್ತಿದ್ದರು. ಮಗನ ಉದ್ಯಮಕ್ಕಾಗಿ ಅವಳ ಹಣ ಬಳಸಿದ್ದರು ರೋಜಿಯ ಮದುವೆಯ ತಯಾರಿಗಾಗಿ ಹಣ ವ್ಯಯ ಮಾಡುತ್ತಿದ್ದರು. ಎಷ್ಟು ಕೇಳಿದರೂ ಇಲ್ಲವೆನ್ನದೆ ದೇವರಾಜ್ ನೀಡುಗೈಯಿಂದ ಕೊಡುತ್ತಿದ್ದರು. ಆದರೆ ಪವಿತ್ರಳಿಗೆ ತಾಯಿ ಹಾಗೆ ಕೇಳುವುದು ಸರಿಬರುತ್ತಿರಲಿಲ್ಲ.'

'ನನ್ನ ಬಳಸಿಕೊಂಡು ಅವರಿಂದ ದುಡ್ಡು ಕಸಿಯಬೇಡಮ್ಮಾ. ಈಗ ಅವರು ಕೊಟ್ಟಿರುವುದೇ ಸಾಕು. ಆದಷ್ಟು ಬೇಗ ನನ್ನನ್ನು ಈ ಬಂಧನದಿಂದ ಬಿಡುಗಡೆ ಮಾಡುವುದಕ್ಕೆ ಬದಲು ಇನ್ನೂ ಬಿಗಿಯಾಗಿ ಕಟ್ಟಿ ಹಾಕುತ್ತಿದ್ದೀಯಲ್ಲ. ನಾಳೆ ಬಂದರೆ ಅವರಿಗೆ ಹೇಳಿಬಿಡುತ್ತೇನೆ. ಈ ಬದುಕು ನನಗೆ ಸಾಧ್ಯವಿಲ್ಲವೆಂದು. ಅಲ್ಲಿ ಸ್ಟುಡಿಯೋದಲ್ಲಿ ಬೆಳಗ್ಗೆ ಒಂಭತ್ತರಿಂದ ರಾತ್ರಿ ಒಂಭತ್ತರವರೆಗೆ ಬಣ್ಣ ಹಚ್ಚಿಕೊಂಡು ದುಡಿದು ಸಾಕಾಗಿ ಬರುವುದಲ್ಲದೆ ಇಲ್ಲಿ ಇವರನ್ನು ತೃಪ್ತಿಪಡಿಸುವವರ್ಯಾರು ? ನಾನೇನು ಮನುಷ್ಯಳಲ್ಲವೇ ? ನನಗೆ ಭಾವನೆಗಳೇ ಇಲ್ಲವೇ ? ವ್ಯಕ್ತಿತ್ವವೇ ಇಲ್ಲವೇ ? ನಿಮಗಾಗಿ ನಾನೆಷ್ಟು ದುಡಿದರೂ ಸಾಲದು' ಎಂದು ರೇಗಾಡಿದ್ದಳು.

ಎಂದಾದರೊಮ್ಮೆ ರೋಸಿ ಹಾಗೆ ಮಾಡಿಯೂ ಬಿಡಬಹುದೆಂದು ಹೆದರಿದ್ದರು. ಅವರಿಗೂ ಒಮ್ಮೊಮ್ಮೆ ಮಗಳ ಬಗ್ಗೆ ಕನಿಕರ ಮೂಡುತ್ತಿತ್ತು. ತನ್ನ ದೊಡ್ಡ ಸಂಸಾರದ ಉದರ ಪೋಷಣೆಗಾಗಿ ಏಳಿಗೆಗಾಗಿ ಈ ಮಗಳನ್ನು ತಾನು ಬಳಸಿಕೊಂಡು ಅವಳಿಂದ ಯಾವ ರೀತಿಯಲ್ಲಿ ಇತರ ಮಕ್ಕಳ ಭವಿಷ್ಯ ಸುಭದ್ರವಾಗಬಹುದೆಂದು ಹವಣಿಸುತ್ತಾ ತಮ್ಮ ಕೀಳು ಕಾಮನೆಗಾಗಿ ಅವರು ಮಿಡಿಯುತ್ತಿದ್ದರು. ರೋಜಿಯ ಮದುವೆ, ಮಾಧುವಿನ ಉದ್ಯಮ, ಶ್ಯಾಮನ ಓದು, ಲಲ್ಲಿಯ ಮದುವೆಯಾಗಿಬಿಟ್ಟರೆ ಅನಂತರ ಪವಿತ್ರಳನ್ನು ತಾವು ಸುಖವಾಗಿ ನೋಡಿಕೊಳ್ಳಬಹುದು. ಪುಟ್ಟಿ, ಕಿಟ್ಟಿ ಇನ್ನೂ ಚಿಕ್ಕವರು. ಮಾಧೂ, ಶಾಮು ಅವರನ್ನ ನೋಡಿಕೊಳ್ಳಬಹುದು ಎಂದುಕೊಳ್ಳುತ್ತಿದ್ದರು. ಆದರೆ ಅದು ನಡೆಯುವ ವೇಳೆಗೆ ಪವಿತ್ರಳ ವಯಸ್ಸೇನಾಗುವುದು ? ಆಗ ಅವಳ ಜನಪ್ರಿಯತೆ ಹೇಗಿರುವುದೋ ? ಅವಳು ಗಳಿಸಿದ್ದೆಲ್ಲಾ ಖರ್ಚು ಮಾಡಿದರೆ ನಾಳೆ ಅವಳ ಭವಿಷ್ಯದ ಗತಿಯೇನು ? ಈ ಯೋಚನೆಗಳೂ ಅವರನ್ನು ಮುತ್ತಿ ತಿನ್ನುತ್ತಿದ್ದವು. ಆದರೆ ಪವಿತ್ರಳ ರೂಪು, ಯೌವನವಿರು

ವವರೆಗೂ ಅವಳು ತಮಗಾಗಿ ಚಿನ್ನದ ಮೊಟ್ಟೆಯಿಡುವ ಕೋಳಿಯೆಂಬ ಏನೋ ಒಂದು ಹುಚ್ಚು ಧೈರ್ಯ ಮಾಡಿಕೊಂಡಿದ್ದರು.

ದೇವಿ ಮಹಾತ್ಮೆ ಚಿತ್ರದ ಚಿತ್ರೀಕರಣವೂ ಪ್ರಾರಂಭವಾದಾಗ ಪವಿತ್ರಳಿಗೆ ಸಾಕು ಸಾಕಾಗಿ ಹೋಯಿತು. ಎಡಬಿಡದೆ ನಿರಂತರ ಬಿಡುವಿಲ್ಲದ ದುಡಿಮೆ, ನಿದ್ರೆಗೆಟ್ಟು ಕಂಗೆಟ್ಟು ಅವಳ ಆರೋಗ್ಯ ಕುಗ್ಗುತ್ತಾ ಬಂದಿತ್ತು. ಮಾಧವ ತನ್ನ ಉದ್ದಿಮೆಯ ಹವಣಿಕೆಯ ತರಾತುರಿಯಲ್ಲಿದ್ದ. ರೋಜಿಯ ಮದುವೆ ಸನ್ನಿಹಿತವಾಗುತಿತ್ತು. ಅಂದು ಪವಿತ್ರಳಿಗೆ ಕೆಂಡಾ ಮಂಡಲ ಜ್ವರ ಶೂಟಿಂಗ್ ಡಬ್ಬಿಂಗ್ ಮುಗಿಸಿಬರುವಷ್ಟರಲ್ಲಿ ಸಾಕಾಗಿ ಹೋಗಿತ್ತು. ಮನೆಗೆ ಬರುತ್ತಲೇ ದೇವರಾಜ್ ಕಾದಿದ್ದರು. ಮಾಧೂಗೆ ಮತ್ತೆ ಹತ್ತು ಸಾವಿರ ಬೇಕಾಗಿತ್ತು. ತಂಗಿಗೆ ಆಗಲೇ ತಿಳಿಸಿದ್ದ. ದೇವರಾಜ್‌ರವರನ್ನು ಹಣ ಕೇಳಬೇಕಾಗಿದ್ದಲ್ಲಿ ಅವರ ಮನಸ್ಸು ತೃಪ್ತಿಪಡಿಸಬೇಕಿತ್ತು. ಈಚೀಚೆಗೆ ತಮ್ಮ ಬಗ್ಗೆ ಹೆಚ್ಚು ಉದಾಸೀನತೆ ತೋರುತ್ತಿದ್ದ ಪವಿತ್ರಳ ಬಗ್ಗೆ ಅವರಿಗಾಗಲೇ ಅಸಮಾಧಾನವಿತ್ತು. ಇಂದು ಅದರ ಬಗ್ಗೆ ಅವಳೊಡನೆ ಮಾತಾಡಬೇಕೆಂದೇ ಕೊಂಚ ಬೇಗ ಬಂದಿದ್ದರು. ಸುನಿಲ್‌ಕುಮಾರ್‌ನೊಡನೆ ಅವಳ ಸಲಿಗೆ ಅವರ ಕಿವಿಗೂ ಬಿದ್ದಿತ್ತು. ತಾವು ವಯಸ್ಸಾದವರು, ಅವನು ಯೌವನ ಉಕ್ಕುವ, ಲಕ್ಷಣವಾದ ಯುವಕ. ತನಗಿಂತ ಅವನಿಗೆ ಅವಳು ಮಾರುಹೋಗುವುದರಲ್ಲಿ ಸಂದೇಹವಿಲ್ಲ. ಆದರೆ ತನ್ನ ಚಿತ್ರಗಳಿಗಾಗಿ ಮುಂಗಡವಾಗಿ ಹಣ ಕೊಟ್ಟಾಗಿದೆ. ಚಿತ್ರೀಕರಣದ ಸಿದ್ಧತೆಗಳನ್ನು ಮುಂದೂಡುತ್ತಲೇ ಇದ್ದಾಳೆ. ಅದೂ ಅಲ್ಲದೇ ರೋಜಿ ತನ್ನ ತಮ್ಮನನ್ನು ಮದುವೆಯಾಗಿ ಬಂದರೆ ತನ್ನ, ಪವಿತ್ರಳ ಸಂಬಂಧದ ಬಗ್ಗೆ ಏನಾದರೂ ಗುಲ್ಲೇಳಬಹುದು. ತಾವು ಚಿತ್ರಗಳ ಬಗ್ಗೆ ಮಾತುಕತೆ ನಡೆಸಲು, ಚರ್ಚಿಸಲು ಅವಳ ಮನೆಯಲ್ಲಿ ಒಂದು ಭಾಗದಲ್ಲಿ ತಾವಿರುವುದಾಗಿ ಹೇಳಿದ್ದರು. ಸಿಕ್ಕ ಸಿಕ್ಕ ಜನ ತಮ್ಮ ಮನೆಗೆ ಬರುವುದೂ ಹೊತ್ತು ಗೊತ್ತಿಲ್ಲದೇ ಬರುವುದೂ ಇಷ್ಟವಿಲ್ಲವೆಂದೂ ಹೇಳಿದ್ದರು. ಅಮಾಯಕರಾದ ಮನೆಯವರೂ ಅದೇ ನಂಬಿದ್ದರು. ಇದೆಲ್ಲಾ ವಿಷಯ ಅಂದು ಇತ್ಯರ್ಥ ಮಾಡಿಯೇಬಿಡಬೇಕೆಂದು ಕೊಂಡಿದ್ದರು. ತಮ್ಮ ಹಣವನ್ನು ನೀರು ಚೆಲ್ಲಿದಂತೆ ತನ್ನ ಅಣ್ಣ ಅಕ್ಕಂದಿರಿಗೆ ಅವಳು ಖರ್ಚು ಮಾಡುತ್ತಿದ್ದುದೂ ಅವರಿಗೆ ಸರಿಬಿದ್ದಿರಲಿಲ್ಲ. ಬಂದವಳೇ ಅವರತ್ತ . ನೋಡಿಯೂ ನೋಡದಂತೆ ತನ್ನ ಕೊಠಡಿಗೆ ಹೋಗಿ ಮಂಚದ ಮೇಲುರುಳಿಕೊಂಡಳು. ದೇವರಾಜ್ ಒಂದು ಹತ್ತು ನಿಮಿಷ

ಕಾದರು. ಮಾಲತಮ್ಮ ಒಂದೆರಡು ಬಾರಿ ಅವರ ಮುಂದೆ ತಿರುಗಾಡಿದರು. ರೋಜಿ, ಅವರ ಮುಂದೆ ಹಣ್ಣು ಹಾಲು ತಂದಿಟ್ಟಳು. ಅವರು ಯಾವುದನ್ನೂ ಮುಟ್ಟದೇ ಹಾಗೆಯೇ ಕುಳಿತಿದ್ದರು. ಮಾಲತಮ್ಮ ಧೈರ್ಯ ಮಾಡಿ ಹೇಳಿದರು

'ಪಾಪೂಗೆ ತುಂಬಾ ಜ್ವರ. ಸೆಟ್ಸ್‌ನಲ್ಲೇ ವಿಪರೀತ ಜ್ವರ.'

'ಹಾಗಾದ್ರೆ ಅಲ್ಲಿ ಯಾಕೆ ಇಷ್ಟೊತ್ತಿನವರ್ಗೂ ಇಟ್ಕೊಂಡಿದ್ರಿ?'

'ಏನ್ಮಾಡೋಕಾಗುತ್ತೆ? ಇವೊತ್ತಿನ ಶೂಟಿಂಗ್ ಮುಗ್ಸಿಬಿಡೇಕಾಗಿತ್ತು.'

'ಅವಳ್ಗೆ ಜ್ವರ ಬಂದಿದ್ರೂ ಮಾಡ್ಲೇಬೇಕಾದ ಪ್ರಮೇಯ ಇರ್ಲಿಲ್ಲ. ಇವೊತ್ತು ಕ್ಯಾನ್ಸಲ್ ಮಾಡಿ ಬರ್ಬೇಕಾಗಿತ್ತು. ಏನೂ ಕಡ್ದು ಹೋಗ್ತಾ ಇರ್ಲಿಲ್ಲ. ಮುಖ್ಯವಾಗಿ ನಿಮ್ಗೆ ಸೆಟ್ಸ್, ಶೂಟಿಂಗ್ ಹುಚ್ಚು. ಅವಳ್ನ ಮೆರಸ್ಬೇಕೂಂತ ಆಸೆ!' ಅವರಿಗೆ ಕೋಪ ಬಂದಿದೆಯೆಂದು ತಿಳಿದಿತ್ತು.

'ಎರ್ಡು ಪೆಗ್ಗು ಜಾಸ್ತಿ ಹಾಕ್ಕೊಂಡು ಬಂದಿರ್ಬೇಕೂ! ಪರಮಾತ್ಮ ಜೋರಾಗಿದ್ದಾನೆ' ಮಾಧು ಶ್ಯಾಮನ ಕಿವಿಯಲ್ಲಿ ಉಸರಿದ.

'ಏನ್ಮಾಡೋಕಾಗುತ್ತೆ? ಇನ್ನೂ ಈಗ ಹೆಸರು ಮಾಡ್ತಾ ಇದ್ದಾಳೆ. ನಾಳೆಯಿಂದ ಅವ್ಳು ಹಾಗೇ ಹೀಗೇಂತ ಎಲ್ಲಾ ಕೈಬಿಟ್ರೆ ಹೇಗೆ. ಅದಕ್ಕೇ ಸುಮ್ಮನಿರಬೇಕಾಯ್ತು.' ಮಾಲತಮ್ಮ ಹೇಳಿದಾಗ ದೇವರಾಜ್ ಉರಿದು ಬಿದ್ದರು.

'ನಾನೇನಾಗಿದ್ದೀನಿ, ಸತ್ತೋಗಿದ್ದೀನಾ? ಯಾರೇನ್ಮಾಡೋ ಹಾಗಿದ್ದಾರೆ? ಈಗ್ಲೇ ಅವಳ್ನ ನಾನು ಮನೆಗೆ ಕರ್ಕೊಂಡು ಹೋಗ್ತೀನಿ. ದೊಡ್ಡ ಡಾಕ್ಟರಿಗೆ ತೋರಿಸ್ತೀನಿ.' ಎಂದು ಎದ್ದು ನಿಂತಾಗ ಮಾಲತಮ್ಮನಿಗೆ ದಿಕ್ಕೇ ತೋಚದಾಯಿತು. ಮಧೂ, ಶ್ಯಾಮ್ ಇಬ್ಬರೂ ಬಂದು ಅವರನ್ನು ತಡೆದರು.

'ಬೇಡಾ ಸಾರ್, ನಿಮ್ಗೆ ಇವೊತ್ಯಾಕೋ ಮೂಡು ಸರ್ಯಾಗಿರೋ ಹಾಗಿಲ್ಲ. ಅವಳ್ಗೂ ಜ್ವರ. ಬನ್ನಿ ಮನೆಗೆ ತಲುಪಿಸಿ ಬರ್ತೀವಿ. ಎಲ್ಲಾ ನಾಳೆ ನಿಧಾನ್ವಾಗಿ ಮಾತಾಡೋಣ.'

'ಬಿಡ್ರಯ್ಯಾ ನೀವು! ನನ್ನ ಮುಟ್ಬೇ ಹಾಗಾದ್ರಾ? ಅವರಿಬ್ಬರನ್ನೂ ಕೊಡವಿ ದೂರ ಸರಿದರು. ನಂಗಿಷ್ಟ ಬಂದ ಹಾಗೆ ನಾನು ಮಾಡ್ತೀನಿ.' ಮಾಲತಮ್ಮ ಅವರ ಕಾಲಿಗೆ ಬೀಳುವುದೊಂದು ಬಾಕಿ

ಹಾಗಾಗಿಹೋಯಿತು. ಬೇಡಿಕೊಂಡು ಅತ್ತು ಕರೆದು ಅವರನ್ನು ಕಾರಿನಲ್ಲಿ ಹತ್ತಿಸಿ ಮಾಧೂ, ಶ್ಯಾಮ್ ಇಬ್ಬರೂ ಅವರನ್ನು ಅವರ ಮನೆಗೆ ಕರೆದೊಯ್ದು ಬಿಡಲಾಯಿತು.

ಮಾರನೆಯ ದಿನವೂ ಪವಿತ್ರಳಿಗೆ ಜ್ವರ. ಹಿಂದಿನ ದಿನದ ರಾತ್ರಿಯ ಗಲಾಟೆಯಿಂದ ಅವರಿಗೆಲ್ಲಾ ದಿಕ್ಕೇ ತೋಚದಂತಾಗಿ ಹೋಗಿ ಅವಳತ್ತ ಗಮನ ಹರಿಸಲಾಗಲಿಲ್ಲ. ಶೂಟಿಂಗಿಗೆ ಹೋಗಲೇಬೇಕಾಯಿತು. ಮಗಳಿಗೆ ಜ್ವರ ಬಂದುದು ಮಾಲತಮ್ಮನಿಗೆ ತಿಳಿದಿರಲಿಲ್ಲ. ಶೂಟಿಂಗ್ ನಡೆಯುತ್ತಿರುವಾಗಲೇ ಬ್ರೇಕುಗಳಲ್ಲಿ ಆಗಾಗ ಹಣೆ ಕತ್ತು ಮುಟ್ಟಿನೋಡಿ ಆತಂಕ ವ್ಯಕ್ತಪಡಿಸಿದ್ದರು.

'ಏನೇ ಪಾಪೂ ಇಷ್ಟು ಕಾಯ್ತಾ ಇದೆ. ಇವೊತ್ತು ಬೇಡಾ ಶೂಟಿಂಗ್ ಅಂತ ಕ್ಯಾನ್ಸಲ್ ಮಾಡಿಬಿಡಿ ಅಂದುಬಿಡ್ಲಾ ಅನ್ನಿಸ್ತಾ ಇದೆ. ಆದ್ರೆ ಕಾಲ್‌ಶೀಟ್ಸ್ ಮುಂಚೆಯೇ ಒಪ್ಪಿಕೊಂಡಾಗಿದೆ. ನೀನು ಒಂದು ದಿನ ಮುಂದೂಡಿದ್ರೆ ಎಲ್ಲಾ ಅಸ್ತವ್ಯಸ್ತವಾಗುತ್ತೇಂತ ರೆಡ್ಡಿಯವ್ರು ಹೇಳ್ತಾ ಇದ್ದಾರೆ. ಏನ್ಮಾಡೋದು.'

'ತುಂಬಾ ಮೈ ಕೈ ನೋವಮ್ಮ. ತಲೆ ಸಿಡಿದುಹೋಗ್ತಾ ಇದೆ. ಹೋಗ್ಲಿ ಎರಡು ಆಸ್ಪ್ರೀನೋ, ನೊವಾಲ್ಜಿನ್ನೋ ತರ್ಸಿಕೊಡು.' ಪವಿತ್ರ ಮುಲುಗಿದಳು.

ಜ್ವರದ ತಾಪದಿಂದ ಮುಖ ಧುಮುಗುಟ್ಟುತ್ತಿದ್ದರೂ ಮೇಕಪ್ಪಿನಲ್ಲಿ ಅಡಗಿತ್ತು. ಅವಳ ಪಾತ್ರವೂ ಧೀರ ಗಂಭೀರ ದೇವೀ ಪಾತ್ರವಾದುದರಿಂದ ಅವಳ ಅಭಿನಯಕ್ಕೆ ಧಕ್ಕೆ ಬಂದಿರಲಿಲ್ಲ. ಕಣ್ಣುಗಳು ಕೆಂಡದ ಉಂಡೆಗಳಂತಾಗಿದ್ದರೂ ಕೋಪಗೊಂಡ ದೇವಿಯ ಸನ್ನಿವೇಶವಿದ್ದುದರಿಂದ ಬಹಳ ಸಹಜವಾದ ಅಭಿನಯ ಅವಳದೆಂದೇ ಎಲ್ಲರ ಅಭಿಪ್ರಾಯ ಯೂನಿಟ್ಟಿನ ಅಸಿಸ್ಟೆಂಟ್ ಮ್ಯಾನೇಜರ್ ಗುರುಸ್ವಾಮಿ ಪಕ್ಕದಲ್ಲಿ ನಿಂತಿದ್ದ ಸಹ ನಿರ್ದೇಶಕ ಶೆಟ್ಟಿಯವರ ಕಿವಿಯಲ್ಲಿ ಉಸುರಿದ.

'ಎಲ್ಲೋ ಮೈಮೇಲೆ ಅಮ್ಮನವರು ಬಂದಿರ್ಬೇಕೂ. ಮುಖ ನೋಡಿ. ಜ್ವರದ ಹಾಗೆ ಮೈ ಕಾಯ್ತಾ ಇದೆ. ಒಂದು ತೆಂಗಿನಕಾಯಿ ನಿವಾಳಿಸಿ ಒಡೆದು, ಅರಿಸಿನ ಕುಂಕುಮ ಪೂಜೆ ಮಾಡಿ, ಕರ್ಪೂರದ ಮಂಗ್ಳಾರ್ತಿ ಮಾಡಿಬಿಡೋಣ.'

ಸರಿ. ಕಿವಿಯಿಂದ ಕಿವಿಗೆ ಮಾತು ಹರಡಿತು. ಯಾರೋ ಹೋಗಿ

ತೆಂಗಿನಕಾಯಿ, ಹೂವು, ಅರಿಸಿನ ಕುಂಕುಮ, ಕರ್ಪೂರ ತಂದರು. ಕಾಯಿ ನಿವಾಳಿಸಿ ಒಡೆದಾಯಿತು. ಅರಿಸಿನ ಕುಂಕುಮ, ಹೂವಿನಿಂದ ಪೂಜಿಸಿಯಾಯಿತು. ಕರ್ಪೂರದ ಮಂಗಳಾರತಿಯೂ ಆಯಿತು. ಪವಿತ್ರಳಿಗೆ ಅದು ಯಾವುದೂ ಬೇಡವಾಗಿತ್ತು. ಅವರು ಮಾಡುವುದನ್ನೆಲ್ಲಾ ದಿಗ್ಭ್ರಮೆಯಿಂದ ನೋಡುತ್ತಿದ್ದಳು. ಅದನ್ನು ಕಂಡು ಇನ್ನಿತರರಿಗೆ ಅದು ನಿಜವೆಂದೇ ಎನಿಸಿತು. ಎಷ್ಟೋ ಮಂದಿ ಭಕ್ತಿಯಿಂದ ಕೈ ಮುಗಿದರು. ಅರ್ಚಕರೊಬ್ಬರು ಎಲ್ಲಿಂದಲೋ ಇದ್ದಕ್ಕಿದ್ದಂತೆ ಬಂದರು ತೀರ್ಥ ತಂದು ಅವಳ ಮೇಲೆ ಪ್ರೋಕ್ಷಿಸಿದರು. ಕುದಿಯುತ್ತಿದ್ದ ಜ್ವರದ ಕಾವಿಗೆ ಆ ತಂಪು ನೀರು ಹಾಯಾಗಿತ್ತು. ಕೈ ಒಡ್ಡಿ ತೀರ್ಥ ಕೇಳಿ ಅವರು ತಂದಿದ್ದ ತೀರ್ಥದ ಬಟ್ಟಲನ್ನೇ ಬಾಯಿಗಿಟ್ಟು ಕುಡಿದುಬಿಟ್ಟಳು ಎಲ್ಲರಿಗೂ ಅಚ್ಚರಿ. ತೀರ್ಥ ಕುಡಿದು ಜೀವ ತಣ್ಣಗಾದಂತಾಯಿತು. ಸಮಾಧಾನದ ನಿಟ್ಟುಸಿರಿಟ್ಟು ಕೊಂಚ ನಗುಮೊಗ ಬೀರಿದಾಗ ಅದೇ ದೊಡ್ಡ ವಿಷಯವಾಗಿಹೋಯಿತು. ಇನ್ನು ಮಿಕ್ಕ ಫ್ಲೋರ್‌ಗಳಲ್ಲಿದ್ದವರೆಲ್ಲಾ ಬಂದು ನೋಡುವವರೇ. ಇದೇ ಸಮಯವೆಂದರಿತ ಮಾಲತಮ್ಮ ಹೇಳಿದರು.

'ಮನೇಗೆ ಕರ್ಕೊಂಡು ಹೊರಟುಹೋಗ್ತೀನಿ. ಇನ್ನೇನಾದ್ರೂ ಅನಾಹುತವಾದೀತು. ನಾಳೆಯೊಳಗೆ ಸರಿಹೋಗಬಹುದು. ನಾಳೆ ದೇವಿ ಸಹಸ್ರನಾಮ ಪೂಜೆ ಇಟ್ಕೊಳ್ಳೋಣ.'

ಎಲ್ಲರೂ ಕೂಡಲೇ ಒಪ್ಪಿಕೊಂಡರು. ಚಿತ್ರಕ್ಕೆ ಇದೆಲ್ಲಾ ಒಂದು ಬಗೆಯ ಪಬ್ಲಿಸಿಟಿಯಾಗುವುದೆಂದೇ ಪ್ರೊಡ್ಯೂಸರ್‌ಗೆ ಸಂತಸ. ಒಂದಿಬ್ಬರು ಫೋಟೋಗ್ರಾಫರುಗಳು ಬಂದು ಫೋಟೋ ತೆಗೆದುಕೊಂಡರು. ಕೆಲವು ರಿಪೋರ್ಟರುಗಳು ಮಾಲತಮ್ಮ, ಇನ್ನಿತರರೊಂದಿಗೆ ಮಾತಾಡಲು ಯತ್ನಿಸಿ ವಿಫಲರಾದರೂ ಕಣ್ಣಾರೆ ಕಂಡದ್ದು ಅವರಿಗೆ ಸುಲಭವಾಗಿ ಬರೆಯಲು ಸಹಾಯಕವಾಗಿತ್ತು.

ಕಾರಿನಲ್ಲಿ ಮನೆಗೆ ಕರೆದುಕೊಂಡು ಬಂದ ಮಾಲತಮ್ಮ ಕೂಡಲೇ ಮಧೂನ್ನ ಕಳಿಸಿ ಡಾಕ್ಟರನ್ನು ಕರೆತರಲು ಹೇಳಿದರು. ಮೈಮೇಲೆ ಜ್ಞಾನವಿಲ್ಲದೇ ಮಲಗಿದ್ದ ಪವಿತ್ರಳನ್ನು ಕಂಡು ಡಾಕ್ಟರಿಗೆ ಕೊಂಚ ಕೋಪವೇ ಬಂದಿತು.

ಎರಡು ದಿನಗಳಿಂದ ಜ್ವರಾಂತೀರಿ. ಏನೂ ಮೆಡಿಸನ್ ಕೊಡ್ದೇ ಹೀಗೆ ಬಿಡೋದಾ ? ಏನಾದರೂ ಹೆಚ್ಚು ಕಡಿಮೆಯಾದ್ರೆ ಈ ಫೀವರ್‌ನಿಂದ

ಸೆಲೆಬ್ರಲ್ ಹೆಮರೇಜ್ ಆಗೋಗತ್ತೆ. ರೆಸ್ಟ್ ತುಂಬಾ ಅಗತ್ಯ. ನಾಲ್ಕೈದು ದಿನ ಬೆಡ್ಡಿಂದ ಎಬ್ಬಿಸ್ಬೇಡಿ.'

ಅವರತ್ತ ಹೋದಮೇಲೆ ಮಾಲತಮ್ಮ ರೋಜಿ ಅವಳನ್ನು ಕಾಯುತ್ತಾ ಕುಳಿತರು ಜ್ವರದ ತಾಪದಿಂದ ಏನೇನೋ ಬಡಬಡಿಕೆ, ರಾಜೇಂದ್ರನ ಬಗ್ಗೆ ಇನ್ನೂ ಅವಳ ಸುಪ್ತ ಮನಸ್ಸು ಯಾವುದೂ ಮರೆತಂತೆ ಕಾಣಲಿಲ್ಲ. ಅದೂ ಅಲ್ಲದೇ ಅಂದು ರಾತ್ರಿ ಹನ್ನೊಂದು ಗಂಟೆಯಾದರೂ ದೇವರಾಜ್ ಬರಲೇ ಇಲ್ಲಾ. ಹಿಂದಿನ ದಿನದ ಕೋಪವಿನ್ನೂ ಆರಿರಲಿಲ್ಲ ವೇನೋ! ರೋಜಿಯ ಮದುವೆ ಬೇರೆ ಇದೆ. ಏನಾದರೂ ಹೆಚ್ಚು, ಕಡಿಮೆ ಯಾಗಿ ಅವಳ ಮದುವೆಗೆ ಕಲ್ಲು ಹಾಕಿದರೆ! ಮಾಲತಮ್ಮ ಯೋಚಿಸಿ ಹಣ್ಣಾದರು.

ಮಾರನೆಯ ದಿನ ಜ್ವರದ ತಾಪ ಕಡಿಮೆಯಾದರೂ ಜ್ವರವೇನೂ ಬಿಟ್ಟಿರಲಿಲ್ಲ. ಯೂನಿಟ್ಟಿನವರೆಲ್ಲ ಆಗಲೇ ಅವಳನ್ನು ನೋಡಿ ಹೋಗಲು ಬಂದಿದ್ದರು. ಅವಳಿಗಾಗಿ ಅವಳ ಮನೆಯಲ್ಲಿ ದೇವಿ ಸಹಸ್ರನಾಮ ಪೂಜೆಗೆ ಅಣಿ ಮಾಡತೊಡಗಿದರು. 'ಚಿತ್ರಾಂಗದ' ಯೂನಿಟ್ಟಿನ ಸತ್ಯಕಾಮ್, ಗಂಗಾಧರಯ್ಯ, ಜಮಖಂಡಿಯವರಿಗೂ ಸಮಾಚಾರ ಕಿವಿಗೆ ಬಿದ್ದು ಅವಳನ್ನು ನೋಡಲು ಬಂದರು. ಇಷ್ಟೆಲ್ಲಾ ಆಗುತ್ತಿರುವಾಗ ದೇವರಾಜ್ ನಿಧಾನವಾಗಿ ಬಂದಾಗ ಮಾಲತಮ್ಮ ಕೊಂಚ ತಲೆಯೆತ್ತಿ ಹೆಮ್ಮೆಯಿಂದ ನೋಡಿದರು. 'ನೋಡಿ, ನೀವೊಬ್ರೇ ಅಲ್ಲ. ಇಷ್ಟೆಲ್ಲಾ ಇದ್ದಾರೆ' ಎನ್ನುವ ಹಾಗಿತ್ತು ಅವರ ನೋಟ. ದೇವರಾಜ್ ಯಾವ ಮಾತೂ ಆಡದೆ ಪವಿತ್ರಳ ಕೊಠಡಿಗೆ ಹೋಗಿ ರೋಜಿಯಿಂದ ಎಲ್ಲಾ ವಿದ್ಯಾಮಾನ ತಿಳಿದು ಡಾಕ್ಟರನ್ನು ಕರೆತರುವುದಾಗಿ ಹೊರಟುಹೋದರು. ಡಾಕ್ಟರು ಮತ್ತೆ ಬಂದು ಇಂಜೆಕ್ಷನ್ ಔಷಧಿ ನೀಡಿ ಹೋದರು. ಪವಿತ್ರ ಮಲಗಿ ನಿದ್ರಿಸುತ್ತಿರುವಾಗ ಮನೆಯಲ್ಲಿ ದೇವಿಸಹಸ್ರನಾಮ, ಪೂಜೆ, ನಿರಾಂತಂಕವಾಗಿ ಸಾಗಿತ್ತು. ಪತ್ರಕರ್ತರು ಫೋಟೋಗ್ರಾಫರ್, ಯೂನಿಟ್ಟಿನ ಟೆಕ್ನಿಷಿಯನ್ನುಗಳು, ಲೈಟ್ ಬಾಯ್ಸ್ ನಿರ್ದೇಶಕರು, ನಿರ್ಮಾಪಕರು, ಎಲ್ಲರೂ ಬಂದು ನೆರೆದಿದ್ದರು. ಸಂಜೆಯ ಮಹಾ ಮಂಗಳಾರತಿಯ ಹೊತ್ತಿಗೆ ಪವಿತ್ರಳ ಜ್ವರವೂ ಕಡಿಮೆಯಾಗಿ ಮೈ ಬೆವರತೊಡಗಿತ್ತು. ದೇವಿ ಪ್ರಸನ್ನಳಾಗಿದ್ದರಿಂದ ಜ್ವರ ಬಿಟ್ಟುಹೋಯಿ ತೆಂದೇ ಎಲ್ಲರ ಅನಿಸಿಕೆ. ಏನಾದರಾಗಲಿ, ಪವಿತ್ರಳಿಗೆ ದೇವಿ ಮಹಾತ್ಮೆ ಚಿತ್ರಕ್ಕೆ ಬಹಳ ಪಬ್ಲಿಸಿಟಿ ಸಿಕ್ಕಿತು. 'ನಾಯಕಿಯ ಮೈಮೇಲೆ ದೇವಿ'—

'ತಾರೆ ಪವಿತ್ರ ಸಾಕ್ಷಾತ್ ದೇವಿ!' ಹೀಗೆ ತಲೆಬರಹಗಳೊಂದಿಗೆ ಪತ್ರಿಕೆಗಳಲ್ಲಿ ವಿಷಯ ಪ್ರಚಾರವಾಗಿತ್ತು. ಸತ್ಯಕಾಮ್‌ರವರಿಗೆ ಅವಳ ಜ್ವರದಿಂದ ಶೆಡ್ಯೂಲ್ ಮತ್ತೆ ಒಂದುವಾರ ಮುಂದೆ ಹೋಗಬೇಕಾಯಿತು. ಸುನಿಲ್ ಕುಮಾರ್‌ನಿಗೆ ಒಳಗೊಳಗೇ ಕೋಪ ಬಂದರೂ ಪವಿತ್ರಳನ್ನು ಬಂದು ನೋಡುವ ಸಲುವಾಗಿ ಎರಡು ಬಾರಿ ಬಂದು ಮನೆಯಲ್ಲೇ ಕಂಡಿದ್ದ.

'ಅತ್ಯಂತ ನಿಗರ್ವಿ ನಾಯಕ ನಟ'– 'ಸಭ್ಯ ನಾಯಕ ನಟ' ಎಂದು ಅದು ಅವನಿಗೂ ಪಬ್ಲಿಸಿಟಿ ನೀಡಿತ್ತು.

ಪವಿತ್ರಳಿಗೆ ತನ್ನ ಸುತ್ತ ಹೆಣೆದುಕೊಳ್ಳುತ್ತಿದ್ದ ಅಸಹಜ ಬಲೆಯ ಅನುಭವವಾಗುತ್ತಾ ಬಂದಿತ್ತು. ತಾನು ಇರುವುದು ಗಾಜಿನ ಮನೆಯಲ್ಲಿ ಎಲ್ಲರಿಗೂ ಕಾಣುವುದು ತನ್ನ ಬದುಕು. ಯಾರಾದರೂ ಒಂದು ಕಲ್ಲೆಸೆದರೂ ತನ್ನ ಮನೆ, ಭವಿಷ್ಯ ಚೂರು ಚೂರು. ತಾನು ಇನ್ನು ಮುಂದೆ ಬಹಳ ಎಚ್ಚರಿಕೆಯಿಂದಿರಬೇಕು. ತನ್ನ ದೇವರಾಜ್‌ರ ಬಗ್ಗೆ ಜನಕ್ಕೆ ಆಗಲೇ ಅನುಮಾನವಿದೆ ಇನ್ನೂ ಹೆಚ್ಚಿಗೆ ಹೊರ ಹೋಗಲು ಎಡೆಕೊಟ್ಟರೆ ತನ್ನ ಭವಿಷ್ಯ ನುಚ್ಚು ನೂರಾದೀತು.

'ರೋಜಿಯ ಮದ್ವೆ ಆಗೋವರ್‍ಗೂ ಸುಮ್ನಿರು ಪಾಪೂ. ಆಮೇಲೆ ಯಾವ್ದಾದ್ರೂ ಇತ್ಯರ್ಥಕ್ಕೆ ಬರೋಣಾ' ಎಂದರು.

'ದೇವಿ ಮಹಾತ್ಮೆ' ಶೂಟಿಂಗ್ ಡಬ್ಬಿಂಗ್ ಮುಗಿಯುವ ವೇಳೆಗೆ 'ಚಿತ್ರಾಂಗದ' ಆಗಲೇ ಕೊನೆಯ ಶೆಡ್ಯೂಲಿನ ಕೊನೆಯ ಹಂತ ನಡೆಯಬೇಕಿತ್ತು. ಹೊರಾಂಗಣ ಚಿತ್ರೀಕರಣವಾಗಿ ಕೆಲವು ಬ್ಯಾಲೆನ್ಸ್ ಶಾಟ್ಸ್‌ಗಳು ಮಾತ್ರ ಉಳಿದಿದ್ದವು.

ದೇವರಾಜ್ ಮೊದಲಿನಂತೆ ಬರುತ್ತಿದ್ದರೂ ಮಾತುಕತೆ ಇನ್ನಿತರರೊಂದಿಗೆ ಅಷ್ಟಕಷ್ಟೆ. ಈಗ ತಮ್ಮ ಚಿತ್ರ ಪ್ರಾರಂಭಿಸುವ ಹವಣಿಕೆಯಲ್ಲಿದ್ದರು. ಪವಿತ್ರ ಬಹಳ ಮೆಚ್ಚಿದ್ದ 'ತಿರುವು' ಕಾದಂಬರಿಯನ್ನೆ ಮಾಡಲಿಚ್ಛಿಸಿದ್ದರು. ಸಾಹಿತಿಯನ್ನು ಕರೆತರುವುದಾಗಿ ಹೇಳಿ ಮರೆತೇಬಿಟ್ಟಂತಿತ್ತು. ಅವನನ್ನು ನೋಡುವ ಕುತೂಹಲ, ಒಂದು ಅವ್ಯಕ್ತ ಬಯಕೆ ಪವಿತ್ರಳಿಗೆ.

'ಕಾದಂಬರಿ ಚಿತ್ರಕ್ಕೆ ತೆಗೆದುಕೊಳ್ಳುವ ಮೊದಲು ಆ ರೈಟರ್‌ನ ಒಂದು ಸಾರಿ ಕರೆದು ಮಾತನಾಡಿದರೆ ಸರಿಯೆನಿಸುತ್ತೆ. ಕಷ್ಟಪಟ್ಟು ಅವರ ಕಲ್ಪನೆಯ ಸೀಮೆಯ ಕಥೆಯನ್ನು ಹೆಣೆದಿರುತ್ತಾರೆ. ಅವರ ಬಳಿ ಡಿಸ್ಕಸ್ ಮಾಡಿದರೆ ಒಳ್ಳೆಯದು' ಪವಿತ್ರ ಹೇಳಿದಾಗ ದೇವರಾಜ್ ಅವಳತ್ತ

ಅಚ್ಚರಿಯಿಂದ ನೋಡಿದರು.

'ಅದೆಲ್ಲಾ ಬೇಕಾಗಿಲ್ಲ. ಕಾದಂಬರಿಯ ಹಕ್ಕಿಗಾಗಿ ಮುಂಗಡ ಹಣ ಕೊಟ್ಟು ಮುಹೂರ್ತದ ಹೊತ್ತಿಗೋ ರಿಲೀಜ್ ಹೊತ್ತಿಗೋ ಮಿಕ್ಕ ಹಣ ಕೊಟ್ಟರಾಯಿತು. ಅವನ ಜೊತೆ ಡಿಸ್ಕಸ್ ಯಾಕೆ? ಅದೂ ಅಲ್ಲದೆ ಅವನು ಬರೆದಿರುವಂತೆಯೇ ಎಲ್ಲಾ ಚಿತ್ರಿಸಲು ಆಗುವುದಿಲ್ಲ. ಕಮರ್ಷಿಯಲ್ ದೃಷ್ಟಿಯಿಂದಲೂ ನೋಡಬೇಕು.'

'ಅಂದರೆ, ಕಾದಂಬರಿಯಲ್ಲಿ ಇದ್ದಹಾಗೇ ಮಾಡೋಲ್ವಾ? ಅವರೇನಾದರೂ ಅಂದುಕೊಳ್ಳುವುದಿಲ್ಲವೇ?'

'ಮುಖ್ಯ ಸನ್ನಿವೇಶಗಳನ್ನು ಮಾತ್ರ ತೆಗೆದುಕೊಂಡು ಮಿಕ್ಕ ಮಸಾಲೆ ನಾವು ಹಾಕದಿದ್ದರೆ ನಾವು ಹೂಡಿದ ಬಂಡವಾಳ ಬರಬೇಡ್ವಾ?'

ದೇವರಾಜ್ ಹೇಳಿದಾಗ ಪವಿತ್ರಳಿಗೇಕೊ ಸರಿಬರಲಿಲ್ಲ. ಪ್ರತಿಯೊಂದು ಅಧ್ಯಾಯವನ್ನು ಹಾಗೆಯೇ, ಅದೇ ಸಂಭಾಷಣೆ, ಸನ್ನಿವೇಶಗಳಿಂದ ಚಿತ್ರ ಮಾಡಿದರೆ ಚೆನ್ನಾಗಿಯೇ ಚಿತ್ರ ಮೂಡಿಬರುವುದರಲ್ಲಿ ಸಂದೇಹವಿಲ್ಲ. ಒಳ್ಳೆಯ ಅಭಿರುಚಿಯ ರಸಪತ್ತಾದ ಚಿತ್ರವಾಗುವುದು ಎನಿಸಿತು. ಅವಳ ಮೌನಕಂಡು ದೇವರಾಜ್ ಅಪಾರ್ಥ ಮಾಡಿಕೊಂಡರು.

'ನಿನಗೆ ಬೇಕಾದರೆ ಅವರನ್ನು ಕರೆತಂದು ಪರಿಚಯಿಸುತ್ತೇನೆ, ನೀನೇ ಕೇಳಿ ನೋಡು. ನಾಳೆಯೇ ನಿರ್ದೇಶಕ, ಚಿತ್ರಕತೆ ಬರೆಯುತ್ತಾರೆ. ಸಂಭಾಷಣೆಗೆ ನಮ್ಮ ಕುಮಾರ ಇದ್ದೇ ಇರುತ್ತಾರೆ. ನಿರ್ದೇಶನ ವಿಜಯೇಂದ್ರರಿಗೆ ಈ ಸಲ ಕೊಡೋಲ್ಲ. ಧನಂಜಯ ಈಚೆಗೆ ತುಂಬಾ ಸಕ್ಸೆಸ್‌ಫುಲ್ ನಿರ್ದೇಶಕರಾಗಿದ್ದಾರೆ ಅವರ ಚಿತ್ರಗಳೆಲ್ಲಾ ಬಾಕ್ಸ್ ಆಫೀಸ್ ಹಿಟ್ಸ್ ಆಗಿದೆ. ಅವರಿಗೆ ಕೊಡೋಣಾಂತಿದ್ದೀನಿ. ಹೀರೋಗೆ ಸುನೀಲ್‌ಕುಮಾರ್‌ನೇ ತೊಗೋಳೋಣಾಂತಿದ್ದೀನಿ.'

ಅವರು ಒಪ್ತಾರಾ? ಖಳನಾಯಕನಂತೆಯೇ ಇದೆಯಲ್ಲಾ ಅವನ ಪಾತ್ರ ಕಾದಂಬರಿಯಲ್ಲಿ!' ಪವಿತ್ರ ಹೇಳಿದಾಗ ದೇವರಾಜ್ ಅವಳ ಮುಗ್ಧತೆ ಕಂಡು ನಸುನಕ್ಕರು

ಅದಕ್ಕೆಲ್ಲಾ ಬೇರೆ ಏರ್ಪಾಡು ಮಾಡುತ್ತೇನೆ. ಪಾತ್ರವನ್ನು ನಿರ್ದೇಶಕ ಚಿತ್ರಸಾಹಿತಿ ಹೇಗಾದರೂ ರೂಪಿಸಿಕೊಳ್ಳಬಹುದು.

ಪವಿತ್ರಳಿಗೆ ಅದು ಕೊಂಚ ಒಗಟಾಗಿಯೇ ಉಳಿಯಿತು. ಇಲ್ಲಿಯವರೆಗೆ ಅವಳಿಗೆ ಚಿತ್ರಗಳ ಕತೆಯಾಗಲೀ ಚಿತ್ರಕತೆಯಾಗಲೀ ಯಾರೂ

ಹೇಳುತ್ತಿರಲಿಲ್ಲ. ಏನಿದ್ದರೂ ಅವಳು ಅಭಿನಯಿಸಬೇಕಾದ ಸನ್ನಿವೇಶ ಆ ಸನ್ನಿವೇಶದಲ್ಲಿ ಬರುವ ಸಂಭಾಷಣೆ ಮಾತ್ರ ಅವಳಿಗೆ ತಿಳಿಯುತಿತ್ತು. ಪೂರ ಚಿತ್ರೀಕರಣವಾದ ಮೇಲೆ ಅವಳಿಗೆ ತನ್ನ ಪಾತ್ರದ ಸಮರ್ಪಕತೆ, ಪೂರ್ಣತೆ ಅರ್ಥವಾಗುತಿತ್ತು. ಎಷ್ಟೋ ಬಾರಿ ಮುಂಚೆಯೇ ಕಥಾವಸ್ತು ತನಗೆ ತಿಳಿದಿದ್ದರೆ ಪಾತ್ರದ ನಿರೂಪಣೆಗೆ ಇನ್ನೂ ಹೆಚ್ಚು ಮಹತ್ವ ಕೊಟ್ಟು ತಾನು ಮತ್ತಷ್ಟು ಸಹಜವಾಗಿ ಅಭಿನಯಿಸಬಹುದು ಎನಿಸಿತ್ತು. ಹೆಸರು ಮಾಡಿಯಾದಮೇಲಂತೂ ಎರಡು ಶಿಫ್ಟ್, ಮೂರು ಶಿಫ್ಟ್‌ಗಳಲ್ಲಿ ಒಟ್ಟಿಗೇ ಮಾಡಬೇಕಾದ್ದರಿಂದ ಅವಳಿಗೆ ಪಾತ್ರಗಳ ಬಗ್ಗೆ ತಿಳಿಯುವ ಕುತೂಹಲ ವಾಗಲೀ ವ್ಯವಧಾನವಾಗಲಿ ಇರುತ್ತಿರಲಿಲ್ಲ. ಆದರೆ ಈ 'ತಿರುವು' ಮಾತ್ರ ಅವಳಿಗೆ ಬಹಳ ಹಿಡಿಸಿತು. ಆ ಪಾತ್ರವನ್ನು ತನ್ನ ಕಲ್ಪನೆಯಲ್ಲೇ ಹೆಣೆದು ಕೊಂಡು ತಾನು ಹೀಗೆ ಅಭಿನಯಿಸಬೇಕು ಎಂದು ಒಂದು ನಿರ್ದಿಷ್ಟ ಅಭಿಪ್ರಾಯಕ್ಕೆ ಬಂದಿದ್ದಳು.

ಅಂದೇ ಅವಳಿಗೊಂದು ಸಮಾಚಾರ ಕಾದಿತ್ತು. ರಾಜೇಂದ್ರನಿಗಾಗಿ ಯಾವುದಾದರೊಂದು ಪಾತ್ರಕೊಡುತ್ತೇನೆಂದು ಹೇಳಿದ್ದ ದೇವರಾಜ್ ಅವನ ವಿಷಯ ಎತ್ತಬೇಡ ಎಂದುಬಿಟ್ಟಿದ್ದರು. ಅವನದೇ ಗುಂಗಿನಲ್ಲಿದ್ದಾಗ ರವಿ ಕೃಷ್ಣ ಅವಳಿಗೆ ಬಂದು ತಿಳಿಸಿದರು.

'ರಾಜೇಂದ್ರನ್ನ ಸುಚಿತ್ರ ಪ್ರೊಡಕ್ಷನ್ಸ್‌ಗೆ ಹೀರೋ ಆಗಿ ಬುಕ್ ಮಾಡಿಕೊಂಡಿದ್ದರು. ಆಮೇಲೆ ಕ್ಯಾರೆಕ್ಟರ್ ರೋಲ್ ಅಂತ ಹೇಳಿ ಸುನಿಲ್ ಕುಮಾರ್‌ನನ್ನು ಹೀರೋಮಾಡಿ ಅವನ ತಂದೆ ಪಾತ್ರ ಕೊಟ್ಟಿದ್ದಾರೆ.'

ಪವಿತ್ರಳಿಗೆ ಆ ಕ್ಷಣ ಸಂತಸವಾದರೂ ಅನಂತರ ಅವ್ಯಕ್ತ ವೇದನೆಯಾಯಿತು. ಅವನು ಅಧೋಗತಿಗಿಳಿಯಬೇಕೆಂದು ಒಂದು ಕಾಲದಲ್ಲಿ ಬಯಸಿದ್ದರೂ ಈಗ ಅವನ ಅವನತಿ ಕಂಡು ಮರುಕವಾಯಿತು. ತಂದೆಯ ಪಾತ್ರಕ್ಕೆ ಒಪ್ಪಿದನೇ ? ತನಗೆ ತಿಳಿದಂತೆ ಈಚೀಚೆಗೆ ಪಾತ್ರಗಳು ದೊರೆಯದೆ ಯಾವುದು ಸಿಕ್ಕಿದರೂ ಒಪ್ಪಂದಕ್ಕೆ ಸಹಿ ಹಾಕುತ್ತಿದ್ದಾರೆಂದು ತಿಳಿದಿತ್ತು.

'ಒಂದ್ಸಲ ನೋಡ್ತಾ ಇರಿ. ನಿಮ್ಗೂ ಹೇಗೂ ತಂದೆ ಪಾತ್ರ ಮಾಡೋ ಹೊತ್ತು ಬರುತ್ತೆ ಅವನಿಗೆ.' ರವಿಕೃಷ್ಣ ಎಂದಾಗ ಪವಿತ್ರ ತಲೆಯಾಡಿಸಿದಳು.

'ನಾನ್ಯಾಕೆ ಇನ್ನೊಬ್ಬರಿಗೆ ಕೆಡಕು ಬಯಸಬೇಕು' ಎಂದಿದ್ದಳು.

* * *

ಅದೇ ತಾನೇ ಡಬ್ಬಿಂಗ್ ಮುಗಿಸಿ ಬಂದ ಪವಿತ್ರ ರೀಟಾಳ ಕೈಯಲ್ಲಿ ಮುಖವನ್ನು ಮಸಾಜ್ ಮಾಡಿಸಿಕೊಳ್ಳುತ್ತಿದ್ದಳು. ಹೊರಗೆ ದೇವರಾಜ್‌ರವರ ದನಿ ಕೇಳಿ ಬೆಚ್ಚಿದಳು. ಇಂದು ಕೊಂಚ ಬಿಡುವಾಗಿರಬಹುದೆಂದು ಬೆಳಗಿನಿಂದ ಆಸೆ ಪಡುತ್ತಿದ್ದಳು. ಹಾಯಾಗಿ ಎಲ್ಲರೊಡನೆಯೂ ಹರಟಬಹುದೆಂದು, ಒಂದಿಷ್ಟು ನಗುನಗುತ್ತಾ ತನ್ನ ಬಿಡುವಿಲ್ಲದ ಬದುಕಿನಲ್ಲಿ ದುಡಿತವನ್ನು ಮರೆಯಬೇಕೆಂದಿದ್ದಳು. ದೇವರಾಜ್ ಬಂದರೆಂದರೆ ಮುಗಿಯಿತು. ತಾನು ಯಾರೊಡನೆಯೂ ಮಾತನಾಡುವಂತಿಲ್ಲ. ಮೇಕಪ್ ಹಚ್ಚೀ ಹಚ್ಚೀ ಮುಖದ ಚರ್ಮ ಬಿರುಸಾಗಿದ್ದುದಲ್ಲದೆ ಕಾಂತಿಹೀನವಾಗುತ್ತಿತ್ತು. ಮುಖದ ಚರ್ಮಕ್ಕೊಂದಿಷ್ಟು ಜೀವ ತುಂಬಬೇಕೆಂದು ಮುಖದ ತುಂಬಾ ಕ್ರೀಂ ಬಳಿದು ಕೊಂಡಾಗಿತ್ತು. ರೀಟಾಳ ತಜ್ಞ ಕೈಗಳು ಮುಖದ ಚರ್ಮ ಮಸಾಜ್ ಮಾಡುತ್ತಿತ್ತು. ಇನ್ನು ಅದೂ ನಿಂತ ಹಾಗೆಯೇ. ತನ್ನ ಸೌಂದರ್ಯ ಕಾಪಾಡಿಕೊಳ್ಳಲು ಆರೈಕೆ ಮಾಡಿಕೊಳ್ಳಲು ಆಗದಿದ್ದರೆ ಹೇಗೆ ಸಾಧ್ಯ! ಈ ದೇವರಾಜ್‌ರಿಂದ ತನಗೆಂದು ಮುಕ್ತಿ? ರೋಜಿ ಮದುವೆಯಾದ ಕೂಡಲೇ ಹೇಗಾದರೂ ಕಳಚಿಕೊಳ್ಳಬೇಕು. 'ರೀಟಾ ಬೇಗ ಕ್ರೀಮೆಲ್ಲಾ ಒರೆಸಿಬಿಡು!' ಪವಿತ್ರ ಹೇಳಿದಾಗ ರೀಟಾ ನಿಟ್ಟುಸಿರಿಟ್ಟಳು.

'ಇರಲಿ, ಕೊಂಚ ಕಾಯಲಿ ಮಸಾಜ್ ಮಾಡಿ ಮುಗಿಸಿಬಿಡುತ್ತೀನಿ. ನಾಳೆ ಬೆಳಿಗ್ಗೆ ಮಿಕ್ಕದ್ದು ಮಾಡಿದರಾಯಿತು.'

'ಬೇಡಾ ರೀಟಾ, ಒಳಗೇ ಬಂದುಬಿಟ್ಟಾರು' ಪವಿತ್ರ ಹೇಳಿದಳು.

ಅಷ್ಟರಲ್ಲಿ ಹೊರಗೆ ಬೇರೊಂದು ದನಿಯೂ ಕೇಳಿಸಿತು. ರೀಟಾ ಬೇಗ ಬೇಗ ಅರಳೆಯಿಂದ ಮುಖ ಒರೆಸಿದಳು. ಎತ್ತಿ ಕಟ್ಟಿದ ಕೂದಲನ್ನು ಇಳಿಬಿಟ್ಟಳು. ಹಾಕಿಕೊಂಡಿದ್ದ ರಾತ್ರಿಯುಡುಗೆಯನ್ನು ಬಿಚ್ಚಿ ಬೇಗ ಬೇಗ ಸಾಧಾರಣವಾದ ಸೀರೆ, ಬ್ಲೌಸ್ ತೊಟ್ಟು ಹಣೆಗೆ ಕುಂಕುಮದ ಬೊಟ್ಟಿಟ್ಟುಕೊಂಡಳು.

'ಪಾಪ್ಪೂ, ಪಾಪೂ ಬಾ ಇಲ್ಲಿ!' ಮಾಲತಮ್ಮ ಕೂಗುತ್ತಲೇ ಕಾಲಿಗೆ ಚಪ್ಪಲಿ ಹಾಕಿಕೊಂಡು ಹೊರಬಂದಳು. ಅವಳ ದೃಷ್ಟಿ ದೇವರಾಜ್‌ರವರೊಡನೆ ಏನೋ ಮಾತಾಡುತ್ತಿದ್ದ ವ್ಯಕ್ತಿಯತ್ತ ಹರಿಯಿತು. ಮುಖದ ಒಂದು ಭಾಗ ಮಾತ್ರ ಕಾಣುತ್ತಿದ್ದು ಅವಳ ಕಣ್ಣು ಅಲ್ಲೇ ನೆಟ್ಟಿತು. ಕಲ್ಲಿನಲ್ಲಿ ಕಡೆದಂತಿದ್ದ ಮುಖಭಾವ, ಅಗಲವಾದ ಹಣೆ, ನೇರವಾದ ಮೂಗು,

ತಲೆಯ ಮೇಲ್ಭಾಗ ಕತ್ತಿನ ಕೊನೆಯವರೆಗೆ ಆವರಿಸಿದ್ದ ಅಲೆಗೂದಲು ಅವಳ ಗಮನ ಸೆಳೆಯಿತು.

'ಇಲ್ಲಿ ಬಾ ಪವಿತ್ರ !' ದೇವರಾಜ್ ಕರೆದಾಗ ಅವನು ಸರಕ್ಕನೆ ಅವಳತ್ತ ತಿರುಗಿ ನೋಡಿದ. ಅವನ ಕಣ್ಣುಗಳು ಅಲ್ಲೇ ನೆಟ್ಟವು ಅವಳೂ ಅವನಿಂದ ಕಣ್ತೆಗೆಯದಾದಳು. ಅವನ ತೀಕ್ಷ್ಣವಾದ ನೇರನೋಟವನ್ನೆದುರಿಸಿದ ಅವಳ ನೋಟದಲ್ಲಿ ಅಚ್ಚರಿ ಇಣುಕಿ ಮತ್ತೆ ಮೃದುವಾಯಿತು. ತಾನೆಲ್ಲೋ ಅವನನ್ನು ಕಂಡಂತೆ ಭಾಸವಾಯಿತು. ಎಲ್ಲಿ? ಇದೇ ಮೊದಲನೇ ಬಾರಿ ಅವನು ಇಲ್ಲಿಗೆ ಬರುತ್ತಿರುವುದು. ಅವನನ್ನು ತಾನು ಬಲ್ಲೆ. ಸುಪ್ತವಾಗಿದ್ದ ತನ್ನ ನೆನಪಿನಾಳದಲ್ಲಿ ಅವನನ್ನು ಬಲ್ಲೆ ಯಾವುದೋ ಕನಸಿನಲ್ಲಿ ಕಂಡಿರಬಹುದೆ ? ಅವನ ಕಣ್ಣುಗಳಲ್ಲಿ ಮೆಚ್ಚಿಗೆ, ಅಚ್ಚರಿಯಿಂದ ಅರಳಿದವು.

'ಇವರು ವಸಂತಕುಮಾರ್ ಅಂತ. ನೀನು ತುಂಬಾ ಇಷ್ಟಪಟ್ಟಿದೆಯಲ್ಲ ಇವರ ಕಾದಂಬರಿ, ಅವರೇ ಇವರು.'

ಪವಿತ್ರ ಯಾಂತ್ರಿಕವಾಗಿ ಕೈ ಮುಗಿದಳು. ಅವನೂ ಕೈ ಜೋಡಿಸಿದ. ಇವಳೇ ಹೆಸರಾಂತ ನಟಿಯೋ ? ಸ್ವಚ್ಛ ಸೌಮ್ಯವಾದ ಮುಖ, ನಿರಾಭರಣ ಸುಂದರಿ ಅರೆಬಿರಿದ ಮೊಗ್ಗಿನಂತಿರುವ ಇವಳು ಆ ಬಣ್ಣದ ಬೆಳಕಿಗೇಕೆ ಮಾರುಹೋದಳು ? ತಾನು ಕಲ್ಪಿಸಿಕೊಂಡಿದ್ದ ವ್ಯಕ್ತಿಯೇ ಬೇರೆ. ರಜತ ಪರದೆಯ ಮೇಲೆ ಕಾಣುವ ಆ ವ್ಯಕ್ತಿಯೇ ಇವಳೆಂದು ನಂಬಲಸಾಧ್ಯ.

ಅವಳೂ ಮಂತ್ರಮುಗ್ಧಳಾಗಿದ್ದಳು. ಸಾಹಿತಿಯೆಂದರೆ ಕೆದರಿದ ತಲೆ ಕ್ಷೌರವಿಲ್ಲದ ಮುಖ, ಹಳೆಯ ಬಟ್ಟೆ, ಹೆಗಲಿಗೊಂದು ಚೀಲ, ಅರೆಹೊಟ್ಟೆಯಕನಸು ಕಾಣುವ ಕಣ್ಣುಗಳು, ಕಾಂತಿಹೀನ ಮುಖ, ಛೀ ! ಇವನು ಹಾಗಿಲ್ಲ ಎನ್ನಿಸಿತು. ಮಾಲತಮ್ಮನೇ ಮೌನ ಮುರಿದದ್ದು.

'ಇಲ್ಲೇ ಕೂತ್ಕೋಬಾ ಪಾಪೂ' ತಮ್ಮ ಪಕ್ಕದಲ್ಲೇ ಅವನೆದುರಿಗೇ ಕೂಡಿಸಿಕೊಂಡರು.

'ನಮ್ಮ ಪವಿತ್ರ ನಿಮ್ಮ ಪುಸ್ತಕಗಳನ್ನು ಬಹಳ ಮೆಚ್ಚಿಕೊಂಡಿದ್ದಾಳೆ. 'ತಿರುವು' ಬಹಳ ಇಷ್ಟಪಟ್ಟಿದ್ದಾಳೆ. ಅದನ್ನು ಈ ವರ್ಷದ ಕೊನೆಯೊಳಗೆ ಮಾಡಿ ರಿಲೀಸ್ ಮಾಡಿಯೇ ಬಿಡಬೇಕೆಂದು ನನಗಾಸೆ !' ದೇವರಾಜ್ ಹೇಳಿದರು.'

'ಅದಕ್ಕೇ ನಿಮ್ಮನ್ನು ಕರೆತಂದಿದ್ದು. ಅವಳ ಕೈಯಲ್ಲೇ ನಿಮಗೆ

ಅಡ್ವಾನ್ಸ್ ಕೊಡಿಸಿ ನಿಮ್ಮ ಕಾದಂಬರಿ ಬುಕ್ ಮಾಡಿಕೊಂಡು ಬಿಡೋಣಾ ... ಏನಂತಿ ಪವಿತ್ರ ?'

ಪವಿತ್ರ ಕಿರುನಗೆ ಬೀರಿದಳು. ದೇವರಾಜ್‌ಗೂ ಇಂತಹ ಭಾವನೆಗಳಿವೆಯೇ, ತನ್ನನ್ನು ಕಂಡರೆ ಅಮಿತ ಪ್ರೀತಿ, ವಿಶ್ವಾಸಕ್ಕೆ ಇದೊಂದು ನಿದರ್ಶನ. ಎಂದುಕೊಂಡಳು.

'ಹಾಗೆಯೇ ಆಗಲಿ !' ಅವಳು ಹೇಳಿದಾಗ ಅದೇಕೋ ಅವಳೆದೆ ಬಡಿದುಕೊಂಡಿತು. ಬುದ್ಧಿಜೀವಿಯನ್ನು ಕಂಡಾಗ ತಾನು ಏನೂ ತಿಳಿಯದವಳೆಂಬ ಅಂಜಿಕೆಯಿಂದಲೇ ಇರಬೇಕೆಂದುಕೊಂಡಳು ಅವನೂ ನಸುನಕ್ಕ

'ಧನ್ಯವಾದಗಳು.'

ಮಾಲತಮ್ಮ ತಾಂಬೂಲ, ಗೀಂಬೂಲ ಏನೂ ಬೇಡಾ. ನಮ್ಮ ಸಾಹಿತಿಯನ್ನೂ ಅವಿವಾಹಿತ. ಒಂದಿಷ್ಟು ಬಾಯಿ ಸಿಹಿಮಾಡಿ ಕವರಿನಲ್ಲಿ ಹಾಕಿ ಅಡ್ವಾನ್ಸ್ ಕೊಡಿಸಿಬಿಡಿ' ದೇವರಾಜ್ ಹೇಳುತ್ತಲೇ ಮಾಲತಮ್ಮ ಅಯ್ಯರ್‌ಗೆ ಹೇಳಲು ಒಳಗೆ ನಡೆದರು.ಮುಂಗಡ ಹಣವನ್ನು ಮಾಲತಮ್ಮನ ಕೈಗೆ ಕೊಡಲು ದೇವರಾಜ್ ಅವರ ಹಿಂದೆಯೇ ಹೋದರು.

ರೋಜಿ, ಲಲ್ಲೀ ಒಳಗೆ ಇದ್ದರು. ಮಾಧು, ಶ್ಯಾಮ್ ಈಚೆಗೆ ಮನೆ ಸೇರುತ್ತಿದ್ದುದೇ ಅಪರೂಪ. ಪುಟ್ಟಿ, ಕಿಟ್ಟು ಎಂದಿಗೂ ಇಂತಹ ಸಂದರ್ಭಗಳಲ್ಲಿ ಹೊರಗೆ ಬರುತ್ತಲೇ ಇರಲಿಲ್ಲ.

ವಸಂತ್, ಪವಿತ್ರ ಇಬ್ಬರೇ, ಒಬ್ಬರ ಮುಖ ಒಬ್ಬರು ನೋಡಿದಾಗ ಅವನ ನೋಟ ಎದುರಿಸಲಾರದೆ ಪವಿತ್ರ ಮುಖ ತಗ್ಗಿಸಿದಳು

'ನಿಮಗೆ ನನ್ನ ಕಾದಂಬರಿ 'ತಿರುವು' ಇಷ್ಟವಾಗಲು ಕಾರಣ ತಿಳಿಸುತ್ತೀರಾ ?'

'ನನಗೆ ಆ ಕಥೆ ತುಂಬಾ ಹಿಡಿಸಿತು. ಹೆಣ್ಣಿನ ಹೃದಯಕ್ಕೆ ಕನ್ನಡಿ ಹಿಡಿದಂತಿದೆ.' ಪವಿತ್ರ ತಲೆಯೆತ್ತದೆಯೇ ಉತ್ತರಿಸಿದಳು. ತಾನು ಎಂತೆಂತಹ ದೃಶ್ಯಗಳಲ್ಲಿ, ಸನ್ನಿವೇಶಗಳಲ್ಲಿ ನಿರ್ಲಜ್ಜಳಾಗಿ ನಟಿಸಿದ್ದೆ. ಆದರೆ ಈತನ ಮುಂದೇಕೆ ತನಗೆ ಸಂಕೋಚ, ನಾಚಿಕೆ ?

'ನಾನು ನಿಮ್ಮ ಅನೇಕ ಚಿತ್ರಗಳನ್ನು ನೋಡಿದ್ದೇನೆ. ತುಂಬಾ ಚೆನ್ನಾಗಿ ಅಭಿನಯಿಸುತ್ತೀರಿ. ನೀವು ತಪ್ಪು ತಿಳಿಯದಿದ್ದರೆ ನಾನೊಂದು ಮಾತು ಹೇಳುತ್ತೇನೆ. ನೀವು ಚಿತ್ರದಲ್ಲಿ ಕಾಣುವುದಕ್ಕಿಂತ ವಿಭಿನ್ನ ವ್ಯಕ್ತಿ' ವಸಂತ ಹೇಳಿದಾಗ ಪವಿತ್ರ ಅಚ್ಚರಿಯಿಂದ ಅವನತ್ತ ನೋಡಿದಳು.

ಬಿಳಿಯ ಪಾಯಿಜಾಮು, ಸಿಲ್ಕಿನ ಜುಬ್ಬ, ಕತ್ತಿನಲ್ಲಿದ್ದ ಒಂದೆಳೆ ಚಿನ್ನದ ಸರ, ಕೈಯಲಿದ್ದ ವಾಚು, ಸ್ವಚ್ಛವಾದ ಮುಖದಲ್ಲಿದ್ದ ಪ್ರಖರವಾದ ಕಣ್ಣುಗಳು, ಮಾಟವಾದ ತುಟಿಗಳ ಮೇಲಿದ್ದ ಗೀರುಮೀಸೆ, 'ನಾನೂ ನೀವು ಹೀಗಿರುತ್ತೀರೆಂದುಕೊಂಡಿರಲಿಲ್ಲ' ಎನ್ನುವ ಬಯಕೆಯಾಯಿತು. ಆದರೆ ಅದರ ಬದಲು ಅವನತ್ತ ಪ್ರಶ್ನಾರ್ಥಕವಾಗಿ ನೋಡಿದಳು.

'ಅಂದರೆ ?'

'ನೋಡಿ, ನಾವು ಅಭಿನಯಿಸುವುದೇ ಬೇರೆ. ನಮ್ಮ ನಿಜಸ್ವರೂಪವೇ ಬೇರೆ. ಅದು ಅಭಿನಯ ಇದು ಬದುಕು.' ವಸಂತ ಕಿರುನಕ್ಕ. ಎಂತಹ ಆಕರ್ಷಕ ನಗು. ತನ್ನೊಂದಿಗೆ ಅಭಿನಯಿಸುವ ಎಷ್ಟೋ ನಾಯಕ ನಟರಿಗಿಂತ ಇವನೆಷ್ಟು ಆಕರ್ಷಕವಾಗಿದ್ದಾನೆ. ಅವನು ಹೀಗೇ ನಗುತ್ತಿರಬಾರದೇ ಎನ್ನಿಸಿತು.

'ನಾನು ಹೇಳಿದ್ದು ಹಾಗಲ್ಲ. ನನಗೂ ನಿಮ್ಮ ಬದುಕಿನ ಪರಿಚಯ ಅಷ್ಟಿಷ್ಟಿದೆ. ಅಂದರೆ ನಾನು ಹೇಳಿದ್ದು ನೋಡುವುದಕ್ಕೆ. ನೀವು ತೆರೆಯ ಮೇಲೆ ಕಾಣುವುದಕ್ಕಿಂತ ಹೆಚ್ಚು ಅಂದವಾಗಿ, ಚಿಕ್ಕ ವಯಸ್ಸಿನವರಾಗಿ, ಹೆಚ್ಚು ಆಕರ್ಷಕರಾಗಿ ಕಾಣುತ್ತೀರಿ.'

ಪವಿತ್ರ ಒಮ್ಮೆಗೇ ಕೆಂಪಾದಳು. ಅಷ್ಟು ಬಿಚ್ಚು ಮಾತಿನಿಂದ ಯಾರೂ ತನ್ನನ್ನು ಹೊಗಳಿರಲಿಲ್ಲ. ಏನಿದ್ದರೂ ಎಲ್ಲವೂ ನಾಟಕೀಯ. 'ಯೂ ಆರ್ ಸೂಪರ್ಬ್ !' 'ಅಬ್ಬಾ ಹೇಗೆ ಕಾಣ್ತೀರಿ ಗೊತ್ತಾ ?' 'ಸಿಂಪ್ಲೀ ವಂಡರ್‌ಫುಲ್ !' 'ಯೂ ಆರ್ ಎ ಬ್ಯೂಟಿ !' 'ನೀವು ಹೇಮಮಾಲಿನಿ ತರಹ ಇದ್ದೀರಿ' 'ನೀವು ಬ್ರೂಕ್‌ಶೀಲ್ಡ್ ತರಹ ಕಾಣ್ತೀರಿ'....ಅವಳಿಗೆ ಗೊತ್ತು. ತಾನೂ ನಾಟಕೀಯವಾಗಿಯೇ ಸ್ವೀಕರಿಸಬೇಕೆಂದು. ಆದರೆ ಈಗ ಇವರು ನೀಡಿದ ಮೆಚ್ಚುಗೆಗೆ ಅವಳ ಬಳಿ ಯಾವ ಅಭಿನಯವೂ ಸರಿಹೋಗುತ್ತಿರಲಿಲ್ಲ. ಮುಖಕ್ಕೆ ರಕ್ತ ಏರಿದಾಗ ಚಂಚಲಗೊಂಡ ದೃಷ್ಟಿಯನ್ನು ಅವನತ್ತ ಬೀರಿ ಒಂದೇ ಪದದಲ್ಲಿ ಉತ್ತರಿಸಿದಳು.

'ಥ್ಯಾಂಕ್ಸ್.'

ಅಷ್ಟರಲ್ಲಿ ದೇವರಾಜ್ ಕೈಯಲ್ಲಿ ಕವರೊಂದನ್ನು ಹಿಡಿದು ಬಂದರು. ಮಾಲತಮ್ಮ ಅಯ್ಯರ್ ಕೈಯಲ್ಲಿ ಅಂದು ಸಂಜೆಗೆ ಮಾಡಿದ್ದ ಕೇಸರಿಭಾತನ್ನು, ಹಾಲನ್ನು ತೆಗೆಸಿಕೊಂಡು ಬಂದರು.

'ಪವಿತ್ರ ಕೊಟ್ಟುಬಿಡಮ್ಮಾ' ದೇವರಾಜ್ ಹೇಳಿದಾಗ ಪವಿತ್ರ ಕವ

ರನ್ನು ಕೈಗೆತ್ತಿಕೊಂಡು ವಸಂತನತ್ತ ಅವನಿಗೆ ನೀಡಲು ಬಂದಳು. ಅವನ ಕೈಗೆ ಕವರನ್ನು ನೀಡಿದಾಗ ಅವನು ನೀಡಿದ ಕೈಗೆ ಕೈ ಬೆರಳುಗಳು ತಗಲಿದವು. ತಕ್ಷಣ ಬೆಚ್ಚಿ ಕೈ ಹಿಂದಕ್ಕೆಳೆದುಕೊಂಡಳು. 'ಶುಭಾಶಯಗಳೊಂದಿಗೆ' ಎಂದಾಗ ಅವನ ಸಾಮೀಪ್ಯದ ಅನುಭವ ಅವಳಿಗಾಯಿತು. 'ಥ್ಯಾಂಕ್ಸ್ ನಿಮಗೂ ಶುಭಾಶಯಗಳು' ಎಂದಾಗ ಅವನ ಬಿಸಿಯುಸಿರು ಅವಳ ಹಣೆಗೆ ಮುತ್ತಿಟ್ಟಂತಾಯಿತು. ಕ್ಷಣಕಾಲ ದೃಷ್ಟಿ ವಿನಿಮಯವಾಯಿತಷ್ಟೆ. ಅವನ ಕಣ್ಣುಗಳಲ್ಲಿ ಮೆಚ್ಚಿಗೆ, ಇವಳ ಕಣ್ಣುಗಳಲ್ಲಿ ಆರಾಧನಾ ಭಾವ.

ದೇವರಾಜ್ ಅವನ ಕೈ ಕುಲುಕಲು ಬಂದಾಗ ಪವಿತ್ರ ದೂರ ಸರಿದು ನಿಂತಳು. ಮಾಲತಮ್ಮ ಮಗಳ ಕಿವಿಯಲ್ಲಿ ಉಸುರಿದರು.

'ಇದೇನು ಅವಲಕ್ಷಣ ನಿನ್ನದು. ಒಳ್ಳೆಯ ಸೀರೆಯಿಲ್ಲವೆ ? ಕೈಕತ್ತು ಕಿವಿ ಬೋಳು. ಮುಖಕ್ಕೂ ಏನೂ ಹಚ್ಚಿಲ್ಲ. ಸಧ್ಯ ಯಾವ ಫೋಟೋಗ್ರಾಫರೂ ಬಂದಿಲ್ಲ !

'ಅದೆಲ್ಲಾ ಇಲ್ಲದಿದ್ದರೂ ಇವರು ನನ್ನ ಮೆಚ್ಚಿದ್ದಾರೆ' ಎನ್ನಬೇಕೆನಿಸಿತು. ಆದರೆ ಅಷ್ಟರಲ್ಲಿ ದೇವರಾಜ್ ವಸಂತನೊಡನೆ ಮಾತನಾಡುತ್ತಿದ್ದುದು ಕಿವಿಗೆ ಬಿದ್ದು ಗಮನ ಅತ್ತ ಹರಿಯಿತು.

'ನೋಡಿ ವಸಂತ್, ಈ ಐನೂರು ರೂಪಾಯಿ ಮುಂಗಡ ಕೊಟ್ಟಿದ್ದೀನಿ. ಅಗ್ರಿಮೆಂಟ್ ಮಾಡಿದಾಗ ಮತ್ತೊಂದು ಐನೂರು ಕೊಡುತ್ತೇವೆ. ಚಿತ್ರ ಮುಗಿದ ಕೂಡಲೇ ಮತ್ತೆ ಐನೂರು ಕೊಡುತ್ತೇವೆ.'

ಏನು, ಇವರ ಕತೆಗೆ ಸಾವಿರದ ಐನೂರು ಮಾತ್ರವೇ ? ಅಂತಹ ಸುಂದರವಾದ ಕಥಾವಸ್ತುವಿರುವ ಕಾದಂಬರಿಗೆ ಇಷ್ಟೇಯೇ ? ಆದರೆ ಹತ್ತು ಪುಟಗಳಲ್ಲಿ ಒಂದು ಗಂಟೆಯೊಳಗೆ ಕುಳಿತಲ್ಲೇ ಮಸಾಲೆ ತುಂಬಿ ಕಥೆಯ ಸಾರಾಂಶ ಮಾತ್ರ ಕೊಡುತ್ತಿದ್ದ ಚಂದ್ರಕಾಂತನಿಗೆ ಐದು ಸಾವಿರ, ಹತ್ತು ಸಾವಿರ. ಇದು ಮೋಸ !

'ನೋಡಿ, ಇದು ನಿಮ್ಮ ಮೊದಲ ಚಿತ್ರ. ಈ ಕಾದಂಬರಿ ಚಿತ್ರ ಸಕ್ಸೆಸ್ ಆದರೆ ಬೇಕಾದಷ್ಟು ಬೇಡಿಕೆ ಬರುತ್ತೆ. ಮೊದಲಬಾರಿಯೆಂದು ಸಾವಿರದೈನೂರು ಕೊಡುತ್ತಿದ್ದೇನೆ.' ದೇವರಾಜ್ ಹೇಳಿದಾಗ ಪವಿತ್ರಳಿಗೆ ರೋಷವುಕ್ಕಿತು. ಮಾಧು, ಶ್ಯಾಮ್‌ಗಾಗಲಿ, ತನಗಾಗಲಿ ಹಣ ಕೇಳಿದರೆ ಹತ್ತು ಹದಿನೈದು ಸಾವಿರ ಎಸೆಯುವ ದೇವರಾಜ್‌ಗೇಕೆ ಇಂತಹ ಜಿಪುಣತನ ! ಸಾಹಿತ್ಯದಿಂದ ಚಿತ್ರವೊಂದು ಸೃಷ್ಟಿಯೆಂದ ಮೇಲೆ ಸಾಹಿತಿಗೆ ಗೌರವ

ಬೇಡವೇ ? ಅವನ ರಚನೆಗೆ ತಕ್ಕ ಸಂಭಾವನೆ ಬೇಡವೇ ? ಚಿತ್ರಕ್ಕೆಂದೇ ಸೃಷ್ಟಿಸುವ ಸಾಹಿತ್ಯಕ್ಕೆ ಹೆಚ್ಚು ಮನ್ನಣೆ. ಅದರಲ್ಲಿ ಸಾಹಿತ್ಯದ ಗಂಧವಿದೆಯೇ ? ಆದರೂ ಈ ಚಿತ್ರರಂಗದಲ್ಲಿ ಅದಕ್ಕೇ ಮನ್ನಣೆ.

ವಸಂತನ ಮುಖ ವೀಕ್ಷಿಸಿದಳು. ಅವನು ನಗುತ್ತಲೇ ಇದ್ದ. ಮುಖ ಅರಳಿತ್ತು. 'ತಾವೆಷ್ಟು ಕೊಟ್ಟರೂ ಸಂತೋಷ. ನನಗೆ ಒಂದು ಅವಕಾಶ ಮಾಡಿಕೊಟ್ಟದ್ದಕ್ಕೆ ಧನ್ಯವಾದಗಳು. ನಾನು ಹಣದ ಬಗ್ಗೆ ಏನೂ ಹೇಳಲಿಲ್ಲ.'

'ಹಾಗಲ್ಲ ವಸಂತ್, ನೀವು ಕೇಳಲಿಲ್ಲಾಂತ ನಿಮಗೆ ನಾವು ಮೋಸ ಮಾಡುವುದಕ್ಕಾಗುತ್ತದೆಯೇ ?' ಮಾಲತಮ್ಮ ದನಿ ಸೇರಿಸಿದರು. ಪವಿತ್ರ ಒಳಗೇ ಕುದಿದಳು.

ವಸಂತ್ ಹೊರಟುನಿಂತಾಗ ಕಣ್ಣಿನಲ್ಲೇ ಅವಳಿಗೆ ಹೇಳಿ ಎಲ್ಲರಿಗೂ ಕೈ ಮುಗಿದು ಹೊರಡುವಷ್ಟರಲ್ಲಿ ಮಾಧು, ಶ್ಯಾಮ್ ಬಂದರು. ಅವರಿಗೂ ಅವನ ಪರಿಚಯ ಮಾಡಿಸಿದರು ದೇವರಾಜ್. ನಾಲ್ಕು ಮಾತಾಡಿ ದೇವರಾಜ್ ಹೇಳಿದರು.

'ನಾಳೆ ನಾಡಿದ್ದರಲ್ಲಿ ಇವರಿಗೆ ತಿಳಿಸುತ್ತೇನೆ. ಇಲ್ಲಿಗೇ ಬಂದುಬಿಡಿ. ಸ್ಕ್ರೀನ್‌ಪ್ಲೇಗೆ ಕೂತ್ಕೋಳ್ಳೋಣ ಧನಂಜಯಾನೂ ಬರ್ತಾರೆ. ನೀವು ಸಾಹಿತಿ ಇದ್ರೆ ಬರೆಯೋದು ಸುಲಭ.'

'ಆಗಲಿ.' ಮತ್ತೊಮ್ಮೆ ಕೈ ಮುಗಿದು ದೂರದಲ್ಲಿ ಅವನನ್ನೇ ನೋಡುತ್ತಿದ್ದ ಪವಿತ್ರಳತ್ತ ದೃಷ್ಟಿ ಹರಿಸಿ ಹೊರನಡೆದ.

ಅವನತ್ತ ಹೋಗುತ್ತಲೇ ಮಾಧು, ಶ್ಯಾಮ್ ಒಬ್ಬರ ಮುಖ ಒಬ್ಬರು ನೋಡಿ ನಕ್ಕರು. 'ಒಳ್ಳೆ ಬಕರಾ ಇದ್ದಂಗಿದ್ದಾನೆ. ಏನು ಬರೀ ತಾನೋ ! ನಮ್ಮ ದೇವರಾಜ್ ಆಗಿರೋ ಹೊತ್ಗೆ ಅವನಿಗೊಂದು ಚಾನ್ಸ್ ಸಿಕ್ಕಿದೆ.'

ಪವಿತ್ರ ಅವರೆಡೆಗೆ ತಿರುಗಿದಳು. ಅವರಿಬ್ಬರೂ ಹಾಕಿದ್ದ ಬೆಲೆಬಾಳುವ ಉಡಿಗೆ ಅವಳಿಗೆ ಹೇಸಿಗೆಯೆನಿಸಿತು. ತಮ್ಮ ಕಾಲ ಮೇಲೆ ನಿಲ್ಲಲಾರದೆ ತಾನು ಗಳಿಸುವ ಹಣದಿಂದ ಮಜಾ ಮಾಡುತ್ತಾ ಮರೆಯುವ ಅವರಿಬ್ಬರನ್ನೂ ಕಂಡಾಗ ಅವಳಿಗೆ ರೋಷದ ಕಿಡಿ ಸಿಡಿದೆದ್ದಿತು. ವಸಂತ್ ಕುಮಾರನಲ್ಲಿರುವ ನೂರಕ್ಕೆ ಒಂದು ಭಾಗದ ಒಳ್ಳೆಯ ಗುಣ, ಸಭ್ಯತನ ಇವರಲ್ಲಿದ್ದಿದ್ದರೆ !

'ಹಾಗೆಲ್ಲಾ ಹೇಳಬೇಡಿ. ಅವರವರ ವರ್ಥ್ ಅವರಿಗಿರುತ್ತದೆ' ಎಂದಾಗ ಮಾಧೂ ಅಚ್ಚರಿಯಿಂದ ಪವಿತ್ರಳತ್ತ ನೋಡಿದ.

'ಏನು ಬಹಳ ವಹಿಸಿಕೊಳ್ತಾ ಇದ್ದೀ. ಇವನಂತವಹರು ಈಗೇನು ಕಾಸಿಗೊಂದು ಕೊಸರಿಗೊಂದು. ಬಗಲಲ್ಲಿ ಹಸ್ತಪ್ರತಿ ಇಟ್ಕೊಂಡು ಪ್ರಕಾಶಕರ ಬಳಿಗೆ ಅಲೀತಾ ಇರೋದು ತೋರಿಸ್ತೀನಿ ಬಾ.'

ಅಣ್ಣಂದಿರ ಮಾತೇಕೋ ಅವಳಿಗೆ ರುಚಿಸಲಿಲ್ಲ. ಅವರೊಂದಿಗೆ ಚರ್ಚೆಗೆ ನಿಲ್ಲುವುದೂ ತನಗೆ ತರವಲ್ಲ ಎನಿಸಿತು.

ರಾತ್ರಿ ದೇವರಾಜ್ ಒಬ್ಬರೇ ಅವಳೊಡನಿದ್ದಾಗ ವಿಷಯ ಪ್ರಸ್ತಾಪಿಸಿದಳು. 'ನೀವು ಕೇವಲ ಸಾವಿರದೈನೂರು ಕೊಟ್ಟಿದ್ದು ಸರಿಯಲ್ಲ. ಚಂದ್ರಕಾಂತ್‌ಗೆ ಎಷ್ಟು ಕೊಡುತ್ತೀರಿ. ಉದಯರಾವ್‌ಗೆ ಎಷ್ಟು ಕೊಡುತ್ತೀರ? ಅವರೆಲ್ಲರಿಗಿಂತ ಇವನು ಕಳಪೆಯೇ?'

'ನಿಮ್ಮ ತಾಯಿ ಸಾವಿರಾನೇ ಸಾಕು ಎಂದರು. ನಾನು ಸಾವಿರದ ಐನೂರು ಕೊಟ್ಟೆ. ಅದೂ ಅಲ್ಲದೆ ಪವಿತ್ರ, ನಿನಗಿದೆಲ್ಲಾ ಅರ್ಥವಾಗುವುದಿಲ್ಲ. ಇವ್ವೊತ್ತು ನಾನೇನಾದ್ರೂ ಐದು ಸಾವಿರ ಕೊಟ್ಟೇಂತ ಇಟ್ಕೋ. ನಾಳೆ ಇನ್ನೊಂದು ಚಿತ್ರಕ್ಕೆ ಕಾದಂಬರಿ ಕೇಳಿದಾಗ ಎಂಟು ಹತ್ತು ಕೇಳುತ್ತಾರೆ ಆಮೇಲೆ' ಎಂದರು ದೇವರಾಜ್.

'ಕೇಳಿದರೆ ತಪ್ಪೇನೂ, ಒಂದು ಚಿತ್ರದಲ್ಲಿ ಬಿಟ್ಟಿ ಮಾಡಿ, ಅನಂತರ ಐನೂರು, ಸಾವಿರ ತೆಗೆದುಕೊಂಡು ಈಗ ನಾನು ನಲ್ವತ್ತೈದು ಐವತ್ತು ಸಾವಿರ ಕೇಳುವುದಿಲ್ಲವೇ? ಯೋಗ್ಯತೆ ಹೆಚ್ಚಿದಂತೆ ಬೆಲೆಯೂ ಹೆಚ್ಚಬೇಕಲ್ಲವೆ? ಅವರು ಸಾಹಿತಿಯಾದ ಮಾತ್ರಕ್ಕೆ ನೀವು ಕೊಟ್ಟಷ್ಟು ತೆಗೆದುಕೊಳ್ಳಬೇಕೇ?' ಪವಿತ್ರ ಕೊಂಚ ಖಾರವಾಗಿಯೇ ಹೇಳಿದಳು.

ನಿನ್ನ ಮಾತು ಒಪ್ಪಬೇಕಾದುದೇ, ಅವನು ಕೇಳಿದ್ದರೆ ನಾನು ಕೊಡಲು ತಯಾರು. ಆದರೆ ಅವನಿಗಿಷ್ಟಕ್ಕೆ ತೃಪ್ತಿಯಾಯಿತು. ಅಲ್ಲದೇ ಸಾಹಿತ್ಯ ಚೆನ್ನಾಗಿದ್ದರೆ ಆಯಿತೇ. ಆ ಚಿತ್ರ ಸಕ್ಸೆಸ್‌ಫುಲ್ ಆಗ್ಬೇಕಲ್ಲಾ. ಆಗಲೇ ಸಾಹಿತ್ಯಕ್ಕೆ ಬೆಲೆ' ದೇವರಾಜ್ ಹೇಳಿದಾಗ ಪವಿತ ಒಪ್ಪಲಿಲ್ಲ.

'ಚಿತ್ರ ಹಿಟ್ ಆಗಲಿಲ್ಲ ಎನ್ನುವುದಕ್ಕೆ ಸಾಹಿತ್ಯದ ತಪ್ಪಲ್ಲ. ಕಥಾವಸ್ತು ಕಾದಂಬರಿ ಚೆನ್ನಾಗಿದ್ದರೂ ನೀವು ಅಳವಡಿಸುವ ಟೆಕ್ನಿಕ್, ನೀವು ತುಂಬುವ ಮಸಾಲೆ, ಕೆಟ್ಟ ನಿರ್ದೇಶನ ಸುಮಾರಾದ ಅಭಿನಯ ಎಲ್ಲಾ ಸೇರುತ್ತೆ. ಆಗ ಚಿತ್ರ ಕ್ಲಿಕ್ ಆಗದಿದ್ದರೆ ಕಥೆ, ವಸ್ತು ನಿರೂಪಣೆ ಚೆನ್ನಾ

ಗಿದ್ದ ಮೇಲೆ ಅದರಂತೆಯೇ ಚಿತ್ರವನ್ನು ಮನಸಿಟ್ಟು ಮೂಲವಸ್ತು ಕೆಡಿಸದೆ ಚಿತ್ರ ತೆಗೆದರೆ ಚಿತ್ರ ಚೆನ್ನಾಗಿಯೇ ಆಗುವುದು !' ದೇವರಾಜ್ ನಕ್ಕರು.

'ಆ ಮಾತೆಲ್ಲಾ ಈಗ ಬೇಡ. ನಾಳೆ ತಿರುವು, ಚಿತ್ರಕತೆ ಡಿಸ್ಕಷನ್‌ಗೆ ಧನಂಜಯನೊಂದಿಗೆ ಕುಳಿತು ವಿಮರ್ಶೆ ಮಾಡುತ್ತೇನೆ. ಅವನಿಗೆ ಗೊತ್ತು, ಚಿತ್ರವನ್ನು ಹೇಗೆ ಬಾಕ್ಸಾಫೀಸ್ ಹಿಟ್ ಮಾಡಬೇಕೆಂದು. ಈಗ ಮಲಗ ಬಾರದೇ ?'

'ಅದು ಬೇರೆಯ ವಿಷಯ. ನೀವು ವಸಂತ್‌ಕುಮಾರ್‌ಗೆ ಮೋಸ ಮಾಡಿದಿರಿ. ಬೆಲೆ ಬಹಳ ಕಡಿಮೆ ಮಾಡಿದ್ದೀರಿ' ಪವಿತ್ರ ಹೇಳಿದಾಗ ದೇವರಾಜ್‌ರವರ ಮುಖ ಗಂಭೀರವಾಯಿತು

'ಅವನ ಬಗ್ಗೆ ನೀನು ತುಂಬಾ ಭಾವುಕಳಾಗುವುದು ಸರಿಯಲ್ಲ. ಆಗಲಿ, ಚಿತ್ರವೇನಾದರೂ ಸಕ್ಸಸ್ ಆದರೆ ನೀನೇ ಅವನಿಗೆ ಇನ್ನೊಂದು ಸಾವಿರ ಕೊಡುವಿಯಂತೆ, ಸರಿತಾನೇ ?'

ಅದು ಅಸಮಾಧಾನವಾದರೂ ಅಷ್ಟಾದರೂ ಅವನಿಗೆ ಬೆಲೆ ಕೊಟ್ಟ ರಲ್ಲ ಎಂಬ ತೃಪ್ತಿ ಮೂಡಿತು.

ಅಂದೇಕೋ ಅವಳ ಕಣ್ಣಿಗೆ ನಿದ್ರೆ ಹತ್ತಲಿಲ್ಲ. ಅವನ ಮುಖ ಕಣ್ಮುಂದೆ ತೇಲಿ ಬಂತು. 'ನಾನು ನೀವು ಹೀಗಿರುತ್ತೀರೆಂದುಕೊಂಡಿರಲಿಲ್ಲ. ನೀವು ತೆರೆಯ ಮೇಲೆ ಕಾಣುವುದಕ್ಕಿಂತ ಹೆಚ್ಚು ಅಂದವಾಗಿ ಕಾಣುತ್ತೀರಿ' ಆ ಮಾತುಗಳನ್ನು ಮತ್ತೆ ಮತ್ತೆ ಕೇಳುವ ಬಯಕೆಯಾಯಿತು. ತನ್ನ ಬಾಳಿ ನಲ್ಲಿ ಬಂದು ಹೋದವರಲ್ಲಿ ರಾಜೇಂದ್ರ, ಸುನಿಲ್‌ಕುಮಾರ್, ಸುರೇಂದ್ರ ಇವರ್‍ಯಾರಲ್ಲೂ ತನಗೆ ಇಂತಹ ಆಕರ್ಷಣೆಯಿರಲಿಲ್ಲ. ರಾಜೇಂದ್ರನದೇನಿದ್ದರೂ ಏನೋ ಹುಚ್ಚು ಹೊಳೆಯಿರಬಹುದಷ್ಟೆ. ಸುನಿಲ್‌ಕುಮಾರ್‌ನ ವ್ಯಕ್ತಿತ್ವ, ಹೆಸರು ಅವನಿಗಿಂತ ತಾನು ಕಡಿಮೆಯವಳೆಂಬ ಭಾವನೆ ಮೂಡಿಸಿ ತನ್ನನ್ನು ಅವನತ್ತ ಆಕರ್ಷಿಸಿತ್ತಷ್ಟೆ. ಇನ್ನು ದೇವರಾಜ್ ಸದ್ಯಕ್ಕೆ ಏನಿದ್ದರೂ ಸಾಕು. ಮಾಧೂ, ಶ್ಯಾಮ್ ಉದ್ದಿಮೆಯಲ್ಲಿ ಹಣಗಳಿಸಲು ಪ್ರಾರಂಭಿಸಿದ ಕೂಡಲೇ ಅವರ ಹಣ ಅವರಿಗೆ ಕೊಟ್ಟುಬಿಡಬೇಕು. ಅಲ್ಲದೇ ಅವರ ಚಿತ್ರಗಳಿಗೆ ತಾನು ಒಂದು ಕಾಸು ತೆಗೆದುಕೊಳ್ಳಬಾರದು. ರೋಜಿಯ ಮದುವೆಯಾಗಿ ಹೋದರೆ ನಿಧಾನವಾಗಿ ಅವರಿಂದ ದೂರ ಸರಿದುಬಿಡ ಬೇಕು. ತನಗೂ ಆಸೆ, ಆಕಾಂಕ್ಷೆಗಳಿಲ್ಲವೇ ? ತನ್ನ ವಯಸ್ಸಿಗೆ ತಕ್ಕಂತಹ, ರಸಿಕರಾದ ಪುರುಷರೊಂದಿಗೆ ಬೆರೆಯಲು ಎಷ್ಟು ಆಸೆಯಿದೆ ? ಸುನಿಲ್

ಕುಮಾರ್‌ನೊಂದಿಗೆ ಸಲಿಗೆಯಿಂದಿದ್ದರೂ ಅವನೊಡನೆ ಮಾತಾಡುತ್ತಿದ್ದಾಗ ಏನೋ ಒಂದು ಬಗೆಯ ಸಂತೃಪ್ತಿ, ಸಂತಸ, ಮೈಮನ ಹಗುರವಾಗಿತ್ತು. ಸುರೇಂದ್ರನೊಂದಿಗೆ ಗಂಟೆಗಟ್ಟಲೆ ಹರಟೆ ಹೊಡೆಯುತ್ತಿದ್ದರೂ ಅಂದೇನೋ ಆನಂದ. ರಾಜೇಂದ್ರರವರ ಮೋಡಿಯ ಬಲೆಯಲ್ಲಿ ತಾನು ಬಿದ್ದು ಮೋಸ ಹೋಗಿದ್ದರೂ ಅದಿನ್ನೂ ಅಳಿಯದ ನೆನಪೇ. ಈಗ ಈ ವಸಂತ್‌ಕುಮಾರ್ ಅವರ ಮುಖದಲ್ಲಿ ಅದೆಷ್ಟು ಆಕರ್ಷಣೆ ಅವನ ವ್ಯಕ್ತಿತ್ವದಲ್ಲಿ ಅದೇನು ಅಯಸ್ಕಾಂತ! ಅವನೊಡನೆ ಹೆಚ್ಚು ಸಮಯ ಕಳೆಯುವುದಾದರೆ ಎಷ್ಟು ಚೆನ್ನ. ಪಕ್ಕದಲ್ಲಿ ಆಗಲೇ ಗೊರಕೆಯಾರಂಭಿಸಿದ ದೇವರಾಜರತ್ತ ದೃಷ್ಟಿಹರಿಯಿತು. ತನ್ನ ಚಿಕ್ಕಪ್ಪನೋ, ಹಿರಿಯ ನೆಂಟನೋ ಆಗಬಹುದಾದ ವಯಸ್ಸಿನ ಈ ವ್ಯಕ್ತಿಗೆ ತನ್ನಿಂದ ಬೇಕಾಗಿರುವುದು ಸುಖ. ಆ ಸುಖಕ್ಕಾಗಿ ಹಣ ನೀರಿನಂತೆ ಚೆಲ್ಲುತ್ತಾನೆ. ಬದುಕಿನಲ್ಲಿ ರಸನಿಮಿಷಗಳನ್ನುಂಡು ಅದು ಬೇಸತ್ತಾಗ ವ್ಯಂಜನಕ್ಕಾಗಿ ತನ್ನನ್ನು ಉಳಿಸಿಕೊಂಡಿರುವ ಈ ವ್ಯಕ್ತಿಯಿಂದ ತನಗೇನು ಸುಖ? ತನಗೇನು ತೃಪ್ತಿ? ಒಲಿದವನಿಗೆ ಒಪ್ಪಿಸಿಕೊಳ್ಳುವುದರಲ್ಲಿರುವ ಸಂತೃಪ್ತಿ ಇದರಲಿಲ್ಲ. ಮರುಭೂಮಿಯಲ್ಲಿನ ಮುಳ್ಳಿನ ಕ್ಯಾಕ್ಟಸ್ ಗಿಡದಲ್ಲಿ ಹೂವು ಬಿಟ್ಟಂತೆ.

ನಾಳೆ ನಾಡಿದ್ದರಲ್ಲಿ ವಸಂತ್‌ಕುಮಾರ್ ಮತ್ತೆ ಬಂದೇ ಬರುತ್ತಾರೆ. ಅವರೊಂದಿಗೆ ಹೆಚ್ಚು ಮಾತಾಡಬೇಕು. ಈ ತನ್ನ ಮನೆಯಲ್ಲಿ ತನಗೆ ಏಕಾಂತವೆ ಇಲ್ಲ. ತಾನೇನು ಮಾಡಲೂ ತಾಯಿ, ಅಕ್ಕಂದಿರು, ಅಣ್ಣಂದಿರು ದೇವರಾಜ್‌ರವರ ಸರ್ಪಕಾವಲಿನಲ್ಲೇ ಆಗಬೇಕು. ಹೊರಗೆ ಹೋಗಬೇಕಾದರೂ ಒಬ್ಬಳೇ ಹೋಗುವಂತಿಲ್ಲ. ಸನ್ಮಾನ ಸಮಾರಂಭಗಳಲ್ಲಿಯಂತೂ ಮತ್ತೂ ಎಚ್ಚರಿಕೆಯಿಂದಿರಬೇಕು ಗಾಳಿ ಸುದ್ದಿ ಇದ್ದದ್ದು ಇಲ್ಲದ್ದು ಹರಡಿಬಿಡುತ್ತದೆ ಎಂದ ಮೇಲೆ ತನಗೂ ಸ್ವಾತಂತ್ರ್ಯವೇ ಇಲ್ಲವೇ? ಬಂಗಾರದ ಪಂಜರದಲ್ಲಿರುವ ಗರಿಹರಿದ ಒಂಟಿ ಪಕ್ಷಿ ತಾನು. ಇನ್ನೆಂದಿಗೆ ಈ ಪಂಜರದಿಂದ ಬಿಡುಗಡೆ? ನಿದ್ರೆ ಬಾರದೇ ಹೋದಾಗ ಎದ್ದು ಬೀರುವಿನಲ್ಲಿ ತನಗಾಗಿಯೇ ತಾಯಿ ಇಡುತ್ತಿದ್ದ ನಿದ್ರೆ ಗುಳಿಗೆ ನುಂಗಿ ನೀರು ಕುಡಿದು ಮಲಗಿದಳು.

ಮಾರನೆಯ ದಿನ ತಾಯಿ ಬಂದು ಅಲುಗಾಡಿಸಿ ಎಬ್ಬಿಸಿದಾಗಲೇ ಎಚ್ಚರಿಕೆ.

'ನೀನು ರಾತ್ರಿ ಮಲಗೋವಾಗ ಸ್ಲೀಪಿಂಗ್ ಟ್ಯಾಬ್ಲೆಟ್ಸ್ ತೊಗೋ

ಬೇಡಾ ಅಂತ ಹೇಳಿದ್ರೆ ಕೇಳೋಲ್ಲ. ಈಗ ಇಷ್ಟೊತ್ತಾದ್ರೂ ಏಳ್ದೇ ಇದ್ರೆ ಯಾವಾಗ ನೀನು ಶೂಟಿಂಗ್‌ಗೆ, ಡ್ರೆಸ್ ಡಿಸೈನಿಂಗ್‌ಗೆ ಹೋಗೋದು ? ಆಗ಼್ೇ ಮೂರು ಸಾರಿ ಫೋನ್ ಬಂದಾಯ್ತು.'

'ಹೌದಮ್ಮ, ನಂಗೆ ಬೆಳಗಿನಿಂದ ಸಂಜೆಯವರೆಗೆ, ರಾತ್ರಿಯವರೆಗೆ ಹೊರಗೆ ದುಡಿತ. ಇಲ್ಲಿ ಬಂದರೆ ಆ ದೇವರಾಜ್‌ಗೋಸ್ಕರ ನನ್ನ ಮೈ ಮನಸ್ಸು ಸಾಕಾಗಿ ಹೋಗುತ್ತೆ. ನಿದ್ದೆ ಮಾಡೋಕೂ ಪುರುಸೊತ್ತಿಲ್ಲ. ಪುರುಸೊತ್ತು ಸಿಕ್ಕಿದಾಗ ನಂಗೆ ಎಲ್ಲಾ ನೆನಸಿಕೊಂಡು ತಲೆಕೆಟ್ಟುಹೋಗಿ ಕಣ್ಣಿಗೆ ನಿದ್ರೆ ಹತ್ತೋಲ್ಲ. ಇದೇ ಕೊನೆ ಚಿತ್ರ ನಾನು ಮಾಡೋದು. ನಂಗೆ ಸಾಕಾಯ್ತು' ಪವಿತ್ರ ಸಿಡುಕಿದಾಗ ಮಾಲತಮ್ಮ ಅವಾಕ್ಕಾದರು. ಎಂದೂ ಅವಳು ಹಾಗೆ ರೇಗಾಡಿದವಳಲ್ಲ. ಆದರೆ ಇಂದೇಕೆ ಹೀಗೆ ? ದೇವರಾಜ್ ಏನಾದರೂ ಅಂದರೋ ಹೇಗೆ ಎಂಬ ಅನುಮಾನವುಂಟಾ ಯಿತು. ದನಿ ತಗ್ಗಿಸಿದರು.

'ಯಾಕಮ್ಮಾ ಬೇಜಾರು ಮಾಡ್ಕೋತಿ ? ನಾವೇನಮ್ಮಾ ನಿಂಗೇ ಬೇಜಾರು ಮಾಡ್ತಾ ಇರೋದು ನಿಂಗೆ ? ದೇವರಾಜ್ ಏನಾದರೂ ಅಂದ್ರಾ ?'

'ಯಾರೂ ಬೇಜಾರು ಮಾಡೋಲ್ಲ. ಎಲ್ಲ ನನ್ನ ಪ್ರಾರಬ್ಧ ಕರ್ಮ, ಮಾಧು, ಶ್ಯಾಮ್, ರೋಜಿ, ಲಲ್ಲಿ, ಪುಟ್ಟಿ, ಕಿಟ್ಟುಗೆ ನಾನು ಇನ್ನು ಎಷ್ಟು ವರ್ಷ ಹೀಗೆ ದುಡೀಬೇಕಮ್ಮಾ ?' ಪವಿತ್ರ ಸಿಡಿಮಿಡಿಗೊಂಡಾಗ ಮಾಲ ತಮ್ಮನ ಮುಖ ಹಿಡಿಯಾಯಿತು.

'ನೀನ್ಯಾಕೆ ಬೇಜಾರು ಮಾಡ್ಕೋತಿ ? ರೋಜಿ ಮದ್ವೆ ಆಗೋಗ್ಲಿ ಆತ್ಲಾಗೆ. ಮಾಧು, ಶ್ಯಾಮ್ ಇಬ್ಬರಿಗೂ ಹೇಳಿಬಿಡ್ತೀನಿ. ನಿಮ್ಮ ದಾರಿ ನೀವು ನೋಡ್ಕೊಳ್ಳಿ ಅಂತ. ಲಲ್ಲಿ, ಪುಟ್ಟಿ, ಕಿಟ್ಟು ಹಣೇಲಿ ಹೇಗೆ ಬರ್ದಿದ್ಯೊ ಹಾಗಾಗ್ಲಿ. ಆದರೆ ನೀನೇನು ಮಾಡ್ತೀ, ಓದಲಿಲ್ಲ ಬರೀಲಿಲ್ಲ ನಿನ್ನ ಓದಿಗೆ ಯಾರು ಕೆಲ್ಸ ಕೊಡ್ತಾರೆ ? ನೀನು ಮದ್ವೆಯಾಗೋದಾದ್ರೆ ಯಾರು ನಿನ್ನ ಆದರಿಸಿ ಪ್ರೀತಿಯಿಂದ ನೋಡ್ಕೊತ್ತಾರೆ? ಎಷ್ಟಾದ್ರೂ ನಟಿ. ಎಲ್ಲಾ ಆಗೋಗಿರುತ್ತೇಂತ ಆಡಿಕೊಳ್ತೋರೇ. ಸುಮ್ನೆ ಆ ಮಾತೆಲ್ಲಾ ಈಗ ಬೇಡಾ. ನಿಂಗೆ ಮನಸಿಲ್ದೇ ಇದ್ರೆ ಸ್ಟುಡಿಯೋಗೆ ಫೋನು ಮಾಡಿಬಿಡ್ತೀನಿ. ಇವೊತ್ತಿನ ಶೂಟಿಂಗ್‌ಗೆ ಬರೋಲ್ಲಾಂತ' ಮಾಲತಮ್ಮ ಅವಳ ತಲೆ ಸವರಿ ದಾಗ ಅದೇಕೋ ಪವಿತ್ರಳಿಗೆ ದುಃಖದ ಕಟ್ಟೆ ಒಡೆದು ಬಂದಿತು.

'ಅಮ್ಮಾ, ನಂಗೆ ಒಂದೊಂದ್ಸಲ ಹುಚ್ಚು ಹಿಡಿದ ಹಾಗಾಗುತ್ತೆ. ಎಲ್ಲವನ್ನೂ ಕಿತ್ತೆಸೆದು ಎಲ್ಲರನ್ನೂ ಅತ್ತ ತಳ್ಳಿ ಒಬ್ಬಳೇ ಎಲ್ಲಿಗಾದರೂ ಓಡಿ ಹೋಗಿ ಬಿಡೋಣಾ ಎನ್ನಿಸುತ್ತೆ. ನಂಗೆ ಮನಸ್ಸಿಗೆ ಶಾಂತಿ, ದೇಹಕ್ಕೆ ಆರಾಮ ಬೇಕು ಅನ್ನಿಸುತ್ತೆ !' ತಾಯಿಯನ್ನು ಕಟ್ಟಿಕೊಂಡು ಅತ್ತಳು. ಮಗಳ ತಲೆ ನೇವರಿಸುತ್ತಾ ಮಾಲತಮ್ಮ ಹೇಳಿದರು.

'ಎಲ್ಲೋ ನಿಂಗೆ ಕಣ್ಣು ತಗಲಿದೇಂತ ಕಾಣಿಸತ್ತೆ. ನೆನ್ನೆ ಬಂದಿದ್ನಲ್ಲ ಅದ್ಯಾವ್ನೋ ವಸಂತ್‌ಕುಮಾರ್, ಅವ್ನು ನಿನ್ನ ನುಂಗಿಬಿಡೋ ಹಾಗೇ ನೋಡ್ತಾ ಇದ್ದ. ಒಬ್ಬರ ಕಣ್ಣಿದ್ದ ಹಾಗೆ ಇನ್ನೊಬ್ಬರ ಕಣ್ಣಿರೋಲ್ಲ. ಒಂದಿಷ್ಟು ನವಗ್ರಹ ಶಾಂತಿ ಇಟ್ಕೊಂಡುಬಿಡೋಣ. ದೇವರಾಜ್‌ಗೆ ಫೋನ್ ಮಾಡಿ ತಿಳಿಸ್ತೀನಿ'.

ಪವಿತ್ರ ನೀರವವಾಗಿ ರೋಧಿಸಿದಳು. ತನ್ನ ಭಾವನೆಗಳನ್ನೇ ಅರ್ಥ ಮಾಡಿಕೊಳ್ಳುವುದು. ತನಗೆ ತಾನೇ ಸಮಾಧಾನ ಮಾಡಿಕೊಂಡು ಎದ್ದು ಮೈ ಮುರಿದಳು. ರೀಟಾ ಆಗಲೇ ಬಾಗಿಲಲ್ಲಿ ಬಂದು ನಿಂತಿದ್ದಳು. ರೋಜಿ ಅಂದಿನ ಬೆಳಗಿನ ತನ್ನ ಉಪಹಾರವಾದ ಅರ್ಧ ಚಪಾತಿ, ಒಂದು ಲೋಟ ಹಣ್ಣಿನ ರಸ ಹಿಡಿದು ನಿಂತಿದ್ದಳು. ತನ್ನ ಬದುಕಿನಲ್ಲಿ ಇದು ಎಲ್ಲಾ ದಿನ ಗಳಂತೆ ಮತ್ತೊಂದು ದಿನ.

ತಯಾರಾಗಿ ಹೊರಡುವ ವೇಳೆಗೆ ಆಳು ಮರಿಯಪ್ಪ ಒಂದು ನೀಲಿ ಲಕೋಟೆ ಹಿಡಿದು ಬಂದ. ಇನ್ನೊಂದು ಕೈಯಲ್ಲಿ ಅರೆಬಿರಿದ ಸುಗಂಧ ರಾಜದ ಗೊಂಚಲುಗಳು.

'ಅಮ್ಮಾವ್ರೇ, ಇದ್ನ ವಸಂತಕುಮಾರ್ ಕಡೇವ್ರು ಯಾರೋ ತಂದು ಕೊಟ್ಟಿದ್ರು' ಮಾಲತಮ್ಮನ ಕೈಗಿತ್ತ. ಲಕೋಟೆಯ ಮೇಲೆ ದುಂಡಗಿನ ಅಕ್ಷರದಲ್ಲಿ ಬರೆದಿತ್ತು. 'ಅಭಿನಯ ಸರಸ್ವತಿಗೆ'

ಮಾಲತಮ್ಮ ಸೊಟ್ಟಗೆ ನಕ್ಕು ಪವಿತ್ರಳ ಕೈಗಿತ್ತಳು. ಪವಿತ್ರ ಹೂವು ಗಳನ್ನು ಮೂಸಿನೋಡಿ ರೀಟಾಳ ಕೈಗಿತ್ತಳು. ಫ್ಲವರ್ ವೇಸಿನಲ್ಲಿಟ್ಟು ನನ್ನ ರೂಮಿನಲ್ಲಿಡು.'

ಕವರನ್ನು ಬಿಡಿಸಿ ನೋಡಿದಾಗ ಅದರೊಳಗೆ ಒಂದು ಬಿಳಿಯ ಹಾಳೆ ಯಲ್ಲಿ ಕವನವೊಂದಿತ್ತು. 'ಅಭಿನಯ ಸರಸ್ವತಿಯೇ, ಇದೆನ್ನ ಮೊದಲ ಆರಾಧನೆ. ನೋಡಿದಷ್ಟೂ ತಣಿಯದಾದೆ ಹೊಮ್ಮಿತೆನ್ನ ಈ ಭಾವನೆ' ಮೊದಲೆರಡು ಸಾಲುಗಳನ್ನು ನೋಡಿದಾಗ ಪವಿತ್ರಳ ಮೈ ಪುಳಕಗೊಂಡಿತು.

ತನಗಾಗಿಯೇ ಈ ಕವನ ಬರೆದು ಕಳುಹಿಸಿದ್ದಾನೆ. ಅಂದರೆ ಅವನು ಇಲ್ಲಿಂದ ಹೋದಮೇಲೆ ತನ್ನ ಬಗ್ಗೆಯೇ ಯೋಚಿಸುತ್ತಿದ್ದಿರಬೇಕು. ಅವಸರದಲ್ಲಿ,ಎಲ್ಲರೂ ತನ್ನನ್ನೇ ನೋಡುತ್ತಿರುವರೆಂದು ತಿಳಿದು ಕೊನೆಯ ಎರಡು ಸಾಲುಗಳತ್ತ ಕಣ್ಣು ಹೊರಳಿಸಿದಳು.'ತುಷಾರಧವಳದಂತೆ ನೀಕಂಡೆ ಎನಗೆ ನಿನ್ನ ಸೇರಲು ಹಾರಿತೆನ್ನ ಹೃದಯ ನಭಕೆ ಬಾ ಎನ್ನ ದೇವತೆ. ಬೆಳಕಾಗು ನನಗೆ. ಹೃದಯವನೆ ಹಾಸುವೆ ನಿನ್ನ ಪ್ರೀತಿ ಹೆಜ್ಜೆಗೆ'.

ಅವಳ ತುಟಿಯಂಚಿನಲ್ಲಿ ಕಿರುನಗೆ ಮೂಡಿತು. ಮೈಯಲ್ಲಿ ರಕ್ತದ ಬಿಸಿ ಮುಖಕ್ಕೆ ಏರಿತು. ಎಲ್ಲರತ್ತ ನೋಡಿ ಹಿಗ್ಗಿನಿಂದ ಹೃದಯ ತುಂಬಿ, ಮನ ತುಂಬಿ ನಕ್ಕಳು. ಮರಳುಗಾಡಿನಲ್ಲಿ ತನಗೊಂದು ಓಯಸಿಸ್ ಇದು. ಸದ್ಯ ಬೆಳಗಿನಿಂದ ಮುಖ ಸಪ್ಪಗೆ ಮಾಡಿಕೊಂಡಿದ್ದ ಮಗಳು ನಕ್ಕಳೆಂದು ಮಾಲತಮ್ಮನಿಗೆ ಸಂತಸವಾಯಿತು.

"ಅಮ್ಮಾ, ಎಷ್ಟು ಚೆನ್ನಾಗಿ ಬರೆದಿದ್ದಾರೆ ನೋಡು. ಇದು ನನ್ನ ಪರ್ಸಿನಲ್ಲೇ ಇರಲಿ, ದೇವರಾಜ್‌ರವರಿಗೆ ತೋರಿಸುತ್ತೇನೆ. ಚಿತ್ರಕ್ಕೆ ಒಂದು ಕವನ, ಹಾಡಾಗಿ ರೆಕಾರ್ಡ್ ಆಗಲಿ" ಪವಿತ್ರ ಅದನ್ನು ಮಡಚಿ ಕವರಿನಲ್ಲಿ ಹಾಕಿ ತನ್ನ ಪರ್ಸಿನೊಳಗಿಟ್ಟುಕೊಂಡಳು. ಅದೇಕೋ ಅವಳ ಮನಸ್ಸು ಗರಿಗೆದರಿ ಆಗಸದತ್ತ ಹಾರಿತು. ಮಾಲತಮ್ಮನಿಗೆ ಮಗಳಲ್ಲಿ ಕಂಡ ಬದಲಾವಣೆಯಿಂದ ಏನೋ ಆತಂಕ ಆದರೆ ಅದನ್ನು ವ್ಯಕ್ತಪಡಿಸಿದರೆ ಅವಳು ನೊಂದುಕೊಂಡಾಳೆಂಬ ಹೆದರಿಕೆ ಸಮಯವರಿತು ಹೇಳಬೇಕು. ಅವಳಿಗೆ ಬರುವ ನೂರಾರು ಕಾಗದದಲ್ಲಿ ಏನೆಲ್ಲಾ ಬರೆದಿರುತ್ತಾರೆ. ಆದರೆ ಅದನ್ನೆಲ್ಲಾ ಅವಳು ಓದಿದಾಗ ನಕ್ಕು ಅತ್ತ ಎಸೆಯುವುದಿಲ್ಲವೇ ? ಕೆಲವನ್ನು ಅತಿ ಎಚ್ಚರಿಕೆಯಿಂದೆತ್ತಿ ಇಟ್ಟುಕೊಳ್ಳುವುದಿಲ್ಲವೇ ? ಒಂದು ಕವನ ಬರೆದರೇನಾಯಿತು? ಅವನೆಲ್ಲಿ ಇವಳೆಲ್ಲಿ ? ತಮಗೆ ತಾವೇ ಸಮಾಧಾನ ಮಾಡಿಕೊಂಡರು.

ಅಂದು ಸ್ಟುಡಿಯೋದಲ್ಲಿ ಎಲ್ಲರೊಡನೆ ಬೆರೆತು ನಗುತ್ತಾ,ಹರಟುತ್ತಾ ಕುಣಿಯುತ್ತಿದ್ದ ಅವಳನ್ನು ಕಂಡಾಗ ಎಲ್ಲರಿಗೂ ಅಚ್ಚರಿಯೇ.

ಆಗಲೇ ಹೇಳಿ ತಿಳಿಸಿದ್ದರಿಂದ ರಾತ್ರಿ ಅವಳು ಹಿಂತಿರುಗಿದಾಗ ನವಗ್ರಹ ಶಾಂತಿ ಪೂಜೆಗಾಗಿ ದೇವರಾಜ್ ಏರ್ಪಾಡು ನಡೆಸಿದ್ದರು. ಕಣ್ಣುಗಳಲ್ಲಿ ಹೊಸ ಮಿಂಚು,ನಡೆ ನುಡಿಯಲ್ಲಿ ಉಕ್ಕುವ ಉತ್ಸಾಹ ಕಂಡು ದೇವರಾಜ್ ಮಾಲತಮ್ಮನನ್ನು ಕೇಳಿದರು.

'ಈಚೆಗೆ ಅವಳು ಹಾಗೆಯೇ. ಒಂದೊಂದು ಸಲ ಹೀಗೆ ನಗ್ತಾ

ನಗ್ತಾ ಇರ್ತ್ತಾಳೆ. ಇನ್ನೊಂದ್ಸಲ ಪ್ರಪಂಚಾನೇ ತಲೆಕೆಳಗಾಯಿತೆನ್ನುವ ಹಾಗೆ ಒದ್ದಾಡುತ್ತಾಳೆ' ಮಾಲತಮ್ಮ ಹೇಳಿದರು. 'ಅಭಿನಯಿಸಿ, ಅಭಿನಯಿಸಿ ಭಾವುಕಳಾಗ್ತ ಇದ್ದಾಳೇಂತ ಕಾಣಿಸುತ್ತೆ.'

ದೇವರಾಜ್ ಪವಿತ್ರಳತ್ತ ನೋಡಿದರು. ಅವರ ಕಣ್ಣಿಗೇಕೋ ಅವಳು ಹೊಸಬಳಂತೆ ಕಂಡು ಬಂದಳು.

'ಪೂಜೆಯ ಹೊತ್ತಿಗೆ ವಸಂತ್‌ಕುಮಾರನನ್ನು ಬರಹೇಳಿದ್ದೇನೆ. ಅವರ ಕತೆ ತೊಗೋತಾ ಇದ್ದೀವಿ. ಅದಕ್ಕೂ ಪೂಜೆಯಾಗಲಿ. ಆ ಪುಸ್ತಕಾನೂ ಇಟ್ಟು ಪೂಜೆ ಮಾಡಿಬಿಡೋಣ.' ದೇವರಾಜ್ ಹೇಳಿದಾಗ ಪವಿತ್ರಳಿಗೆ ಎದೆ ಬಡಿತ ಇಮ್ಮಡಿಯಾಯಿತು.

'ಅಮ್ಮಾ ನಾನು ಪೂಜೆಗೆ ಮುಂಚೆ ಸ್ನಾನಮಾಡಿ ಬರ್ತೀನಿ ತಾಳಮ್ಮಾ' ಒಳಗೋಡಿದಳು. ತಲೆಗೆ ಸ್ನಾನ ಮಾಡಿ ಬಿಳಿಯ ಸಿಲ್ಕಿನ ಸೀರೆ, ಬಿಳಿಯ ಬ್ಲೌಸ್ ಹಾಕಿಕೊಂಡು ಶುಭ್ರವಾದ ಅಲಂಕಾರರಹಿತ ಮುಖದಲ್ಲಿ ಹಣೆಯಲ್ಲಿನ ದುಂಡು ಕುಂಕುಮವೊಂದು ಇಟ್ಟು, ಅವಳು ಹೊರಬಂದಾಗ ರೋಜಿ, ಮಾಲತಮ್ಮ ದೇವರಾಜ್ ಎಲ್ಲರೂ ಅವಳತ್ತ ನೋಡಿದರು. 'ತುಷಾರಧವಳದಂತೆ ನೀ ಕಂಡೆನಗೆ' ಎಂದು ವಸಂತಕುಮಾರ್ ಬರೆದಿರಲಿಲ್ಲವೇ. ತನ್ನನ್ನು ಸುಗಂಧರಾಜದ ಅರೆಬಿರಿದ ಮೊಗ್ಗಿಗೇ ಹೋಲಿಸಲಿಲ್ಲವೇ ?. ಬಿಳಿಯ ಈ ವಸ್ತ್ರದಲ್ಲಿ ತಾನು ಅವನಿಗೆ ಹೇಗೆ ಕಾಣಿಸಬಹುದು. ಪವಿತ್ರಳ ಮನ ಹುಚ್ಚೆದ್ದು ಕುಣಿಯಿತು. ಪೂಜೆಗೆ ಕುಳಿತಾಗ ಅವಳ ಕಣ್ಣೆಲ್ಲಾ ಹೊರಬಾಗಿಲತ್ತಲೇ ಇತ್ತು. ಅರ್ಧ ಪೂಜೆ ಮುಗಿಯುವ ವೇಳೆಗೆ ಅವನು ಬಂದಾಗ ಅವಳಿಗೆ ಉತ್ಕಂಠತೆಯಿಂದ ಕಣ್ಣು ತುಂಬಿ ಬಂದಿತು. ಗಂಟಲುಬ್ಬಿ ಬಂದಿತು. ಅವನು ಬಾಗಿಲಲ್ಲೇ ನಿಂತು ಅವಳತ್ತ ನೋಡಿ ಕಣ್ಣಿನಲ್ಲೇ ಆರಾಧನಾಭಾವದಿಂದ ತನ್ನನ್ನರ್ಪಿಸಿಕೊಂಡಂತೆ ಭಾಸವಾಯಿತು ಅವಳಿಗೆ. ಅವಳು ಹಿಂದಿನ ದಿನದಂತೆ ನೋಟ ಬದಲಿಸದೇ ಅವನ ನೋಟವನ್ನು ಎದುರಿಸಿದಳು. ಅವನತ್ತ ಮೋಹಕ ನಗೆ ಬೀರಿದಳು.

'ನಿಮ್ಮ ಕವನ, ನೀವು ಕಳುಹಿಸಿದ ಹೂವು ಎರಡೂ ನನಗೆ ತುಂಬಾ ಮೆಚ್ಚಿಕೆಯಾಯಿತು.' ಅವಳು ಹೇಳಿದಾಗ ಅವನ ಮುಖ ಸಂತಸದಿಂದ ಅರಳಿತು.

'ನಾನು ಧನ್ಯನಾದೆ' ಅವಳಿಗೆ ಕೈಮುಗಿದ.

ಅವರಿಬ್ಬರ ನಡುವಣ ಮಾತು ಎಲ್ಲರಿಗೂ ಒಗಟಾಗಿತ್ತು. ಅವನೂ

ಅವಳ ಇತರ ಅಭಿಮಾನಿಗಳಲ್ಲೊಬ್ಬನೆಂದು ದೇವರಾಜ್ ಭಾವಿಸಿದರು.

'ಏನು, ನಮ್ಮ ಹುಡುಗಿಗೆ ಕವನ ಬರೆದಿದ್ದೀರಾ ನನಗೆ ತೋರಿಸಲೇ ಇಲ್ಲ' ಎಂದಾಗ ಮಾಲತಮ್ಮ ಮಧ್ಯೆ ಬಾಯಿಹಾಕಿದರು.

"ನಾನೂ ನೋಡಿದೆ. ಕವನ ಚೆನ್ನಾಗಿದೆ. ನಿಮ್ಮ ಚಿತ್ರಕ್ಕೆ ಹಾಡಾಗಿ ಹಾಕಿಕೊಳ್ಳಬಹುದು ಎಂದಳು. ನಿಮಗೆ ಆಮೇಲೆ ತೋರಿಸ ಬೇಕೆಂದೇ ಒಳಗಿಟ್ಟಿದ್ದಾಳೆ. ಅವಳಿಗೆ ಸಂಗಧರಾಜ ಹೂವೆಂದರೆ ಬಹಳ ಇಷ್ಟ. ಅದನ್ನೂ ಫ್ಲವರ್‌ವೇಸಿನಲ್ಲಿ ತನ್ನ ರೂಮಿನಲ್ಲಿಟ್ಟುಕೊಂಡಿದ್ದಾಳೆ.'

ವಸಂತಕುಮಾರ್ ಅವಳತ್ತ ಮಿಂಚುನೋಟ ಬೀರಿದ. ಅವನು ಹಾಕಿದ್ದ ಬಿಳಿಯ ಪಾಯಿಜಾಮ ಜುಬ್ಬ, ಹಣೆಯ ಮಧ್ಯದಲ್ಲಿದ್ದ ಕುಂಕುಮ ಕೆದರಿದ್ದ ತಲೆಗೂದಲು, ಮುಖದಲ್ಲಿದ್ದ ಮಾದಕ ನಗು ಕಂಡು ಹುಚ್ಚಾದಳು ಅವನು ಅವಳತ್ತ ಕೈ ನೀಡಿದ. 'ನಿಮಗಾಗಿ ಅಮ್ಮನವರ ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿಸಿಕೊಂಡು ಬಂದೆ. ಪ್ರಸಾದ ತೆಗೆದುಕೊಳ್ಳಿ.' ಅವಳ ಬೆವೆತು ಕೆಂಪಾಗಿ, ಸಣ್ಣಗೆ ನಡುಗುತ್ತಿದ್ದ ಅಂಗೈ ಯೊಳಗೆ ಒಂದಿಷ್ಟು ಅರೆಒಣಗಿದ ಹೂವು, ಕುಂಕುಮ ಹಾಕಿದಾಗ ಅವನ ಹಿಡಿ ಅವಳ ಅಂಗೈಯಲ್ಲಿ ಬೆಚ್ಚಗೆ ಅರೆಕ್ಷಣವಿತ್ತು. ಅವನ ಕಣ್ಣುಗಳು ಅವಳ ದೃಷ್ಟಿಯಲ್ಲಿ ಬೆಸೆದವು.

'ದೇವಿ ನಿಮ್ಮನ್ನು ಸದಾ ಹೀಗೇ ಇಟ್ಟಿರಲಿ !'

ಅವನಿಗುತ್ತರ ಕೊಡುವ ಚೈತನ್ಯ ಪವಿತ್ರಳಲ್ಲಿರಲಿಲ್ಲ.

'ಸಾಹಿತ್ಯ ಅಂದರೆ ನಮ್ಮ ಪಾಪೂಗೆ ತುಂಬಾ ಇಷ್ಟ. ನೀವು ಕವನ ಬರೆದು ಕಳುಹಿಸಿದ ಮೇಲೆ ಬಹಳ ಖುಷಿಯಾಗಿದ್ದಾಳೆ' ಮಾಲತಮ್ಮ ವಸಂತಕುಮಾರ್‌ಗೆ ಹೇಳಿದಾಗ ಅವನು ನಕ್ಕುಬಿಟ್ಟ.

'ಅವರು ಹೀಗೆ ಸಂತೋಷವಾಗಿರುವ ಹಾಗಿದ್ದರೆ ನಾನು ಪ್ರತಿದಿನವೂ ಅವರಿಗೊಂದು ಕವನ ಬರೆದು ಕಳುಹಿಸಬಲ್ಲೆ.'

'ಅದೆಲ್ಲಾ ಆಮೇಲಿರಲಿ ಸಾಹಿತಿಗಳೇ. ಈಗ ಪೂಜೆ ಮುಂದುವರಿ ಯಲಿ ಬಂದು ಕುಳಿತುಕೊಳ್ಳಿ ಇಲ್ಲಿ.' ದೇವರಾಜ್ ಹೇಳಿದಾಗ ಅವರ ಬಳಿ ಹೋಗಿ ಕುಳಿತುಕೊಂಡ. ಅವನಿಗೆ ಪವಿತ್ರಳ ಮುಖದ ಒಂದು ಭಾಗ ಮಾತ್ರ ಕಾಣುತ್ತಿತ್ತು.

ನವಗ್ರಹ ಪೂಜೆಯಲ್ಲಿ ಮನಸ್ಸಿಡದಿದ್ದವರು ಇಬ್ಬರೇ, ಪವಿತ್ರ ಮತ್ತು ವಸಂತಕುಮಾರ್. ಇಬ್ಬರಲ್ಲೂ ಅದೇನೋ ಆಕರ್ಷಣೆ. ಯಾವುದೋ

ಮಧುರ ಬಂಧನದಲ್ಲಿ ಅವರಿಬ್ಬರ ಮನಸ್ಸುಗಳು ಬಂಧಿತವಾಗಿದ್ದವು. ತೀರ್ಥ, ಪ್ರಸಾದ ತೆಗೆದುಕೊಂಡ ನಂತರ ವಸಂತಕುಮಾರ್ ಹೊರಟಾಗ ಪವಿತ್ರಳಿಗೇಕೋ ಅವನನ್ನು ತಡೆಹಿಡಿದು ನಿಲ್ಲಿಸಿಕೊಳ್ಳುವಾಸೆ. ಅವನೂ ಅರೆಮನಸ್ಸಿನಿಂದಲೇ ಹೊರಹೋಗಿದ್ದ.

ಮಾಲತಮ್ಮ ಬಹಳ ಹೊತ್ತಿನಿಂದ ಕೊರೆಯುತ್ತಿದ್ದ ಸಂದೇಹ ನಿವಾರಿಸಿಕೊಂಡರು

'ಆ ವಸಂತಕುಮಾರ್ ನಮ್ಮ ಮನೆಗೇಕೆ ಬರಬೇಕಿತ್ತು. ಅವನು ಹೇಗೋ ಏನೋ.'

ದೇವರಾಜ್ ಆತಂಕ ನಿವಾರಿಸಿದ್ದರು.

'ಪಾಪ, ಬಹಳ ಒಳ್ಳೆಯ ಹುಡುಗ. ಬಹಳ ಬಿಚ್ಚು ಮನಸ್ಸಿನವನು. ನಮ್ಮ ಪವಿತ್ರನಿಗೆ ಅವನ ಸಾಹಿತ್ಯವೆಂದರೇಕೋ ಬಹಳ ಹಿಡಿಸಿದೆ. ಅವಳಿಗೂ ಒಂದು ಬಗೆಯ ಮನೋರಂಜನೆಯಿರಲಿ. ಅವನು ಬಂದರೇನು ಮಾಡಿಯಾನು. ಮಾತನಾಡುತ್ತಾ ಕುಳಿತುಕೊಳ್ಳುತ್ತಾನೆ, ಕವನಗಳನ್ನು ಬರೆದಾನು, ಹೂವು ಕಳಿಸಿಯಾನು. ಇನ್ನೇನು ಮಾಡಲು ಸಾಧ್ಯ ? ನಾಳೆ ಯಿಂದ ಅವನು ಇಲ್ಲೇ ಬಂದು ಕುಳಿತು ಧನಂಜಯರೊಂದಿಗೆ ಸ್ಕ್ರೀನ್ ಪ್ಲೇ ಬರೆಯೋಕೆ ಸಹಾಯ ಮಾಡಬೇಕು. ಹೀಗೇ ಅವರೊಂದಿಗೆ ಪವಿತ್ರಾಳೂ ಕುಳಿತು ಡಿಸ್ಕಸ್ ಮಾಡಲಿ ಬರೀ ಪಾತ್ರಾಭಿನಯ ಮಾತ್ರ ಸಾಲದು. ಇದೆಲ್ಲಾ ತಿಳಿದಿರಲಿ. ಒಂದಲ್ಲ ಒಂದು ದಿನ ಅವಳೂ ಯಾವುದಾದರೂ ಚಿತ್ರ ತಯಾರಿಸಿಯಾಳು ನಿರ್ದೇಶಿಸಿಯಾಳು.'

ಮಾಲತಮ್ಮನಿಗೆ ಸಂತಸವಾಯಿತು. ಹೌದು ತನಗೇಕೆ ಇದರ ಬಗ್ಗೆ ಹೊಳೆಯಲಿಲ್ಲ.

ಮಾರನೆಯ ದಿನ ಪವಿತ್ರ ಷೂಟಿಂಗ್, ಡಬ್ಬಿಂಗ್ ಮುಗಿಸಿ ಬರುವ ವೇಳೆಗೆ ದೇವರಾಜ್, ಧನಂಜಯ, ವಸಂತಕುಮಾರ್, ಆಗಲೇ ಸ್ಕ್ರಿಪ್ಟ್ ಡಿಸ್ಕಷನ್‌ಗೆ ಕುಳಿತಾಗಿತ್ತು. ಧನಂಜಯರಿಗೆ ಬಾಟಲಿಲ್ಲದೇ ತಲೆ ಓಡುತ್ತಿರಲಿಲ್ಲ. ಎಂದೂ ದೇವರಾಜ್ ಪವಿತ್ರಳೆದುರಾಗಲೀ, ಮಾಲತಮ್ಮನೆದುರಾಗಲೀ ಮಧ್ಯ ಮುಟ್ಟಿರಲಿಲ್ಲ. ಎಲ್ಲಾ ಮುಗಿಸಿಕೊಂಡೇ ಬರುತ್ತಿದ್ದುದು. ತಮ್ಮ ಮನೆಯಲ್ಲಿ ಕುಳಿತು ವ್ಯವಹರಿಸಲು ಮನೆಯ ಸಂದರ್ಭ ಚೆನ್ನಾಗಿರಲಿಲ್ಲ. ಹೋಟೆಲೊಂದರಲ್ಲಿ ಕುಳಿತು ಡಿಸ್ಕಸ್ ಮಾಡಲು ಅವರಿಗೆ ಕೊಂಚ ಹೆದರಿಕೆಯಾಗಿತ್ತು. ಒಮ್ಮೆ ಧನಂಜಯರನ್ನು ಹೋಟೆಲೊಂದರಲ್ಲಿ ಕೂಡಿಸಿ

ಕೊಂಡು ಮಾತನಾಡಲು ತೊಡಗಿದಾಗ ಕೈ ಖಾಲಿಯಾಗಿತ್ತು. ಕುಡಿಯುವುದೊಂದೇ ಆಗಿತ್ತು. ಕಥೆಯ ಕಾಲು ಭಾಗವೂ ವಿವೇಚಿಸಲು ವಿಶ್ಲೇಷಿಸಲು, ಆಗಿರಲಿಲ್ಲ. ಪವಿತ್ರಳ ಮನೆಯೆಂದರೆ, ಅವಳ ಮುಂದೆ, ಅವಳ ತಾಯಿಯ ಮುಂದೆ ಅವರು ಹೆಚ್ಚು ಮಿತಿ ಮೀರಿ ಹೋಗದಿರಲೆಂದೇ ಇಲ್ಲಿಗೇ ಕರೆ ತಂದಿದ್ದು. ಮಾಲತಮ್ಮ ಅದೇ ತಾನೇ ಸ್ಟುಡಿಯೋದಿಂದ ಹಿಂತಿರುಗಿದ್ದರು. ಪವಿತ್ರ ಬೇರೊಂದು ಕಾರಿನಲ್ಲಿ ಬರುವವಳಿದ್ದಳು.

ಒಳಗಿದ್ದ ಶ್ಯಾಮ್ ಧನಂಜಯ ಕುಡಿಯುತ್ತಿದ್ದುದನ್ನು ಕಂಡು ಸಿಡಿಮಿಡಿಗೊಂಡ.

'ಏನಮ್ಮಾ ಇದು, ಇವ್ರು ಇಲ್ಲಿ ಬಂದು ಕುಡ್ಯೋಕೆ ಶುರುಮಾಡ್ದ. ಇವತ್ತು ಡ್ರಿಂಕ್ಸ್ ನಾಳೆ ಮತ್ತೊಂದು. ನಮ್ಮ ಮನೆ ಹೆಸರು, ಪವಿತ್ರನ ಹೆಸರು ಕೆಡೋಲ್ವಾ ?'

ಮಾಧು ಕಣ್ಣು ಕೆಂಪಗೆ ಮಾಡಿಕೊಂಡ

'ಇಷ್ಟು ದಿನವಾಯಿತು, ನಮ್ಮ ಮನೇಲಿ ನಾವೇ ರೂಮಿನ ಬಾಗಿಲು ಹಾಕಿಕೊಂಡು ಕುಡಿಯೋಲ್ಲ. ಇವೆರಲ್ಲಾ ಇಲ್ಲಿ ಮೀಟಿಂಗ್ ಮಾಡ್ಕೊಂಡು ಇದ್ದು ಪ್ರಾರಂಭಿಸಿಬಿಟ್ರಾ ? ನಮ್ಮ ಮನೆ ಉದ್ಧಾರ ಆಯ್ತು. ನೀನ್ಯಾಕಮ್ಮಾ ಇಲ್ಲಿ ಸೇರಿಸ್ಕೊಂಡೆ. ಆ ಮುದ್ಕ ಹೋಟೆಲ್ನಲ್ಲಿ ಕರ್ಕೊಂಡು ಹೋಗಿ ಆತಿಥ್ಯ ಮಾಡ್ಬಾರ್ದಿತ್ತಾ ? ರೋಜಿ, ಲಲ್ಲೀ ಇನೂ ಮದ್ವೆ ಆಗೋರು. ಪುಟ್ಟಿ ಬೇರೆ ಇದ್ದಾಳೆ ಕಿಟ್ಟು ಇದ್ನೆಲ್ಲಾ ನೋಡ್ಕೋಬಾ ? ನಾಳೆಯಿಂದ ಇಲ್ಲಿ ಸೇರಿಸ್ಬೇಡಾ. ನೀನು ಹೇಳದಿದ್ರೆ ನಾನೇ ಹೇಳ್ಬೇಕಾಗುತ್ತೆ.'

ಮಾಲತಮ್ಮನಿಗೆ ಅದು ಸಂಕಟಕ್ಕಿಟ್ಟುಕೊಂಡಿತು. ಡ್ರಾಯಿಂಗ್ ರೂಮಿನಲ್ಲಿ ಕುಳಿತು ಅವರ ಪಾಡಿಗೆ ಅವರು ಕುಡಿಯುತ್ತಾ, ಸಿಗರೇಟು ಸೇದುತ್ತಾ ಮಾತನಾಡುತ್ತಿದ್ದರು. ತಾವು ದೃಷ್ಟಿ ಹರಿಸಿರಲಿಲ್ಲ. ಆದರೆ ಮಾಧು, ಶ್ಯಾಮ್ ಹೇಳುವುದರಲ್ಲೂ ನಿಜವಿತ್ತು. ಪವಿತ್ರ ಬರುವ ವೇಳೆಗೆ ಧನಂಜಯ ಆಗಲೇ ರಂಗೇರಿದ್ದರು. ವಸಂತ್‌ಕುಮಾರ್ ಇವೆಲ್ಲಕ್ಕೂ ಹೊಸಬ. ಬರಿಯ ಮೌನಪ್ರೇಕ್ಷಕ ಮಾತ್ರ. ಪವಿತ್ರಳನ್ನು ಕಂಡ ಕೂಡಲೇ ಧನಂಜಯರವರು ಎದ್ದು ಅವಳನ್ನು ಸ್ವಾಗತಿಸಲು ಹೋದರು. ಅವಳ ಭುಜದ ಸುತ್ತ ಕೈಹಾಕಿ 'ಬಾ ಪವಿತ್ರ, ನೀವು ಬಂದುದು ನಮಗೆ ಸ್ಫೂರ್ತಿ ಸಿಕ್ಕಿದಂತೆ. ಬಾ ಕೂತ್ಕೋ' ಎಂದಾಗ ಪವಿತ್ರಳಿಗೆ ವಿಸ್ಕಿಯ ವಾಸನೆ

ಮೂಗಿಗೆ ಬಡಿಯಿತು. ಮುಖದಲ್ಲಿ ಭಾವನೆಯನ್ನೇನೂ ತೋರದೇ ಉಸಿರು ಬಿಗಿಹಿಡಿದು ಅವರ ಕೈಕೊಸರಿಕೊಳ್ಳಲು ಯತ್ನಿಸಿ ವಿಫಲಳಾದಳು. 'ಯಾಕೆ ಪವಿತ್ರಾ, ನಾನು ಬೇರೆಯವನೇ ? ಸಂಕೋಚವೇಕೆ ? ನೀವು ಕಣ್ಣೆದುರಿಗಿದ್ದರೆ ನಮಗೆಲ್ಲಾ ಸ್ಫೂರ್ತಿ' ಕೊಂಚ ತೊದಲಿ ಹೇಳಿದಾಗ ದೇವರಾಜ್‌ಗೆ ತಾವು ಮಾಡಿದ ತಪ್ಪು ತಿಳಿಯಿತು. ವಸಂತ್ ಕೋಪದಿಂದ ಹಲ್ಲುಮುಡಿ ಕಡಿದ. ದೇವರಾಜ್ ಎದ್ದು ಹೋಗಿ ಧನಂಜಯರ ಹತ್ತಿರ ಪವಿತ್ರಳನ್ನು ಉಪಾಯವಾಗಿ ಬಿಡಿಸಿಕೊಳ್ಳಲು ಯತ್ನಿಸಿದರು.

'ಬನ್ನಿ ಧನಂಜಯ, ಪವಿತ್ರ ಈಗ್ತಾನೇ ಶೂಟಿಂಗಿನಿಂದ ಬರ್‍ತಾ ಇದ್ದಾಳೆ. ಮೇಕಪ್ಪೆಲ್ಲಾ ತೆಗೆದು ಬರ್‍ತಾಳೆ. ನಾವು ನಮ್ಮ ಕೆಲಸ ಮುಗಿಸಿಬಿಡೋಣ ...'

'ಅವರಿದ್ರೆ ಚೆನ್ನ, ಅವರಿರಲೇಬೇಕು ಎದುರಿಗೆ, ಆಮೇಲೆ ಎಲ್ಲಾ ಮಾತು, ಕತೆ' ಧನಂಜಯ ಕೆಂಪು ಕಣ್ಣುಗಳನ್ನು ತೇಲಿಸುತ್ತಾ ಹೇಳಿದರು.

ಮಾಧು, ಶ್ಯಾಮ್, ಮಾಲತಮ್ಮ ರೂಮಿನ ಬಾಗಿಲಿನಿಂದ ನೋಡುತ್ತಲೇ ಇದ್ದರು. ದೇವರಾಜ್ ಧನಂಜಯರ ಮುಂದೆ ನಿಂತಾಗ ಪವಿತ್ರ ಕೊಸರಿಕೊಳ್ಳಲು ಯತ್ನಿಸಿದಾಗ ಧನಂಜಯರ ಕೆಂಗಣ್ಣು ದೇವರಾಜರ ಮೇಲೆ ಬಿತ್ತು. ಒರಟಾಗಿ ದೇವರಾಜರನ್ನು ಆತ್ತ ಸರಿಸಿದರು.

'ಹೋಗಯ್ಯಾ ನೀನು. ನಮ್ಮಿಬ್ಬರ ಮಧ್ಯೆ ನೀನ್ಯಾಕೆ ಬರ್‍ತೀ ?' ಅವರು ಕಾರ್ಯಮತ್ತರಾಗುವಷ್ಟರಲ್ಲಿ ಶ್ಯಾಮ್, ಮಾಧು ಧಾವಿಸಿ ಬಂದು ಬಲವಾಗಿ ಧನಂಜಯರನ್ನು ದೂರಮಾಡಿ ಅನಂತರ ಅವರ ಶರಟಿನ ಕಾಲರನ್ನು ಹಿಡಿದರು.

'ಹೋಗೋ ಹೋಗೋ, ನಿನ್ನ ಹೀರೋಯಿನ್ನಾ ಅವಳು ತೋರಿಸ್ತೀನಿ ? ಒಳ್ಳೆ ಮಾತ್ನಲ್ಲಿ ಗಾಡಿ ಬಿಡು ಇಲ್ಲಿಂದ, ಇಲ್ದಿದ್ರೆ ಕತ್ತು ಹಿಡಿದು ನೂಕಬೇಕಾಗುತ್ತೆ ನೋಡು !'

ಪವಿತ್ರ ಮೊದಲೇ ಸಾಕಾಗಿ ಬಂದಿದ್ದಳು. ಇದೆಲ್ಲಾ ಕಂಡು ಅವಳಿಗೆ ತಡೆಯದಾಯಿತು. ಬೆಚ್ಚಿ ಬೆದರಿ ಹಾಗೆಯೇ ನಿಂತಿದ್ದಳು.

'ನೀವ್ಯಾರೋ ನನ್ನ ಕತ್ತು ಹಿಡಿದು ನೂಕೋರು ? ಎಲ್ಲಾ ದೇವರಾಜ್‌ನ ಮಸಲತ್ತಾ ? ಪವಿತ್ರನ್ನ ಇಟ್ಕೊಂಡಿರೋದು ನಂಗೊತ್ತಿಲ್ವಾ ?' ಧನಂಜಯ ಹೇಳಿದಾಗ ವಸಂತಕುಮಾರ್ ಹಿಂಗೈಯಿಂದ ತುಟಿಯುಜ್ಜಿಕೊಂಡು ಅವರತ್ತ ಧಾವಿಸಿದ.

'ಏಯ್ ಹುಷಾರು, ನಾಲಿಗೆ ಬಿಗಿ ಹಿಡಿ. ಇಲ್ಲ ನಾಲಿಗೆ ಕತ್ತರಿಸಿ ಹಾಕಿಬಿಟ್ಟೇನೂ ?'

ಪವಿತ್ರ ನಡುಗಿದಳು. ಕಣ್ಣುಗಳಲ್ಲಿ ಕಂಬನಿಯುಕ್ಕಿತು. ಶ್ಯಾಮು, ಮಾಧೂ ವಸಂತಕುಮಾರ್ ಮೂವರೂ ಬಿಸಿರಕ್ತದ ಯುವಕರು. ಬಲ ವಂತದಿಂದ ಧನಂಜಯರನ್ನು ಹೊರಗೆ ಕಳುಹಿಸಿ, ಕಾರು ಹತ್ತಿಸಿ ಮನೆ ತಲುಪಿಸುವಂತೆ ಡ್ರೈವರ್‌ಗೆ ಹೇಳಿ ಬರುವಷ್ಟರಲ್ಲಿ ಪವಿತ್ರ ರೂಮಿ ನೊಳಗೆ ಧಾವಿಸಿ ಮಂಚದ ಮೇಲೆ ಮಲಗಿ ಬಿಕ್ಕುತ್ತಿದ್ದಳು.

ದೇವರಾಜ್ ದಿಗ್ಮೂಢರಾಗಿದ್ದರು. ಮಾಧು ಅವರೆದುರು ಬಂದು ನಿಂತ.

'ಏನಿದೆಲ್ಲಾ. ನಿಮಗೆ ಇಷ್ಟು ವಯಸ್ಸಾಯಿತು. ಅಷ್ಟೂ ತಿಳೀ ಬೇಡ್ವಾ ? ಅವನ್ನ ಯಾಕೆ ಕರ್ಕ್ೊಂಡ್ಬಂದ್ರಿ ? ಇದೇನು ಮನೇನೋ ಸೂಳೆ ಗೇರಿನೋ ? ಬೇಕಾದ್ರೆ ನಿಮ್ಮ ಮನೆಗೆ ಕರ್ಕೊಂಡೋಗ್ರೀ, ನಮ್ಮ ಮನೇಲಿ ಬೆಳೆದ ಹೆಣ್ಣು ಮಕ್ಕಳಿದ್ದಾರೆ. ಮರ್ಯಾದೆ ಬೇಡ್ವಾ ? ನಮ್ಮ ಪಾಪೂ ತಾರೆ ಯಾಗಿರ್ಬೋದೂ ಆದ್ರೆ ಆ ಧನಂಜಯರು ಅನ್ಕ್ೊಂಡಿರೋಷ್ಟು ಕೀಳು ಮಟ್ಟಕ್ಕಿಳಿದಿಲ್ಲ. ನಾವು ತಡೆದು ತಾಳ್ಮೆಯಿದ್ದಷ್ಟೂ ನಿಮ್ಮದು ಅತಿ ಯಾಯಿತು '

ಶ್ಯಾಮ್, ವಸಂತ್‌ಕುಮಾರ್ ಅವನನ್ನು ತಡೆಯಲು ಯತ್ನಿಸಿದರು.

'ಅವರನ್ಯಾಕೆ ಅನ್ತೀಕೂ ? ಇಲ್ಲಿ ಸೇರೋಕೆ ಅನುಮತಿಕೊಟ್ಟ ಅಮ್ಮನನ್ನು ಬೈಯಲಿ' ಶ್ಯಾಮ್ ಹೇಳಲು ಯತ್ನಿಸಿದ.

'ಆಯಿತಲ್ಲಾ ಬಿಡಿ. ಆದದ್ದು ಮರೆತುಬಿಡೋಣ, ಆ ಮಾತು ಸಾಕು' ಎಂದು ಹೇಳಿದ.

ಆದರೆ ಮಾಧು ಕ್ರೋಧೋನ್ಮತ್ತನಾಗಿದ್ದ. ಅದಕ್ಕೆ ಕಾರಣವೂ ಇತ್ತು. ಅವನ ಉದ್ಯಮಕ್ಕೆ ಮತ್ತೆ ಇಪ್ಪತ್ತೈದು ಸಾವಿರ ರೂಗಳು ಬೇಕಿತ್ತು ತಾಯಿಯ ಬಳಿ ಕೇಳಿದ್ದ. ಆದರೆ ಅವರಿಗೂ ರೋಜಿಯ ಮದುವೆಯ ಖರ್ಚಿತ್ತು. ಪವಿತ್ರಳಂತಹ ತಾರೆಯ ಅಕ್ಕನ ಮದುವೆಯೆಂದರೆ ಸಾಧಾರಣ ಮದುವೆಯಾಗಲು ಸಾಧ್ಯವೇ ? ಎಲ್ಲರನ್ನು ಕರೆಯಬೇಕು. ವಿಜೃಂಭಣೆ ಯಿಂದ ಮಾಡಬೇಕು. ಪವಿತ್ರಳಿಗೂ ಸಾಕಷ್ಟು ಪ್ರಚಾರ ಸಿಗಬೇಕೆಂದು ಏನೆಲ್ಲಾ ಯೋಜನೆ ಹಾಕಿಕೊಂಡಿದ್ದರು. ಕೂಡಿಟ್ಟಿದ್ದ ಹಣದಲ್ಲಿ ಇಪ್ಪ ತ್ತೈದು ಸಾವಿರ ಅವನ ಕೈಗಿಟ್ಟುಬಿಟ್ಟರೆ ತನ್ನ ಕೈಗೆ ಹಣ ಸಾಲದೆ ಬಂದರೆ ?

ಪವಿತ್ರನಿಗೆ ಸಲ್ಲಬೇಕಾಗಿದ್ದ ಮೂರು ನಾಲ್ಕು ಚಿತ್ರಗಳ ಹಣ ಇನ್ನೂ ಪೂರ ಬಂದಿರಲಿಲ್ಲ. ಅವನ್ನು ನಂಬಿ ಕುಳಿತರೆ ಆಗುವುದಿಲ್ಲ. ಅವರು ಮಾಧುವಿಗೆ ಹಣ ಕೊಡಲು ನಿರಾಕರಿಸಬಿಟ್ಟಿದ್ದರು. ಅನಂತರ ಪವಿತ್ರಳನ್ನು ದೇವರಾಜ್‌ರವರನ್ನು ಕೇಳಲು ಹೇಳಿದ್ದ ಅವಳು ತಲೆಯಾಡಿಸಿಬಿಟ್ಟಿದ್ದಳು. 'ಈಗಾಗ್ಲೇ ಬೇಕಾದಷ್ಟು ಹಣ ಅಗಲೇ ಕೇಳಿ ತೊಗೊಂಡಾಗಿದೆ. ಯಾವ ಬಾಯಲ್ಲಿ ಕೇಳಲಿ ?' ಎಂದುಬಿಟ್ಟಿದ್ದಳು. ಆ ರೋಷ, ಅವಮಾನ ಒಳಗೇ ಹೊಗೆಯಾಡಿತ್ತು. ಶ್ಯಾಮ್‌ಗೆ ಅವನ ಗೆಳೆಯನೊಬ್ಬ ಸಹಾಯ ಮಾಡಲು ಮುಂದೆ ಬಂದಿದ್ದ.

'ಇಲ್ಲಾ. ಎಲ್ಲ ಇವೊತ್ತೇ ಒಂದು ನಿರ್ಧಾರವಾಗಿಬಿಡಲಿ. ಧನಂಜಯ ಹೇಳಿದ್ದರಲ್ಲಿ ಸುಳ್ಳೇನಿಲ್ಲ' ದೇವರಾಜರತ್ತ ಕುಡಿನೋಟ ಬೀರಿದ. 'ನೀವು ನಮ್ಮ ಪವಿತ್ರಳ ಸಂಬಂಧ ಎಲ್ಲರಿಗೂ ತಿಳಿದು ಹೋಗಿದೆ. ಎಷ್ಟು ದಿನ ಇದೆಲ್ಲಾ ಮುಚ್ಚಿಡೋಕೆ ಸಾಧ್ಯ ? ಈಗ ಇದೆಲ್ಲಾ ಪಬ್ಲಿಕ್ ಆಗಿ ಎಲ್ಲರಿಗೂ ತಿಳೀಲಿ, ಬಹಳ ಚೆನ್ನಾಗಿರುತ್ತೆ. ನಾವೂ ಮರ್ಯಾದೆ ಬಿಟ್ಟು ಎಷ್ಟು ದಿನ ಬಾಳೋದು ? ನೀವು ಈ ಮನೆಗೆ ಬರೋದು ನಿಲ್ಲಿಸ್ಬೇಕೂ. ಇಲ್ದಿದ್ರೆ ಮನೆ ಬಿಟ್ಟು ಹೋಗ್ತೀನಿ. ಯಾವ್ದಾದ್ರೂ ಈಗ್ಲೇ ನಿರ್ಧಾರ ಆಗ್ಲಿ.'

ದೇವರಾಜ್ ಕೆಂಪಗಾದರು. ಮಾಲತಮ್ಮ ಮಾಧುವಿನ ಬಳಿಗೆ ಧಾವಿಸಿದರು.

'ಮಾಧೂ ..'

'ನೀನು ಸುಮ್ನಿರಮ್ಮ, ಮಗಳು ಚೆನ್ನಾಗಿದ್ದಾಳೇಂತ ಸಿನಿಮಾಕ್ಕೆ ಇಳಿಸಿ ಗಂಟು ಮಾಡ್ಕೊಂಡೆ. ಈ ಮುದ್ಕನ್ನ ಹಿಡ್ದು ಮನೆ, ಕಾರು ಮಾಡ್ಕೊಂಡೆ. ನೀನೂ ಒಬ್ಬ ತಾಯೀನಾ ?' ಅವರನ್ನು ಅತ್ತ ತಳ್ಳಿದ. 'ಅವ್ಳು ಈಚೆಗೆ ನಿನ್ನ ದಾರಿ ಹಿಡೀತಾ ಇದ್ದಾಳೆ.'

ಅಳುತ್ತಿದ್ದರೂ ಅವರ ಮಾತು ಕೇಳುತ್ತಿದ್ದ ಪವಿತ್ರಳ ಮೈ ಬೆಂಕಿಯಾಯಿತು. ದೇವರಾಜ್‌ರವರ ಹಣದಿಂದ ಇಷ್ಟು ಮಾತಾಡುವ ಹಕು ಬಂತು ಇವನಿಗೆ. ತಾನು ಸಂಪಾದಿಸುತ್ತಿದ್ದುದನ್ನು ಮೂಗಿನವರೆಗೆ ತಿಂದು ಈ ಧರ್ಮ ಕರ್ಮ ಮಾನ ಮರ್ಯಾದೆ ಇವನಿಗೆ ಈಗ ಬಂತೇ ? ವಸಂತಕುಮಾರನ ಮುಂದೆ ತಮ್ಮ ಮನೆಯಲ್ಲಿನ ಕೆಸರೆಲ್ಲಾ ಚೆಲ್ಲಿದಂತಾಯಿತಲ್ಲಾ ! ಅವನು ತನ್ನನ್ನು ಎಷ್ಟು ಎತ್ತರದಲ್ಲಿರಿಸಿ ಆರಾಧಿಸಿದ್ದ. ಒಂದು ಕ್ಷಣದಲ್ಲಿ ತನ್ನ ಬದುಕೆಲ್ಲಾ ಮಣ್ಣುಪಾಲಾಗಿ ಹೋಯಿತಲ್ಲಾ. ಕಣ್ಣೊರಿಸ

ಕೊಂಡು ಹೊರಗೆ ಬಂದಳು.

'ಅಮ್ಮಾ, ಅವನಿಗೆ ಹೋಗಲು ಹೇಳು. ಇದು ನನ್ನ ಮನೆ. ನಾನು ಸಂಪಾದಿಸಿದ್ದು. ಅವನಿಗಿಲ್ಲಿರೋ ಹಕ್ಕಿಲ್ಲ... ಬೇಕಾದವರನ್ನು ಅವನಿಗೆ ಮರ್ಯಾದೆಕೊಟ್ಟು ಮಾತಾಡಿಸುವುದಕ್ಕೆ ಬರುವವರೆಗೂ ಅವನಿಗೆ ಇಲ್ಲಿ ಸ್ಥಳವಿಲ್ಲಾಂತ ಹೇಳು.

ಮಾಧು ತಂಗಿಯನ್ನು ನುಂಗಿಹಾಕುವ ಹಾಗೆ ನೋಡಿದ.

'ಏಯ್, ಮುಚ್ಚೇ ಬಾಯಿ. ನಿನ್ನ ಆಟ ಎಷ್ಟು ದಿನ ನೋಡ್ತೀನಿ. ನಿನ್ನ ರೂಪು, ಯೌವನ ಇರೋತನ್ಕ, ನಿಂಗೊಂದಿಷ್ಟು ಅದೃಷ್ಟ ಇರೋವರ್ಗೂ ಅಷ್ಟೆ. ನಾನು ನಿನ್ನ ವಿಷಯ ಎಲ್ಲರಿಗೂ ಹೇಳ್ತಾ ಬಂದರೆ ಬೀದಿ ಪಾಲಾಗ್ತೀಯ.. ನಿಂಗೆ ಹಣ, ಅಂತಸ್ತು, ಹೆಸರು ಇದೇಂತ ಸೊಕ್ಕು. ನಾಳೆ ನೋಡ್ತಾ ಇರು... ಚಿಪ್ಪು ಹಿಡ್ಕೋತಿಯಾ ಕೈಲಿ.'

ರೂಮಿನೊಳಗೆ ಹೋದವನೇ ಬಾಗಿಲು ದಢಾರನೇ ಹಾಕಿಕೊಂಡ. ದೇವರಾಜ್ ಯಾವ ಮಾತೂ ಆಡದೆ ದಢದಢನೆ ಹೊರಗೆ ಹೊರಟೇ ಬಿಟ್ಟರು. ಮಾಲತಮ್ಮ ಅವರನ್ನು ಹಿಂಬಾಲಿಸಿ ಹೋಗುವಷ್ಟರಲ್ಲಿ ಅವರು ಕಾರು ಹತ್ತಿ ಹೊರಟೇಹೋದರು.

ಶ್ಯಾಮ್ ಪವಿತ್ರಳತ್ತ ನೋಡಿದ. 'ಪಾಪೂ, ನೀನು ಮಾಧೂಗೆ ಹಾಗೆ ಅನ್ನಬಾರದಾಗಿತ್ತು... ಎಷ್ಟಾದ್ರೂ ಒಡಹುಟ್ಟಿದೋನು. ನಿನ್ನ ಒಳ್ಳೇದಕ್ಕೇ ಅವನು ಅಂದಿದ್ದು ಅಲ್ವಾ? ಅವನನ್ನ ಕ್ಷಮೆ ಕೇಳಿ ಅವನನ್ನ ಹೋಗಬೇಡಾನ್ನೇ, ಹೋಗು.'

ಅವಳು ವಸಂತಕುಮಾರ್‌ನತ್ತ ನೋಡಿದಳು. ಅವನು ಬಾಗಿ ತನ್ನ ಪುಸ್ತಕವನ್ನು ಬ್ಯಾಗಿನಲ್ಲಿಡುತ್ತಿದ್ದ. ಅವಳು ವಿಫಲಳಾದಳು...

'ನಾನು ಕ್ಷಮೆ ಕೇಳೋಲ್ಲ. ಅವನು ಗಂಡಸು, ನಾವು ಸಂಪಾದಿಸೋ ಹಣದಲ್ಲಿ ಯಾಕೆ ಬದುಕಿರಬೇಕು? ಹೋಗಲ್ಲಿ, ಮೈಮುರಿದು ದುಡಿದು ಸಂಪಾದಿಸಲಿ. ಗೊತ್ತಾಗುತ್ತೆ ಹಣದ ಬೆಲೆ. ಅವನು ಚಿಪ್ಪು ಹಿಡಿತಾನೋ, ನಾನು ಹಿಡೀತೀನೋ ನೋಡ್ತೀನಿ' ಕೋಪದೊಂದಿಗೆ ಕಂಬನಿಯೂ ಉಕ್ಕಿ ಹರಿಯಿತು. ವಸಂತನೆದುರು ತನಗೆಂತಹ ಪರಾಭವ ಅವಮಾನ?

ಮಾಧು ರೂಮಿನ ಬಾಗಿಲು ತೆಗೆದು ಬಂದ. ಕೈಯಲ್ಲಿ ಅಗಲೇ ದೊಡ್ಡ ಸೂಟ್‌ಕೇಸ್ ಹಿಡಿದು ಬಂದಿದ್ದ. ತಡೆಯಲು ಬಂದ ಶ್ಯಾಮನನ್ನು ಅತ್ತ ತಳ್ಳಿದ.

'ಅವಳಿಗೆ ಹೇಳು, ಅವಳ ಎಂಜಲು ನನಗೆ ಬೇಡಾಂತ. ಭಿಕ್ಷೆ ಬೇಡಿ ಯಾದ್ರೂ ತಿಂತೀನೀಂತ.'

ರೋಜಿ, ಲಲ್ಲಿ ಓಡಿ ಬಂದರು.

'ಬೇಡಾ ಮಾಧೂ, ಬೇಡಾ.'

ಮಾಲತಮ್ಮ ಮಗನ ಮುಂದೆ ಕಣ್ಣೀರು ಹಾಕಿದರು.

'ಬೇಡ್ರೋ, ಇನ್ನೂ ರೋಜೀ ಮದ್ವೆ ಇದೆ. ದೇವರಾಜ್ ಕೋಪ ಮಾಡ್ಕೊಂಡು ಹೊರಟುಹೋದ್ರು. ನಾಳೆ ಮದ್ವೆ ನಿಂತುಹೋದ್ರೆ ಏನ್ಮಾಡೋದು ತಲೆ ಎತ್ಕೊಂಡು ಹೇಗೋ ತಿರ್ಗಾಡೋದು ? ಹೋಗ್ಬೇಡ್ರೋ ಅವಳ ಮುಖ ನೋಡಿ ಸಮಾಧಾನ ತಂದುಕೋ.'

'ನಿನ್ನ ಮಗಳಿದ್ದಾಳಲ್ಲಾ ಎಲ್ಲಾ ನೋಡ್ಕೋತಾಳೆ. ಅವನಲ್ದಿದ್ರೆ ಇನ್ಯಾರಾದ್ರೂ ಪ್ರೊಡ್ಯೂಸರ್ ತಮ್ಮನನ್ನ ಹುಡುಕಿಕೊಡ್ತಾಳೆ.'

ಮಾಧೂ ಯಾರನ್ನೂ ಲೆಕ್ಕಿಸದೆ ಹೊರಬಾಗಿಲಿನಿಂದ ಹೊರಬಿದ್ದ. ಇನ್ನು ಬೀದಿಗೆ ಹೋಗಿ ತಡೆದರೆ ಅಕ್ಕಪಕ್ಕದವರಿಗೆಲ್ಲಾ ತಿಳಿಯುವುದೆಂದು ಮಾಲತಮ್ಮ ಬೀದಿಯಬಾಗಿಲು ಮುಂದೆ ಮಾಡಿ ಸೆರಗಿನಿಂದ ಕಣ್ಣೀರು ಒರಸಿಕೊಂಡರು. ಅವರ ಕೋಪ ನೋಟ ಪವಿತ್ರಳತ್ತ ತಿರುಗಿತು. ನೀರವ ವಾಗಿ ರೋಧಿಸುತ್ತಿದ್ದ ಅವಳತ್ತ ದುರುದುರು ನೋಡಿದರು.

'ಅಂತೂ ಅಣ್ಣನ್ನ ಅವಮಾನಮಾಡಿ ಅವನ್ನ ಹೊರಕ್ಕೆ ಅಟ್ಟಿದ್ಯಲ್ಲೇ! ಈಗ ತೃಪ್ತಿಯಾಯ್ತೇನೇ ? ಹೋಗಿ ಒಂದ್ಲೋಟ ಹಾಲು ಹುಯ್ಕೋ ಹೊಟ್ಟೇಗೆ. ಏನೋ ತಂಗೀಂತ ಪ್ರೀತಿಯಿಂದ ಹಣ ಕೇಳೋನು. ಅದೂ ಇದೂ ಅನ್ನೋನು. ಅಷ್ಟಕ್ಕೇ ನಿಂಗೆ ಪಿತ್ತ ತಲೆಗೇರ್ಬಿಡ್ತಾ !'

ಪವಿತ್ರ ತಲೆ ತಗ್ಗಿಸಿದಳು.

'ನಾನು ಇಲ್ಲಿಯವರೆಗೆ ದುಡಿದು ಗಳಿಸಿದ್ದು ಎಲ್ಲಾ ನನಗೇ ಇಟ್ಟು ಕೊಂಡಿದ್ದೇನಾ ? ನೀವೆಲ್ಲಾ ನನ್ನ ದುಡಿತವನ್ನು ಹಂಚಿಕೊಂಡು ಹಾಯಾಗಿಲ್ಲವೇ ಈಗ ಎಲ್ಲಾ ತಪ್ಪು ನನ್ನ ಮೇಲೆ ಹೊರಿಸ್ತೀರಾ ? ಬಿಡು, ನಂಗೂ ಪ್ರಪಂಚ ದೊಡ್ಡದಾಗಿದೆ. ನಾನೂ ಹೋಗ್ತೀನಿ.'

ಅವರ ಮಾತುಗಳನ್ನು ತಲೆತಗ್ಗಿಸಿಕೊಂಡು ನಿಂತು ಕೇಳುತ್ತಿದ್ದ ವಸಂತ ಮೆಲ್ಲನೆ ಮುಂದೆ ಬಂದು ಎಲ್ಲರಿಗೂ ಕೈಮುಗಿದ.

'ದಯವಿಟ್ಟು ಯಾರೂ ತಾಳ್ಮೆ ಕಳೆದುಕೊಳ್ಳಬೇಡಿ. ಕೆಲವು ವೇಳೆ ಇಕೆಂತಹ ಟ್ಟ ಘಳಿಗೆಗಳು ಬಂದುಬಿಡುತ್ತೆ. ಇಷ್ಟಕ್ಕೆ ಬಿಟ್ಟು ಬಿಡಿ.'

ಪವಿತ್ರಳ ಬಳಿ ಬಂದು ನಿಂತು ಕ್ಷಣಕಾಲ ಅವಳತ್ತ ನೋಡಿದ.

'ಪವಿತ್ರ, ನೀವು ಹೆಸರಿಗೆ ತಕ್ಕಂತೆ ಪವಿತ್ರಳೆಂದೇ ತಿಳಿದಿದ್ದೇನೆ. ದಯ ವಿಟ್ಟು ದುಡುಕಬೇಡಿ. ನೀವು ಸಾಧಿಸಬೇಕಾದುದು ಬಹಳವಿದೆ ಯೆನ್ನೂ....' ಅಷ್ಟು ಹೇಳಿ ಮುಚ್ಚಿದ್ದ ಬಾಗಿಲು ತೆರೆದುಕೊಂಡು ಹೊರಗೆ ಹೊರಟು ಹೋದ. ಪವಿತ್ರ ಬರಿಗಣ್ಣಿನಿಂದ ಅವನನ್ನು ನೋಡುತ್ತಲೇ ಇದ್ದಳು. ಕಣ್ಣಿನಲ್ಲಿನ ಕಂಬನಿಯೂ ಬತ್ತಿಹೋಗಿತ್ತು.

ಮನೆಯಲ್ಲಿ ಸ್ಮಶಾನ ಮೌನ. ಯಾರಿಗೂ ಊಟ ಬೇಡವಾಗಿತ್ತು. ಅಯ್ಯರ್ ಮಾಡಿಟ್ಟಿದ್ದ ಅಡಿಗೆಯೆಲ್ಲಾ ಆರಿ ತಣ್ಣಗಾಗಿತ್ತು. ಹಸಿದು ಬಾಯಾರಿ ಬಂದಿದ್ದ ಪವಿತ್ರಳಿಗೆ ಒಂದು ಲೋಟ ನೀರೂ ಸಿಕ್ಕಿರಲಿಲ್ಲ. ದಾಹವೆಂದೂ ಮನೆಯಲ್ಲಿ ತಣ್ಣಗಿನ ನೀರು ಕುಡಿಯಬೇಕೆಂದೂ ಆತುರ ದಿಂದ ಮನೆಯೊಳಗೆ ಬಂದ ಅವಳ ದಾಹ ಅಡಗಿಹೋಗಿತ್ತು. ವಸಂತ ತನ್ನ ಬಾಳಿನ ವಸಂತನೇಕಾಗಬಾರದು ? ತನ್ನ ಹೊಸ ಜೀವನದ ಹೊಸ ಚಿಗು ರಾಗಬಾರದು ? ಎಂದೆಲ್ಲಾ ಕನಸುಕಟ್ಟಿಕೊಂಡು ಬಂದಿದ್ದ ಅವಳ ಕನಸು ನುಚ್ಚು ನೂರಾಗಿತ್ತು. ಅವನ ಮುಂದೆ ತನ್ನ ಬಾಳಿನ ನಗ್ನಸತ್ಯ ಅವನಿಗರಿ ವಾಗಿತ್ತು. ಅವನ ಮುಂದೆ ತಾನು ಏನಿದ್ದರೂ ಕೆಸರಲ್ಲಿ ಬಿದ್ದ ಹೂವು. ದೇವರ ಮೇಲಿದ್ದು ಹೊರಗೆ ಹಾಕುವ ನಿರ್ಮಾಲ್ಯ.

ಮಾಲತಮ್ಮನಿಗೊಂದೇ ಚಿಂತೆ. ದೇವರಾಜ್ ತಮ್ಮ ಮನೆಗೆ ಆಧಾರ ವಾಗಿದ್ದರು. ಪವಿತ್ರಳನ್ನು ಬಳಸಿಕೊಂಡರೂ ಅವಳಿಗೊಬ್ಬಳಿಗಲ್ಲದೇ ಎಲ್ಲ ರಿಗೂ ಒಂದಲ್ಲಾ ಒಂದು ರೀತಿ ಸಹಾಯ ಮಾಡುತ್ತಲೇ ಬಂದಿದ್ದರು. ರೋಜಿಗೆ ತಮ್ಮ ತಮ್ಮನಿಗೆ ತಂದುಕೊಳ್ಳಲು ಒಪ್ಪಿದುದೊಂದೇ ಅಲ್ಲ ಲಲ್ಲಿಗೂ ನೋಡುತ್ತಿದ್ದರು. ಅವರನ್ನು ಹೀನಾಮಾನ ಅಂದು ಮಾಧು ಕಳಿಸಿ ತಾನೂ ಮನೆಬಿಟ್ಟು ಹೊರಟುಹೋದನಲ್ಲಾ. ದೇವರಾಜ್ ತಮ್ಮ ಕೈ ಬಿಟ್ಟುಬಿಟ್ಟರೆ ಮುಂದಿನ ಗತಿ ?

ಶ್ಯಾಮ್ ಮೌನವಾಗಿ ಯೋಚಿಸುತ್ತಿದ್ದ. ಇಂದು ಮಾಧೂಗೆ ಹೇಳಿದ ಮಾತು ನಾಳೆ ಪಾಪೂ ತನಗೂ ಹೇಳಿಯಾಳು. ತಾನೂ ಆದಷ್ಟು ಬೇಗ ಇಲ್ಲಿಂದ ಹೊರಟುಬಿಡಬೇಕು. ತನ್ನ ಸ್ನೇಹಿತ ಚಿನ್ನೀಲಾಲ್ ಆಗಲೇ ತನಗೆ ಹಣ ಕೊಟ್ಟು ಮುಂದೆ ಓದಿಸಲೂ ತಯಾರಿದ್ದ. ಬೇಡದಿದ್ದರೆ ಬಿಸಿನೆಸ್‌ಗೂ ಪಾಲುದಾರಿಕೆ ಮಾಡಿಕೊಳ್ಳಲು ಸಿದ್ಧ. ಕಾರಣ ಅವನ ತಂಗಿ ವಿನೀತಾ ತನ್ನನ್ನು ಮದುವೆಯಾಗಬಯಸಿದ್ದು. ಅತೀ ಸಾಮಾನ್ಯ ರೂಪ

ಳಾಗಿದ್ದರೂ ತಂದೆಯ ಆಸ್ತಿ, ಅಣ್ಣನ ಆಸ್ತಿಯ ಆಸೆಗೆ ಮದುವೆಯಾಗಲು ಅನೇಕರಿದ್ದರು. ಪವಿತ್ರಳಿಗೂ ಕೂಡ ಕಾರ್ತಿಯ ಅಣ್ಣನನ್ನು ಮದುವೆಯಾಗು ವುದರಲ್ಲಿ ಅವಳಿಗೆ ಒಂದು ಹೆಮ್ಮೆಯಿತ್ತು. ಇದನ್ನು ತಾಯಿಯೊಂದಿಗೆ ಚರ್ಚಿಸಬೇಕೆಂದಿದ್ದ. ಆದರೆ ಅಷ್ಟರಲ್ಲಿ ಏನೋ ಆಗಿ ಹೋಗಿತ್ತು. ಎಲ್ಲಾ ತಣ್ಣಗಾದ ಮೇಲೆ ಉಪಾಯದಿಂದ ಈ ಬಂಧನ ಬಿಡಿಸಿಕೊಂಡು ತಾನು ಹೊರಟುಹೋಗಬೇಕು. ಚನ್ನಿಲಾಲ್‌ನೊಂದಿಗೆ ಬಿಸಿನೆಸ್ ಪಾರ್ಟ್ನರ್ ಆಗಿ ಅವನ ತಂಗಿಯನ್ನು ಕೈಹಿಡಿಯುವುದರಲ್ಲಿ ಹೆಚ್ಚು ಸ್ವಾತಂತ್ರ್ಯ, ಹೆಚ್ಚು ಸ್ವಾಭಿಮಾನವಿತ್ತು.

ರೋಜೀ, ಲಿಲ್ಲಿ ಮುಸಿಮುಸಿ ಅಳುತ್ತಿದ್ದರು. ಪವಿತ್ರಳನ್ನೇ ನಂಬಿದ್ದ ಅವರಿಗೆ ಬೇರೆ ದಾರಿ ಕಾಣದಾಗಿತ್ತು. ಪುಟ್ಟ ಕಿಟ್ಟು ಹಿರಿಯರ ಕಲಹದಿಂದ ನಿರ್ಲಕ್ಷಿಸಲ್ಪಟ್ಟು ಹಾಗೆಯೇ ಬರಿಯ ಹೊಟ್ಟೆಯಲ್ಲಿ ಮಲಗಿ ದ್ದವು. ಅಯ್ಯರ್ ಬಾಗಿಲಿಗೊರಗಿ ನಿಟ್ಟುಸಿರಿಟ್ಟರು. ಪಾಪ ಆ ಹೆಣ್ಣು ಮಗು ಸಾಕಾಗಿ ದುಡಿದು ಬಂದಿತ್ತು. ಅದನ್ನು ಯಾರು ಕೇಳಲೂ ಇಲ್ಲ. ವಿಚಾರಿಸಿಕೊಳ್ಳಲೂ ಇಲ್ಲ. ನಿಧಾನವಾಗಿ ಎದ್ದು ಅಯ್ಯರ್ ಪವಿತ್ರಳ ಕೋಣೆಯೊಳಗೆ ಕಾಲಿಟ್ಟರು. ಅವರ ಕೈಯಲ್ಲಿ ಒಂದು ಲೋಟವಿತ್ತು. ಅತ್ತು ಸೊರಗಿ ಮೌನವಾಗಿ ಮರವಾಗಿ ಹೋದಂತಿದ್ದ ಪವಿತ್ರಳ ಮುಂದೆ ಹಾಲಿನ ಲೋಟ ಹಿಡಿದರು. ಹೃದಯ ಅರಿತವಳು 'ಬೇಡಾ' ಎನ್ನುವಂತೆ ತಲೆಯಾಡಿಸಿದಳು.

'ನೀವು ಕುಡೀದಿದ್ರೆ ನನ್ನಾಣೆ. ನೀವು ಕುಡೀದಿದ್ರೆ ನಾನೂ ಈ ಮನೇಲಿರೋಲ್ಲ. ನೀವು ಹೀಗೆ ಉಪವಾಸ ವನವಾಸ ಸೊರಗೋದು ನೋಡಿ ಕೊಂಡು ನಾನಿರಲಾರೆ. ನನಗೂ ಅಪ್ಪಣೆ ಕೊಡಿ ಹೊರಟುಹೋಗ್ತೀನಿ.'

ಪವಿತ್ರ ಮರುಮಾತಾಡದೆ ಅವರ ಕೈಯಲ್ಲಿನ ಹಾಲಿನ ಲೋಟ ತೆಗೆದುಕೊಂಡಳು.

'ಬೇಡಾ ಅಯ್ಯರ್, ನೀವು ಎಲ್ಲೂ ಹೋಗಕೂಡದು. ನಾನೆಲ್ಲಿದ್ದರೆ ನೀವಲ್ಲೇ ಇರಬೇಕು' ಹಾಲು ಕುಡಿದು ಲೋಟ ಅವರ ಕೈಗಿತ್ತಳು.

ಅತ್ತು ಸಮಾಧಾನ ಮಾಡಿಕೊಂಡು ಎಚ್ಚೆತ್ತು ಮಾಲತಮ್ಮ ಸೆರಗಿ ನಿಂದ ಕಣ್ಣು, ಮೂಗು ಒರೆಸಿಕೊಂಡರು. ತಮ್ಮ ಮಗ ಮಾಧು ಹೊರಟು ಹೋದ. ತಮಗೆಲ್ಲಾ ಆಸರೆಯಾಗಿದ್ದೋ ಪವಿತ್ರಳನ್ನು ತಾನು ಹಾಗೆನ್ನ ಬಾರದಿತ್ತು. ನಾಳೆ ಅವಳೂ ಹೋಗಿಬಿಟ್ಟರೆ! ಅವಳು ಅಭಿನಯಿಸುವುದು

ಬಿಟ್ಟರೆ ತಮ್ಮ ಗತಿ? ಇನ್ನು ಮಕ್ಕಳ ಗತಿ? ನಿಧಾನವಾಗಿ ಎದ್ದು ಪವಿತ್ರಳ ರೂಮಿಗೆ ಬಂದರು. ಅವಳು ದಿಂಬಿಗೊರಗಿ ಹಾಗೆಯೇ ಕುಳಿತಿದ್ದಳು. ಮುಖದ ಮೇಕಪ್ಪೆಲ್ಲಾ ಹಾಗೆಯೇ ಅಲ್ಲಲ್ಲೆ ಅಂಟಿಕೊಂಡಿತ್ತು. ಹತ್ತಿರ ಬಂದು ಕುಳಿತರು. ಪವಿತ್ರ ಅವರತ್ತ ನೋಡಲಿಲ್ಲ. ಅವರೇ ಅವಳ ಮುಂಗುರುಳು ನೇವರಿಸಿದರು.

"ಪಾಪು, ನನ್ನ ಕ್ಷಮಿಸಮ್ಮಾ. ನನ್ನ ಹೊಟ್ಟೆ ಸಂಕಟ. ನನ್ನ ಮಗ ಹೊರಟುಹೋದ ಅನ್ನೋ ಕೋಪಕ್ಕೆ ನಿನ್ನ ಏನೋ ಅಂದುಬಿಟ್ಟೆ." ಅವಳನ್ನು ತಮ್ಮೆದೆಗೆ ತಬ್ಬಿಕೊಂಡರು. "ನಾಳೆ ನಾನೇ ದೇವರಾಜ್ ಮನೆಗೆ ಹೋಗಿ ಅವರ ಕಾಲು ಕಟ್ಟಿಕೊಂಡಾದರೂ ಕರೆದುಕೊಂಡು ಬರುತ್ತೇನೆ." ಪವಿತ್ರ ನೀರವವಾಗಿ ಅತ್ತಳಷ್ಟೆ.

ಮಾರನೆಯ ದಿನ ಬೆಳಗ್ಗೆ ಮಾಲತಮ್ಮ ಎದ್ದು ನಿಧಾನವಾಗಿ ದೇವರಾಜ್‌ರವರ ಮನೆಗೆ ಹೋಗುವ ಮೊದಲೇ ಅವರಿಂದಲೇ ಫೋನು ಬಂದಿತ್ತು. ಆದಷ್ಟು ಬೇಗ ಮನೆ ಖಾಲಿ ಮಾಡಿ ತಮಗೆ ಮನೆಬಿಟ್ಟು ಕೊಡಬೇಕೆಂದೂ, ಕಾರು ಇನ್ನು ಮುಂದೆ ತಮ್ಮ ಮನೆಯ ಮುಂದೆ ನಿಲ್ಲುವುದೆಂದೂ, ತಮ್ಮ ಹೊಸ ಚಿತ್ರ 'ತಿರುವು'ಗೆ ಬೇರೆ ನಾಯಕಿಯನ್ನು ಹುಡುಕಿರುವುದಾಗಿಯೂ ಅವರ ಸೆಕ್ರೆಟರಿ ಕರಿಸಿಂಗಪ್ಪ ತಿಳಿಸಿದಾಗ ಮಾಲತಮ್ಮನಿಗೆ ದಿಕ್ಕೇ ತೋಚದಾಯಿತು. ಎಷ್ಟು ಸಣ್ಣ ವಿಷಯ ಎಲ್ಲಿಂದ ಎಲ್ಲಿಯವರೆಗೆ ಹೋಗಿತ್ತು? ಇಷ್ಟಕ್ಕೆಲ್ಲಾ ಕಾರಣ ಧನಂಜಯರವರು ಕುಡಿದು ನಾಲಿಗೆ ಬಿಗಿತಪ್ಪಿ ಮಾತನಾಡಿದ್ದು. ತಾನು ಅವರನ್ನೇ ಕಂಡು ಮಾತಾಡಿ ಏನಾದರೊಂದು ವ್ಯವಸ್ಥೆ ಮಾಡಿಕೊಳ್ಳಬೇಕು. ಮನೆಬಿಟ್ಟು ತಾವು ಹೋಗುವುದಾದರೂ ಎಲ್ಲಿ? ಇಷ್ಟೆಲ್ಲಾ ಮಾತಾಡಿದ ಮೇಲೆ ರೋಜಿಯ ಮದುವೆ ಆದಂತೆಯೇ. ಅವಳ ಮದುವೆಗಾಗಿ ತಾವಿಟ್ಟುಕೊಂಡಿರುವ ಹಣ ಬಿಟ್ಟು ತಮ್ಮಲ್ಲಿ ಹಣವಿಲ್ಲ. ಬರಬೇಕಾದ ಹಣವನ್ನು ಹೇಗಾದರೂ ವಸೂಲು ಮಾಡಬೇಕು. ಪವಿತ್ರಳಿಗೆ ಯಾವುದೂ ತಿಳಿಸಬಾರದು. ಅವಳ ಪಾಡಿಗೆ ಅವಳು ಶೂಟಿಂಗಿಗೆ ಹೋಗಲಿ. ರೀಟಾ ಹೇಗೂ ಜೊತೆಯಲ್ಲಿ ಹೋಗುತ್ತಾಳೆ. ತಾವು ಮುಂದೆ ಕಳಚಿ ಬೀಳುತ್ತಿರುವ ತಮ್ಮ ಸೌಧವನ್ನು ಉಳಿಸಿಕೊಳ್ಳಬೇಕು. ತಾಯಿ ಮುಖ ನೋಡಿಯೇ ತಿಳಿದುಕೊಂಡಳು ಪವಿತ್ರ.

ಪವಿತ್ರ ಒಲ್ಲದ ಮನಸ್ಸಿನಿಂದಲೇ ಶೂಟಿಂಗಿಗೆ ಹೊರಟಳು. ಅಂದು ಒಂದೆರಡು ಹಾಡಿನ ದೃಶ್ಯಗಳಿದ್ದವು. ಅದೇಕೋ ಮನಸ್ಸು ಭಾರವಾಗಿತ್ತು.

ಹೆರು. ಮಾತೇ ಆಡಲಿಲ್ಲ. ತಿರುಗಿಯೂ ನೋಡಲಿಲ್ಲ. ಅಲ್ಲಿದ್ದ ಅವರ ಅಸಿಸ್ಟೆಂಟುಗಳು ಮೌನವಾಗಿ ಅವರಿಗೆ ಕುರ್ಚಿಯೊಂದನ್ನು ಕುಳಿತುಕೊಳ್ಳಲು ತೋರಿಸಿದರು. 'ಸಾರ್, ಧನಂಜಯ ಬಂದಿದ್ದಾರೆ' ಎಂದಾಗ ದೇವರಾಜರು ತಲೆಯೆತ್ತಿ ನೋಡದೆಯೇ ಉತ್ತರಿಸಿದರು. 'ನಾನೀಗ ತುಂಬಾ ಬಿಸಿಯಾಗಿದ್ದೇನೆ.' ಧನಂಜಯರ ಸ್ವಾಭಿಮಾನ ಪುಟಿದೆದ್ದಿತು. ಕೂಡಲೇ ಎದ್ದು ನಿಂತು ಹೇಳಿದರು 'ನಾನು 'ತಿರುವು'ನ ನಿರ್ದೇಶನ ಮಾಡಲಾಗುವುದಿಲ್ಲ. ನಿಮ್ಮ ಮುಂಗಡ ಹಣ ಹಿಂತಿರುಗಿಸುತ್ತೇನೆ.'

'ನಾನು ಸಧ್ಯಕ್ಕೆ ಆ ಚಿತ್ರ ಮಾಡುವುದಿಲ್ಲ. ನೀವು ಮುಂಗಡ ಹಣ ಹಿಂತಿರುಗಿಸುವುದು ಬೇಡಾ.' ದೇವರಾಜ್ ಮೊಟಕಾಗಿ ಉತ್ತರಿಸಿ ಎದ್ದು ಒಳಗೆ ಹೋದರು. ಧನಂಜಯ ದುರ್ದಾನ ತೆಗೆದುಕೊಂಡಂತೆ ಅಲ್ಲಿಂದೆದ್ದು ಹೊರಟುಬಿಟ್ಟರು. ಮನಸ್ಸಿನಲ್ಲಿ ಛಲ ಮೂಡಿತು. ದೇವರಾಜ್ ಮಾಡದಿದ್ದರೇನಂತೆ. ತಾವೇ 'ತಿರುವು' ಮಾಡಿಬಿಡಬೇಕು. ಪವಿತ್ರಳನ್ನೇ ಹಾಕಿಕೊಂಡು ಭರ್ಜರಿ ಚಿತ್ರ ತಯಾರಿಸಿಬಿಡಬೇಕು. ತನ್ನನ್ನು ಕಡೆಗಾಣಿಸಿದರಲ್ಲಾ ದೇವರಾಜ್; ಅಲ್ಲಿಂದ ಅವರು ಪರ್ವವರ್ಧಿನಿ ಪ್ರೊಡಕ್ಷನ್ಸ್ ಕತ್ತ ಹೊರಟು ಹೋದರು. ಪ್ರೊಡ್ಯೂಸರ್ ಸೋಂಧಿ ಚಿನ್ನದಂತಹ ಮನುಷ್ಯ. ಎಲ್ಲರಿಗೂ ಪ್ರೀತಿಯ 'ಬಾಬೂ' ಆಗಿದ್ದರು.

'ಬಾಬು ನೀವು ನನಗೊಂದು ಉಪಕಾರ ಮಾಡಬೇಕು' ಸೋಂಧಿಯವರಿಗೆ ಧನಂಜಯರನ್ನು ಕಂಡು ಅಚ್ಚರಿ.

'ಇದೇನು ಹೀಗೆ. ಇರಲಿ. ಏನುಪಕಾರ ಮಾಡಬೇಕು ಹೇಳಿ. ಕೈಲಾದಷ್ಟು ಮಾಡುತ್ತೇನೆ. ನಿಮಗುಪಕಾರ ಮಾಡುವುದಕ್ಕೆ ನಾನು ಹಿಂದು ಮುಂದು ನೋಡಬೇಕೆ? ಏನು ಬೇಕು? ಮೊದಲು ಕುಳಿತುಕೊಳ್ಳಿ,' ಎಂದು ಹೇಳಿ ಟೊರಿನೋ ತರಿಸಿಕೊಟ್ಟರು.

'ನಾನು ಬಂದು ಭರ್ಜರಿ ಚಿತ್ರ ತಯಾರಿಸಬೇಕೆಂದಿದ್ದೇನೆ. ನನಗೊಂದಿಷ್ಟು ಹಣ ಕೊಟ್ಟಿರುತ್ತೀರ?' ಧನಂಜಯ ಕೇಳಿದರು

'ಕತೆ ಆಗಲೇ ಹುಡುಕಿದ್ದೀರಾ? ನಿರ್ದೇಶಕರು ಇದ್ದಕ್ಕಿದ್ದಂತೆ ನಿರ್ಮಾಪಕರಾಗಲು ಕಾರಣ?' ಸೋಂಧಿಯವರು ಹುಬ್ಬುಗಂಟಿಕ್ಕಿದರು. ಧನಂಜಯ ಕೂಲಂಕುಷವಾಗಿ ಎಲ್ಲವನ್ನೂ ವಿವರಿಸಿದರು. 'ಅವನಿಗೆ ತೋರಿಸುತ್ತೇನೆ. ಈಗಾಗಲೇ 'ದೇವಿಮಹಾತ್ಮೆ' ಮತ್ತು 'ಚಿತ್ರಾಂಗದ' ಮಾಗಿದಿವೆ. ಅವುಗಳು ಇನ್ನೊಂದು ತಿಂಗಳೊಳಗೆ ರಿಲೀಸ್ ಆಗುತ್ತೆ. ಅವರಲ್ಲೂ

ಅವಳು ಹೆಸರು ಮಾಡೇ ಮಾಡ್ತಾಳೆ. ನಮಗೆ ಲಾಸ್ ಆಗೋಲ್ಲ. ಹೂಡಿದ ಹಣವಂತೂ ಬಂದೇ ಬರುತ್ತೇ ಅನ್ನೋ ಭರವಸೆ ನನಗಿದೆ.'

ಸೋಂಧಿ ಕೊಂಚ ಯೋಚಿಸಿ ಹೇಳಿದರು. 'ಕತೆಯನ್ನು ಕೇಳೋಣ. ಆ ಪುಸ್ತಕ ತನ್ನಿ ನೋಡೋಣ. ನಾನೇತಯಾರಿಸುತ್ತೇನೆ. ನೀವು ನಿರ್ದೇಶಿಸಬಹುದು ಮೊದಲು ದೇವರಾಜ್‌ರವರಿಂದ ಅಗ್ರಿಮೆಂಟ್ ತೆಗೆದು ಕೊಂಡುಬಿಡಿ.'

'ಅಗ್ರಿಮೆಂಟ್ ಆಗಿಲ್ಲ. ಬರೀ ಮುಂಗಡ ಹಣ ಕೊಟ್ಟಿದ್ದಾಗಿದೆ. ನೋಡೋಣ. ಆ ಸಾಹಿತೀನ ಕರ್ಕೊಂಡು ಬರ್ತೀನಿ. ನೀವೇ ಮಾಡಿಬಿಡಿ.'

ಸೋಂಧಿಯವರು ಒಪ್ಪಿಕೊಂಡರು. ಧನಂಜಯರು ಅನಂತರ ಮೆಲ್ಲಗೆ ಮಾತು ತೆಗೆದರು.

'ನೋಡಿ ಪಾಪ ಆ ಮನೇನ ಖಾಲಿ ಮಾಡಿ ಹೋಗು ಅಂತ ಇದ್ದಾರೆ ಬೇರೆ ಕಡೆ ಅವಳೂ, ಅವರ ಮನೆಯವರೂ ಹೋಗಿಬಿಟ್ರೆ ಹೆಚ್ಚು ಗಲಾಟೆಯಾಗುವುದಿಲ್ಲ. ಇಲ್ಲದಿದ್ದರೆ ಊಹಾಪೋಹಾ ಎದ್ದುಬಿಡುತ್ತೆ.'

'ನಮ್ಮ ಇಂಡಸ್ಟ್ರಿಯಲ್ ಎಸ್ಟೇಟ್ ಹತ್ತಿರ ಇರೋ ಗೆಸ್ಟ್ ಹೌಸ್ ಖಾಲಿ ಇದೆ. ಬೇಕಾದ್ರೆ ಅವರಿಗೆ ಖಾಲಿ ಮಾಡಿಕೊಟ್ಟಿರಬಹುದು ಸಧ್ಯಕ್ಕೆ' ಸೋಂಧಿಯವರು ಹೇಳಿದಾಗ ಧನಂಜಯರ ಎದೆ ಹಗುರವಾಯಿತು.

ಇತ್ತ ಮಾಲತಮ್ಮ ಗಂಗಾಧರಯ್ಯ ಜಮಖಂಡಿಯವರ 'ಚಿತ್ರಾಂಗದಾ'ದ ಮಿಕ್ಕ ಹಣ ಕೊಡಲು ಕೇಳಿದಾಗ ಗಂಗಾಧರಯ್ಯ ಆಗಸದತ್ತ ನೋಡಿದರು.

'ನೋಡಿ ಚಿತ್ರಕ್ಕೆ ಇರೋ ದುಡ್ಡೆಲ್ಲಾ ಹಾಕಿಬಿಟ್ಟಿದ್ದೀನಿ. ಕೈಯಲ್ಲಿ ಕಾಸೇ ಇಲ್ಲ. ಡಿಸ್ಟ್ರಿಬ್ಯೂಟರ್ ಇವತ್ತು ನಾಳೆ ಅಂತಾ ಇದ್ದಾನೆ. ಅವನು ಕೊಟ್ಟ ಕೂಡಲೇ ನಾನೇ ನಿಮ್ಮ ಮನೆ ಬಾಗಿಲಿಗೆ ಬಂದು ಕೊಟ್ಟುಬಿಡುತ್ತೇನೆ. ಇನ್ನೂ ಪಾಪ ಸುನಿಲ್‌ಕುಮಾರ್‌ಗೂ ಕೊಟ್ಟಿಲ್ಲ. 'ಚಿತ್ರ ಚೆನ್ನಾಗಿ ಓಡಲಿ ಸಾರ್ ಕೊಡುವಿರಂತೆ ನೀವೆಲ್ಲಿ ಹೋಗ್ತೀರಿ, ನಾನೆಲ್ಲಿ ಹೋಗ್ತೀನಿ' ಅಂತಾ ಇದ್ದಾರೆ' ಎಂದಾಗ ಮಾಲತಮ್ಮನಿಗೆ ದಿಕ್ಕೇ ತೋಚದಂತಾಯಿತು.

'ಇಲ್ಲ ಮನೇಲಿ ತುಂಬಾ ತೊಂದರೆಯಾಗಿದೆ, ಅರ್ಧವಾದರೂ ಕೊಡಿ' ಎಂದಾಗ ಗಂಗಾಧರಯ್ಯನವರ ಮುಖ ಗಂಭೀರವಾಯಿತು.

'ನನ್ನ ತೊಂದರೆ ನೀವು ನೋಡುವುದಿಲ್ಲವಲ್ಲ ನನ್ನ ಮೇಲೆ ನಂಬಿಕೆಯಿಲ್ಲವೇ? ಅಷ್ಟೊಂದು ತೊಂದರೆಯಿದ್ದರೆ ದೇವರಾಜ್ ಇದ್ದಾರಲ್ಲಾ.'

ಅವರ ಕೈಲೇ ತೆಗೆದುಕೊಂಡಿರಿ. ಯಾವುದೋ ಹೊಸ ಚಿತ್ರಕ್ಕೆ ಅಗ್ರಿಮೆಂಟಾಗಿದೆಯಂತಲ್ಲಾ !'

ಮಾಲತಮ್ಮ ಹೌಹಾರಿದರು. ಎಷ್ಟು ಬೇಗ ಸುದ್ದಿ ಹರಡುತ್ತದೆ. ನಾಳೆ ದೇವರಾಜ್, ಪವಿತ್ರಳ ಬಗ್ಗೆ ಒಡಕು ಸುದ್ದಿಗಳೂ ಹರಡಬಹುದು. ತಾವು ಹಣಕ್ಕಾಗಿ ಭವಿಷ್ಯ ಹಾಳು ಮಾಡಿಕೊಳ್ಳಬಾರದು ಎಂದುಕೊಂಡು ತೆಪ್ಪಗೆ ಬಂದರು.

ಎಲ್ಲಾ ಪ್ರೊಡ್ಯೂಸರ್‌ಗಳದೂ ಒಂದೇ ರೀತಿಯ ಉತ್ತರ. 'ಈಗ ಹಣ ಇಲ್ಲ. ಇನ್ನೂ ಡಿಸ್ಟ್ರಿಬ್ಯೂಟರ್ಸ್ ಆಗಿಲ್ಲ. ರಿಲೀಸ್ ಹೊತ್ತಿಗೆ ಕೊಡ್ತೀವಿ. ಇನ್ನೂ ಥಿಯೇಟರ್ ಸಿಕ್ಕಿಲ್ಲ. ಪಿಕ್ಚರ್ ರಿಲೀಸ್ ಆಗಿ ಒಂದು ವಾರದಲ್ಲಿ ಕೊಡ್ತೀವಿ. ಈಗ ಸಧ್ಯಕ್ಕಿಲ್ಲ ಮುಂದಿನ ವಾರ ಕೊಡ್ತೀವಿ.'

ಸಪ್ಪೆ ಮೋರೆ ಹೊತ್ತು ಮಾಲತಮ್ಮ ಮನೆಗೆ ಬಂದರು. ಪವಿತ್ರಳಿಗೆ ಶೂಟಿಂಗ್ ಮುಗಿಸಿ ಬರುವ ವೇಳೆಗೆ ಸಾಕುಸಾಕಾಗಿತ್ತು. ತಲೆ ಸಿಡಿದು ಹೋಗುತಿತ್ತು. ಬಂದವಳೇ ಯಾರೊಂದಿಗೂ ಮಾತನಾಡದೇ ಮುಸುಕು ಬೀರಿ ಮಲಗಿಬಿಟ್ಟಳು.

ಮಾರನೆಯ ದಿನ ಬೆಳಗ್ಗೆ ಧನಂಜಯ ವಿಜಯೋತ್ಸಾಹದಿಂದ ಬಂದರು.

'ಅಮ್ಮಾ ನೀವು ಏನೂ ಯೋಚಿಸಬೇಡಿ. ನಮ್ಮ ಸೋಂಧಿಯವರ ಗೆಸ್ಟ್ ಹೌಸಿನಲ್ಲಿ ಸಧ್ಯಕ್ಕಿರಿ. ಜಯನಗರದಲ್ಲಿ ಯಾವುದಾದರೊಂದು ಮನೆ ನೋಡ್ತಾ ಇದ್ದೀನಿ. ಸಿಕ್ಕಿದರೆ ಅಲ್ಲಿಗೆ ಹೋಗಿಬಿಡಿ. ನಾನು 'ತಿರುವು' ಮಾಡಿಯೇ ತೀರುತ್ತೇನೆ. ಸೋಂಧಿಯವರು ಪ್ರೊಡ್ಯೂಸ್ ಮಾಡಲು ಒಪ್ಪಿದ್ದಾರೆ. ಆದರೆ ಆ ವಸಂತ್‌ಕುಮಾರ್‌ರವರ ವಿಳಾಸ ನನಗೆ ಸಿಗಲಿಲ್ಲ. ಅವರು ಸಿಕ್ಕರೆ ಹೊಸ ಅಗ್ರಿಮೆಂಟ್ ಮಾಡಿಕೊಳ್ಳಬೇಕಾಗುತ್ತೆ.'

ಮಾಲತಮ್ಮನಿಗೆ ಸಂತಸದಿಂದ ಮಾತೇ ಹೊರಡಲಿಲ್ಲ. ಆ ವಸಂತ ಕುಮಾರನನ್ನು ತಾನು ಹೆಚ್ಚು ವಿಚಾರಿಸಿಕೊಳ್ಳಲೇ ಇಲ್ಲ. ಅವನ ವಿಳಾಸ ಹೇಗೆ ಕಂಡುಹಿಡಿಯುವುದು. ಕೂಡಲೇ ಅವರಿಗೆ ಪವಿತ್ರಳಿಗಾಗಿ ಬರೆದಿದ್ದ ಕವಿತೆಯ ನೆನಪಾಯಿತು. ಪವಿತ್ರಳ ಪರ್ಸ್ ತಡಕಾಡಿದಾಗ ಅದರಲ್ಲಿ ಸಿಗಲಿಲ್ಲ.

ಇನ್ನೂ ಮಲಗೇಯಿದ್ದ ಅವಳನ್ನೆಬ್ಬಿಸಿ ಕೇಳಿದರು. ಅವಳು ದಿಂಬಿನ ಕೆಳಗಿನಿಂದಕವರನ್ನು ತೆಗೆದು ತಿರುಗಿಸಿ ನೋಡಿದಳು. ಬರಿಯ ಹೆಸರು,

ಬಡಾವಣೆಯ ಹೆಸರು ಮಾತ್ರವಿತ್ತು. ಅವಳು ಯಾಕಮ್ಮಾ ಎಂದು ಕೇಳಿದಾಗ ಮಾಲತಮ್ಮ ಧನಂಜಯರು ಹೇಳಿದುದು ತಿಳಿಸಿದರು. ಅವಳಿಗೆ ನೆಮ್ಮದಿಯಾದರೂ ಯಾಕೋ ಮೊದಲಿನ ಉತ್ಸಾಹ ಬರಲಿಲ್ಲ. ಮಾಲತಮ್ಮ ಆ ಕವನವಿದ್ದ ಕವರನ್ನೇ ಕಿತ್ತು ತಂದು ಧನಂಜಯರಿಗೆ ತೋರಿಸಿದರು. ಅವರು ಬಡಾವಣೆ ಗುರುತು ಹಾಕಿಕೊಂಡು ಮತ್ತೆ ರಾತ್ರಿ ಬಂದು ನೋಡುವುದಾಗಿ ಹೊರಟರು.

ಅವರತ್ತ ಹೋಗುತ್ತಲೇ ಮಾಲತಮ್ಮ ಪವಿತ್ರಳ ಮುಂದೆ ಕುಳಿತರು.

'ಪಾಪೂ ನಾವು ಹೇಗಾದರೂ ಮಾಡಿ ಯಾರನ್ನಾದರೂ ಹಿಡಿಯಲೇ ಬೇಕು. ನಾವು ಬದುಕುವುದಕ್ಕೊಂದೇ ಮಾರ್ಗ. ನಮ್ಮನ್ನು ಉದ್ಧರಿಸೋರು ಯಾರೂ ಸಿಗದಿದ್ದರೆ ನೀನು ಖಂಡಿತ ಈ ರಂಗದಲ್ಲಿ ಮುಂದೆ ಬರೋಲ್ಲ. ಇಲ್ಲಿಗೆ ನಿಂತೋಯ್ತೂಂತ ಇಟ್ಕೋ.'

'ನನ್ನೇನು ಮಾಡೂಂತೀಯಮ್ಮಾ' ಪವಿತ್ರ ಬೇಸರದಿಂದ ಕೇಳಿದಳು.

'ನಿನಗಿನ್ನೂ ಚಿಕ್ಕ ವಯಸ್ಸು. ನೀನು ಹೆಸರು ಗಳಿಸಿಕೊಂಡರೆ ಇನ್ನೂ 15–20 ವರ್ಷಗಳು ಹಾಯಾಗಿರಬಹುದು. ಸಾಕಷ್ಟು ಹೆಸರು. ಹಣ ಗಳಿಸಬಹುದು. ನೋಡೂ ದೇವರಾಜ್ ಇದ್ರೂ ಸರಿಹೋಯ್ತು. ಈಗ ಧನಂಜಯರಿಗೆ ನಿನ್ನ ಮೇಲೆ ಆಸೆ ಇರೋ ಹಾಗಿದೆ. ನೀನು ಹೇಗಾದ್ರೂ ಬುಟ್ಟಿಗೆ ಹಾಕಿಕೊಂಡರೆ....' ಮಾಲತಮ್ಮ ಹೇಳಿದಾಗ ಪವಿತ್ರ ಹುಬ್ಬು ಗಂಟಿಕ್ಕಿದಳು.

'ಏನಮ್ಮಾ ಇದೂ. ಆಗ ನಾನು ರಾಜೇಂದ್ರ ಸುನಿಲ್‌ಕುಮಾರ್ ಜೊತೆ ಇದ್ದಾಗ ನನಗೆ ಮಾನ ಮರ್ಯಾದೆ ಉಪದೇಶಮಾಡಿದ್ದೆ. ಈಗ ನೀನೇ!'

'ನೋಡೂ ಅನುಭವದಿಂದ ಕಲಿತ ಪಾಠ ಇದು. ನಾಯಕ ನಟರನ್ನು ಹಿಡಿದರೆ ಆಗುತ್ತೇನೆ ಪಾಪೂ ? ಇವೊತ್ತು ನಾಯಕ, ನಾಳೆ ಹೇಗೋ ಏನೋ ಪ್ರೊಡ್ಯೂಸರ್, ಡೈರೆಕ್ಟರ್‌ಗಳಾದರೆ ಏನಾದರೂ ಉಪಯೋಗ ಆದೀತು. ಸತ್ಯಕಾಮ್ ಜೋಶಿ ಅಂತಹವರನ್ನು ನಾನೇನೂ ಕೇಳುವ ಹಾಗಿಲ್ಲ. ಆದರೆ ಧನಂಜಯ ಹಾಗಲ್ಲ.' ಮಾಲತಮ್ಮ ಧನಿ ತಗ್ಗಿಸಿದರು. 'ನೀನು ಈಗ ಈ ಬಾರಿಗೆಬಗ್ಗದಿದ್ದರೆ ನಾವು ಬೀದಿಗಿಳಿಯಬೇಕು. ನಿನ್ನನ್ನೇ ನಂಬಿದ್ದ ರೋಜಿ, ಲಲ್ಲಿ ಕಂಗೆಟ್ಟು ಕೂತಿದಾರೆ.' ಪವಿತ್ರ ಮುಖ ಹಿಂಡಿದಳು.

"ಅಮ್ಮಾ ನನಗೆ ಮರ್ಯಾದೆಯಾಗಿ 'ಒಲವು' ಪ್ರೇಮ ಅಂತ ಬಾಳೋಕಾಸೆ. ಇದರಿಂದ ನನಗೇನೂ ಸುಖವಿಲ್ಲಮ್ಮಾ

'ಹಾಗಲ್ಲ ಪಾಪೂ, ನಾಳೆ ನೀನು ಪ್ರೀತಿಸಿದವ್ನು ನಿನಗೆ ಕೈಕೊಟ್ರೆ ಏನು ಮಾಡ್ತೀ? ಪ್ರೀತಿ ಪ್ರೇಮ ಅದೆಲ್ಲ ಚಿತ್ರಗಳಲ್ಲಿ ಮಾತ್ರ ಅಂತ ತಿಳ್ಕೋಬೇಕು. ನಿಜವಾದ ಬದುಕಿನಲ್ಲಿ ಅದು ಅಭಿನಯಮಾತ್ರವಾಗಬೇಕು. ಈ ವ್ಯಕ್ತಿಯಲ್ಲಿ ಪ್ರೀತಿ ಪ್ರೇಮ ಲವ್ ಅದೆಲ್ಲಾ ಎಷ್ಟು ದಿನ ಉಳಿಯುತ್ತೇ ಪಾಪೂ?' ಮಾಲತಮ್ಮ ಬುದ್ಧಿ ತಿದ್ದಿದರು. 'ವ್ರತ ಕೆಟ್ಟರೂ ಸುಖವಿರಬೇಕಮ್ಮಾ!'

ಪವಿತ್ರ ಖಿನ್ನಳಾಗಿಯೇ ಉತ್ತರಿಸಿದಳು

'ಆಗಲಿ, ನನಗೆ ಯೋಚಿಸಲು ಅವಕಾಶ ಕೊಡು?' 'ನನಗೆ ಧನಂಜಯರೆಂದರೆ ಅಂತಹ ಸದ್ಭಾವನೆಯೇನೂ ಇಲ್ಲ' 'ದೇವರಾಜ್ ಬಗ್ಗೆ ಇತ್ತೇ?'

ಅಂದು ರಾತ್ರಿ ಧನಂಜಯರು ಬರುವವೇಳೆಗೆ ಅವರಿಗಾಗಿ ಮನೆಯಲ್ಲಿ ಅದ್ದೂರಿ ಸ್ವಾಗತ ಕಾದಿತ್ತು. ಅಯ್ಯರ್ ಹಬ್ಬದ ಅಡಿಗೆ ಮಾಡಿದ್ದರು. ಮಾಲತಮ್ಮ ಶ್ಯಾಮ್‌ನನ್ನು ಕಾಡಿಬೇಡಿ ಅವರಿಗಾಗಿ ವಿಸ್ಕಿ ತರಿಸಿಟ್ಟಿದ್ದರು. ಮನೆಯೆಲ್ಲ ಸುಸಜ್ಜಿತವಾಗಿ ಅಲಂಕಾರಗೊಂಡಿತ್ತು. ಅಂದು ಅರ್ಧ ದಿನವೇ ಶೂಟಿಂಗ್ ಇದ್ದ ಕಾರಣ ಪವಿತ್ರ ಮನೆಯಲ್ಲೇ ಇದ್ದಳು.

'ನೋಡು ಈಗಿರುವ ಚಿತ್ರವನ್ನು ಬಿಟ್ಟರೆ ನಿನಗೆ ಹೊಸ ಚಿತ್ರಗಳು ಯಾವುದೂ ಇಲ್ಲ. ನೀನು ಮನಸ್ಸು ಮಾಡಿದರೆ ಈ 'ತಿರುವು' ನಿನ್ನ ಚಿತ್ರವಾಗುತ್ತೆ' ಎಂದು ಆಗಲೇ ಪವಿತ್ರಳನ್ನು ಮಾಲತಮ್ಮ ಎಚ್ಚರಿಸಿದರು. ತಾವೇ ಅವಳ ಅಲಂಕಾರ, ಉಡುಪುಗಳ ಬಗ್ಗೆ ಆಸಕ್ತಿವಹಿಸಿ ಅಂದವಾಗಿ ಅಲಂಕರಿಸಿದರು.

ಧನಂಜಯರಿಗೆ ತಮಗಾಗಿ ಕಾದಿದ್ದ ಸ್ವಾಗತ ಕಂಡು ಆನಂದಪರವಶರಾದರು.

'ನಾಳೆ ಸ್ಟಾರ್ಸ್‌ನನ್ನ ಬುಕ್ ಮಾಡ್ಕೋಬೇಕೂಂತ ಇದ್ದೀನಿ. ಇದರಲ್ಲಿ ಹೀರೋನ್ನ ವಿಲನ್ ಆಗಿತೋರಿದ್ರಿಂದ ದೊಡ್ಡ ಸ್ಟಾರ್ಸ್‌ನ ಹಾಕ್ಕೊಳ್ಳೋಕಾಗೋಲ್ಲ. ಹೇಗಿದ್ರೂ ರಾಜೇಂದ್ರನಿಗೆ ಚಿತ್ರಗಳೇ ಇಲ್ಲ. ತುಂಬಾ ತೊಂದರೇಲಿದ್ದಾನಂತೆ. ಅಷ್ಟೂ ಅಲ್ದೇ ಪವಿತ್ರ ಜೊತೆ [illegible] ಮಾಡಿದ್ದಾನೆ. ಅವನನ್ನೇ ಹಾಕ್ಕೊಳ್ಳೋಣಾಂತ. ಇದು ಬರೀ

ಹೀರೋಯಿನ್ ಸಬ್ಜೆಕ್ಟ್.'

ಆ ಮಾತು ಕೇಳುತ್ತಲೇ ಪವಿತ್ರಳ ನಗು ಬಿಸಿಯಾಯಿತು.. ತಾನು ಮೆಚ್ಚಿದ್ದ ಹೀರೋ ತಾನು ಮೆಚ್ಚಿರುವ ಸಾಹಿತಿಯ ಸಾಹಿತ್ಯ. ಇದನ್ನು ತಾನು ಉಳಿಸಿಕೊಳ್ಳಲೇಬೇಕು. ಎದ್ದು ಬಂದು ತಾನೇ ಲೋಟಕ್ಕೆ ವಿಸ್ಕಿ ಹಾಕಿ, ಸೋಡಾ ಬೆರಸಿ ಅವರ ಮುಂದೆ ಹಿಡಿದಳು.

'ಬೆಸ್ಟ್ ಆಫ್ ಲಕ್, ತೊಗೊಳ್ಳಿ ಸಾರ್'.

ಧನಂಜಯು ಪವಿತ್ರಳನ್ನು ನಂಬಲಾರದ ದೃಷ್ಟಿಯಿಂದ ನೋಡಿದರು ಹೌದು, ಅವಳು ನಗುತ್ತಲೇ ಇದ್ದಳು.. ಎಷ್ಟು ಮುದ್ದಾದ ಮುಖ, ಆ ಕಣ್ಣುಗಳು, ಆ ಮೂಗು, ಕನ್ನೆ, ತುಟಿಗಳು, ಆ ಬಣ್ಣ, ಆ ಯೌವ್ವನ. ತಾವೂ ನಸುನಕ್ಕು ಅವಳ ಕೈಯಿಂದ ಲೋಟ ತೆಗೆದುಕೊಂಡರು.

'ನನಗೆ ಬೆಸ್ಟ್ ಆಫ್ ಲಕ್ ಅಲ್ಲ ಮರೀ, ನಿಂಗೆ' ಎಂದು ಅವಳ ಕೆನ್ನೆ ಹಿಂಡಿದರು. ಪವಿತ್ರಳಿಗೆ ಕಸಿವಿಸಿಯಾದರೂ ತೋರಗೊಡಲಿಲ್ಲ.

'ಇಲ್ಲೇ ಊಟ ಮಾಡ್ಕೊಂಡು ಹೋಗಿ ಸಾರ್. ಮೊದ್ಲೇ ಲೇಟಾಗಿದೆ. ಮನೆಗೆ ಬೇಕಾದ್ರೆ ಫೋನ್ ಮಾಡಿ ತಿಳಿಸಿಬಿಡಿ' ಮಾಲತಮ್ಮ ಹೇಳಿದಾಗ ಧನಂಜಯು 'ಆಗಲಿ' ಎಂದು ಒಂದು ಪೆಗ್ಗು ಮುಗಿಸಿದ್ದರು. ಮನೆಗೆ ಫೋನ್ನು ಮಾಡಿದರು.

'ಸುಶೀಲ ತುಂಬಾ ಕಲಸ ಇದ. ಸ್ಕ್ರಿಪ್ಟ್ ವರ್ಕು ರಾತ್ರಿಯಿಲ್ಲಾ ಕೂತು ಡಿಸಿಷನ್ ತಗೋಬೇಕು, ನಂಗೆ ಕಾಯಬೇಡಾ'... ಪಕ್ಕದಲ್ಲಿ ಕುಳಿತಿದ್ದ ಪವಿತ್ರಳತ್ತ ನೋಡಿ ನಕ್ಕರು. 'ನಿನ್ನ ಹೀರೋ ಸಿಕ್ಕಿದ್ದ.. ನಾಳೆ ಬರ್ತಾನಂತೆ' ಪವಿತ್ರ ಹುಬ್ಬೇರಿಸಿದಳು.

'ಯಾರು ನನ ಹೀರೋ ?' ಅವಳ ಮನಸಿನಲಿ ರಾಜೇಂದ್ರ ಎಂದುಕೊಂಡಳು.

'ಅದೇ ನಿನ್ನ ಕವಿಪುಂಗವ, ನಿನಗಾಗಿ ಬಹಳ ಮರುಕಪಟ್ಟ.. ನಿನ್ನ ಕಂಡರೆ ಬಹಳ ಮೆಚ್ಚಿಕೆ ಅವನಿಗೆ' ಧನಂಜಯು ಹೇಳಿದಾಗ ಪವಿತ್ರಳ ಹೃದಯ ಮರಳಿತು. ಹಿಂದೆ ಧನಂಜಯು ಕುಡಿದುದಕ್ಕಾಗಿ ಗಲಾಟೆ ಮಾಡಿದ ಶ್ಯಾಮ್ ಇಂದು ತಾನೇ ವಿಸ್ಕಿ ಸೋಡಾ ಬೆರಸಿಕೊಟ್ಟು ಅವರ ಬಳಿ ಕುಳಿತು ತಾನೂ ಒಂದಿಷ್ಟು ಏರಿಸಿದ.

ಅಮಲೇರಿದಂತೆ ದನಂಜಯು ಪವಿತ್ರಳನು ಅತ ಇತ ಹೋಗಗೊಡಲಿಲ್ಲ.

'ನನ್ನ ಮರಿ, ಇಲ್ಲೇ ಇರು. ನೋಡ್ತಾ ಇರು, ನಿನ್ನ ಎಂತಹ ತಾರೆ ಮಾಡ್ತೀನೀಂತ. ಆಲ್ ಇಂಡಿಯಾ ಸ್ಟಾರ್, ಅಂತರರಾಷ್ಟ್ರೀಯ ಸ್ಟಾರ್ ಮಾಡ್ತೀನಿ' ಪವಿತ್ರಳಿಗೆ ಮುಜುಗರ. ಆದರೂ ಈಗ ಅವಳಿಗೆ ಭವಿಷ್ಯ ಬೇಕಾಗಿತ್ತು. ಬದುಕು ಬೇಕಾಗಿತ್ತು. ಮೌಲ್ಯಗಳೆಲ್ಲಾ ಗಾಳಿಗೆ ತೂರಾಗಿತ್ತು.

ಊಟ ಮುಗಿಸಿ ಎಲ್ಲರೂ ಮಲಗಲು ಹೊರಟಾಗ ಮಾಲತಮ್ಮ ಪವಿತ್ರಳಿಗೆ ಸಂಜ್ಞೆ ಮಾಡಿದರು.

'ಪಾಪೂ, ಸಾರ್‌ಗೆ ನಿನ್ನ ರೂಮಿನಲ್ಲೇ ಹಾಸಿಗೆ ಸರಿಮಾಡಿಕೊಡಮ್ಮಾ ಗಲಾಟೆ ಇರೋಲ್ಲ, ಮಲಗಲಿ.'

ಮಲಗಲು ಬಂದ ಧನಂಜಯರಿಗೆ ತನ್ನ ಹಾಸಿಗೆಯನ್ನು ಸರಿಪಡಿಸಿ ಹೊದಿಕೆ ಸರಿಪಡಿಸುವಾಗ ಅವರ ಬಾಹುಗಳು ಅವಳತ್ತ ಚಾಚಿದಾಗ ಕ್ಷಣ ಕಾಲ ಅನುಮಾನಿಸಿದರೂ ಖಿನ್ನ ನಗೆ ಬೀರಿ ಅವುಗಳತ್ತ ಸರಿದಳು. ಅವಳ ಬದುಕಿನಲ್ಲಿ ಮತ್ತೊಂದು ಅಧ್ಯಾಯ ಪ್ರಾರಂಭವಾಗಿತ್ತು.

'ದೇವಿ ಮಹಾತ್ಮೆ', 'ಚಿತ್ರಾಂಗದ' ಎರಡೂ ಒಂದು ವಾರದ ಅಂತರದಲ್ಲಿ ಬಿಡುಗಡೆಯಾದಾಗ ಪವಿತ್ರಳಿಗೆ ಒಳಗೇ ಆತಂಕ. ಧನಂಜಯರ ನೆರಳಿಗೆ ಬಂದಾಗಿನಿಂದ ಸಾಕಷ್ಟು ಪ್ರಚಾರ ಸಿಕ್ಕಿತು. ದೇವರಾಜ್ ಅವಳನ್ನು ಹೇಗೇಗೋ ಬಳಸಿಕೊಳ್ಳುತ್ತಿದ್ದರೆಂದೂ ರೊಚ್ಚಿದ್ದು ಕೊನೆಗೆ ಪವಿತ್ರ ಬೇರೆ ಬಂದಳೆಂದು ಒಂದು ಪತ್ರಿಕೆಯಲ್ಲಿ ಪ್ರಕಟಣೆಯಾಗಿದ್ದರೆ ಮತ್ತೊಂದು ಪವಿತ್ರ ದೇವರಾಜ್‌ರಿಂದ ಹಣ ಸುಲಿಗೆ ಮಾಡುತ್ತಿದ್ದಳೆಂದು ಅದಕ್ಕಾಗಿಯೇ ದೇವರಾಜ್ ಅವಳನ್ನ ತಮ್ಮಿಂದ ದೂರಮಾಡಿದರೆಂದೂ ಪ್ರಕಟಿಸಿತ್ತು. ಆದರೆ ಅಲ್ಲಲ್ಲಿ ಜಾಹಿರಾತಿನಲ್ಲಿ ಅವಳ ದೇವಿಮಹಾತ್ಮೆಯ ಭಾವಚಿತ್ರಗಳನ್ನು ಕಂಡಾಗ ಅವಳ ಅಭಿಮಾನಿಗಳಿಗೆ ಅವಳ ಬಗ್ಗೆ ಈ ಒಡಕು ಸಮಾಚಾರಗಳನ್ನು ನಂಬುವಂತಾಗಿರಲಿಲ್ಲ ಸಾಲದಕ್ಕೆ ಧನಂಜಯರೂ ದೇವರಾಜ್ ವಿರುದ್ಧ ಬೇಕಾದಷ್ಟು ಹೇಳಿಕೆ ಕೊಟ್ಟು ತಾವು ಪವಿತ್ರಳನ್ನು ಉದ್ಧರಿಸದಿದ್ದರೆ ಅವಳು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಳೆಂದೂ, ದೇವರಾಜ್ ಅವಳಿಗೆ ಅಷ್ಟು ಚಿತ್ರಹಿಂಸೆ ಕೊಡುತ್ತಿದ್ದರೆಂದೂ ಹೇಳುತ್ತಾ ಬಂದಿದ್ದರು.

ವಸಂತಕುಮಾರ್ ಬಂದಿದ್ದರೂ ಅವನು ನಿರ್ಲಿಪ್ತನಾಗಿಯೇ ನಡೆದು

ಕೊಂಡಿದ್ದ. ಕವನಗಳನ್ನು ಬರೆದು ಅವಳಿಗೆ ನೇವೇದ್ಯ ಮಾಡದಿದ್ದರೂ ಅವನ ಕಣ್ಣುಗಳು ಅವಳತ್ತ ಆರಾಧನಾ ಭಾವದಿಂದ ಆಗಾಗ ನೋಡುತ್ತಿದ್ದವಷ್ಟೆ. ಅವನಿಗೆ ಅವಳ ಧನಂಜಯರ ಸಂಬಂಧ ಪೂರ ತಿಳಿದು ಹೋಗಿತ್ತು. ಧನಂಜಯರ ಪತ್ನಿ ಸುಶೀಲಾಗೆ ಪತಿಯ ಬಗ್ಗೆ ಅದೂ ಇದೂ ಕೇಳಿದ್ದರೂ ನಿರ್ವಿಕಾರ ಮನೋಭಾವ ತಳೆದಿದ್ದರು. ಮಕ್ಕಳಿಲ್ಲದ ಮನೆಯಲ್ಲಿ ಮಧ್ಯ ವಯಸ್ಕಳಾದ ತಾನು ಅವರನ್ನು ಯಾವ ಬಯಕೆ ಸಂಕಲೆಗಳಿಂದ ಬಂಧಿಸಿಡ ಬೇಕೆಂದು ಅವರಿಗೇ ತಿಳಿಯದಾಗಿತ್ತು. ಧನಂಜಯರು ಪವಿತ್ರಳಲ್ಲಿ ಗುರು ಶಿಷ್ಯೆಯರ ಸಂಬಂಧವೆಂದೇ ಹೇಳುತ್ತಿದ್ದರು, ನಂಬಿಕೆಯಿರದಿದ್ದರೂ.

ರಾಜೇಂದ್ರ ಈಗ ಬಹಳ ಮೆತ್ತಗಾಗಿದ್ದ. ಮುಖದಲ್ಲಿ ವಯಸ್ಸು ಕಾಣುತ್ತಿದ್ದರೂ ಮೇಕಪ್ಪಿನಲ್ಲಿ ಕಾಣುತ್ತಿರಲಿಲ್ಲ. ಒಳ್ಳೆಯ ಅನುಭವಿ ನಟ. ಅವನಿಗೆ ಅಭಿನಯ ಲೀಲಾಜಾಲವಾಗಿ ಬರುತ್ತಿತ್ತು. ಅವನನ್ನು ಮೀರಿಸಿ ನಟಿಸುವಂತೆ ಧನಂಜಯ ಪವಿತ್ರಳಿಗೆ ತಿಳಿಯ ಹೇಳುತ್ತಿದ್ದರು. ಇಬ್ಬರೂ ಒಟ್ಟಿಗೇ ಇದ್ದಾಗ ಸುತ್ತ ಯಾರೂ ಇಲ್ಲದಿದ್ದಾಗ ಮೊದಲಿನ ಸೆಳೆತ ಇದ್ದೇ ಇರುತ್ತಿತ್ತು.

'ಪವಿತ್ರಾ, ನನ್ನ ನೀನು ಕ್ಷಮಿಸಿದ್ದೀಯಾ ತಾನೇ ? ನಿಂಗೊತ್ತಿಲ್ಲ ನಾನೆಂತಹ ನರಕ ಅನುಭವಿಸ್ತಾ ಇದ್ದೀನಿಂತ' ಎಂದಾಗ ಪವಿತ್ರ ಅವನತ್ತ ಅನುಕಂಪದಿಂದ ನೋಡಿದ್ದಳಷ್ಟೇ. ಎಲ್ಲಾ ಸರಿಹೋಗಿದ್ದರೆ ತನ್ನ ಬದುಕು ಇವನೊಂದಿಗೆ ಹೇಗಿರುತ್ತಿತ್ತು ಎಂದು ಚಿತ್ರಿಸಿಕೊಳ್ಳಲೆತ್ನಿಸಿ ವಿಫಲಳಾಗಿದ್ದಳು.

'ತಿರುವು' ಸಾಕಷ್ಟು ಪ್ರಚಾರದಿಂದಲೇ ಪ್ರಾರಂಭವಾಗಿತ್ತು. ಅಷ್ಟರಲ್ಲಿ 'ಚಿತ್ರಾಂಗದ' ಬಿಡುಗಡೆಯಾಗಿ ಅಪಾರ ಜನಮನ್ನಣೆ ಪಡೆಯಿತು. ಅದರಿಂದ ಪವಿತ್ರಳ ಹೆಸರು ಮನೆ ಮಾತಂತಾಯಿತು. ಆದಾದ ಒಂದು ವಾರದೊಳಗೆ 'ದೇವಿ ಮಹಾತ್ಮೆ'ಯೂ ಬಿಡುಗಡೆಯಾಗಿ ಕಿಕ್ಕಿರಿದ ಗೃಹಗಳಿಗೆ ಪ್ರದರ್ಶನವಾದಾಗ ಮತ್ತೂ ಹೆಸರು ಗಳಿಸಿದಳು. ಎಲ್ಲರ ಬಾಯಲ್ಲೂ ಪವಿತ್ರ ಮುಂದಿನ ನಂ. 1 ತಾರೆಯೆಂಬುದೇ ಮಾತು. ಇದರಿಂದ ಅವಳ ಬೇಡಿಕೆಗಳು ಹೆಚ್ಚಿದವು. ಗೆಸ್ಟ್ ಹೌಸಿನ ಮನೆಯಿಂದ ಜಯನಗರದಲ್ಲಿ ದೊಡ್ಡ ಮನೆ ಬಾಡಿಗೆಗೆ ತೆಗೆದುಕೊಂಡಾಯಿತು. ಧನಂಜಯರ ಒತ್ತಾಸೆಯಿಂದ ರೋಜಿಗೆ ಕ್ಯಾಮರಾಮೆನ್ ವಿಧುರ ರಂಗರಾಜನ್‌ರವರೊಂದಿಗೆ ಮದುವೆ ಏರ್ಪಾಡಾಗಿತ್ತು. ಇಬ್ಬರು ಸಣ್ಣ ಮಕ್ಕಳಿದ್ದ ಅವರಿಗೆ ಮನೆಯಲ್ಲಿ

ಗೃಹಿಣಿಯೊಬ್ಬಳು, ಮಕ್ಕಳಿಗೆ ತಾಯಿಯೊಬ್ಬಳು ಬೇಕಾಗಿತ್ತು. ಲಕ್ಷಣವಾಗಿದ್ದ ರೋಜಿಯನ್ನು ಮದುವೆಯಾಗಲು ಅವರಿಗೆ ಯಾವ ಅಭ್ಯಂತರವೂ ಇರಲಿಲ್ಲ.

ಈಗ ಪವಿತ್ರ, ಧನಂಜಯ ಎಲ್ಲೆಲ್ಲೂ ಒಟ್ಟಿಗೆ. ಯಾವ ಕರಾರು ಪತ್ರಕ್ಕೂ ಅವಳು ಅವರನ್ನು ಕೇಳದೇ ಹಾಕುತ್ತಿರಲಿಲ್ಲ. ಮಾಲತಿವನ್ನು ಏನಿದ್ದರೂ ಅವಳ ಗಳಿಕೆಯ ಜವಾಬ್ದಾರಿ ಹೊತ್ತಿದ್ದರು. ಮುಂಗಡ ಹಣವೆಂದರೆ ಅವರೀಗ ಹೆದರುತ್ತಿದ್ದರು. ಕೊಟ್ಟರೆ ಪೂರ ಕೊಡಬೇಕು, ಇಲ್ಲದಿದ್ದಲ್ಲಿ ಕರಾರು ಪತ್ರ ಸಾಧ್ಯವಿಲ್ಲವೆನ್ನುತ್ತಿದ್ದರು. ಸುನೀಲ್‌ಕುಮಾರ್‌ನೊಂದಿಗೆ ಆಗಲೇ ಆರೇಳು ಚಿತ್ರಗಳಿಗಾಗಿ ಕರಾರಾಗಿತ್ತು. ಆದರೆ 'ತಿರುವು' ಮುಗಿದ ನಂತರವೇ ಮಿಕ್ಕ ಚಿತ್ರಗಳಿಂದು ಕಾಲ್‌ಶೀಟ್ ಕೊಡಲಾಗಿತ್ತು. ಪವಿತ್ರ ಈಗ ಹೊರಗೆ ಹೋಗಲೇ ಆಗುತ್ತಿರಲಿಲ್ಲ. ಎಲ್ಲಿ ಹೋದರೂ ಜನ ಮುತ್ತುತ್ತಿದ್ದರು. ಮನೆಯಿಂದ ಸ್ಟುಡಿಯೋ, ಸ್ಟುಡಿಯೋದಿಂದ ಮನೆ ಇಷ್ಟೇ ಅವಳದಾಗಿತ್ತು. ರೀಟಾ ಅವಳ ವೈಯಕ್ತಿಕ ಅಸಿಸ್ಟೆಂಟ್ ಆಗಿದ್ದಳು. ಧನಂಜಯನ ರಸಿಕತೆಯೆಲ್ಲಾ ಪವಿತ್ರಳಿಗೆ ಮೀಸಲಾಗಿತ್ತು. ಆದರೆ ಹೊರಗೆ ಬಹಳ ಎಚ್ಚರಿಕೆಯಿಂದ ನಡೆದುಕೊಳ್ಳುತ್ತಿದ್ದರು. ಯಾರಿಗೂ ಹೊರಗಿನವರಿಗೆ ಅವರ ಸಂಬಂಧದ ಬಗ್ಗೆ ತಿಳಿದಿರಲಿಲ್ಲ, ತಿಳಿದಿದ್ದರೂ ಮಾತನಾಡುತ್ತಿರಲಿಲ್ಲ.

ರೋಜಿಯ ಮದುವೆಯಿಂದಾಗಿ 'ತಿರುವು' ಚಿತ್ರದ ಚಿತ್ರೀಕರಣ ಸ್ಥಗಿತಗೊಂಡಿತ್ತು. ಊರಿನ ಪ್ರಮುಖ ವ್ಯಕ್ತಿಗಳು, ಮಂತ್ರಿ ಮಹಾಶಯರು, ಚಿತ್ರ ಪ್ರಪಂಚದ ಮಹಾನ್ ವ್ಯಕ್ತಿಗಳು ಮದುವೆಗೆ ಬಂದು ವಧೂವರರನ್ನು ಆಶೀರ್ವದಿಸಿ, ಉಡುಗೊರೆಯಿತ್ತು ಹೋದರು. ಎಲ್ಲರನ್ನೂ ಸ್ವಾಗತಿಸುತ್ತಾ ಬಾಗಿಲಲ್ಲೇ ನಿಂತಿದ್ದ ಪವಿತ್ರ ಅಂದಿನ ಅತ್ಯಾಕರ್ಷಕ ವಸ್ತುವಾಗಿದ್ದಳು. ಎಲ್ಲರೊಡನೆ ನಗುನಗುತ್ತಾ ಮಾತನಾಡುತ್ತಾ ನಿಂತಿದ್ದ ಅವಳನ್ನು ಮದುವೆಯಲ್ಲಿ ರಂಗರಾಜನ್‌ರವರ ಕಡೆಯಿಂದ ಬಂದಿದ್ದ ರಾಜೇಂದ್ರ ನೋಡಿದ. ಇವಳನ್ನು ತಾನು ಕೈಬಿಡದೇ ಆಶ್ರಯಿಸಿದ್ದರೆ ಇಂದು ಎಂತಹ ಸ್ಥಿತಿಯಲ್ಲಿರಬಹುದಿತ್ತು. ವಸಂತಕುಮಾರರತ್ತ ಗಮನ ಹರಿಸಿದ. ಪವಿತ್ರಳಿಂದ ಅತ್ತ ಇತ್ತ ಅವನ ಕಣ್ಣುಗಳು, ಗಮನ ಅತ್ತ ಸರಿದಿರಲಿಲ್ಲ. ಅವಳೆಲ್ಲಿ ಹೋದರೂ ಅವನ ದೃಷ್ಟಿ ಅವಳನ್ನು ಹಿಂಬಾಲಿಸುತ್ತಿದ್ದುದನ್ನು ಗಮನಿಸಿದ. ಮನಸ್ಸಿನಲ್ಲೇ ನಕ್ಕ. 'ನಿನಗೆಟುಕನಂತಹ

ವಸ್ತುವೇನೋ ಅದು !'

ವಿಜಯೇಂದ್ರ, ಮೂರ್ತಿ, ಕಾಯ್ಕಿಣಿ, ಸತ್ಯರಾವ್, ಸುನಿಲ್ ಕುಮಾರ್, ಗಂಗಾಧರಯ್ಯ, ಜಮಖಂಡಿ, ಸೋಂಧಿ ಎಲ್ಲರೂ ಬಂದು ವಧೂವರರಿಗೆ ಆಶೀರ್ವದಿಸಿಹೋದರು. ದೇವರಾಜ್ ಬರುವುದಿಲ್ಲವೆಂದು ಎಲ್ಲರಿಗೂ ತಿಳಿದಿತ್ತು. 'ಅವನಿಗೆ ಮುಖವೆಲ್ಲಿದೆ?' ಎಂದು ಧನಂಜಯ ನಕ್ಕಿದ್ದರು. ಆದರೆ ಅವರ ಎಣಿಕೆ ಸುಳ್ಳಾಗಿತ್ತು. ಇನ್ನೇನು ಕಾರ್ಯಕ್ರಮಗಳೆಲ್ಲಾ ಮುಗಿಯುವ ವೇಳೆಗೆ ದೇವರಾಜ್‌ರವರ ಕಾರು ಬಂದಿತು. ಕಾರಿನಿಂದ ಇಳಿದವರೇ ಹೋಗಿ ನೇರವಾಗಿ ಮದುಮಗಳ ಬಳಿಗೆಹೋಗಿ ಉಡುಗೊರೆಯಿತ್ತು ವರನಿಗೆ ಹಸ್ತಲಾಘವಕೊಟ್ಟು ತಲೆತಗ್ಗಿಸಿ ಹೋದಾಗ ಮಾಲತಮ್ಮ ಅವರ ಹಿಂದೆ ನಡೆದರು.

'ದಯವಿಟ್ಟು ಊಟ ಮಾಡಿ ಹೋಗಬೇಕು.' ದೇವರಾಜ್ ಅವರತ್ತ ತೀಕ್ಷ್ಣವಾಗಿ ನೋಡಿದರು. 'ನಿಮ್ಮ ಮನೆಯ ಊಟದ ಋಣ ತೀರಿತು' ಅನ್ನುವ ಹಾಗಿತ್ತು. ಬಾಗಿಲಲ್ಲಿ ನಿಂತಿದ್ದ ಪವಿತ್ರ ಅವಳ ಇಕ್ಕೆಲದಲ್ಲಿದ್ದ ಧನಂಜಯ, ವಸಂತಕುಮಾರನನ್ನು ನೋಡಿದರು ಅಷ್ಟೆ ಹಾಗೆಯೇ ಫಲ ತಾಂಬೂಲವನ್ನೂ ತೆಗೆದುಕೊಳ್ಳದೇ ಹೊರಟುಬಿಟ್ಟರು ಅವರನ್ನು ಕರೆಯಲು ಹಿಂದೆಯೇ ಬಂದ ಶಾಮ್ ಬಾಗಿಲಲ್ಲೇ ನಿಂತ. ದೇವರಾಜ್‌ರವರ ಕಾರಿನಲ್ಲಿ ಮುಂದಿನ ಸೀಟಿನಲ್ಲಿ ಮಾಧು ಕುಳಿತ್ತಿದ್ದ. ಕ್ಷಣಕಾಲ ನಿಬ್ಬೆರಗಾಗಿ ನೋಡಿದ. ತಂಗಿಯ ಮದುವೆಗೆ ಬಾಗಿಲಿನವರೆಗೆ ಬಂದು ಒಳಗೆ ಬಾರದೇ ಆಶೀರ್ವಾದ ಮಾಡದೇ ಹೋಗಿದ್ದ. ಈಗವನು ತಮ್ಮ ಎದುರಾಳಿಯ ಪಕ್ಷದವನಲ್ಲವೇ? ಈಚೆಗೆ ಬಂದಿರಬೇಕು. ಇಲ್ಲದಿದ್ದರೆ ಅವನನು ತಾನು ನೋಡದಿರಲು ಸಾಧ್ಯವಿಲ್ಲ. ಎಲ್ಲಿಂದ ಬಂದಿರುವನೋ ತಾಯಿಗೆ ತಿಳಿಸಬೇಕು. ತಂಗಿ, ತಾಯಿ ಬಂದು ಕರೆಯಲೆಂದು ಕಾದಿದ್ದನೇನೋ ಅವನು! ಒಳಗೆ ಹೋಗಿ ತಾಯಿಗೆ ತಿಳಿಸಿದಾಗ ಮಾಲತಮ್ಮ ಏದುಸಿರು ಬಿಡುತ್ತಾ ಬಂದರು.

'ಪವಿತ್ರಾ, ಮಾಧೂ ಬಂದಿದ್ದಾನಂತೆ. ದೇವರಾಜ್ ಕಾರ್ನಲ್ಲಿ ಕೂತಿದ್ದಾನಂತೆ, ಬಾ ಕರೆಯೋಣ' ಅವರ ಮಾತು ಕೇಳಿದಾಗ ಧನಂಜಯರ ಮುಖ ಬೆಳ್ಳಗಾಗಿತ್ತು. ವಸಂತ ಅಚ್ಚರಿಯಿಂದ ನೋಡಿದ. ಪವಿತ್ರ, ಮಾಲತಮ್ಮ ಬಾಗಿಲಿಗೆ ಬಂದಾಗ ದೇವರಾಜ್ ಕಾರಿನ ಬಳಿ ನಿಂತು ಗಂಗಾಧರಯ್ಯನವರೊಡನೆ ಮಾತನಾಡುತ್ತಿದ್ದರು. ಮಾಲತಮ್ಮನಿಗೆ

ಎಷ್ಟಾದರೂ ಹೆತ್ತ ಕರುಳು.

'ಮಾಧೂ ಬಾ ಒಳಗೆ. ಒಳಗೆ ಬರೋಲ್ವಾ ?' ಎಂದಾಗ ಮಾಧು ಹುಬ್ಬುಗಂಟಿಕ್ಕಿದ. ಪವಿತ್ರ ಹೊರಬಾಗಿಲಿಂದಲೇ ಕೂಗಿದಳು.

'ಬಾ ಮಾಧೂ, ಒಳಗೆ ಬಾ. ಇನ್ನೂ ಕೋಪಾನಾ ?'

ಅವಳಿಗೆ ಹೊರಗೆ ಬರಲು ಹೆದರಿಕೆ. ಜನಜಂಗುಳಿ ಹೊರಗೆ ನೆರೆದಿತ್ತು ತಮ್ಮ ನೆಚ್ಚಿನ ತಾರೆಯರನ್ನು, ನಟರನ್ನು ಕಾಯಲು ಪೋಲೀಸ್ ಸಿಬ್ಬಂದಿ ಜೋರಾಗಿತ್ತು. ಅವಳ ಪರವಾಗಿ ಅವನಿಗೆ ಹೇಳಲು ವಸಂತ್ ಕಾರಿನ ಬಳಿ ಹೋಗಿ ಹೇಳಿದಾಗ ಮಾಧೂ ಏನು ಹೇಳಿದನೆಂದು ಕೇಳಿಸಲಿಲ್ಲ. ವಸಂತ್‌ನ ಮುಖ ಕೆಂಪಾಗಿತ್ತು. ಮಾಲತಮ್ಮ ಅವನನ್ನು ಹಿಡಿದು ನಿಲ್ಲಿಸಿದರು.

'ಏನಂತೆ ?'

ಅಷ್ಟರಲ್ಲಿ ಕಾರು ಬರ್ ಎಂದು ಹೋದುದು ಕಾಣಿಸಿತು. ವಸಂತ್ ತಲೆಯಾಡಿಸಿದ.

'ಆ ಮಾತೆಲ್ಲಾ ಬೇಡಾಮ್ಮಾ ?'

'ಇಲ್ಲ; ನಂಗೆ ಹೇಳಲೇ ಬೇಕು. ನಾನು ಅವನ ತಾಯಿಯಲ್ಲವೇ ? ಪರ್ವಾಗಿಲ್ಲ ಹೇಳು' ಮಾಲತಮ್ಮ ಒತ್ತಾಯಿಸಿದರು. ಪವಿತ್ರ ವಸಂತನ ಮುಖ ನೋಡಿದಳು. ಅವಳಿಗೆ ಅರಿವಾಗಿತ್ತು. ಮಾಧೂ ಏನೋ ಅನ್ನ ಬಾರದ್ದು ಅಂದಿದ್ದನೆಂದು. ವಸಂತ್ ಅನುಮಾನಿಸುತ್ತಾ ಹೇಳಿದ.

'ಪವಿತ್ರಳಿಗೆ ಹೇಳಿ, ನಾನು ಅವಳು ಮಾಡುವ ವ್ಯಭಿಚಾರದ ಹಣ ದಿಂದ ಬದುಕಲಿಚ್ಛಿಸೋಲ್ಲ. ನನ್ನ ಪಾಡಿಗೆ ನಾನು ಚೆನ್ನಾಗಿದ್ದೇನೆ. ಇಷ್ಟ ರಲ್ಲೇ ಅವಳು ನನಗೆ ಕೊಟ್ಟಿದ್ದ ಆ ಎಂಜಲು ಹಣಾನ ವಾಪಸ್ಸು ಕೊಡ್ತೀ ನೀಂತ ಹೇಳಿ ಅಂತ ಹೇಳಿದ್ರು.

ಪವಿತ್ರಳಿಗೆ ಮೈಯಲ್ಲಿ ಅಗ್ನಿ ಸ್ಫೋಟವಾದಂತಾಯಿತು. ಧನಂಜಯ ಅವಳ ಮುಖಭಾವ ಕಂಡು ಕೈ ಮೆಲ್ಲನೇ ಅದುಮಿದರು. ತಾನು ಚಿಕ್ಕ ವಯಸ್ಸಿನಲ್ಲೇ, ತನ್ನ ಆಸೆ, ಆಕಾಂಕ್ಷೆಗಳನ್ನು ಹುಡುಗುತನ, ಓದು ಒಡ ನಾಟ ಬಿಟ್ಟು ಮನೆಯ ಜವಾಬ್ದಾರಿ ಹೊತ್ತು, ಇವರೆಲ್ಲರಿಗಾಗಿ ದುಡಿಮೆ ಗಿಳಿದವಳು. ಅಂದು ಅವನು ತನ್ನ ಎಂಜಲಕಾಸಿನಿಂದ ತಂದದ್ದೇ ತಿಂದು ಮೈ ಬೆಳೆಸಿಕೊಂಡಿದ್ದ. ಅಹಂಕಾರ ಬೆಳೆಸಿಕೊಂಡಿದ್ದ. ಈಗ ಅದೇ ಎಂಜಲು ಹಣವಾಯಿತೇ ? ಅಂದು ಅದೇ ಅವನಿಗೆ ಬೇಕಿತ್ತು. ಎಲ್ಲಾ ಹಾಗೆಯೇ ತನ್ನಿಂದ ಎಷ್ಟು ಪಡೆಯಬೇಕೋ ಅಷ್ಟು ಪಡೆಯುವವರಗೆ ತಾನು ಬೇಕು.

ಅನಂತರ ತಾನು ಎಂಜಲು. ಅವಳೆದೆ ಆವೇಶದಿಂದ ಏರಿಳಿಯಿತು.

'ನೋಡೂ ಪಾಪೂ, ಸಮಾಧಾನ ತಂದ್ಕೋ' ಧನಂಜಯ ಹೇಳಿದಾಗ ಆವರತ್ತ ನೋಡಲಿಲ್ಲ. ಇವರೂ ಹಾಗೆಯೇ ಇರಬಹುದು. ತನ್ನ ಯೌವನ, ಹೆಸರಿರುವವರೆಗೆ ಮಾತ್ರ ಅಷ್ಟೆ. ಆಮೇಲೆ ಅವರಿಗೆ ತನ್ನಿಂದೇನು ದೊರಕೀತು ? ಅಲ್ಲಿ ನಿಲ್ಲದೇ ಒಳಗೆ ನಡೆದಳು. ಎದುರಿಗೆ ಬಂದ ರಾಜೇಂದ್ರ ಕೇಳಿದ.

'ಏನು ? ಏನಾಯಿತು ?'

'ನನ್ನನ್ನು ಉಪಯೋಗಿಸಿಕೊಂಡು ಮುಂದೆ ಬಂದ ಮತ್ತೊಬ್ಬ ವ್ಯಕ್ತಿಯನ್ನು ನೋಡಿದೆ' ಎಂದಷ್ಟೇ ಹೇಳಿ ಒಳನಡೆದಳು.

ಧನಂಜಯರ ಅನುಮಾನ ನಿಜವಾಗಿತ್ತು. ಮೂರ್ತಿ ಬಂದು ಆ ರಾತ್ರಿಯೇ ತಿಳಿಸಿದ್ದರು. ಮಾಧೂ, ದೇವರಾಜ್ ಇಬ್ಬರೂ ಪಾರ್ಟ್ನರ್ ಆಗಿ ಚಿತ್ರವೊಂದನ್ನು ತಯಾರಿಸಲಿರುವರೆಂದೂ ಹೊಸ ತಾರೆಯೊಬ್ಬಳನ್ನು ಚಿತ್ರರಂಗಕ್ಕೆ ಪರಿಚಯಿಸಲಿದ್ದಾರೆಂದೂ, ಅವಳು ಬಹಳ ಚೆಲುವೆಯೊಂದೇ ಅಲ್ಲ ತ್ರಿಭಾಷಾತಾರೆಯೆಂದೂ, ಸುನಿಲ್‌ಕುಮಾರ್‌ನನ್ನು ಅವಳೊಂದಿಗೆ ಬುಕ್ ಮಾಡಿಕೊಂಡಿರುವುದಾಗಿಯೂ ತಿಳಿಸಿದಾಗ ಧನಂಜಯರಿಗೆ ಜಂಘಾಬಲವೇ ಉಡುಗಿಹೋದಂತಾಯಿತು. ಸುನಿಲ್‌ಕುಮಾರ್, ಹೊಸತಾರೆಯೊಬ್ಬಳನ್ನು ಹಾಕಿ ಹಟದಿಂದ ಭರ್ಜರಿ ಚಿತ್ರ ಅವರು ತಯಾರಿಸಲು ಹೊರಟಿದ್ದಾರೆ. ಆದರೆ ತಾನು ಪವಿತ್ರ, ರಾಜೇಂದ್ರ ಇವರಿಬ್ಬರನ್ನೇ ಹಾಕಿಕೊಂಡು ಭರ್ಜರಿ ಚಿತ್ರ ಮಾಡಲಾದೀತೇ ? ತಮ್ಮಲ್ಲಿ ಹೊಸದಾಗಿ ಜನಕ್ಕೆ ನೀಡಲೇನಿತ್ತು ಕತೆಯೊಂದನ್ನು, ಅಭಿನಯ ಕೌಶಲ್ಯವೊಂದನ್ನು ಬಿಟ್ಟು ದೇವರಾಜ್ ಖಂಡಿತ ಗೆಲ್ಲುತ್ತಾರೆ. ಅವರು ಗೆಲ್ಲಲು ಬಿಡಬಾರದು. ತಾನು ಕೈಗೊಂಡ ಚಿತ್ರವನ್ನು ಬಿಡಬಾರದು. ಒಳಗೊಳಗೇ ಚಿಂತಿಸಿದರು. ಅವರಿಂದ ಸಮಾಚಾರ ತಿಳಿದ ಮಾಲತಮ್ಮ ಹೌಹಾರಿದರು.

'ನೋಡಿದ್ರಾ ಮನೆಹಾಳನ್ನ. ಹಾವಿಗೆ ಹಾಲೆರದಂತಾಯಿತು ನಾನೇ ಇವಳಿಂದ ಅವನ್ನ ಬೆಳೆಸಿ ಕೊಬ್ಬಿಸಿದಂತಾಯಿತು. ಸ್ವಂತ ತಂಗಿಗೇ ಶತ್ರುವಾದ' ಕ್ರೋಧದಿಂದ ಹಿಡಿಶಾಪ ಹಾಕಿದರು. 'ಅವನು ಖಂಡಿತಾ ಉದ್ಧಾರ ಆಗೋಲ್ಲ.'

ಪವಿತ್ರ ಅವರನ್ನು ತಡೆದಳು. 'ಹಾಗನ್ನಬೇಡಾಮ್ಮಾ. ಅಂತಹವರೇ ಈ ಚಿತ್ರರಂಗದಲ್ಲಿ ಉದ್ಧಾರ ಆಗೋದು. ಒಳ್ಳೆಯತನ, ಉದಾರತೆ, ಸ್ನೇಹ

ಪ್ರೇಮ, ಇದಕ್ಕೆಲ್ಲಾ ಇಲ್ಲಿ ಸ್ಥಾನ ಕೊಡ್ತಾ ಕೂತ್ಕೊಂಡ್ರೆ ಉದ್ಧಾರ ಆಗೋಕ್ಕಾಗುತ್ತಾ ?'

'ನೀನು ಸುಮ್ಮನಿರು, ಅವನು ಚಾಪೆ ಕೆಳಗೆ ತೂರಿದರೆ ನಾವು ರಂಗೋಲಿ ಕೆಳಗೆ ತೂರೋಣ' ಧನಂಜಯ ಹೇಳಿದರು.

ಮಾರನೆಯ ದಿನವೇ 'ತಿರುವು' ಪೂರ ಬದಲಾಯಿಸಿತು. ಭಾವ, ಅಭಿನಯ ಪ್ರಧಾನವಾದ ಸಾಂಸಾರಿಕ ಚಿತ್ರವಾಗಿದ್ದ ಅದು ಹೊಸರೂಪು ಬದಲಾಯಿಸಿತು. ನಾಲ್ಕು ಫೈಟುಗಳು, ಮೂರು ರೇಪು, ಒಂದು ಕ್ಯಾಬರೆ ದೃಶ್ಯ ಹೊಸದಾಗಿ ಸೇರಿಸಲ್ಪಟ್ಟವು. ಪವಿತ್ರಳು ಅರೆನಗ್ನಳಾಗಿ ಬರುವ ಕೆಲವು ದೃಶ್ಯಗಳ ಜೋಡಣೆಯಾಯಿತು. ರಾಜೇಂದ್ರನೊಂದಿಗೆ ಸುನಿಲ್ ಕುಮಾರನು ಗೌರವನಟನಾಗಿ ಸೇರ್ಪಡೆಗೊಂಡ. ಹೊಸನಾಯಕನೆಂದು ವಸಂತಕುಮಾರ್‌ನನ್ನು ಚಿತ್ರರಂಗಕ್ಕೆ ಪರಿಚಯಿಸುವೆನೆಂದು ಧನಂಜಯ ಪಣತೊಟ್ಟರು. ಅವನ ಭಾವಪೂರಿತ ಮುಖ ಅವರಿಗೆ ಬಹಳ ಹಿಡಿಸಿತ್ತು. ಕಾದಂಬರಿಯ ಕತೆ ಚಿತ್ರದಲ್ಲಿ ಕಂಡೂ ಕಾಣದಂತೆ ಹಾಸುಹೊಕ್ಕಾಗಿತ್ತು. ಪವಿತ್ರ ತಲ್ಲಣಿಸಿಹೋದಳು. ಎಂತಹ ಸುಂದರವಾದ ಕತೆ ಎಂತಹ ರೂಪು ತಳೆದಿತ್ತು. ತನ್ನ ಕನಸಿನ ಆ ಪಾತ್ರವು ಕಳೆಗುಂದಿತ್ತು. ಅವಳಿಗಾದ ಒಂದೇ ಸಂತಸವೆಂದರೆ ವಸಂತ್‌ನ ಪದಾರ್ಪಣವಷ್ಟೇ. ರಾಜೇಂದ್ರನ ಸ್ನೇಹಿತನಾಗಿ ಅವನಿಗೆ ಸನ್ಮಾರ್ಗ ತಿಳಿಸುವ ಪಾತ್ರ ಅವನಿಗೆ ಹೇಳಿ ಮಾಡಿಸಿದಂತಿತ್ತು. ಅವಸರವಸರವಾಗಿ ಚಿತ್ರ ಮುಗಿಸಿ ದೇವರಾಜ್, ಮಾಧೂ ಪ್ರಾರಂಭಿಸಿದ್ದ ಮಾಧೂ-ರಾಜ್ ಲಾಂಛನದ ಹೊಸ ಚಿತ್ರ ಸೆಟ್ಟೇರುವ ಮುನ್ನವೇ ಬಿಡುಗಡೆ ಮಾಡಬೇಕೆಂಬ ಹಂಬಲ ಧನಂಜಯರಿಗೆ. ಎಡಬಿಡದೆ ಚಿತ್ರೀಕರಣ ಪ್ರಾರಂಭವಾಯಿತು. ಆದರೆ ಈ ಅವರ ಹಟ ಪವಿತ್ರನಿಗೆ ಸರಿ ಬೀಳಲಿಲ್ಲ. ಮೌಲ್ಯವಿದ್ದರೆ ಹೇಗಿದ್ದರೂ ಚಿತ್ರ ಉಳಿಯುವುದೆಂದೇ ಅವಳ ಭಾವನೆ. ಈ ಒತ್ತಡವೆಲ್ಲಾ ಅನಾವಶ್ಯಕವೆನಿಸಿತ್ತು. ಭರ್ಜರಿ ಸೆಟ್ಟುಗಳು, ಭವ್ಯವಾದ ನೃತ್ಯಗಳು ಹೊರಾಂಗಣ ಚಿತ್ರೀಕರಣ ಫೈಟುಗಳು ಎಲ್ಲಾ ಅವರ ಅಂದಾಜಿಗಿಂತ ನಾಲ್ಕು ಪಟ್ಟು ಹಣ ನುಂಗಿತ್ತು. ರಾಜೇಂದ್ರ ಸುನಿಲ್ ಇಬ್ಬರ ಮಧ್ಯೆ ಇದ್ದ ಅಂತರ ಇನ್ನೂ ಹೆಚ್ಚಾಗಿತ್ತು. ಪವಿತ್ರ ವಸಂತ್ ಮತ್ತೂ ಹತ್ತಿರದವರಾಗಿದ್ದರು. ತನ್ನ ಕಾದಂಬರಿ ಹೀಗೆ ಚಿದ್ರ ಚಿದ್ರವಾಗಿದ್ದು ಅವನಿಗೆ ಬೇಸರ ತಂದಿತ್ತು. ತನಗೆ ತಾರಾಪಟ್ಟ ಸಿಕ್ಕಿದ್ದು ಕೊಂಚ ಸಮಾಧಾನವಾದರೂ ತಾನು ಹೆಚ್ಚು ದಿನ ಚಿತ್ರರಂಗದಲ್ಲಿರುವುದಿಲ್ಲವೆಂದು ಪವಿತ್ರಳಿಗೆ

ಹೇಳಿದ್ದ. ಪವಿತ್ರ ತನ್ನ ಅಭಿನಯ ಕೌಶಲ್ಯವನ್ನು ಕಡೆಗಣಿಸಿ ತನ್ನನ್ನು 'ಗ್ಲಾಮರ್ ಗರ್ಲ್' ಆಗಿ ಮಾಡಿದ್ದು ಅವಳಿಗೆ ಬೇಸರ ತಂದಿತ್ತು. ತನ್ನ ಇಮೇಜ್‌ಗೆ ಧಕ್ಕೆ ತಗಲುವುದೆಂದು ಹೆದರಿದಳು. ಇಬ್ಬರೂ ಮನದಳಲು ತೋಡಿಕೊಳ್ಳುತ್ತಾ ನಿಕಟವರ್ತಿಗಳಾಗಿದ್ದರು ಸೆಟ್ಸ್‌ಗಳಲ್ಲಿ ಅವರಿಬ್ಬರೂ ಒಟ್ಟಿಗೆ ಕುಳಿತು ಪಿಸುದನಿಯಲ್ಲಿ ಮಾತನಾಡುತ್ತಿದ್ದರೆ ಎಲ್ಲರೂ ಅತ್ತ ಗಮನ ಹರಿಸುತ್ತಿದ್ದರು.

'ಈ ಚಿತ್ರದಲ್ಲಿ ನನಗೆ ಹೆಸರು ಬಂದರೆ ಇನ್ನೊಂದಿಷ್ಟು ಚಿತ್ರಗಳಲ್ಲಿ ಹಣ ಗಳಿಸಿಕೊಂಡು ಹೊರಟುಬಿಡುತ್ತೇನೆ. ಇದರ ಸಹವಾಸ ಬಹಳ ದಿನ ಬೇಡಾ.'

'ನಾನೂ ಹಾಗೇ ಮಾಡಬೇಕೆಂದಿದ್ದೇನೆ. ನಮ್ಮ ಲಲ್ಲಿ, ಶ್ಯಾಮ್ ಇಬ್ಬರೂ ಸೆಟಲ್ ಆದ್ರೆ ಸಾಕು. ನಾನೂ ಬಿಟ್ಟುಬಿಡುತ್ತೇನೆ. ಪುಟ್ಟಿ, ಕಿಟ್ಟು ಹೇಗೋ ಮುಂದೆ ಬರ್ತಾರೆ. ನನ್ನ ಊರಿನ ಹೊರಗೆ ಸ್ವಂತ ಮನೆ, ತೋಟ, ಕಾರು ಎಲ್ಲಾ ಮಾಡಿಕೊಂಡು ಬಿಡುತ್ತೇನೆ ನನಗೆ ಆಮೇಲೆ ಮನಶ್ಶಾಂತಿ ಸರಳ ಜೀವನ, ಸುಖ ಬೇಕು. ನನ್ನದೇ ಪುಟ್ಟ ಸಂಸಾರ ಬೇಕು.

ಒಬ್ಬರ ಮುಖ ಒಬ್ಬರು ನೋಡಿಕೊಂಡರು ಮನದಿಂಗಿತ ಅರಿತರು. ವಸಂತ್ ಕಿವಿಯಲ್ಲಿ ಉಸುರಿದ.

'ನಾನೂ ಆ ದಿನಕ್ಕಾಗಿ ಕಾಯುತ್ತೇನೆ.'

ಅವರಿಬ್ಬರನ್ನೇ ಗಮನಿಸಿದ ಧನಂಜಯ ಕ್ಷಣಕಾಲ ಚಕಿತರಾದರೂ ತಮ್ಮ ಅನುಮಾನಕ್ಕೆ ತಾವೇ ಮನದಲ್ಲಿ ನಕ್ಕರು

ಮಾಧೂ, ದೇವರಾಜ್ ತಮ್ಮ ಚಿತ್ರವನ್ನು ಅದ್ದೂರಿಯಿಂದ ಪ್ರಾರಂಭಿಸಲ ಸನ್ನಾಹ ನಡೆಸಿದರು. ಸಾಕಷ್ಟು ಪ್ರಚಾರಕ್ಕಾಗಿ ಮಂತ್ರಿಗಳನ್ನು ಕರೆಸಿ ಮುಹೂರ್ತ ನಡೆಸಿದ್ದರು ಪತ್ರಿಕೆಗಳಲ್ಲಿ ಹೊಸ ತಾರೆಯ ಪರಿಚಯ ಹೊಗಳಿಕೆ ಹಾಡಿ ಹರಸಿದ್ದರು. ಪತ್ರಿಕೆಯಲ್ಲಿ ಹೊಸತಾರೆ ಲಹರಿಯನ್ನು ಕಂಡಾಗ ಪವಿತ್ರಳಿಗೆ ಮೊದಲಬಾರಿಗೆ ಎದೆ 'ಜಿಲ್' ಎಂದಿತು. ಅವಳಿಗೆ ತನ್ನ ಹೋಲಿಕೆಯಿಷ್ಟಿದೆ. ಬೇಕಾಗಿಯೇ ಮಾಧೂ, ದೇವರಾಜ್ ತನ್ನನ್ನು ತುಳಿಯಲು ಯತ್ನಿಸುತ್ತಿದ್ದಾರೆಂದು ತಿಳಿಯಿತು. ಆವರಿವರಿಂದ ಆ ಹೋಲಿಕೆಯ ಬಗ್ಗೆ ಕೇಳಿದ್ದರೂ ಅವಳಿಗೆ ನಂಬಿಕೆ ಬಂದಿರಲಿಲ್ಲ. ಯಾವಾಗಲೂ ದೊಡ್ಡ ತಾರೆಯರನ್ನೇ ಹೋಲು ತ್ತಾರೆಂಬ ಒಂದು ಹುಸಿ ಮನೋಭಾವ ಮೂಡಿ ಬರುವುದು ಸಾಮಾನ್ಯ.

ಜೂನಿಯರ್ ಪವಿತ್ರ ಎಂದು ಕೆಲವರು ತಿಳಿಸಿದಾಗ ನಕ್ಕಿದ್ದಳು. ಆದರೆ ತನ್ನಂತೆಯೇ ಮೇಕಪ್ ತನ್ನಂತೆಯೆ ಅಲಂಕಾರ ಮಾಡಿಕೊಂಡಿದ್ದ ಲಹರಿ ಎಷ್ಟು ತನ್ನನ್ನು ಹೋಲುತ್ತಿದ್ದಳು. ರೀಟಾಳಿಂದ ಅರಸಪ್ಪನೇ ಅವಳಿಗೂ ಮೇಕಪ್‌ಮನ್ ಎಂದು ತಿಳಿದಾಗ ಬೆಚ್ಚಿದಳು. ಆದರೂ ಅವಳಿಗೆ ಇದನ್ನು ಇತರರಲ್ಲಿ ತೋಡಿಕೊಳ್ಳಲು ಹೆದರಿಕೆ, ತನಗೆ ತನ್ನ ಮೇಲೆ ಭರವಸೆಯಿಲ್ಲವೇ ಎಂದುಬಿಟ್ಟರೆ.

ಧನಂಜಯರೊಡನೆ ಗುಟ್ಟಾಗಿ ಇದನ್ನು ತಿಳಿಸಿ ತನ್ನಳಲು ತೋಡಿಕೊಂಡಾಗ ಅವರು ನಕ್ಕುಬಿಟ್ಟರು. 'ನವಿಲನ್ನು ನೋಡಿ ಕೆಂಬೂತ ಪುಕ್ಕ ಕೆದರಿಕೊಂಡಂತೆ. ಸುಮ್ಮನಿರು ಅವಳು ತುಂಬಾ ದಿನಗಳು ಉಳಿಯುವುದಿಲ್ಲ. ನಿನ್ನ ಅಭಿಮಾನಿಗಳೇನು ಹುಚ್ಚರಲ್ಲ. ಅವರಿಗೆ ಗೊತ್ತು ನಿನ್ನ ವ್ಯಾಲ್ಯೂ.'

ಮನೆಯಲ್ಲಿ ಶ್ಯಾಮ್ ಅಧೀರನಾಗುತ್ತಿದ್ದ. ರೋಜಿಯ ಮದುವೆಗೆ ಬೇಕಾದಷ್ಟು ಹಣ ಸುರಿದಾಗಿತ್ತು. ಮಾಧೂ ಮನೆಬಿಟ್ಟು ಹೋದಾಗಿನಿಂದ ತಾನು ಎಷ್ಟು ಹಣ ಕೇಳಿದರೂ ತಾಯಿಯಾಗಲೀ, ಪವಿತ್ರಳಾಗಲೀ ಇಲ್ಲ ಎನ್ನುತ್ತಿರಲಿಲ್ಲ. ಆಗಲೇ ಪವಿತ್ರಳಿಗೆ ಎದುರಾಳಿಗಳು ಬರುತ್ತಿದ್ದಾರೆ, ಎಂದುಕೊಳ್ಳುತ್ತಿದ್ದ 'ತಿರುವು' ಚಿತ್ರದ ರೀರೆಕಾರ್ಡಿಂಗ್‌ಗೆ ಧನಂಜಯ ಹೋಗಿದ್ದಾಗ ತಾಯಿ, ಪವಿತ್ರ ಇಬ್ಬರೇ ಮನೆಯಲ್ಲಿದ್ದಾಗ ಮಾತು ಮೆಲ್ಲನೆ ತೆಗೆದ. ತಾನೂ ತನ್ನ ಸ್ನೇಹಿತ ಪಾರ್ಟ್ನರ್ ಆಗಿ ಬಿಸಿನೆಸ್‌ಗಿಳಿಯುವುದೂ, ಸ್ನೇಹಿತನ ತಂಗಿ ವಿನೀತಳನ್ನು ವಿವಾಹವಾಗಲಿರುವ ಇಚ್ಛೆಯನ್ನು ತಿಳಿಸಿದಾಗ ಪವಿತ್ರಳಿಗೆ ಸಂತಸವೇ ಆಗಿತ್ತು. ಆದರೆ ಮಾಲತಮ್ಮ ತಮ್ಮ ಅಂಜಿಕೆ ವ್ಯಕ್ತ ಪಡಿಸಿದರು.

'ನೀನೂ ಮದುವೆ ಮಾಡ್ಕೊಂಡು ಬಿಸಿನೆಸ್ ಅಂತ ಮನೆಬಿಟ್ಟು ಹೊರಟುಹೋದ್ರೆ ಮನೆಗೆ ಯಾರೋ ಗಂಡುದಿಕ್ಕು ? ಅವನು ತೋರಿಸಿದ ವಿನೀತಳ ಫೋಟೋ ನೋಡಿದರು.

'ಯಾಕಮ್ಮ ಧನಂಜಯರು ಇಲ್ವಾ ? ನಾನು ಸುಮ್ಮನೆ ಕೂತು ತಿನ್ನೋಕಾಗುತ್ತಾ ?' ಶ್ಯಾಮ್ ಹೇಳಿದಾಗ ಮಾಲತಮ್ಮ ಪವಿತ್ರಳನ್ನು ಉಪಾಯದಿಂದ ಅಲ್ಲಿಂದ ಕಳಿಸಿದರು.

'ಪಾಪೂ ನನ್ನ ಕನ್ನಡಕ ತಂದ್ಕೊಡು, ನಿನ್ನ ರೂಮಿನಲ್ಲಿದೆ. ಪುಟ್ಟೀನ ಕಳಿಸಿದ್ರೆ ನಿನ್ನ ಸಾಮಾನು ಕಿತ್ತು ಹಾಕಿಬಿಟ್ಟಾಳು.'

ಪವಿತ್ರ ಅತ್ತ ಹೋದೊಡನೆಯೇ ಹೇಳಿದರು. 'ಧನಂಜಯ ಎಷ್ಟು

ದಿನಗಳು ? ಅವರಿಗೆ ಹೆಂಡತಿ, ಮನೆಯಿಲ್ಲವೇ ? ಎಷ್ಟಾದ್ರೂ ಕೈ ಹಿಡಿದೋಳೇ ಹೆಚ್ಚು. ಯಾವ ಹೊತ್ತು ಬೇಗೋ! ದೇವರಾಜ್‌ನ ನೋಡ್ಲಿಲ್ವಾ ನೀನೂ ?'

ಶ್ಯಾಮ್ ಯೋಚಿಸಿದ. 'ನೋಡಮ್ಮಾ ಹೇಗಾದ್ರೂ ಮಾಡಿ ಪವಿತ್ರ ಧನಂಜಯ ಇಬ್ಬರನ್ನೂ ಕೂಡಿಸಿ ಮದುವೆ ಮಾಡಿಬಿಡು. ಆಗ ಅವರು ನಿಮಗೆ ಆಸರೆಯಾಗೇ ಉಳ್ಕೋತಾರೆ.'

'ಅದ್ಹೇಗೆ ಸಾಧ್ಯ, ಮೊದಲ ಹೆಂಡತಿಯಿರುವಾಗ ಇವಳನ್ನು ಹೇಗೆ ಮಾಡ್ಕೋತಾರೆ ?'

'ಅದೆಲ್ಲಾ ನನಗೆ ಬಿಡು. ಗುಟ್ಟಾಗಿ ಮದುವೆಯಾಗಿಬಿಡಲಿ, ಅವರಿಂದ ಪವಿತ್ರಳಿಗೊಂದು ಮಗುವಾದರೆ ಹೇಗೆ ಬಿಟ್ಟು ಹೋಗ್ತಾರೆ? ಈಗೆಲ್ಲಾ ಹಾಗೇ ತಾನೇ ಆಗ್ತಾ ಇರೋದು ?' ಶ್ಯಾಮ್ ಹೇಳಿದಾಗ ಕೊಂಚ ಅಳುಕಿದರೂ ಮಾಲತಮ್ಮ ತಲೆಯಾಡಿಸಿದರು.

'ನೋಡಪ್ಪಾ, ಒಬ್ಬಣ್ಣ ಅವಳನ್ನು ಹಾಳು ಮಾಡೋಕೆ ಹೊರಟಿದ್ದಾನೆ. ನೀನಾದ್ರೂ ಉದ್ಧಾರ ಮಾಡು.' ಪವಿತ್ರ ಅಲ್ಲಿಗೆ ಬಂದುದರಿಂದ ಮಾತು ಅಲ್ಲಿಗೆ ನಿಂತಿತು.

ರೀರೆಕಾರ್ಡಿಂಗ್ ಮುಗಿಸಿ ಬಂದ ಧನಂಜಯರಿಗೆ ಮನಸ್ಸು ಅತ್ಯಂತ ಹಗುರವಾಗಿತ್ತು. ಸೆನ್ಸಾರ್ ಆಗಿಬಿಟ್ಟರೆ ಆದಷ್ಟು ಬೇಗ ಚಿತ್ರ ಬಿಡುಗಡೆ ಮಾಡಿಬಿಡಬೇಕು. ಆಗಲೇ ನಾ ಮುಂದು ತಾ ಮುಂದು ಎಂದು ಡಿಸ್ಟ್ರಿಬ್ಯೂಟರುಗಳು ಬರುತ್ತಿದ್ದಾರೆ. ಬಹಳ ದಿನಗಳಿಂದ ಹಾತೊರೆಯುತ್ತಿದ್ದ ಹೆಂಡತಿಯ ಬಯಕೆಯನ್ನು ಪೂರೈಸಲು ಆಕೆಯನ್ನು ತವರಿಗೆ ಕಳುಹಿಸಿ ಪವಿತ್ರಳ ಮನೆಗೆ ಬಂದಾಗ ಪವಿತ್ರ ಅವಳ ಮತ್ತೊಂದು ಚಿತ್ರ 'ಹೂಬನ'ದ ಚಿತ್ರೀಕರಣಕ್ಕಾಗಿ ಶೂಟಿಂಗಿಗೆ ಹೋದವಳು ಹಿಂತಿರುಗಿರಲಿಲ್ಲ. ಅವಳೊಂದಿಗೆ ಮಾಲತಮ್ಮ ಹೋಗದೇ ಮನೆಯಲ್ಲೇ ಇದ್ದುದು ಕಂಡು ಅವರಿಗೆ ಅಚ್ಚರಿ.

'ಇದೇನು ಪಾಪೂ ಶೂಟಿಂಗಿಗೆ ಹೋದಳು ಅಂತೀರಿ, ನೀವು ಹೋಗಲಿಲ್ಲವೇ ?' ಎಂದಾಗ ಮಾಲತಮ್ಮ ನಕ್ಕರು.

'ಒಂದು ದಿನ ಹಾಯಾಗಿರೋಣಾಂತ ಇದ್ದೀನಿ, ಅವಳ ಜೊತೆ ವಸಂತ್ ಹೋಗಿದ್ದಾನೆ, ನನಗೆ ಅದಕ್ಕೆ ನಿರ್ಯೋಚನೆ. ಅವನಂತೂ ಅವಳನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿಕೊಳ್ಳೋ ಹಾಗೆ ಯಾರೂ ನೋಡಿ

ಕೊಳ್ಳೋಲ್ಲ.'

ಧನಂಜಯರ ಮುಖ ಗಂಭೀರವಾಯಿತು. 'ಇನ್ನೇನು ಬರುವ ಹೊತ್ತಾಯಿತು. ಪಿಕ್ಚರ್ ಹೇಗೆ ಬಂದಿದೆ? ರಶಸ್ ನೋಡಿದ್ರಾ?' ಶ್ಯಾಮ್ ಮಾತಾಡಲು ಬಂದು ಕುಳಿತ. ಅವರಿಗೆ ಮಾಮೂಲಾದ ವಿಸ್ಕಿ, ಸೋಡಾ ಬೆರೆಸಿಕೊಡುತ್ತಾ ಹೇಳಿದ. 'ಅಮ್ಮನಿಗೆ ಕೊಂಚವೂ ತಿಳಿಯುವುದಿಲ್ಲ. ವಸಂತ್ ಪಾಪೂ ಮೇಲೆ ಬಹಳ ಕಣ್ಣಿಟ್ಟಿದ್ದಾನೆ. ಬಿಟ್ರೆ ಸಿಕ್ಕಿದರೆ ಯಾಕೆ ಬಿಡ್ತಾನೆ. ಈಗಲೇ ಪಾಪೂ ಅವನ ಬಲೆಗೆ ಬೀಳ್ತಾ ಇದ್ದಾಳೆ. ಇದನ್ನ ತಪ್ಪಿಸಬೇಕು.'

ಧನಂಜಯ ಅವನ ಮುಖ ನೋಡಿದರು 'ಏನಾದರೂ ಮಾಡಿ ಅವಳು ಬೇರೆ ಯಾವ ಪುರುಷನ ಬಲೆಗೂ ಬೀಳದ ಹಾಗೆ ನೋಡ್ಕೋಬೇಕು. ಆದರೆ ಒಂದೇ ದಾರಿ ಎಲ್ಲಾದ್ರೂ ಒಳ್ಳೇ ಕಡೆ ನೋಡಿ ಮದುವೆ ಮಾಡಿಬಿಡೊಂತ ನಾನು. ಅವಳ ಗ್ಲಾಮರ್, ರೂಪು, ಹೆಸರಿನ ಆಕರ್ಷಣೆ ಇದೆ.'

ಅದೆಲ್ಲಾ ಕೂಡದು. ಮದುವೆ ಮಾಡಿಬಿಟ್ಟರೆ ಅವಳ ಸ್ಟಾರ್ ವ್ಯಾಲ್ಯೂ ಹೋಯ್ತೂಂತ ಇಟ್ಕೋ. ಈ ಚಿತ್ರರಂಗದಲ್ಲಿ ಅವಿವಾಹಿತ ತಾರೆಯರಿಗೆ ಹೆಚ್ಚು ಆದರ ಮದುವೆಯಾದರೆ ಡಿ ಗ್ಲಾಮರೈಸ್ ಆಗ್ತಾರೆ ಅಂತ ಅಂದ್ಕೊಂಡಿದ್ದಾರೆ. 'ತಿರುವು'ನಲ್ಲಿ ಅವಳ ಗ್ಲಾಮರ್ ಹೇಗಿದೆ ಗೊತ್ತಾ? ಜನ ಹಾಗೇ ಅವಳ್ನ ನೋಡಿ ಬಿದ್ದೋಗ್ತಾರೆ.' ಧನಂಜಯ ವಿಸ್ಕಿಯ ಲೋಟವನ್ನೇ ನೋಡುತ್ತಾ ಹೇಳಿದರು. 'ಅವಳು ಇದರಷ್ಟೇ ಇಂಟಾಕ್ಸಿಕೇಟೆಡ್ ಆಗಿದ್ದಳು.'

'ಆದರೆ ಅವಳೂ ಮನುಷ್ಯಳಲ್ಲವೇ? ಅವಳಿಗೂ ಆಸೆ, ಬಯಕೆಗಳಿವೆ. ಅವಳನ್ನು ಮರಳು ಮಾಡುವವರಿಲ್ಲವೆ? ಸುನಿಲ್‌ಕುಮಾರ್ ಒಂದು ಕಣ್ಣಿಟ್ಟಿದ್ದಾರೆ. ರಾಜೇಂದ್ರನ ವಿಷಯ ಗೊತ್ತೇ ಇದೆ ನಿಮಗೆ. ಈಗ ವಸಂತ್ ಅವಳನ್ನ ನಮ್ಮ ಕಣ್ಣ ಮುಂದೆಯೇ ಇಟ್ಕೋಬೇಕೊಂದ್ರೆ ಅದೊಂದೇ ಮಾರ್ಗ. ವಸಂತ್‌ಗೇ ಏಕೆ ಅವಳ್ನ ಮದ್ವೆ ಮಾಡಿಕೊಟ್ಟು ಬಿಟ್ಟುಬಿಡಬಾರದು? ಅವ್ನ ನಾವು ಹೇಳಿದಂತೆ ಕೇಳ್ತಾನೆ. ಇನ್ನೂ ತಾರಾಪಟ್ಟಕ್ಕೇರಿಲ್ಲ.'

ಧನಂಜಯ ಗ್ಲಾಸಿನಲ್ಲಿದ್ದುದು ಬಾಯಿಗೆ ಸುರಿದುಕೊಂಡರು. 'ಅದೂ ಸರಿಯೇ.'

ಆದರೆ ತನಗೆ ಬೇಕಾದಾಗ ಪವಿತ್ರ ತನಗೆ ಸಿಗುವುದಿಲ್ಲವಲ್ಲ. ವಸಂತನ ಪತ್ನಿಯಾದರೆ ಅವನವಳಾಗುತ್ತಾಳೆ. ಅವಳ ಮೇಲಿನ ಹತೋಟಿ ತನಗೆ

ಹೋಗುತ್ತದೆ ತಾನು ಅವಳಿಗಾಗಿ ಎಷ್ಟು ಕಷ್ಟಪಟ್ಟಿದ್ದೇನೆ. ಅವಳನ್ನು ಎಷ್ಟು ಪ್ರೀತಿಸುತ್ತಿದ್ದೇನೆ. ಆದರೆ ತನಗೆ ಮನೆಯಲ್ಲಿ ಸುಶೀಲ ಗೃಹಲಕ್ಷ್ಮಿಯಿದ್ದಾಳೆ. ತಾನು ಒಂದು ವೇಳೆ ದುಡುಕಿದರೆ ಅವಳು ತನ್ನನ್ನು ಸುಮ್ಮನೇ ಬಿಡುವಳೇ ?

'ಯಾಕೆ ಯೋಚಿಸ್ತಾ ಇದ್ದೀರಿ ? ಅದ್ಯಾಕೆ ನಿಮಗಿಷ್ಟವಿಲ್ಲವೇ ? ನಿಮಗೆ ಮದುವೆಯಾಗದೇ ಇದ್ರೆ ನಿಮಗೇ ಧಾರೆಯೆರೆದು ಕೊಟ್ಬಿಡ್ತಿದ್ದೆ ಅಂತಿದ್ಲು ಅಮ್ಮ. ನೀವು ನಮಗೆ ಮಾಡಿದ ಉಪಕಾರ ಮರ್ಯೋಕಾಗುತ್ಯೆ ಶ್ಯಾಮ್ ಹೇಳಿದಾಗ ಧನಂಜಯ ಉತ್ತೇಜಿತರಾದರೂ ಮತ್ತಷ್ಟು ವಿಸ್ಕಿ ಏರಿಸಿದರು. ತನ್ನವಳು ಪವಿತ್ರ, ಅವಳು ತನ್ನ ಪಾಪೂ, ಅವಳು ಬೇರೆ ಯಾರಿಗೆ ಸಲ್ಲಕೂಡದು, ಅವಳ ತಾರಾ ಬದುಕನ್ನು ಚಲಿಸುವ ಯಂತ್ರ ತಾನೇ ಆಗಬೇಕು. ಅವಳು ತಾರಾ ಮಟ್ಟದಿಂದ ಕೆಳಗಿಳಿಯದಿರುವಂತೆ ತಾನು ಕಾಯಬೇಕು. ಹಾಗಾಗಬೇಕಾದ್ದಲ್ಲಿ ತಾನೇ ಅವಳನ್ನು ಉದ್ಧರಿಸುವ ಕೈ ಹಿಡಿಯಬೇಕು.

'ನಾನೊಂದು ಮಾತು ಹೇಳ್ತೀನಿ ಶ್ಯಾಮ್. ನನಗ್ಯಾಕೋ ಅವಳನ್ನು ಯಾರಿಗೂ ಒಪ್ಪಿಸುವ ಧೈರ್ಯವಿಲ್ಲ. ಬೇರೊಬ್ಬರ ಕೈ ಸೇರಿದರೆ ಅವಳ ಅವನತಿ ಖಂಡಿತ. ನಾನೇ ದಾರಿ ಹುಡುಕಬೇಕು.'

'ನೀವೇ ಏಕೆ ಗುಟ್ಟಾಗಿ ಅವಳನ್ನು ಮದುವೆಯಾಗಿಬಿಡಬಾರದು ? ಅವಳು ಆಗ ನಿಮ್ಮನ್ನು ಬಿಟ್ಟು ಹೋಗುವುದಿಲ್ಲ. ನಿಮಗೂ ಅವಳ ಮೇಲೆ ಅಧಿಕಾರವಿರುತ್ತದೆ. ಹೊರಗಿನವರಿಗ್ಯಾರಿಗೂ ಹೇಳುವುದೇ ಬೇಡ ದೂರ ಯಾವುದಾದರೂ ಊರಿಗೆ ಹೋಗಿ ದೇವಸ್ಥಾನದಲ್ಲಿ ಮದುವೆಯಾಗಿ ಬಂದರಾಯಿತು. ನಾನೂ, ಪವಿತ್ರ, ಅಮ್ಮ, ಲಲ್ಲಿ, ವಸಂತ ಸಾಕು. ಹಾಗೆಯೇ ಲಲ್ಲಿಯನ್ನೇ ವಸಂತನಿಗೆ ಕಟ್ಟಿದರಾಯಿತು. ನಿಮ್ಮಾಕೆಗೂ ತಿಳಿಯುವುದು ಬೇಡ. ಸಮಯೋಚಿತವಾಗಿ ನೀವು ತಿಳಿಸಬಹುದು.'

ಧನಂಜಯ ಆಗಲೇ ರಂಗೇರಿದ್ದರು

'ಭಲೇ ಶ್ಯಾಮ್, ನಿನ್ನ ಬಿಟ್ಟರಿಲ್ಲ ನೋಡು ಈ ಮನೆಯಲ್ಲಿ. ಶುಭಸ್ಯಶೀಘ್ರಂ. ಸುಶೀಲ ತೌರಿಗೆ ಹೋಗಿದ್ದಾಳೆ. 'ತಿರುಗು' ರಿಲೀಸ್ ಮುಂಚೆ ಎಲ್ಲಾ ಆಗಿಹೋಗಲಿ.'

ಅವರ ಮಾತುಗಳನ್ನಾಲಿಸುತ್ತಿದ್ದ ಮಾಲತಮ್ಮ ಒಳಗೇ ಹಿಗ್ಗಿದರು. ತಮ್ಮ ಸಮಸ್ಯೆಗಳೆಲ್ಲಾ ಇಷ್ಟು ಸುಲಭವಾಗಿ ತೀರಿಹೋಗುವುದೆಂದು ಅವರು

ಯೋಚಿಸಿರಲಿಲ್ಲ. ಶ್ಯಾಮ್‌ನನ್ನು ಗುಟ್ಟಾಗಿ ಕರೆದು ಹೇಳಿದರು. ನಿನಗೆ ಬಿಸಿನೆಸ್‌ಗೆ ಎಷ್ಟು ಬೇಕೋ ಅಷ್ಟು ಕೊಡ್ತೀನಿ. ನಿಂದೂ, ಲಲ್ಲೀದು ಮದುವೆ ಒಟ್ಟಿಗೆ ಮುಗಿಸಿ ಬಿಡೋಣ ಆಮೇಲೆ.'

ಶೂಟಿಂಗ್‌ನಿಂದ ಹಿಂತಿರುಗಿ ಬಂದ ಪವಿತ್ರಳ ಮುಖ ಹೂವಿನಂತೆ ಅರಳಿತ್ತು. ಅವಳ ಜೊತೆ ಬಂದ ವಸಂತನ ಕಣ್ಣುಗಳೂ ಮಿಂಚುತ್ತಿದ್ದವು. ಅವರಿಬ್ಬರನ್ನೂ ಒಟ್ಟಿಗೆ ಕಂಡಾಗ ಮಾಲತಮ್ಮನ ಕರುಳು ಮಿಡುಕಿತು. ಅವರಿಬ್ಬರ ಜೋಡಿ ಹೇಳಿ ಮಾಡಿಸಿದಂತಿತ್ತು. ಅವರಿಬ್ಬರೂ ಮದುವೆ ಯಾಗುವ ಹಾಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು. ಆದರೆ ಭವಿಷ್ಯ ಭೂತಾ ಕಾರವಾಗಿ ನಿಂತಿತ್ತು. ಕಾಸಿಗೆ ಗತಿಯಿಲ್ಲದ ವಸಂತನನ್ನು ಕಟ್ಟಿಕೊಂಡು ಅವಳೇನು ಸುಖ ಕಂಡಾಳು, ಬರೀ ಪ್ರೀತಿಯೊಂದಿದ್ದರೆ ಸಾಕೇ? ಲಲ್ಲಿ ಅವನನ್ನು ಮದುವೆಯಾದರೆ ವಸಂತನಿಗೊಂದು ಅಂಗಡಿಯೋ ಪ್ರೆಸ್ಸೋ ತೆಗೆದು ಕೊಟ್ಟುಬಿಟ್ಟರಾಯಿತು. ಅವಳ ಬದುಕು ಅವಳಿಗಿರುತ್ತೆ ಪವಿತ್ರ ಆದರೆ ಇನ್ನೂ ಎಷ್ಟು ಮುಂದೆ ಬರಬೇಕು. ಇನ್ನೂ ಪ್ರಶಸ್ತಿಗಳನ್ನು ತೆಗೆದು ಕೊಳ್ಳಬೇಕು. ಈಗ ತಾನೇ ಮೇಲೇರುತ್ತಿರುವ ತಾರೆ. ಇನ್ನೂ ಸಾಧಿಸ ಬೇಕಾದುದೆಷ್ಟಿದೆ !

ಧನಂಜಯ ಅವರಿಬ್ಬರತ್ತ ನೋಡಿದರು. ಶ್ಯಾಮ್ ಹೇಳಿದ ಮಾತು ಗಳು ನೆನಪಿಗೆ ಬಂದು ಶೂಲದಂತೆ ಇರಿದವು. ಇವಳನ್ನು ಇವನ ಜೊತೆ ಬಿಡಬಾರದು. ಖಂಡಿತ ಇವಳು ಚಿತ್ರರಂಗದಿಂದಲೂ ಮರೆಯಾಗುತ್ತಾಳೆ. ತನ್ನ ಕೈಯಿಂದಲೂ ಜಾರಿ ಹೋಗುತ್ತಾಳೆ.

'ಇಲ್ಲಿ ಬಾ ಪಾಪೂ, ನಿನಗೊಂದು ಶುಭ ಸಮಾಚಾರ ಎಂದಾಗ ಶ್ಯಾಮ್ ಬೆದರಿದ. ಅವಸರದಲ್ಲಿ ಏನಾದರೂ ಹೇಳಿ ಕೆಲಸ ಕೆಡಿಸಿಬಿಟ್ಟರೆ !

'ಅದೇ ಪಾಪೂ, 'ತಿರುವು' ತುಂಬಾ ಚೆನ್ನಾಗಿ ಬಂದಿದ್ಯಂತೆ, ನೀನು ತುಂಬಾ ಗ್ಲಾಮರಸ್ ಆಗಿ ಕಾಣ್ತೀಯಂತೆ, ನೋಡ್ದೋರೆಲ್ಲಾ ದಂಗಾಗಿ ಹೋದರಂತೆ. ಈ ಚಿತ್ರ ನೂರು ದಿನ ಗ್ಯಾರಂಟಿ ಅಂದ್ರಂತೆ. ನಿಂಗೆ ಹೇಳೋ ಕಾಂತ ಒಂದ್ರೆ ನೀನು ಇರ್ಲಿಲ್ಲ. ನಿಂಗೇ ಕಾಯ್ತಾ ಇದ್ದಾರೆ' ಶ್ಯಾಮ್ ಹೇಳಿದಾಗ ಪವಿತ್ರ ನಕ್ಕಳು. ಸಧ್ಯ, ಆ ಚಿತ್ರ ಉಳಿದರೆ ಸಾಕು, ಮಾಲ ತಮ್ಮ ವಸಂತನನ್ನು ಮೆಲ್ಲನೇ ಕರೆದರು.

'ವಸಂತ ಬಾಪ್ಪಾ ಇಲ್ಲಿ.'

ಧನಂಜಯ ಹತ್ತಿರ ಬಂದ ಪವಿತ್ರಳನ್ನು ದುರುದುರು ನೋಡಿದರು.

'ಇಷ್ಟೊತ್ತಿನವರೆಗೂ ಶೂಟಿಂಗ್ ಇತ್ತಾ?'

'ಹೌದು ಮುಗಿಸಿಕೊಂಡು ತಕ್ಷಣ ಬಂದೆನಲ್ಲಾ ?'

'ನೆನ್ನೆ, ಮೊನ್ನೇನೂ ಇತ್ತಾ ?'

'ಹೌದು.'

'ಯಾರು ನಿನ್ನ ಜೊತೆ ಬರ್ತಾ ಇದ್ದುದ್ದು ? ವಸಂತ್ ತಾನೇ ?' ಧನಂಜಯ ಕೇಳಿದಾಗ ಪವಿತ್ರ ಹುಬ್ಬುಗಂಟಿಕ್ಕಿದಳು.

'ಇಲ್ಲ ಅಮ್ಮನಿಗೆ ಮನೆಯಲ್ಲಿ ಕೆಲಸವಿರುತ್ತೆ. ಅಲ್ಲಿ ನನ್ನ ನೋಡೋಕೆ ಯಾರೋ ಬರ್ತೀನೀಂತ ಹೇಳಿ ಕಳಿಸಿದ್ರು ಇವೊತ್ತು ಅದಕ್ಕೆ ವಸಂತ್ ಬಂದ್ರು.'

'ಹೂಬನ ಶೂಟಿಂಗ್ ಎಷ್ಟೊತ್ತಿನ ತನಕ ಇತ್ತು ? ನಾನೇ ಕೇಳ್ತೀನಿ ತಾಳು.'

ಧನಂಜಯ ಎದ್ದು ಶೂರಾಡುತ್ತಾ ಫೋನಿನತ್ತ ನಡೆದರು. ಪವಿತ್ರ ಅವಕ್ಕಾದಳು. ಇದೇನು ಈ ಹೊಸ ಪರಿ, ತನ್ನ ಮೇಲೇಕೆ ಅನುಮಾನ. ತಾನೂ ವಸಂತ್ ಇಬ್ಬರೂ ಮಾತಾಡಿದ್ದು ನಗುತ್ತಿದ್ದುದು, ಒಟ್ಟಿಗೆ ಕುಳಿತು ಹರಟುತ್ತಿದ್ದುದು ನೋಡಿಲ್ಲವೇ ಇವರು ಆಗ ಒಂದು ಮಾತೂ ಆಡಲಿಲ್ಲ ಆದರೆ ಈಗೇಕೆ ಹೀಗೆ ಯಾರಾದರೂ ಇಲ್ಲಸಲ್ಲದ್ದು ಹೇಳಿರುವರೇ ? ಧನಂಜಯರನ್ನು ಯಾರೂ ತಡೆಯುವವರಿರಲಿಲ್ಲ. ವಸಂತ್ ಅಚ್ಚರಿಯಿಂದ ನೋಡಿದ. ಮಾಲತಮ್ಮ ಅವನ ಕಿವಿಯಲ್ಲಿ ಉಸುರಿದರು.

'ಏನೂ ಮಾತಾಡಬೇಡಿ, ಮೊದಲೇ ಕುಡಿದಿದ್ದಾರೆ. ಅವತ್ತು ಮಾಧೂ ಮನೆಬಿಟ್ಟು ಹೋದ ದಿನದಂತೆ ವಿಪರೀತ ಆದೀತು. ಏನಾದರೂ ಮಾಡಿಕೊಳ್ಳಲಿ, ನಾಳೆ ಎಲ್ಲಾ ಇಳಿದ ಮೇಲೆ ಅವರೇ ಸರಿಹೋಗುತ್ತಾರೆ. ಶ್ಯಾಮ್ ಧನಂಜಯರನ್ನು ತಡೆಯಲು ಹೊರಟ ಪವಿತ್ರಳನ್ನು ತಡೆದ.

'ಸುಮ್ನಿರು ಪಾಪು, ಅವ್ರು ತುಂಬಾ ಅಪ್ಸೆಟ್ ಆಗಿದ್ದಾರೆ. ಅವ್ರು ನಿಂಗೋಸ್ಕರ ವಿಷಯ ತಿಳಿಸಲು ಬಂದಾಗ ನೀನಿರಲಿಲ್ಲ. ಅದ್ರಿಂದ ಬಹಳ ಬೇಜಾರು ಮಾಡ್ಕೊಂಡಿದ್ದಾರೆ. ನೀನು ಸುಮ್ನೆ ಹೋಗಿ ಮೇಕಪ್ ತೆಗೀ ಹೋಗು ಅವ್ರ ಮುಂದೆ ನಿಲ್ಬೇಡಾ.'

ಕೊಂಚ ಬೆದರಿದ್ದ ಪವಿತ್ರಳ ಕೈ ಹಿಡಿದು ಅವಳ ರೂಮಿಗೆ ಕರೆದೊಯ್ದು ಬಾಗಿಲು ಮುಂದೆ ಮಾಡಿ ಹೊರಬಂದ. ಧನಂಜಯ ಸ್ಟುಡಿಯೋದವರೊಂದಿಗೆ ಮಾತಾಡುತ್ತಿದ್ದರು. 'ಎಂಟು ಗಂಟೆಗೇ ಮುಗಿದು

ಹೋಯಿತಾ? ಸರಿ. ಆಮೇಲೆ ಯಾರೂ ಇರಲಿಲ್ಲವಾ?' ಅವನೇನು ಹೇಳಿದನೋ ಫೋನು ಕುಕ್ಕಿದರು.

'ನನ್ನ ಕಣ್ಣಿಗೆ ಮಣ್ಣೆರಚಿ ಆಡ್ತೀರಾ? ಎಂಟು ಗಂಟೆಗೆ ಶೂಟಿಂಗ್ ಮುಗೀತಂತಲ್ಲಾ ಇಲ್ಲಿವರೆಗೂ ಏನ್ಮಾಡ್ತಾ ಇದ್ರೀ? ಎಲ್ಲಿಗೆ ಹೋಗಿದ್ರೀ? ಪವಿತ್ರ ಕಾಣದಿದ್ದರಿಂದ ವಸಂತನನ್ನೇ ಹಿಡಿದರು. 'ಹೇಳು ಏನ್ಮಾಡ್ತಾ ಇದ್ರಿ? ಮನೆಗೆ ಎರಡು ಬಗೆಯೋಕೆ ಪ್ರಾರಂಭಿಸಿದ್ಯಾ? ನಿಜ ಹೇಳು ಎಷ್ಟು ದಿನಗಳಿಂದ ಈ ಆಟ ನಡೀತಿದೆ?' ವಸಂತ ಹುಬ್ಬು ಗಂಟಿಕ್ಕಿದ

'ಈಗ ನೀವು ಸರಿಯಾದ ಮೂಡಿನಲ್ಲಿಲ್ಲ. ಎಲ್ಲಾ ನಾಳೆ ಹೇಳ್ತೀನಿ ಸಾರ್.'

'ಏನು ಹೇಳ್ತೀಯೋ? ನಾನೂ ಪವಿತ್ರ ಚಕ್ಕಂದ ಆಡ್ತಾ ಇದ್ವೀ ಅಂತ ಹೇಳ್ತೀಯಾ? ಯಾವ ಹೋಟೆಲ್‌ನಲ್ಲಿ ರೂಮು ಮಾಡ್ಕೊಂಡಿದ್ದಿರಿ? ನೀನು ಅವಳ ಗೌರವಿಸ್ತೀಯಾ ಪೂಜಿಸ್ತೀಯಾ ಅಂದ್ಕೊಂಡಿದ್ರೆ ನೀನು ಹೀಗಾ ಮಾಡೋದು? ನಿನ್ನ ನಾನು ಎಷ್ಟು ನಂಬಿದ್ದೆ. ನನಗೇ ಮೋಸ ಮಾಡಿದ್ಯಾ?' ಧನಂಜಯ ಕೂಗಾಡಿದಾಗ ವಸಂತ ಅವಮಾನ ದಿಂದ ಎಲ್ಲರ ಮುಂದೆ ತಲೆ ತಗ್ಗಿಸಿಬಿಟ್ಟ. ನಿಜವನ್ನರಿಯದ ಮುಂಚೆಯೇ ಏನೆಲ್ಲಾ ಮಾತನಾಡಿಬಿಟ್ಟರು ದಾರಿಯಲ್ಲಿ ಕಾರಿನ ಕಾರ್ಬೊರೇಟರ್ ತೊಂದರೆಯಿಂದ ನಿಂತುಹೋದಾಗ ತಾನೇ ಹೋಗಿ ಮೆಕ್ಯಾನಿಕ್‌ನನ್ನು ಕರೆತಂದು ಸರಿಪಡಿಸಿಕೊಂಡು ಬಂದಿರಲಿಲ್ಲವೇ? ಪವಿತ್ರಳನ್ನು ಕಾಯಲು ಡ್ರೈವರನ್ನು ಬಿಟ್ಟು ಹೋಗಿರಲಿಲ್ಲವೇ? ಅದಲ್ಲದೇ ತಾವಿಬ್ಬರೇ ಎಲ್ಲಿದ್ದುದು? ಜೂನಿಯರ್ ಆರ್ಟಿಸ್ಟ್ ಸಹನಾ ಇರಲಿಲ್ಲವೇ ಜೊತೆಯಲ್ಲಿ.

'ನಾಳೆ ಡ್ರೈವರ್ ಆರ್ಮುಗಂನನ್ನೇ ಕೇಳಿ ತಿಳಿದುಕೊಳ್ಳಿ' ವಸಂತ ತನ್ನ ಕೈಹಿಡಿದ ಶ್ಯಾಮ್‌ನ ಕೈ ಕೊಡವಿದ.

'ನಾನು ಹೋಗ್ತೀನಿ ಶ್ಯಾಮ್ ಬಿಡಿ ನಂಗೆ ಈ ಅವಮಾನ ಸಹಿಸೋಕ್ಕಾಗೋಲ್ಲ.'

ಧನಂಜಯ ಕೂಗಾಡುತ್ತಲೇ ಇದ್ದರು 'ಪಾಪೂ ನನಗೆ ಸೇರಿದವಳು ನನ್ನ ಹೆಂಡತಿಯ ಹಾಗೇಂತ ಅವನಿಗೆ ಗೊತ್ತಿಲ್ವಾ? ನನ್ನ ಕಣ್ಣಿಗೆ ಮಣ್ಣೆರಚಿ ಓಡಿಹೋಗ್ಬೇಕೂಂತ ಇದ್ರಾ?'

'ಅವನ್ಯಾಕೆ ಅಳ್ತಾನೆ. ನಗ್ತಾ ಬರ್ಲಿಲ್ವಾ? ನನಗೆ ಗೊತ್ತಾಗಿ ಹೋಯ್ತಲ್ಲಾಂತ ದುಃಖ ಆಗಿರ್ಬೇಕೂ' ವತ್ತೆ ಕೂಗಾಡಿದರು. 'ಇವೊತ್ತು

ನಾನು ನಿಜ ತಿಳ್ಕೊಳ್ಳಬೇಕು. ಅವರು ರೂಮಿನತ್ತ ಹೊರಟಾಗ ಹಾಸಿದ್ದ ಕಾರ್ಪೆಟ್ ಎಡವಿ ಬಿದ್ದರು. ಮಾಲತಮ್ಮ ಶ್ಯಾಮ್ ಎಬ್ಬಿಸಲು ಬಂದಾಗ

'ನೀವು ಮುಟ್ಬೇಡಿ. ಪಾಪೂನೇ ಬರ್ಲಿ. ಅವಳೇ ಎಬ್ಬಿಸಲಿ' ಕೂಗಾಡಿದರು. ಕೈಕಾಲು ಏನಾದರೂ ಆದರೆ ಎಂಬ ಆತಂಕ. ಶ್ಯಾಮ್ ಪವಿತ್ರಳನ್ನೇ ಕರೆದು ತಂದ. ಅವಳು ಕಣ್ಣೊರಸಿಕೊಳ್ಳುತ್ತಲೇ ಅವರಿಗೆ ಕೈಕೊಟ್ಟು ಎಬ್ಬಿಸಿದಳು.

'ಬನ್ನೀ ಸಾರ್, ನಿಮಗೆ ಇವೊತ್ತು ತುಂಬಾ ಆಯಾಸವಾಗಿರಬೇಕು. ಅವಳ ಭುಜದ ಸುತ್ತ ಕೈಹಾಕಿ ಎದ್ದು ನಿಂತ ಧನಂಜಯರು ಕೊಂಚ ತೂರಾಡಿದರೂ ಅವಳ ಸನಿಹ ನೆಮ್ಮದಿ ತಂದಿತ್ತು. ಅವಳನ್ನು ಮತ್ತೂ ಬಿಗಿಯಾಗಿ ಬಳಸಿ ಹಿಡಿದರು. ಪವಿತ್ರ ಅವರನ್ನ ತನ್ನ ರೂಮಿಗೆ ಕರೆದೊಯ್ದು ಬಾಗಿಲು ಮುಚ್ಚಿಕೊಂಡಳು.

ವಸಂತ್ ಬಿರುಗಣ್ಣಿನಿಂದ ನೋಡುತ್ತಿದ್ದ. ಶ್ಯಾಮ್ ಅವನ ಭುಜ ತಟ್ಟಿದ. ನಾಳೆ ಅವರು ಮೊದಲಿನಂತಿರ್ತಾರೆ ಈಗ ಹೇಳು ಯಾಕೆ ಲೇಟು?. ಶ್ಯಾಮ್ ನಡೆದುದೆಲ್ಲ ಹೇಳಿ ಅತ್ತುಬಿಟ್ಟ. 'ಶ್ಯಾಮ್, ನಾನು ಪವಿತ್ರನ್ನ ನಿಜವಾಗಲೂ ಪೂಜಿಸ್ತೀನಿ, ಆರಾಧಿಸ್ತೀನಿ, ಪ್ರೇಮಿಸ್ತೀನಿ. ಆದರೆ ಎಂದೂ ಎಲ್ಲೆ ಮೀರಿಲ್ಲ. ಅವಳಿಗಾಗಿ ನಾನು ಎಷ್ಟು ದಿನ, ವರ್ಷಗಳಾದರೂ ಕಾಯುತ್ತೀನಿ. ಅವಳ ಜೊತೆ ಇದ್ದರೆ ಸಾಕು ನನಗೆ.'

ಶ್ಯಾಮ್ ವಸಂತನನ್ನೇ ನೋಡಿದ. ಮಾಲತಮ್ಮ ಕೆಮ್ಮಿದರು.

'ನೋಡಪ್ಪಾ ವಸಂತ್, ನಂಗೆ ನೀನು ಬೇರೆ ಅಲ್ಲ. ಶ್ಯಾಮ್ ಬೇರೆ ಅಲ್ಲ. ನಮ್ಮ 'ಪಾಪೂ'ನ ನಂಬ್ಕೊಂಡು ನಿನ್ನ ಭವಿಷ್ಯ ಹಾಳು ಮಾಡ್ಕೋಬೇಡಾ. ಈ ಧನಂಜಯರು ಖಂಡಿತ ಬಿಡೋದಿಲ್ಲ ಅವಳ್ನ. ಅವಳನ್ನ ಎಂತಹ ಸಂದರ್ಭದಲ್ಲಿ ಉದ್ಧಾರ ಮಾಡಿದ್ರೂಂತ ನಿಂಗೇ ಗೊತ್ತಿಲ್ವಾ? ಅದ್ನ ನಾವು ಮರೆಯೋಕೆ ಆಗುತ್ತಾ? ನೀನೇನಾದ್ರೂ ಅವಳ್ನ ಪ್ರೀತಿಸೋ ಬಗ್ಗೆ ಅವರ್ಗೆ ತಿಳಿಸಿಬಿಟ್ರೆ ನಮ್ಮನ್ನೆ ಬಿಟ್ಬಿಡ್ತಾರೆ. ನಮ್ಮ ಪಾಪು ಭವಿಷ್ಯಾನೇ ಹಾಳಾಗಿ ಹೋಗುತ್ತೆ. ಈಗ್ತಾನೇ ಮೇಲೇರ್ತಾ ಇದ್ದಾಳೆ. ನೀನು ನಿಜವಾಗ್ಲೂ ಅವಳ್ನ ಪ್ರೀತಿಸೋದೇ ಆದ್ರೆ ಅವಳ್ನ ಮರೆತುಬಿಡಪ್ಪಾ' ಅವರ ಕಂಠ ಗದ್ಗದವಾಯಿತು. ವಸಂತ್ ತಲೆ ತಗ್ಗಿಸಿದ. ಶ್ಯಾಮ್ ಅವನ ಭುಜ ತಟ್ಟಿದ.

'ಪ್ರಪಂಚ ತಲೇ ಮೇಲೆ ಬಿದ್ದಿಲ್ಲ. ನೀನು ಯಾವಾಗ್ಲೂ ಅವಳೆದು

ರಿಗೇ ಇರಬೇಕಾದ್ರೆ ಬೇಕಾದಷ್ಟು ದಾರಿ ಹುಡುಕಬಹುದು. ಯಾಕೆ ಗೊತ್ತಾ ಧನಂಜಯ ಪವಿತ್ರನ್ನ ಮದುವೆಯಾಗ್ತಾರಂತೆ.'

ವಸಂತ್ ಬೆಚ್ಚಿದ. ಅವನ ಬಾಯಿಯಿಂದ ಮಾತೇ ಹೊರಡಲಿಲ್ಲ. ತೆರೆದ ಬಾಯಿ ಹಾಗೆಯೇ ಇತ್ತು. ಶ್ಯಾಮ್ ಎಚ್ಚರಿಸಿದಾಗ ಅವನನ್ನೇ ಹಿಡಿದು ಅತ್ತುಬಿಟ್ಟ. ಶ್ಯಾಮ್ ಅಂದು ಅವನನ್ನು ತನ್ನ ಕೋಣೆಯಲ್ಲೇ ಮಲಗಿಸಿಕೊಂಡ.

ಬೆಳಗ್ಗೆ ಧನಂಜಯ ಎದ್ದು ಬಂದಾಗ ಮುಖ ಗಂಭೀರವಾಗಿತ್ತು. ಆಗತಾನೇ ಎದ್ದು ಕಾಫಿ ಕುಡಿಯುತ್ತಿದ್ದ ಶ್ಯಾಮ್, ವಸಂತನನ್ನು ನೋಡಿ ನಸುನಕ್ಕರು ವಸಂತನ ಬಳಿ ಬಂದು ಬೆನ್ನು ತಟ್ಟಿದರು. 'ವಸಂತ್ ನಾನು ನಿನ್ನನ್ನು ಬಹಳ ನಂಬುತ್ತೇನೆ. 'ಪಾಪೂ' ಎಲ್ಲಾ ಹೇಳಿದಳು. ನಾವೆಲ್ಲಾ ಸೇರಿ ನಿನ್ನ ನಮ್ಮವನನ್ನೇ ಮಾಡಿಕೊಳ್ಳಬೇಕೆಂದಿದ್ದೇವೆ. 'ಪಾಪೂ'ನೂ ಒಪ್ಪಿದ್ದಾಳೆ' ಎಂದಾಗ ವಸಂತ ಕುಡಿಯುತ್ತಿದ್ದ ಕಾಫಿ ನೆತ್ತಿಗೇರಿತ್ತು.

'ಅಂದ್ರೇ' ಕಣ್ಣು, ಮೂಗಿನಲ್ಲಿ ನೀರು ಸುರಿಸುತ್ತಾ ಕೇಳಿದ.

'ನಮ್ಮ ಲಲ್ಲಿಯನ್ನು ನೀನೇ ಏಕೆ ಕೈ ಹಿಡಿಯಬಾರದು ? ನಮ್ಮ ಶ್ಯಾಮ್ ಅದ್ಯಾರೋ ಅವನ ಸ್ನೇಹಿತನ ತಂಗೀನ ಮದ್ವೆಯಾಗಿ ಹೊರಟು ಹೋಗ್ತಾನೆ. ನೀನೇ ಈ ಮನೆಗೆ ಬೆಳಕಾಗಿ ನಿಲ್ಬೇಕಪ್ಪಾ. ಗಂಡು ದಿಕ್ಕಿಲ್ಲದ ಮನೇಲಿ ಪಾಪೂ ಇರೋಕೆ ಸಾಧ್ಯವೇ ?

ಮಾಲತಮ್ಮ ಧನಂಜಯರಿಗೆ ಕಾಫಿ ಕೊಡಲು ಬಂದವರು ಹೇಳಿದರು. 'ನೋಡಪ್ಪಾ, ನಮ್ಮ ಲಲಿತ ನೋಡಲು ಎಷ್ಟು ಲಕ್ಷಣವಾಗಿದ್ದಾಳೆ. ಎಲ್ಲರ ಮುಂದೆ ತೋರಿಸಿದರೆ ಅವಳನ್ನು ನಟಿಯಾಗೂ ಅಂತಾರೇಂತ ಎಲ್ಲೂ ನಾನು ಕರ್ಕೊಂಡೇ ಬರ್ತಿರ್ಲಿಲ್ಲ. ನೀನೇ ನೋಡಿದ್ಯಲ್ಲಾ. ಎಷ್ಟು ಚೆನ್ನಾಗಿಲ್ವಾ ? ನನ್ನ ಮಾಧೂ ಕೈಬಿಟ್ಟ. ಶ್ಯಾಮ್ ಹೊರಟು ಹೋಗ್ತಾನೆ. ನೀನೇ ಅಳಿಯ ಮಗ ಎರಡೂ ಆಗಿ ನಮ್ಮ ಪಾಪೂನ ಕಾಪಾಡ್ಬೇಕಪ್ಪಾ.'

ಅದೇ ತಾನೆ ಎದ್ದು ಬಂದ ಪವಿತ್ರಳತ್ತ ನೋಡಿದ. ಅವಳು ಹಿಂಗೈನಿಂದ ಕಣ್ಣೊರಸಿಕೊಳ್ಳುತ್ತಿದ್ದಳು. ವಸಂತ್ ಕುಡಿದ ಬರಿಯ ಕಾಫಿ ಬಟ್ಟಲನ್ನು ಕೆಳಗಿಟ್ಟ. 'ನನಗೆ ಯೋಚಿಸಲು ಸಮಯ ಕೊಡಿ. ಈಗಲೇ ಹೇಳಲಾರೆ' ಅವನು ಎದ್ದು ನಿಂತ.

'ಪಾಪೂ ನೀನೇ ಹೇಳಬಾರ್ದೇ ?' ಧನಂಜಯ ಹೇಳಿದಾಗ ಪವಿತ್ರ

ಮುಖ ತಿರುಗಿಸಿ ಹೇಳಿದಳು.'

'ಬಂದೇ ಮುಖ ತೊಳೆದುಕೊಂಡು ಬರ್‍ತೀನಿ ವಸಂತ್ ನಾನು ಬರೋವರ್‍ಗೂ ಇರಿ.'

ವಸಂತ್ ಅವಳಿಗಾಗಿ ಕಾದು ಕುಳಿತ, ಅವನಿಗೂ ಭಾವನೆಗಳೆಲ್ಲಾ ಸತ್ತುಹೋದಂತಾಗಿತ್ತು. ಪವಿತ್ರ ಬಹಳ ಹೊತ್ತಿನ ಮೇಲೆ ಬಂದು ಅವನೆದುರು ಕುಳಿತಾಗ ಅವನಿಗೆ ಅವಳನ್ನು ಕಣ್ಣೆತ್ತಿ ನೋಡುವುದಕ್ಕೂ ಆಗಲಿಲ್ಲ.

·'ಪವಿತ್ರ ದಯವಿಟ್ಟು ನನ್ನನ್ನು ಧರ್ಮ ಸಂಕಟಕ್ಕೆ ಗುರಿಮಾಡ ಬೇಡಿ '

'ಧರ್ಮ ಸಂಕಟವಲ್ಲ ವಸಂತ್, ಇದು ನನ್ನ ಸಂಕಟ. ನಾನು ಬದುಕಿರಬೇಕಾದರೆ ನೀವು ನನ್ನೆದುರಿಗಿರಬೇಕು. ನನಗೆ ಬದುಕಲು ಸ್ಫೂರ್ತಿಯಾಗಿರಬೇಕು ಪ್ರೀತಿ ಪ್ರೇಮವೆಂದರೆ ಎರಡು ದೇಹಗಳೇ ಒಂದಾಗಬೇಕೆಂದಿಲ್ಲ. ಎರಡು ಹೃದಯಗಳು ಒಂದಾದರೆ ಸಾಕಲ್ಲವೇ ? ಎಷ್ಟಾದರೂ ನಾನು ಜಾರಿದ ಹೆಣ್ಣು. ನನ್ನ ಕೈಹಿಡಿಯುವ ಆಸೆ ಬೇಡ. ಪವಿತ್ರ ಎಂದು ಹೆಸರಿಟ್ಟುಕೊಂಡು ನಾನು ಅಪವಿತ್ರಳಾಗಿದ್ದೇನೆ. ನಮ್ಮ ಲಲ್ಲಿ ತುಂಬಾ ಒಳ್ಳೆಯ ಹುಡುಗಿ. ಅವಳಿಗೆ ಆಸರೆಯಾಗಿ, ನನ್ನ ಕಣ್ಣೆದುರು ನೀವಿಬ್ಬರು ಬಾಳಬೇಕೆಂದು ನನಗಾಸೆ. ನನ್ನ ಅರ್ಧ ಜವಾಬ್ದಾರಿ ನಿಮಗೆ ಹೊರಿಸುತ್ತಿದ್ದೇನೆ' ಅವನ ಕೈ ಅದುಮಿ ಅವುಗಳನ್ನೆತ್ತಿ ಕಣ್ಗೊತ್ತಿಕೊಂಡು ಮೆಲ್ಲನುಸುರಿದಳು. 'ನನ್ನ ಆಸೆ ನಿರಾಸೆ ಮಾಡಬೇಡಿ.'

ಅವಳು ಅವನ ಉತ್ತರಕ್ಕೆ ಕಾಯದೇ ಒಳಗೆದ್ದು ಹೋದಳು. ಅಷ್ಟ ರಲ್ಲಿ ರೀಟಾ ಆಗಲೇ ಬಾಗಿಲಿಗೆ ಬಂದಿದ್ದಳು. ರಾತ್ರಿ ಏನೇ ನಡೆಯಲಿ, ಮನಸ್ಸಿನಲ್ಲಿ ಏನೇ ಕುರುಕ್ಷೇತ್ರ ನಡೆಯಲಿ, ಬೆಳಗ್ಗೆಯಾದರೆ ಮುಖಕ್ಕೆ ಬಣ್ಣಹಚ್ಚಿ ಆ ಬಣ್ಣದ ಜಗತ್ತಿಗೆ ಈ ಜಗತ್ತನ್ನು ಬಿಟ್ಟು ಹೋಗಲೇಬೇಕಿತ್ತು. ತನ್ನ ಮನದ ಆಸೆ, ಆಕಾಂಕ್ಷೆಗಳನ್ನೊತ್ತಟ್ಟಿಗಿಟ್ಟು ಜನಮನರಂಜನೆಗಾಗಿ ಪಾತ್ರಗಳ ಆಸೆ ಆಕಾಂಕ್ಷೆ ಅಭಿನಯಿಸಬೇಕಾಗಿತ್ತು. ವಸಂತ ಕುಳಿತಲ್ಲಿಯೇ ಕುಳಿತಿದ್ದ. ಪವಿತ್ರ, ರೀಟಾ, ಮಾಲತಮ್ಮ ಹೊರಟಾಗಲೂ ಹಾಗೆಯೇ ಕುಳಿತಿದ್ದ. ಪವಿತ್ರ ಬಾಗಿಲವರೆಗೆ ಹೋಗಿ ತಿರುಗಿನೋಡಿ ಕೂಗಿದಳು, 'ವಸಂತ್, ರಾತ್ರಿ ನಾನು ಬರುವವರೆಗೆ ಇರ್‍ತೀರಿ ತಾನೇ ?' ಅವನು ತಲೆ ಯೆತ್ತಿ ಅವಳತ್ತ ನೋಡಿದ. ಕ್ಷಣಕಾಲ ದೃಷ್ಟಿ ಸ್ಪಂದಿಸಿದವು. ಅವನು

ನಿಧಾನವಾಗಿ ತಲೆಯಾಡಿಸಿದ. 'ನಿಮ್ಮುಪಕಾರ ನಾನು ಜನ್ಮದಲ್ಲಿ ಮರೆಯುವುದಿಲ್ಲ.' ಕೂಗಿ ಹೇಳಿದಾಗ ಮಾಲತಮ್ಮ ನಿಟ್ಟುಸಿರಿಟ್ಟರು. ಮೊದಲ ಬಾರಿಗೆ ತಾವು ಮಾಡಿದ ದೊಡ್ಡ ತಪ್ಪು ಅರಿವಾಗಿತ್ತು. ಅವಳನ್ನು ತಾರೆ ಮಾಡುವ ತಮ್ಮ ಹಿರಿಯಾಕಾಂಕ್ಷೆ. ಅದಕ್ಕಾಗಿ ಅವಳ ಆಸೆ, ಬಯಕೆ ಎಲ್ಲಾ ಧೂಳೀಪಾಲು ಮಾಡಿ ತಮ್ಮಾಸೆ ನೆರವೇರಿಸಿಕೊಂಡಂತಾಗಿತ್ತು. ಪಾಪ ಅವಳಿಗೇನು ಸುಖವಿತ್ತು? ಬಣ್ಣದ ಬದುಕು ಒಂದಿಷ್ಟು ಹೆಸರು, ಹಣ ಆದರೆ ಅದನ್ನು ಅನುಭವಿಸಲು ಅವಳಿಗೇನು ಉಳಿದಿತ್ತು? ಮನಸಾರೆ ಪ್ರೀತಿಸಿದವನನ್ನು ಕಳೆದುಕೊಂಡಾಗಿತ್ತು. ಆಗ ರಾಜೇಂದ್ರ, ಈಗ ವಸಂತ್ ವಯಸ್ಸಾದವನೊಬ್ಬನಿಗೆ ತನ್ನನ್ನೊಪ್ಪಿಸಿಕೊಂಡು ಏಣಿಯು ಮೇಲೇರಾಗಿತ್ತು. ಜಾರುವ ಹಾಗಾದಾಗ ಮತ್ತೊಬ್ಬ ವಯಸ್ಸಾದವನನ್ನೇ ಕೈಹಿಡಿಯಬೇಕಾಯಿತು. ದೇವರಾಜ್, ಧನಂಜಯ ಇಬ್ಬರೂ ಅವಳ ಹೂ ಮನಸ್ಸು, ಹುಡುಗುತನ, ಬಯಕೆ ತಿಳಿಯಲು ಸಾಧ್ಯವೇ? ಅವರಿಗೆ ಬೇಕಾದುದು ಅವರು ಪಡೆಯುತ್ತಿದ್ದರು. ಇವಳಿಗೆ ಹಣ, ಹೆಸರು ಮಾತ್ರ ಬೇಕೆಂದು ತಿಳಿದು ಅದನ್ನೇ ನೀಡುತ್ತಿದ್ದರೂ ಹೃದಯದಲ್ಲಿ ನಿಧಾನವಾಗಿ ಬಯಕೆಗಳೆಲ್ಲಾ ಸುಟ್ಟುಹೋಗಿ ಆಗಲೇ ಬೆಂಡಾಗಿಹೋಗುತ್ತಿತ್ತು. ತಾವು ಅವಳನ್ನು ಕೇಳದೆಯೋ, ಅವಳಿಗೆ ಹೇಳದೆಯೋ ತಾನೇ ತಾನಾಗಿ ವಸಂತನನ್ನು ಕೈಬಿಡಲು ಮುಂದಾಗಿದ್ದಳು. ಎಂದಮೇಲೆ ಅವಳಿಗೆ ತನ್ನ ಬದುಕು ಎಷ್ಟು ದುರ್ಭರವಾಗಿರಬೇಕು? ಪಾಪ ಹೃದಯ ಮೂಕವಾಗಿ ಎಷ್ಟು ಅಳುತ್ತಿದೆಯೋ? ಮೇಲೆ ನಗುವಿನ ಸೋಗು. ಕಾರಿನಲ್ಲಿ ಪಕ್ಕದಲ್ಲಿ ಕುಳಿತಿದ್ದ ಮಗಳನ್ನು ಅಪ್ಪಿಕೊಳ್ಳುವ ಮನಸ್ಸಾಯಿತು. ಇವಳ ಬಲಿದಾನದಿಂದ ಬೆಳಗ್ಗೆ ಶ್ಯಾಮ್ ತಮ್ಮಿಂದ ಐವತ್ತು ಸಾವಿರ ತೆಗೆದುಕೊಂಡಿದ್ದ. ರೋಜಿಗಾಗಿ ಮೂವತ್ತು ನಲವತ್ತು ಸಾವಿರ ಸುರಿದಾಗಿತ್ತು. ಇನ್ನು ಅಲ್ಲಿ ವಸಂತ ಸಿಗಾಗಿ ಒಂದಿಷ್ಟು! ಮಾಧೂ ಸಿಕ್ಕಷ್ಟು ದೋಚಿ ಹೊರಟುಹೋಗಿದ್ದ. ಇವಳಿಂದ ಉಪಕೃತರಾದವರ್ಯಾರೂ ಇವಳಿಗಾಗಿರಲಿಲ್ಲ. ರೋಜಿ ಮದುವೆಯಾಗಿ ಹೋದವಳು ಪವಿತ್ರಳನ್ನು ನೋಡಲು ಬಂದಿರಲಿಲ್ಲ. ಅಳಿದುಳಿದವನು ಅವಳನ್ನು ಮನಸಾರೆ, ಹೃದಯತುಂಬಿ ಪ್ರೀತಿಸಿದ ವಸಂತನೇನಾದರೂ ಅವಳಿಗಾದಾನೇ ನೋಡಬೇಕು. ಅವರಿಗರಿವಿಲ್ಲದೆಯೇ ಮಗಳ ತಲೆ ತಡವಿದರು.

'ಪಾಪೂ, ರಾತ್ರಿ ನಿದ್ದೆ ಚೆನ್ನಾಗಿ ಮಾಡಿದ್ಯಾಮ್ಮಾ?'

ಪವಿತ್ರ ನೋವಿನ ನಗೆ ನಕ್ಕಳು.

'ನನಗೇನಮ್ಮಾ ನಿದ್ರೆ ಬರದಿದ್ದರೆ ಇಟ್ಟಿದ್ದೆಲ್ಲಾ ಕಾಂಪೋಸ್. ನುಂಗ್ತೀನಿ, ಮಲಗ್ತೀನಿ.'

'ಧನಂಜಯ ಏನು ಹೇಳಿದ್ರು ?'

'ಹೇಳೋಕ್ಕೇನಿದೆಯಮ್ಮಾ? ಕದ್ದು ಮಾಡ್ತಾ ಇರೋದ್ನ ರಾಜಾ ರೋಷವಾಗಿ ಮಾಡಬಹುದಷ್ಟೆ. ನಮಗೆಟುಕದುದನ್ನು ನಾವು ಬಯಸಬಾರದಮ್ಮಾ. ಇದರಿಂದ ನಮ್ಮ ಬಾಳೂ ಹಾಳೂ, ನಮ್ಮೊಡನಿರುವವರ ಬಾಳೂ ಹಾಳು.' ಎಂದಾಗ ಮಾಲತಮ್ಮನಿಗೆ ಅವಳು ತನ್ನನ್ನೇ ಉದ್ದೇಶಿಸಿ ಹೇಳಿದಂತಿತ್ತು.

ಆ ವಾರದ ಪತ್ರಿಕೆಗಳಲ್ಲಿ ಆಗಲೇ ಸುದ್ದಿ ಅಷ್ಟಿಷ್ಟು ಹರಡಿತ್ತು. ವಸಂತ್ ಕುಮಾರ್ ಈಗ ಹೆಚ್ಚಾಗಿ ಪವಿತ್ರಳ ಮನೆಯಲ್ಲಿರುತ್ತಾರೆ. ಕಾರಣವೇನಿರಬಹುದು? ಪವಿತ್ರಳ ಮೇಲೆ ಬರೆದ ಪದ್ಯ 'ತಿರುವು' ಚಿತ್ರದಲ್ಲಿ ಆಗಲೇ ಚಿತ್ರೀಕರಣವಾಗಿದೆ. ವಸಂತ್ ಸ್ಟುಡಿಯೋಗೆ ಪವಿತ್ರಳ ಜೊತೆ ಬರುತ್ತಾರೆ. ಇದರಲ್ಲಿ ಏನಾದರೂ ಇರಬಹುದೆ? ಬೆಂಕಿಯಿಲ್ಲದೆ ಹೊಗೆಯೇಳುವುದು ಸಾಧ್ಯವಿಲ್ಲ.

ಅದನ್ನೋದಿದ ಪವಿತ್ರ ಆ ದಿನ ಪೂರ್ತಿ ಕಣ್ಣೀರು ಹಾಕಿದಳು. ಎಂತಹ ನಿಷ್ಕರುಣಿಗಳು! ತಾನು ಮಾಡುತ್ತಿರುವ ತ್ಯಾಗ ಅವರಿಗೇನು ಗೊತ್ತು! ತನ್ನ ಹೃದಯದ ಬಟ್ಟಲು ಬರಿದಾಗಿ ಇಂಗಿಹೋದುದು ಅವರಿಗೇನು ಗೊತ್ತು? ತನಗಾಗಿ ವಸಂತ್ ಮಾಡಿರುವ ಹಿರಿಯ ತ್ಯಾಗ ಯಾರಿಗೆ ಗೊತ್ತು? ಎಲ್ಲಾ ತಮ್ಮ ಕುತೂಹಲವನ್ನು ತೃಪ್ತಿಪಡಿಸಿಕೊಳ್ಳುವ ಚಾಪಲ್ಯವಷ್ಟೆ. ತನ್ನ ಮನದಲ್ಲಿರುವ ಬಡಬಾನಲದ ಬಗ್ಗೆ ಯಾರಿಗೂ ಬರೆಯಲು ಬಾರದೇ? ಯಾರಿಗೂ ಸತ್ಯ ತಿಳಿಯುವ ಹಂಬಲವಿಲ್ಲವೇ? ತಮಗಾಗಿ ಮರುಗುವವರು ಯಾರಿಲ್ಲವೇ? ಎಲ್ಲರೂ ಕುಣಿಸಿದಂತೆ ಕುಣಿಯುವ ಸೂತ್ರದ ಜೀವರಹಿತ ಬೊಂಬೆಗಳು ತಾವು. ಭಗವಂತ ಜಗದ ನಾಟಕದ ಸೂತ್ರಧಾರಿ ನಿಜ. ಆದರೆ ನಟಿಯಾಗಿರುವ ತಮ್ಮ ಬಾಳಿನಲ್ಲಿ ಅವನನ್ನು ಮೀರಿಸುವ ಸೂತ್ರಧಾರಿಗಳಿಲ್ಲವೇ? ತಾವು ಬೆಳ್ಳಿಯ ತೆರೆಯ ಮೇಲೂ ಅಭಿನಯಿಸಬೇಕು. ಹೊರಗೂ ಅಭಿನಯಿಸಬೇಕು. ಕೀರ್ತಿಗಾಗಿ, ಹೆಸರಿಗಾಗಿ ತಮ್ಮ ಬದುಕನ್ನೇ ಸಮಾಜಕ್ಕೆ ಮಾರಿಕೊಂಡವರು ತಾವು.

ಮಾರನೆಯ ದಿನದ ಪತ್ರಿಕೆಯಲ್ಲಿ ರಾಜೇಂದ್ರನ ಕಾಯಿಲೆಯ ಬಗ್ಗೆ ಬರೆಯಲಾಗಿತ್ತು. ರಾಜೇಂದ್ರನಿಗೆ ಬಹಳ ದಿನಗಳಿಂದಲೂ ಹೊಟ್ಟೆನೋವು

ಬರುತ್ತಿದ್ದ ಈಗ ವೈದ್ಯಕೀಯ ಮಾಹಿತಿಗಳಿಂದ ಅವರಿಗೆ ಸಣ್ಣ ಕರುಳಿನ ಕ್ಯಾನ್ಸರೆಂದೂ ಅದಕ್ಕೆ ಚಿಕಿತ್ಸೆ ಪಡೆಯಲು ಬೊಂಬಾಯಿಗೆ ಹೋಗುವರೆಂದು ಹಣ ಸಹಾಯ ಒದಗಿದರೆ ಅಮೆರಿಕಾಕ್ಕೆ ಹೋಗುವರೆಂದೂ ಪ್ರಕಟಿಸ ಲಾಗಿತ್ತು. ಅದನ್ನೋದಿ ಬಿಕ್ಕಿಬಿಕ್ಕಿ ಅತ್ತಳು. ತನಗೇಕೆ ಈ ತರಹ ಶಿಕ್ಷೆ? ಅವನನ್ನು ತಾನು ಮೊದಲು ಕಂಡಾಗ ಹುಚ್ಚಾಗಿರಲಿಲ್ಲವೇ? ಎಷ್ಟೇ ಅವ ನನ್ನು ದ್ವೇಷಿಸಲು ಯತ್ನಿಸಿದರೂ ಅವನನ್ನು ದ್ವೇಷಿಸಲಾಗಿರಲಿಲ್ಲ. ಅವ ನನ್ನು ತನ್ನ ಮೇಲ್ಮೆಗಾಗಿ ತನ್ನನ್ನು ಉಪಯೋಗಿಸಿಕೊಂಡ ಎಂದು ಕೋಪಾ ವಿಷ್ಟಳಾದರೂ ತನಗೆ ತಾನೇ ಅರಿವಾಗಿತ್ತು. ಈಗ ತಾನು ದೇವರಾಜ್, ಧನಂಜಯರನ್ನು ಉಪಯೋಗಿಸಿಕೊಳ್ಳುತ್ತಿಲ್ಲವೇ? ರಾಜೇಂದ್ರನಿಗೆ ಚಿತ್ರ ಗಳೇ ಇಲ್ಲ. 'ತಿರುವು' ಇನ್ನೂ ಬಿಡುಗಡೆಯಾಗಿಲ್ಲ. ಅವನಿಗಿನ್ನೂ ಪೂರ ಹಣವನ್ನು ಕೊಟ್ಟಿಲ್ಲ ಸೋಂಧಿಯವರು. ತಾನು ಮನಸ್ಸು ಮಾಡಿದ್ದರೆ ಅವನು ಈಗ ತನ್ನೊಡನೆ ನಾಲ್ಕೈದು ಚಿತ್ರಗಳಲ್ಲಿ ಮಾಡಬಹುದಿತ್ತು. ತನ್ನನ್ನು ನಂಬಿದ್ದ ಅವನಿಗೆ ತಾನು ಮೋಸ ಮಾಡಿದಂತಾಗಲಿಲ್ಲವೇ? ಕೂಡಲೇ ಧನಂಜಯರಿಗೆ ಫೋನು ಮಾಡಿದಳು.

'ರಾಜೇಂದ್ರನ ಸುದ್ದಿ ಕೇಳಿದ್ರಾ ಸಾರ್?'

'ಅವನಿಗೆ ತಕ್ಕ ಶಿಕ್ಷೆಯಾಯಿತು ಬಿಡು. ನಿನ್ನ ಹೊಟ್ಟೆ ಉರಿಸಿರ ಲಿಲ್ಲವೇ?'

ಪವಿತ್ರಳಿಗೆ ಘಳಿಗೆ ಮಾತು ಹೊರಡಲಿಲ್ಲ. ಥೂ! ಮನುಷ್ಯ ಜಾತಿಯೇ. ಒಬ್ಬರು ಕಷ್ಟಪಟ್ಟರೆ ನೋಡಿ ಸಂತಸಪಡುವಷ್ಟು ಕೀಳು ಜಾತಿ.

'ಹಾಗಲ್ಲ ಸಾರ್. ನಾನು ಅವರ್ನ ನೋಡಿಕೊಂಡು ಬರ್ಬೇಕೂ. ಅವರ್ಗೆ ಇನ್ನೂ 'ತಿರುವು' ಚಿತ್ರದ ಹತ್ತು ಸಾವಿರ ಬಾಕಿ ಇದೆ. ಸೋಂಧಿ ಯವರಿಗೆ ಹೇಳಿ ಕೊಡಿಸಿಬಿಡಿ ಪಾಪ.' ಧನಂಜಯ ಉಸಿರು ಬಿಗಿ ಹಿಡಿದುದು ಕೇಳಿಸಿತು. 'ವಸಂತ್‌ನ ಕಳಿಸ್ತೀನಿ. ನಾನು ಮಧ್ಯಾಹ್ನ ಲಂಚ್ ಬ್ರೇಕ್ನಲ್ಲಿ ಹೋಗಿ ನೋಡಿ ಬರ್ತೀನಿ ಸಾರ್. ಅಮ್ಮಾನೂ ಬರ್ತಾಳೆ.' ಪವಿತ್ರ ಫೋನು ಕೆಳಗಿಟ್ಟುಬಿಟ್ಟಳು.

ಅಲ್ಲಿಯೇ ನಿಂತಿದ್ದ ಮಾಲತಮ್ಮ ರೇಗಿದರು. 'ನಿಂಗೆ ಬುದ್ಧಿ ಸರ್‍ಯಾಗಿದೆ ತಾನೆ?'

'ಇದೇಮ್ಮಾ. ಇವೊತ್ತೋ ನಾಳೇನೋ ಸತ್ತುಹೋಗೋ ಹಾಗಿರೋ ಅವರ್ನ ನಾನು ನೋಡಿ ಬರ್ಲೇಬೇಕು. ಅಂದ್ಹಾಗೆ ನನ್ನ ಅಕೌಂಟಿನಲ್ಲಿ

ಎಷ್ಟಿದೆಯಮ್ಮಾ ?' ಮಾಲತಮ್ಮ ಮಗಳನ್ನು ದುರುದುರು ನೋಡಿದರು.

'ಯಾಕೆ ?'

'ನಂಗೆ ಇಪ್ಪತ್ತೈದು ಸಾವಿರಬೇಕು.'

'ನಿಂಗ್ಯಾಕೆ ಬೇಕು ?'

ಪವಿತ್ರ ನಕ್ಕಳು. 'ಅಮ್ಮಾ, ಇಷ್ಟು ವರ್ಷಗಳಿಂದ ಸಾವಿರಾರು ರೂಪಾಯಿ ಸಂಪಾದಿಸ್ತಾ ಬಂದಿದ್ದೀನಿ. ಒಂದು ದಿನವಾದ್ರೂ ನಿನ್ನ ದುಡ್ಡು ಕೇಳಿದ್ದೀನೇನಮ್ಮಾ? ಎಲ್ರಿಗೂ ನನ್ನ ದುಡ್ಡು ಹಂಚಿದ್ದೀಯಾ ! ನಾನು ಸಂಪಾದಿಸಿರೋ ಹಣದಲ್ಲಿ ನಂಗೆ ಇಪ್ಪತ್ತೈದು ಸಾವಿರಬೇಕು' ಗಡುಸಾಗಿ ಹೇಳಿದಳು.

'ತಾಳು ಧನಂಜಯ ಬರ್ಲಿ, ಕೇಳಿ ಕೊಡ್ತೀನಿ.' ಮಾಲತಮ್ಮ ಹೇಳಿದಾಗ ಪವಿತ್ರ ಕೆಂಡವಾದಳು.

'ನನ್ನ ಹಣ ನನಗೆ ಕೊಡಲು ಅವರನ್ಯಾಕೆ ಕೇಳಬೇಕು ? ಅವರೇನು ನನಗೆ ಬಿಟ್ಟಿ ಹಣ ಕೊಡೋಲ್ವಲ್ಲ. ಅವರಿಗೆ ಬೇಕಾದ್ದು ತಗೊಂಡು ಬಿಸಾಕಿ ಹೋಗ್ತಾರೆ ಹೆಚ್ಚು ಗಲಾಟೆ ಮಾಡ್ದೆ ನನಗೆ ದುಡ್ಡು ಕೊಡು.'

ಅಷ್ಟರಲ್ಲಿ ವಸಂತ್ ಬಂದಿದ್ದರಿಂದ ಮಾಲತಮ್ಮ ದನಿ ಬದಲಿಸಿದರು.

'ನೋಡಪ್ಪ, ಇಪ್ಪತ್ತೈದು ಸಾವಿರ ತೊಗೊಂಡ್ಹೋಗಿ ಆ ಹಾಳು ಮನೆ ಮುರುಕನಿಗೆ ಕೊಡ್ತಾಳಂತೆ.'

'ಅಮ್ಮಾ, ಹಾಗೆ ಮಾತಾಡ್ಬೇಡಾ. ಅವ್ನು ಮನೆ ಮುರಿದಿರ ಬಹುದು. ಹಾಗೇ ನಾನೂ ಮನೆ ಮುರುಕಳೇ. ಹೆಂಡತಿಯಿರುವವರನ್ನು ಇಟ್ಕೊಂಡಿರೋಳು. ಚೆನ್ನಾಗಿರೋವರ್ಗೂ ಹಣಕೊಟ್ಟು ನೋಡ್ತಾರೆ ನಮ್ಮ ಜನ. ನಾವು ಏಣಿಯಿಂದ ಜಾರಿಬಿದ್ದು ಹೋದಮೇಲೆ ತಿರುಗಿಕೂಡ ನೋಡೋಲ್ಲ. ಒಂದು ಕಾಲದಲ್ಲಿ, ನನಗಿಂತ ಮುಂಚೆ ರಾಜೇಂದ್ರ ಒಬ್ಬ ನೆಚ್ಚಿನ ಹೀರೋ ಆಗಿದ್ರೂಂತ ಮರೀಬೇಡಾ. ಈ ಕಲಾವಿದರದೇ ಒಂದು ಸಂಸಾರ. ಇಲ್ಲೂ ಹೊಟ್ಟೆಕಿಚ್ಚು, ವೈಷಮ್ಯ ತಲೆ ಹಾಕ್ತಾರೂ. ನಮ್ಮವರಿಗೆ ನಾವಲ್ದೇ ಇನ್ಯಾರಾಗ್ಬೇಕೂ. ನಾನೇ ಅವರಿಗೆ ಮೋಸ ಮಾಡಿದ್ದೀನಿ. ನಿಮ್ಗೆ ರೋಲ್ ಕೊಡಿಸ್ತೀನಿ ಅಂತ ಹೇಳಿ ಕೊಡಿಸ್ಲಿಲ್ಲ.' ಪವಿತ್ರ ಬಹಳ ಆವೇಶದಿಂದ ನುಡಿದಳು. ವಸಂತ್ ಅವಳತ್ತ ಬಂದ. 'ಆಗ್ಲಿ ಸಮಾಧಾನ ಮಾಡ್ಕೊ ಪವಿತ್ರ, ಸಿಮ್ತಾಯಿ ಕೊಡ್ತಾರೆ. ನಿಶ್ನ ಮನಸ್ಸಿನ ತುಮುಲ ನನಗರ್ಥವಾಗುತ್ತೆ' ಎಂದಾಗ ಮಾಲತಮ್ಮ ವಸಂತನನ್ನು ಮನಸ್ಸಿನಲ್ಲೇ

ಶಪಿಸುತ್ತಾ ಸೊಂಟದ ಬೀಗದ ಕೈ ಎತ್ತಿಕೊಂಡು ಒಳನಡೆದರು.

ರಾಜೇಂದ್ರನ ಮನೆಯ ಮುಂದೆ ಕಾರು ನಿಂತಾಗ ಪವಿತ್ರಳಿಗೆ ಹಿಂದಿನ ನೆನಪುಗಳು ಮರುಕಳಿಸಿದವು. ತಾನೆಷ್ಟು ಉನ್ಮತ್ತಳಾಗಿ ಇಲ್ಲಿಗೆ ಬರುತ್ತಿದ್ದೆ. ಅವನೊಂದು ಅಪ್ಪುಗೆಗೆ, ಚುಂಬನಕ್ಕೆ ಈಗ ವಿದಾಯ ಹೇಳಲು ಬರುವಂತಾಗಿದೆ. ಕೈಲಿದ್ದ ಪರ್ಸನ್ನು ಮುಟ್ಟಿ ನೋಡಿಕೊಂಡಳು. ಕಾರಿನಲ್ಲಿ ಕುಳಿತ್ತಿದ್ದ ಮಾಲತಮ್ಮ ಹೇಳಿದರು.

'ಬೇಗ ಬಂದ್ಬಿಡು.'

ಪವಿತ್ರ ರಾಜೇಂದ್ರನ ಮನೆಯ ಮೆಟ್ಟಲು ಹತ್ತಿ ಕರೆಗಂಟೆಯೊತ್ತಿದ್ದಳು. ಬಾಗಿಲು ತೆರೆದಾಗ ಎದುರಿಗೆ ಶ್ರೀಮತಿ ರಾಜೇಂದ್ರ ನಿಂತಿದ್ದಳು. ಎಷ್ಟು ಇಳಿದು ಹೋಗಿದ್ದಳು. ಎಷ್ಟು ವಯಸ್ಸಾದಂತೆ ಕಾಣುತ್ತಿದ್ದಳು.

'ಬನ್ನಿ' ಎಂದಾಗ ದನಿಯಲ್ಲಿ ಜೀವವೇ ಇರಲಿಲ್ಲ.

'ರಾಜೇಂದ್ರನನ್ನು ನೋಡಿ ಹೋಗಲು ಬಂದೆ. ಪೇಪರ್‌ನಲ್ಲಿ ಓದಿದಾಗಲೇ ನನಗೆ ತಿಳಿದಿದ್ದು ಶೂಟಿಂಗಿಗೆ ಬರ್‍ತಾ ಇದ್ದಾಗ ಒಂದು ಮಾತೂ ಹೇಳಲಿಲ್ಲ.' ಪವಿತ್ರ ಹೇಳಿದಾಗ ಅವನ ಪತ್ನಿಯ ಕಣ್ಣುಗಳಲ್ಲಿ ನೀರು ತುಂಬಿತು.

'ನನಗೇ ಹೇಳದೆ ಮುಚ್ಚಿಟ್ಟಿದ್ದರು. ಬನ್ನಿ, ರೂಮಿನಲ್ಲಿ ಮಲಗಿದ್ದಾರೆ.'

'ಯಾವಾಗ ಬೊಂಬಾಯಿಗೆ ಹೋಗೋದು ?'

'ನಾಳೆ ರಾತ್ರಿ.'

ರಾಜೇಂದ್ರ ಹಾಸಿಗೆಯ ಮೇಲೆ ಮಲಗಿ ಯಾವುದೋ ಪುಸ್ತಕ ತಿರುವುತ್ತಿದ್ದ. ಪವಿತ್ರಳನ್ನು ಕಂಡಾಗ ಅಚ್ಚರಿಯಾದರೂ ತೋರ್ಪಡಿಸದೆ ನಕ್ಕ. ಅದೇ ಅಂದಿನಂತೆಯೇ ಮಾದಕ ನಗು, ಮುಖ ಬಾಡಿತ್ತು. ಆದರೆ ಒಳಗಿನ ಉಲ್ಬಣ ಕಾಯಿಲೆಯ ಸೋಂಕು ಮುಖದಲ್ಲಿರಲಿಲ್ಲ. ಹಾಳು ಆ ಖಾಯಿಲೆಯೇ ಹಾಗೆ. ಕೊನೆಯವರೆಗೆ ಆಸೆ ಹುಟ್ಟಿಸಿ ತಿಂದುಹಾಕುವುದು.

'ಹೇಗಿದ್ದೀರಿ ?' ಪವಿತ್ರ ಕೇಳಿದಾಗ ರಾಜೇಂದ್ರ ನಕ್ಕ.

'ಯಾಕೆ ಚೆನ್ನಾಗಿಲ್ವಾ ನಾನು? ಸ್ವಲ್ಪ ವಯಸ್ಸಾಗಿರಬಹುದು ಅಷ್ಟೆ.

ಪವಿತ್ರ ತಲೆ ತಗ್ಗಿಸಿದಳು.

'ಇವರಿಗೆ ಏನಾದರೂ ತಂದುಕೊಂಡು. ದೊಡ್ಡ ತಾರೆ ನಮ್ಮ ಮನೆ ಬಾಗಿಲಿಗೆ ಬಂದಿದ್ದಾರೆ.' ಪತ್ನಿಗೆ ಹೇಳಿದಾಗ ಅವನಿಂಗಿತ ಅರಿತಳು. ಅವ

ಳತ್ತ ಹೋಗುತ್ತಲೇ ಪವಿತ್ರ ಅವನ ಕೈ ಅದುಮಿದಳು.

'ರಾಜೇಂದ್ರ ಸುದ್ದಿ ಓದಿ ನನಗೆ ತುಂಬಾ ವ್ಯಥೆಯಾಯಿತು. ನೀವು ಇಷ್ಟು ದಿನ ಮುಚ್ಚಿಡಬಾರದಿತ್ತು. ಅರ್ಲಿ ಸ್ಟೇಜಸ್ನಲ್ಲಿ ವಾಸಿಯಾಗುತ್ತಂತೆ.'

ರಾಜೇಂದ್ರ ಅವಳ ಕೈ ಸವರಿದ. ಪವಿತ್ರ ಬದುಕಿ ಏನು ಕಡೆಯಬೇಕು? ನನ್ನ ಕಾಲ ಮುಗಿಯಿತು. ಅಂಕದ ಪರದೆ ಜಾರಬೇಡವೇ?'

ಪವಿತ್ರ ತುಟಿ ಕಚ್ಚಿ ಅಳು ನುಂಗಿದಳು.

'ಹಾಗೆ ಮಾತಾಡ್ಬೇಡಿ ರಾಜೇಂದ್ರ. ನನ್ನ ಕ್ಷಮಿಸ್ತೀರಾ? ನಾನು ತುಂಬಾ ಕೆಟ್ಟವಳಾಗಿಬಿಟ್ಟಿದ್ದೀನಿ.'

'ಇಲ್ಲ. ಪವಿತ್ರ. ಅಂದು ಹೇಗಿದ್ದ್ಯೋ ಹಾಗೆ ಇದ್ದೀಯಾ. ನಿನ್ನ ಒಲವು ಪಡೆಯೋ ಭಾಗ್ಯ. ನಿನ್ನ ಜೊತೆ ಅಭಿನಯಿಸೋ ಸೌಭಾಗ್ಯ ನನಗಾಗಲಿಲ್ಲಾಂತ ಈಗ ಬೇಸರ ಆಗುತ್ತೆ. ಅದೆಲ್ಲಾ ನಾವಿಬ್ರೂ ಮರೆತು ಬಿಡೋಣ' ಅವಳ ತಗ್ಗಿದ ತಲೆ ತಡವಿದ. 'ಹುಚ್ಚು ಹುಡುಗಿ ಅಳ್ತಾರಾ? ನಿನ್ನ ಜೊತೆ ಮಾಡಿರೋ ಎರಡು ಚಿತ್ರಗಳಲ್ಲಿ ನಾನು ನಿನ್ನ ತೊಡೆಯ ಮೇಲೆ ತಲೆಯಿಟ್ಟು ಪ್ರಾಣಬಿಡಲಿಲ್ಲವೇ?'

ಅಷ್ಟರಲ್ಲಿ ರಾಜೇಂದ್ರನ ಪತ್ನಿ ಪ್ರಮದ ಬಂದುದರಿಂದ ಮಾತು ಮುಗಿಯಿತು. ಹೊರಗೆ ಕಾರಿನ ಹಾರನ್ ಸದ್ದು ಕೇಳಿತು ತಂದ ಪಾನಕ ಕುಡಿದಳು.

'ಬರ್ತೀನಿ ರಾಜೇಂದ್ರ. ಹುಷಾರಾಗಿ ನೋಡ್ಕೊಳ್ಳಿ ಆರೋಗ್ಯ! ನಿಮಗೆ ದೇವರು ಧೈರ್ಯ ಕೊಡಲಿ ಆಯಸ್ಸು ಕೊಡಲೀಂತ ಪ್ರಾರ್ಥಿಸ್ತೀನಿ' ಅವನಿಗೆ ಕೈಮುಗಿದು ಎದ್ದು ನಿಂತಳು. ಅವಳನ್ನೇ ನೋಡುತ್ತಿದ್ದ ರಾಜೇಂದ್ರನ ಕಣ್ಣು ಕೆರೆಯಂತೆ ತುಂಬಿತ್ತು.

'ಇಲ್ಲಿ ಬಾ ಪವಿತ್ರ' ಎಂದು ಕೈ ಚಾಚಿದ. ಪವಿತ್ರ ಹಿಂದೆ ಮುಂದೆ ಯೋಚಿಸದೇ ಅವುಗಳತ್ತ ಧಾವಿಸಿದಳು. ಅವಳನ್ನು ಬಳಸಿ ಬಾಗಿದ ಅವಳ ಮುಖ ನೋಡಿ ಎರಡು ಕೆನ್ನೆಗೂ ಮುತ್ತಿಟ್ಟ.

'ನಾನೂ ಹೋಗಿ ಬರ್ತೀನಿ ಪವಿತ್ರ. ನನ್ನ ಜ್ಞಾಪಕ ಇರ್ಲಿ' ಅವಳನ್ನು ಎರಡು ನಿಮಿಷ ತನ್ನ ಎದೆಗಾನಿಸಿಕೊಂಡು ಅನಂತರ ಬಿಟ್ಟ. ಅವನ ಕಣ್ಣೊರಸಿದಳು ಪವಿತ್ರ.

ಹಿಂತಿರುಗಿ ನೋಡದೇ ಪವಿತ್ರ ಬಂದು ಬಾಗಿಲ ಮರೆಯಲ್ಲಿ ಕಣ್ಣೊ

ರಸಿಕೊಂಡಳು. ಪ್ರಮದಳನ್ನು ಕಣ್ಸನ್ನೆಮಾಡಿ ಕರೆದಳು. ಪರ್ಸ್ ತೆಗೆದು ಅವಳ ಕೈಗೆ ನೋಟುಗಳ ಕಂತೆಯಿಟ್ಟಳು. ಅವರಿಗೆ ಇಟ್ಕೊಳ್ಳಿ. ಚಿಕಿತ್ಸೆಗೆ ಬೇಕಾಗುತ್ತೆ. ವಸಂತ್ ತಿರುವು ಚಿತ್ರದ ಹತ್ತು ಸಾವಿರ ಸಾಯಂಕಾಲ ತಂದುಕೊಡ್ತಾರೆ' ಅವಳನ್ನು ಅಪ್ಪಿಕೊಂಡು ನುಡಿದಳು.

'ಧೈರ್ಯ ತೊಗೊಳ್ಳಿ ಅವರು ಹೆಚ್ಚು ನರಳದೇ ಕೊನೆಯುಸಿರು ಎಳೆಯುವಂತೆ ಪ್ರಾರ್ಥಿಸುತ್ತೇನೆ.'

ಅಲ್ಲಿಂದ ಪ್ರತ್ಯುತ್ತರಕ್ಕೆ ಕಾಯದೇ ಕಾರಿನತ್ತ ಧಾವಿಸಿದಳು. ಪ್ರಮದ ಕೈಯಲ್ಲಿ ಹಣ ಹಿಡಿದು ಹಾಗೇ ದಿಙ್ಮೂಢಳಾಗಿ ನಿಂತಿದ್ದಳು. ಇಂತಹವರೂ ಉಂಟೇ ಚಿತ್ರರಂಗದಲ್ಲಿ. ಬಾಗಿಲಿಗೆ ಹೋಗಿ, ತನ್ನ ಪತಿಯ ಸ್ಥಿತಿ ವಿವರಿಸಿ ಕೇಳಿದಾಗಲೂ ಬರಬೇಕಾಗಿದ್ದ ಬಾಕೀ ಕೆಲವರು ಕೊಟ್ಟಿರಲಿಲ್ಲ.

ಕಾರಿಗೆ ಬಂದು ಕುಳಿತಾಗ ಏನೋ ನೆಮ್ಮದಿ. ಏನೋ ಅವ್ಯಕ್ತ ಸಂತೃಪ್ತಿ ಪವಿತ್ರಳಿಗೆ. ಮಾಲತಮ್ಮನಿಗೆ ಅನುಸಂಕಟ. ಅನ್ಯಾಯವಾಗಿ ಇಪ್ಪತ್ತೈದು ಸಾವಿರ ರೂಪಾಯಿ ಅವನಿಗೆ ಕೊಟ್ಟುಬಿಟ್ಟಳಲ್ಲಾ! ಇವಳಿಗೇನು ಉಪಕಾರ ಮಾಡಿದ್ದ ಅವನು? ಅವನೇನು ನೆಂಟನೇ? ಕೂಡಲೇ ತಮ್ಮ ಯೋಚನೆಗೆ ಕಡಿವಾಣ ಹಾಕಿದರು. ಅವಳ ನೆಂಟರು, ಸ್ವಂತ ಅಣ್ಣ ಅಕ್ಕಂದಿರೇನು ಮಾಡಿದ್ದರು.? ತಾವು ತಾನೆ ಏನು ಮಾಡಿದ್ದರು? ಅವಳು ಸಂಪಾದಿಸಿದ ಹಣದಲ್ಲಿ ಹಾಯಾಗಿರಲಿಲ್ಲವೇ? ತಮ್ಮ ಗುರಿಸಾಧನೆಗಾಗಿ ಅವಳ ಸುಖ ಸಂತೋಷಗಳನ್ನೇ ಬಲಿ ಕೊಡುತ್ತಿಲ್ಲವೇ? ಬಾಯಿಗೆ ಬಂದ ಮಾತು ತುಟಿ ಮೀರದಂತೆ ತಡೆದುಕೊಂಡು ಸುಮ್ಮನಾದರು.

ಧನಂಜಯರು ಬಂದಾಗ ಶ್ಯಾಮ್ ತನ್ನ ತಂಗಿ ಮಾಡಿದುದು ಸರಿಯಲ್ಲವೆಂದು ಗೊಣಗಿದ.

'ಎತ್ತಿಕೊಟ್ಟುಬಿಟ್ಟಳಲ್ಲ. ಹೀಗೆ ಸಂಪಾದಿಸಿದುದೆಲ್ಲಾ ಹಾಳು ಮಾಡಿದ್ರೆ ನಾಳೆ ಚಿಪ್ಪು ಹಿಡ್ಕೋಬೇಕಾಗುತ್ತೆ.'

ಅಲ್ಲಿಯೇ ಧನಂಜಯರ ಜೊತೆ ಸ್ಕ್ರಿಪ್ಟ್ ವರ್ಕಿಗೆ ಕುಳಿತಿದ್ದ ವಸಂತ ಉಗುಳು ನುಂಗಿದ. ಇವರೆಲ್ಲರೂ ಅವಳಿಂದ ದೋಚಿಕೊಳ್ಳುತ್ತಿಲ್ಲವೇ? ರಾಜೇಂದ್ರನಿಗೆ ಕೊಡಲಿ ಬಿಡಲಿ ಇವಳಿಗೆ ಕೊನೆಗೆ ಚಿಪ್ಪೇ. ತಾನು ಲಲ್ಲಿಯನ್ನು ಕೈಹಿಡಿದರೆ ಪವಿತ್ರಳ ಬದುಕು ನೇರ್ಪು ಮಾಡಬಹುದು. ಆ ಸುಸಂದರ್ಭ ತನಗೊದಗಿದರೆ ಸಾಕು.

ಧನಂಜಯ ಶ್ಯಾಮ್‌ನ ಮಾತು ಕೇಳಿ ಮುಗುಳ್ನಕ್ಕರು.

'ಕೊಡ್ಲಿ ಬಿಡಿ. ಸಧ್ಯಕ್ಕೆ ಆ ಪೀಡೆ ತಪ್ಪಿತು. ಮನಸ್ಸಿನಲ್ಲೇ ಕೊರೀತಾ ಇರುತ್ತೆ. ಈಗ ನಿಶ್ಚಿಂತೆ ಆಗೋಯ್ತಲ್ಲಾ. ಅಂತಹ 25 ಸಾವಿರ ಎಷ್ಟು ಸಂಪಾದಿಸ್ತಾಳೋ.'

ಪವಿತ್ರ ಬಂದಾಗ ತನಗಿಂತಲೂ ಮುಂಚೆ ಬಂದು ಕುಳಿತಿದ್ದ ಧನಂಜಯರನ್ನು ಕಂಡು ಮುಖ ಚಿಕ್ಕದು ಮಾಡಿಕೊಂಡಳು ಇವೊತ್ತು ತನಗೆ ಮನಸ್ಸೇ ಸರಿಯಿಲ್ಲ. ಇವೊತ್ತು ಇವರು ಬರದಿದ್ದರೆ ಚೆನ್ನಾಗಿತ್ತು. ಮನಸ್ಸು ಮೈ ಎರಡೂ ಬಳಲಿತ್ತು. ನೃತ್ಯದ ಚಿತ್ರೀಕರಣಕ್ಕಾಗಿ ಅಡವುಗಳನ್ನು ಕಲಿತು ಮಾಡಿ ಎರಡು ಕಾಲುಗಳೂ, ಸೊಂಟ ನೋಯುತ್ತಿತ್ತು. ರಾಜೇಂದ್ರನನ್ನು ನೋಡಿ ಬಂದಾಗಿನಿಂದ ಮನಸ್ಸೇಕೋ ಅಲ್ಲೋಲ ಕಲ್ಲೋಲವಾಗಿತ್ತು.

'ಬಾ ಮರಿ ಇಲ್ಲಿ' ಎಂದು ಧನಂಜಯ ಕರೆದಾಗ ಅವಳು ಅವರತ್ತ ಹೋಗದೇ ಅಲ್ಲಿಯೇ ಇದ್ದ ಕುರ್ಚಿಯೊಂದರಲ್ಲಿ ಕುಸಿದಳು.

'ಅಮ್ಮಾ,ನಾನು ಮೇಕಪ್ ತೆಗೆದು ಚೆನ್ನಾಗಿ ಸ್ನಾನ ಮಾಡಬೇಕು. ಯಾಕೋ ಮೈಯೆಲ್ಲಾ ನೋವು. ಮಲಗಿದ್ರೆ ಸಾಕಾಗಿದೆ' ಅದು ಧನಂಜಯರಿಗೆ ತಿಳಿಯಲಿ ಎಂದು ಹೇಳಿದ್ಳು. ಆದರೆ ಅವರಿಗೆ ಆ ಮಾತು ಮನಸ್ಸಿಗೆ ಹತ್ತಿದಂತೆ ಕಾಣಿಸಲಿಲ್ಲ.

'ಇನ್ನೊಂದು ಚಿತ್ರಕ್ಕೆ ಸ್ಕ್ರಿಪ್ಟ್ ಪ್ರಾರಂಭಿಸಿದ್ದೇನೆ. ಇದ್ರಲ್ಲಿ ನಿನ ಕೈಲಿ ಎಂತಹ ರೋಲ್ ಮಾಡಿಸ್ತೀನಿ ನೋಡ್ತಾ ಇರು. ಇದಕ್ಕೆ ನಿಂಗೆ ಪ್ರಶಸ್ತಿ ಗ್ಯಾರಂಟಿ ಮೂಕಿ ಪಾತ್ರ. ಎಲ್ಲಾ ಮುಖಭಾವ, ಕಣ್ಣುಗಳಲ್ಲೇ ತೋರಿಸ್ಬೇಕೂ. ನಮ್ಮ ವಸಂತ್ ಕತೆ ಹೇಳ್ದ. ಅವನನ್ನೇ ಕಥೆ, ಚಿತ್ರಕಥೆ, ಸಂಭಾಷಣೆ ಬರೆಯೋಕೆ ತೊಗೊಳ್ಳೋಣ ಅಂತಿದ್ದೀನಿ. ಏನೇಳ್ತೀ ?'

ಪವಿತ್ರಳಿಗೆ ಅದು ಅತ್ಯಂತ ಹರ್ಷದ ಸಂಗತಿಯಾಗಿತ್ತು. ವಸಂತ ಇದರಿಂದ ಮುಂದೆ ಬರಲಿ, ಹೆಸರು ಮಾಡಲಿ.

'ಓ ವಸಂತ್, ನಾನೆಷ್ಟು ಅದೃಷ್ಟವಂತಳು. ನೋಡೋಣ ನನಗಾಗಿ ನೀವು ಎಷ್ಟು ಚೆನ್ನಾಗಿ ಸ್ಕ್ರೀನ್ ಪ್ಲೇ ಬರೀತೀರಿ. ಸಂಭಾಷಣೆ ಬರೀತೀರೀಂತಾ. ನೀವು ಚೆನ್ನಾಗೇ ಬರೀತೀರಿ. ಅದ್ರಿಂದ ನಂಗೆ ಹೆಸರು ಬರೋದು ಖಂಡಿತ.' ಎಂದಾಗ ವಸಂತ ಕೊಂಚ ಕೆಂಪಗಾದ.

'ಪವಿತ್ರಾ, ಅದು ನೀವು ನನ್ನ ಮೇಲಿಟ್ಟಿರೋ ಅಭಿಮಾನ.'

ಧನಂಜಯರ ಮುಖ ಗಂಭೀರವಾಯಿತು. 'ಹಾಗಾದ್ರೆ ನಿರ್ದೇಶನಕ್ಕೆ

ಯಾವ ಬೆಲೆಯೂ ಇಲ್ವೇ?'

ಪವಿತ್ರಳಿಗೆ ತನ್ನ ತಪ್ಪಿನ ಅರಿವಾಯಿತು. 'ನಿಮ್ಮ ದಿಗ್ದರ್ಶನವಿಲ್ಲದೇ ನಾನು ತಾರೆಯಾಗಿ ಉಳಿಯೋದು ಸಾಧ್ಯವೇ? ನನ್ನ ವಿಘಾತರಂತೆ. ವಸಂತ್‌ಗೆ ಸ್ಫೂರ್ತಿ ಬರಲೀಂತ ಹೊಗಳಿದೆ ಅಷ್ಟೆ.' ಧನಂಜಯ ಅನಂತರ ನಸುನಕ್ಕರು. ಪವಿತ್ರ ತನ್ನ ಮೇಲಿಟ್ಟಿರೋ ಭರವಸೆಗೆ ಏನು ಕೊಟ್ಟರೂ ಏನು ಮಾಡಿದರೂ ಸಾಲದು.

ಪವಿತ್ರ ಸ್ನಾನ ಮುಗಿಸಿ ಅಲ್ಪಾಹಾರ ತೆಗೆದುಕೊಂಡು ಹಾಸಿಗೆಯ ಮೇಲೆ ಮಲಗಿ ಯಾವುದೋ ಪತ್ರಿಕೆ ತಿರುವಿಹಾಕುತ್ತಿದ್ದಳು. ಅವಳ ರೂಮಿನಲ್ಲಿದ್ದ ಸ್ಟೀರಿಯೋದಿಂದ ಯಾವುದೋ ಸುಮಧುರ ಸಂಗೀತ ಹರಿದು ಬರುತ್ತಿತ್ತು. ಮೇಕಪ್ ತೆಗೆದು ಸಾಧಾರಣ ಸೀರೆಯುಟ್ಟು ಸರಳ ವಾಗಿರುವಾಗ ಪವಿತ್ರಳ ಸೌಂದರ್ಯ ಯಾವಾಗಲೂ ಇಮ್ಮಡಿಸಿತ್ತು. ತೆರೆಯ ಮೇಲಿಗಿಂತ ಹಾಗೆಯೇ ಅಂದವಾದ ಚೆಲುವು ಅವಳದು. ಅದು ಅವಳನ್ನು ಕಂಡು ಅವಳೊಂದಿಗಿದ್ದವರಿಗೇ ತಿಳಿದದು. ಧನಂಜಯ ಎಂದಿನಂತೆ ಬಾಟಲು ಹಿಡಿದು ಶ್ಯಾಮ್‌ನೊಂದಿಗೆ ಕುಳಿತಿದ್ದಾಗ ವಸಂತ್ ತಾನು ಬರೆದಿದ್ದ ಕೆಲವು ಕವನಗಳನ್ನು ಪವಿತ್ರಳಿಗೆ ತೋರಬೇಕೆಂದು ಮಾಲತಮ್ಮನಿಗೆ ಹೇಳಿದಾಗ ರಾತ್ರಿಯ ಊಟಕ್ಕೆ ಅಣಿ ಮಾಡುತ್ತಿದ್ದ ಅವರು 'ಒಳಗಿದ್ದಾಳೆ ನೀನೇ ತೋರಿಸು ಹೋಗು' ಎಂದುಬಿಟ್ಟರು. ಲಲ್ಲಿ ವಸಂತ್ ತನ್ನ ಕೈ ಹಿಡಿಯುವವನೆಂದು ತಿಳಿದಾಗಿನಿಂದ ಅವನಿದ್ದಾಗ ಹೊರಗೇ ಬರುತ್ತಿರಲಿಲ್ಲ. ನಾಚಿಕೆ ಅವಳಿಗೆ. ಅಲ್ಲದೇ ಪವಿತ್ರಳ ಮುಂದೆ ತಾನು ಬಹಳ ಸಪ್ಪೆಯೆಂದು ಅವಳಿಗೆ ಆತಂಕ. ಪವಿತ್ರಳನ್ನು ಒಲಿದು ತನ್ನ ಕೈಹಿಡಿಯಲು ಒಪ್ಪಿದ್ದ ವಸಂತನ ಬಗ್ಗೆ ಅವಳಿಗೇನೂ ಆದರವಿರಲಿಲ್ಲ. ಆದರೆ ತನ್ನ ಕೈಹಿಡಿಯಲು ಒಪ್ಪಿದ್ದ ಅವನ ಬಗ್ಗೆ ನಿರ್ವಿಕಾರ ಮನೋಭಾವವಿತ್ತು. ಅವನು ತನ್ನ ಕೈಹಿಡಿದು, ತನ್ನ ಮಾತು ಕೇಳುವ ಹಾಗಾದ ಮೇಲೆ ಅವನನ್ನು ಇಲ್ಲಿಂದ ಬೇರೆ ಹೋಗಲು ಒತ್ತಾಯಿಸಬೇಕೆಂದು ಆಗಲೇ ಯೋಚಿಸಿದ್ದಳು. ವಸಂತ್ ಒಳಗೆ ಹೋಗಲು ಅನುಮಾನಿಸಿ ಯಾರೂ ಸಿಗದಿದ್ದಾಗ ತಾನೇ ರೂಮಿನ ಬಾಗಿಲು ತೆರೆದು ಪರದೆ ಸರಿಸಿ ಒಳಹೊಕ್ಕ. ಯಾವುದೋ ಚಿತ್ರವನ್ನು ನೋಡುತ್ತ ಮೈ ಮರೆತಿದ್ದ

ಪವಿತ್ರ ಅವನು ಬಂದುದು ಗಮನಿಸಲಿಲ್ಲ. ಅವಳ ಏಕಾಗ್ರತೆಗೆ ಭಂಗ ತರ ಲಿಚ್ಛಿಸದೆ ಕ್ಷಣಕಾಲ ಅವಳನ್ನೇ ದಿಟ್ಟಿಸಿದ. ಎಂತಹ ಸೌಂದರ್ಯ ಸಿರಿ! ಈ ಸಿರಿ ಸಂಪತ್ತು ತನಗೆ ಸೇರಬೇಕಿತ್ತು. ಆ ಪುಣ್ಯ ತನಗಿಲ್ಲ. ಹಾಗೇ ನಿಂತು ವ್ಯೆಮರೆತ. ಪತ್ರಿಕೆಯಿಂದ ಕಣ್ಣು ಹೊರಳಿಸಿದಾಗ ಎದುರಿಗೆ ನಿಂತಿದ್ದ ವಸಂತ್‌ನನ್ನು ಕಂಡು ಅಚ್ಚರಿಗೊಂಡಳು.

'ಅರೇ, ಇದೇನು ಹೀಗೆ ನಿಂತಿದ್ದೀರಿ? ಒಳಗೆ ಬರಬಾರದೇ?'

'ನಾನು ಬಂದು ಬಹಳ ಹೊತ್ತಾಯ್ತು. ನಿನ್ನ ಡಿಸ್ಟರ್ಬ್ ಮಾಡ್ಬಾರ್ದೂಂತ ಹಾಗೇ ನಿನ್ನೇ ನೋಡ್ತಾ ನಿಂತಿದ್ದೆ. ನೀನು ಒಳ್ಳೆಯ ಪತ್ನಿ, ಗೃಹಿಣಿಯಾಗಿರೋಕೆ ಲಾಯಕ್ಕು. ಚಿತ್ರ ರಂಗಕ್ಕಿಳಿಯಬಾರದಿತ್ತು. ಅದೇ ನಿನ್ನ ಅಕ್ಕ ಲಲ್ಲಿಗೆ ಬಣ್ಣ, ಅಲಂಕಾರ ಇಷ್ಟ. ಅವಳಿಗೆ ಈ ರಂಗ ಚೆನ್ನಾಗಿ ರೋದೂ.' ವಸಂತ್ ನಗುತ್ತಾ ಹೇಳಿ ಅವಳ ಕೈಗೆ ತಾನು ಬರೆದ ಕವನ ಗಳನ್ನಿತ್ತ. 'ಒಂದ್ಸಲ ಓದಿ ನೋಡು.' ಪವಿತ್ರ ಒಬ್ಬಳೇ ಇದ್ದಾಗ ಏಕ ವಚನದಲ್ಲಿ ಮಾತನಾಡುತ್ತಿದ್ದ.

ಪವಿತ್ರ ಅವನ ಕೈಯಿಂದ ಕವನಗಳನ್ನು ತೆಗೆದುಕೊಂಡು ಓದಿದಳು. ಅವಳ ಮುಖ ಅರಳಿತು. 'ಇದೇನು ನಿಮ್ಮ ಸಾಹಿತ್ಯ ಅಂದ್ರೆ ನಾನೊಬ್ಬಳೇ ಅದಕ್ಕೆ ವಸ್ತುವೇನು?'

'ಹೌದು. ಯಾವುದು ನನಗೆ ಇಷ್ಟವಾಗುತ್ತೋ ಆಕರ್ಷಿಸುತ್ತೋ ಅದನ್ನೇ ಬರೆಯೋದು' ಎಂದ.

ಹಾಗಾದರೆ ವಸಂತ್ ಅಂತ ಹೆಸರಿಟ್ಕೊಳ್ಳೋ ಬದ್ಲು ಪವಿತ್ರಪ್ರಿಯ ಅಂತ ಇಟ್ಕೊಳ್ಳಿ.' ಪವಿತ್ರ ಹೇಳಿ ನಕ್ಕಳು. ವಸಂತ್ ಸಹ ನಕ್ಕ.

'ಯಾಕಾಗಬಾರದು. ಇಲ್ಲಿ ಕೊಡು' ಕವನಗಳನ್ನು ಅವಳ ಕೈಯಿಂದ ತೆಗೆದುಕೊಳ್ಳುವುದಕ್ಕೆ ಹೋದಾಗ ಅವಳು ಕೊಡಲಿಲ್ಲ.

'ಇರಲಿ, ನಾನು ಸಾರ್‌ಗೆ ತೋರಿಸಿ ಕೊಡ್ತೀನಿ. ಅವ್ರು ತುಂಬಾ ಮೆಚ್ಕೋತಾರೆ. ತಮ್ಮ ಪಾಪೂ ಮೇಲೆ ಬರೆದ ಕವನಾಂದ್ರೆ ಅವರಿಗೆ ಬಹಳ ಖುಷಿ.'

'ಬೇಡಾ ಸದ್ಯ. ಅವರು ನನ್ನ ತಪ್ಪು ತಿಳಿದಾರು. ಒಳ್ಳೇ ಮಾತ್ನಿಂದ ಕೊಟ್ಬಿಡು.' ಅವಳ ಕೈಯಿಂದ ಕಿತ್ತುಕೊಳ್ಳಲು ಹೋದ. ಪವಿತ್ರ ಅವನ ಕೈಗೆ ಸಿಗದಂತೆ ಕೈ ಬೆನ್ನ ಹಿಂದೆ ತೆಗೆದುಕೊಂಡಾಗ ವಸಂತ್ ಅವಳ ಮೇಲೆ ಬಾಗಿ ಅವಳ ಕೈಯಿಂದ ಅವುಗಳನ್ನು ಕಿತ್ತುಕೊಳ್ಳಬೇಕಾಯಿತು. ಕ್ಷಣಕಾಲ

ಅವರಿಬ್ಬರ ಸಾಮೀಪ್ಯ ಮಧುರವಾಗಿತ್ತು. ಬಾಗಿಲ ಬಳಿ ನಿಂತಿದ್ದ ಧನಂಜಯ ಎಚ್ಚರಿಸದಿದ್ದರೆ ಏನಾದರೂ ಅನಾಹುತವಾಗುತ್ತಿದ್ದುದು ಖಂಡಿತ.

'ಪಾಪೂ, ಆಗ್ಲೇ ಮಲಗಿಬಿಟ್ಯಾ? ವಸಂತ್ ಯಾಕೆ ಇಲ್ಲಿಗೆ ಬಂದ?' ವಸಂತ್ ಬೆಚ್ಚಿ ಹಿಂದೆ ಸರಿದ.

'ಯಾವುದೋ ಕವನ ಬರೆದಿದ್ರು ತೋರಿಸೋಕೆ ಬಂದಿದ್ರು.'

ವಸಂತ್ ರೂಮಿನಿಂದ ಸರಕ್ಕನೇ ಹೊರಟಾಗ ಧನಂಜಯ ಬಾಗಿಲು ಹಾಕಿದರು.

'ನಿನ್ನ ಬೆಡ್‌ರೂಮಿಗೆ ಬಂದು ಕೊಡಬೇಕಾಗಿತ್ತಾ? ನನಗಿದೆಲ್ಲಾ ಹಿಡಿಸೋಲ್ಲ. ಇನ್ನು ಮೇಲೆ ಅವನು ಇಲ್ಲಿಗೆ ಬರಕೂಡದು, ನೀನೂ ಸೇರಿಸ ಕೂಡದು.'

'ಹಾಗೇ ಆಗಲಿ.'

ಪವಿತ್ರಳ ಮುಖ ಬಿಳಿಚಿಕೊಂಡಿತು. ಧನಂಜಯ ಅವಳನ್ನೇ ಆಳ ವಾಗಿ ನೋಡಿದರು. ಇವಳು ತನ್ನ ಕೈ ತಪ್ಪಿಹೋಗುವುದರಲ್ಲಿ ಸಂದೇಹವಿಲ್ಲ. ತಾವಿನ್ನು ತಾಳ್ಮೆಯಿಂದಿರಕೂಡದು.

'ಇನ್ನೂ ಎಷ್ಟು ದಿನ ಇದೆ 'ಹೂ ಬನ'ದ ಶೆಡ್ಯೂಲ್ ?'

'ನಾಳೆಯೊಂದು ದಿನ ಮುಗಿದರೆ ಮೊದಲನೇ ಶೆಡ್ಯೂಲ್ ಮುಗಿ ಯುತ್ತೆ.'

'ಹಾಗಾದ್ರೆ ನಾಳೆ ರಾತ್ರೀನೇ ತಿರುಪತಿಗೆ ಹೋಗೋಣ.' ಧನಂಜಯ ಹೇಳಿದಾಗ ಪವಿತ್ರ ಕಣ್ಣರಳಿಸಿದಳು.

'ನನಗೆ ನಿನ್ನ ಹೀಗೆ ನಡೆಸಿಕೊಳ್ಳೋದು ಸರಿಬೀಳೋಲ್ಲ. ತಿರುಪತಿ ಯಲ್ಲಿ ನಿನಗೊಂದು ಮಂಗಳಸೂತ್ರ ಕಟ್ಟಿದರೆ ನನ್ನ ಮನಸ್ಸಿಗೆ ಹಿತ. ನನ್ನ ಧರ್ಮಪತ್ನಿಯಾಗಬೇಕು. ಇಲ್ಲದಿದ್ದರೆ ನಾನು ಧರ್ಮಭ್ರಷ್ಟನಾಗುತ್ತೇನೆ.'

ಪವಿತ್ರ ಅವಾಕ್ಕಾದಳು. ತಾನು ಕೈಹಿಡಿದ ಹೆಂಡತಿಗೆ ಮೋಸ ಮಾಡಿ ತನ್ನ ಕೈಹಿಡಿದರೆ ಧರ್ಮಭ್ರಷ್ಟನಾಗುವುದಿಲ್ಲವೇ ?

'ನಿಮ್ಮಾಕೆಗೆ ನೀವು ತಿಳಿಸದೇ ನನ್ನ ವಿವಾಹವಾಗುವುದು ನನಗೆ ಸರಿ ಬೀಳೋಲ್ಲ. ಅವರು ಊರಿಂದ ಬರಲಿ. ಅವಳ ಒಪ್ಪಿಗೆ ತೆಗೆದುಕೊಂಡೇ ವಿವಾಹವಾಗಬಹುದು.' ಧನಂಜಯ ಅವಳ ಬಳಿ ಕುಳಿತು ಅವಳ ಕೆನ್ನೆ ಸವರಿದರು.

'ಅದಕ್ಕೇ ನೀನು ಅಮಾಯಕಳು ಅನ್ನೋದು. ಅವಳು ಒಪ್ಪುವ

ಹಾಗಿದ್ದರೆ ಆಮೇಲೂ ಅಡ್ಡಿ ಬರುವುದಿಲ್ಲ. ಈಗ ಅವಳು ಬೇಡಾ ಎಂದರೆ ಏನು ಮಾಡೋಣ? ಹೀಗೇ ಇರೋಣವೇ! ಎಲ್ಲರೂ ಪವಿತ್ರ ಧನಂಜಯ ರನ್ನು ಇಟ್ಟುಕೊಂಡಿದ್ದಾಳೆ ಅನ್ನಲೇ?'

ಪವಿತ್ರ ಉಗುರು ಕಚ್ಚಿದಳು. 'ನಾನು ನಿಮ್ಮನ್ನು ವಿವಾಹವಾದರೆ ಚಿತ್ರರಂಗದಲ್ಲಿ ನಾನು ಹೆಸರು ಕಳೆದುಕೊಳ್ಳುವುದಿಲ್ಲವೇ?'

'ಆ ಜವಾಬ್ದಾರಿ ನನಗೆ ಬಿಡು. ನಾನೇ ಪತ್ರಿಕೆಯವರು ಬರೆದರೆ ಅವರಿಗೆ ಹೇಳುತ್ತೇನೆ. ಅವಳು ನನ್ನ ಧರ್ಮಪತ್ನಿ ಅಂತ. ನೀನು ಯಾವ ಮಾತೂ ಆಡಬೇಡ ಅಷ್ಟೆ. ನಾನು ಹೇಳಿದಷ್ಟು ಕೇಳು ಮರಿ. ನನ್ನಲ್ಲಿ ನಂಬಿಕೆಯಿದೆ ತಾನೇ? ನಾನೆಂದೂ ನಿನ್ನ ಕೈಬಿಡೋಲ್ಲ. ಹೆದರಬೇಡ.' ಅವಳನ್ನು ಆಲಂಗಿಸಿಕೊಂಡಾಗ ಅವಳಿಗೆ ಉತ್ತರಿಸಲು ಮಾತುಗಳೇ ಇರ ಲಿಲ್ಲ. ತನ್ನ ಹಣೆಯ ಬರಹ ಬರೆದಂತೆಯೇ.

ತಿರುಪತಿಯಲ್ಲಿ ಸರಳವಾಗಿ ಪದ್ಮಾವತಿಯ ಸನ್ನಿಧಿಯಲ್ಲಿ ಪವಿತ್ರಳ ಕೊರಳಿಗೆ ಧನಂಜಯ ತಾಳಿ ಕಟ್ಟಿದರು. ಚಿನ್ನದ ಸರದಲ್ಲಿ ತಾಳಿ ಸುತ್ತಿಸಿ ಕೊಂಡಿದುದನ್ನು ಕೊಂಡು ತಂದಿದ್ದರು ಮಾಲತಮ್ಮ. ಕರಿಮಣಿ ಹಾಕಿದರೆ ಜನರ ಕಣ್ಣಿಗೆ ಬೀಳುವುದೆಂದು ಆ ರೀತಿ ಮಾಡಿದ್ದರು. ಬರಿಯ ರೋಪ್ ಚೈನಿನಲ್ಲಿ ಮಾಂಗಲ್ಯವಿದ್ದರೆ ಸೆರಗು ಹೊದ್ದಾಗ ಕಾಣುವುದಿಲ್ಲ. ವಿಶ್ಕ ಸಂದರ್ಭಗಳಲ್ಲಿ ಅದನ್ನು ಬ್ರಾದೊಳಗಿಟ್ಟುಕೊಳ್ಳಲು ಪವಿತ್ರಳಿಗೆ ಆಗಲೇ ತಿಳಿಹೇಳಿದ್ದರು ಅದಾದ ಮೇಲೆಯೆ ಧನಂಜಯ, ಮಾಲತಮ್ಮ, ಶ್ಯಾಮ್ ನಿರಾಳವಾಗಿ ಉಸಿರಾಡಿದ್ದು. ಊರಿಗೆ ಹಿಂತಿರುಗಿದ ಕೂಡಲೇ ಶ್ಯಾಮ್, ವಿನೀತ ಮತ್ತು ವಸಂತ್ ಲಲಿತರ ಲಗ್ನಪತ್ರಿಕೆಯ ಸಮಾರಂಭವನ್ನು ಏರ್ಪಡಿಸಿ, ವಸಂತ್ ಪವಿತ್ರರ ನಡುವೆ ಎದ್ದಿದ್ದ ಗಾಳಿಮಾತನ್ನು ನಿಲ್ಲಿಸ ಬೇಕೆಂದೂ ತೀರ್ಮಾನಿಸಿದರು.

ಪವಿತ್ರಳಿಗೆ ಇದರಿಂದ ಯಾವ ಭೇದವೂ ಕಾಣಿಸಲಿಲ್ಲ. ಅವಳ ಸ್ಥಾನ ಮಾನಗಳೇನೂ ಹೆಚ್ಚಿರಲಿಲ್ಲ. ಕುಗ್ಗಿರಲಿಲ್ಲ. ಧನಂಜಯ ಅವಳಿಗೆ ಗಾಡ್ ಫಾದರ್. ಗಾಡ್‌ಫಾದರ್ ಎಂದರೆ ಚಿತ್ರರಂಗದಲ್ಲಿ ವಿಶಾಲವಾದ ಅರ್ಥ ವಿತ್ತು. ಏನರ್ಥಮಾಡಿಕೊಂಡರೂ ಆಯಿತು. ಧನಂಜಯ ಮತ್ತು ತನ್ನ ಸಂಬಂಧದಲ್ಲಿ ಯಾವ ಬದಲಾವಣೆಯೂ ಇರಲಿಲ್ಲ. ಇರುವುದಿಲ್ಲ. ತಾನು ಕಾಲು ಜಾರದಂತೆ ಎಚ್ಚರಿಕೆ ವಹಿಸಿದರೆ ಆಯಿತು.

ಭಾರೀ ಸತ್ಕಾರಕೂಟ, ಸಮಾರಂಭ ಏರ್ಪಡಿಸಿ ಲಲಿತ-ವಸಂತ್

ಶ್ಯಾಮ್–ವಿನೀತರ ಲಗ್ನಪತ್ರಿಕೆ ಏರ್ಪಡಿಸಿದಾಗ ಎಲ್ಲರ ಬಾಯಿಗೂ ಬೀಗ ಬಡಿದಂತಾಗಿತ್ತು. ಪವಿತ್ರಳಷ್ಟೇ ಚೆಲುವೆಯಾಗಿದ್ದ ಲಲಿತಳನ್ನು ಕಂಡಾಗ ವಸಂತ್ ಅವಳಿಗಾಗಿ ಅವಳ ಮನೆಗೆ ಹೋಗುತ್ತಿದ್ದ, ಅಲ್ಲೇ ಇರುತ್ತಿದ್ದ ನೆಂದು ತಿಳಿದು ಸುಮ್ಮನಾದರು.

'ಭಾವನೇ ಸಾಹಿತಿ, ಇನ್ನೇನು ಪವಿತ್ರಳಿಗೆ ಒಳ್ಳೊಳ್ಳೇ ಚಿತ್ರಗಳೇ ಸಿಗುತ್ತೆ' ಎಂದು ಹಾಸ್ಯ ಮಾಡಿದವರೂ ಉಂಟು. ಶಾಮ್‌ಗೆ ಪುಕ್ಕ ಮೂಡಿತ್ತು. ತಾನು ಹೆಸರಾಂತ ತಾರೆಯ ಅಣ್ಣ. ಬಿಸಿನೆಸ್‌ಮೆನ್‌ಒಬ್ಬನ ತಂಗಿಯನ್ನು ವಿವಾಹವಾಗುವುದು ಅವನಿಗೆ ಹೆಮ್ಮೆಯ ವಿಷಯ. ಪತ್ರಿಕೆ ಗಳಲ್ಲಿ ಪವಿತ್ರಳ ಜೊತೆ ನಿಂತ ತನ್ನ, ವಿನೀತಳ ಚಿತ್ರ ನೋಡಿದಾಗ ಬೀಗಿದ. ವಸಂತ್ ಲಲಿತರ ಜೋಡಿ ನೋಡಿ ಎಲ್ಲರೂ ಮೆಚ್ಚಿದ್ದರು. ಲಲಿತ ಅಷ್ಟು ಚೆಲುವೆಯಾದರೂ ಚಿತ್ರರಂಗಕ್ಕಿಳಿಯದಿರಲು ಕಾರಣವೇನೆಂದು ವಸಂತ್ ನನ್ನು ಪತ್ರಿಕೋದ್ಯಮಿಯೊಬ್ಬ ಕೇಳಿದಾಗ ಹೇಳಿದ್ದ. 'ಅವಳಿಗೆ ಇಷ್ಟವಿಲ್ಲ. ಸದ್ಗೃಹಿಣಿಯಾಗಿ ಬಾಳಲು ಇಷ್ಟ.'

ಈಗಲಂತೂ ಧನಂಜಯ ಹಗಲಿರುಳೂ ರಾಜಾರೋಷವಾಗಿ ಮನೆ ಯಲ್ಲೇ ಇರತೊಡಗಿದ್ದರು. 'ತಿರುವು' ಒಂದು ವಾರದಲ್ಲಿ ಬಿಡುಗಡೆಯಾಗ ಲಿತ್ತು. ಮಾಧು ರಾಜ್ ಪ್ರೊಡಕ್ಷನ್ ಸದ್ದು ಮಾಡಿ ಒಂದೆರಡು ಶೆಡ್ಯೂಲ್ ನಡೆದು ಇದ್ದಕ್ಕಿದ್ದಂತೆ ನಿಂತಿತ್ತು. ಕಾರಣವೇನೆಂದು ತಿಳಿಯಲು ಹೆಚ್ಚು ಕಾಲ ಬೇಕಾಗಿರಲಿಲ್ಲ. ಲಹರಿ, ಮಾಧು ಇವರ ಮಧ್ಯೆ ಪ್ರೇಮಾಂಕುರವಾಗಿ ವಿವಾಹವಾಗಲಿದ್ದಾರೆಂದೂ ವಿವಾಹವಾದ ಮೇಲೆ ಲಹರಿ ಚಿತ್ರರಂಗ ಬಿಟ್ಟು ಬಿಡುವುದಾಗಿಯೂ ಒಂದು ವೇಳೆ ಒಳ್ಳೆಯ ಪಾತ್ರಗಳು ಬಂದರೆ ಆರಿಸಿ ಮಾಡುವಳೆಂದೂ ಪತ್ರಿಕೆಗಳೇ ಪ್ರಕಟಿಸಿದಾಗ ಧನಂಜಯ, ಪವಿತ್ರ, ಮಾಲತಮ್ಮ ನಕ್ಕಿದ್ದರು. 'ಒಂದು ಚಿತ್ರವನ್ನೂ ಪೂರೈಸಲಿಲ್ಲ. ಆಗಲೇ ದೊಡ್ಡ ತಾರೆ. ಇವರ ಬದುಕೆಲ್ಲಾ ಅಷ್ಟೆ. ನಾಲ್ಕು ದಿನ ಸುದ್ದಿ ಎಬ್ಬಿ ಸೋದು, ಯಾರಾದ್ರೂ ಒಳ್ಳೆಯ ಹುಡುಗ ಸಿಕ್ಕಿದರೆ ಸಾಕು ಅವನನ್ನು ಒಲಿಸಿ ಮದುವೆಯಾದರಾಯಿತು. ಅವರ ಆಕಾಂಕ್ಷೆಯಷ್ಟೆ. ಹಣ, ಹೆಸರಿರೋ ಹುಡುಗರ್ನ ಹಿಡಿಯೋ ಒಂದು ಆಟ ಇದು' ಮಾಲತಮ್ಮ ರೇಗಿದರು. ಮಾಧು ತಮಗೆ ತಿಳಿಸದೆ ಅವಳನ್ನು ವಿವಾಹವಾಗಲಿರುವುದು ಅವರಿಗೆ ತಡೆಯಲು ಆಗಿರಲಿಲ್ಲ.

'ಹೋಗಲಿ ಬಿಡಮ್ಮಾ ಚೆನ್ನಾಗಿದ್ದಾಳೆ. ಮಾಧೂನ್ನ ಮದ್ವೆಯಾಗಿ

ಸುಖವಾಗಿರ್ಲಿ. ಈ ಚಿತ್ರರಂಗದಲ್ಲಿ ಹೆಸರು ಹಣ ಬಿಟ್ಟು ಏನು ಸಿಕ್ಕುತ್ತೆ. ಹಣ ಹೆಸರು ಎರಡೂ ಎಷ್ಟು ದಿನ ಇರುತ್ತೆ. ನನಗೊಬ್ಬಳಿಗೇ ಸಾಕು ಈ ಬಾಳು. ನಮ್ಮ ಮನೇಲಿ ಯಾರೂ ಈ ವೃತ್ತಿಗೆ ಇಳಿಯೋದು ಬೇಡಾ.' ಪವಿತ್ರ ಹೇಳಿದಾಗ ವಸಂತ ಅವಳೆದೆಯ ನೋವಿನಾಳ ಅರಿತಿದ್ದ.

'ತಿರುವು' ಬಿಡುಗಡೆಯ ದಿನ ಪ್ರೆಸ್ ಶೋಗಾಗಿ ಎಲ್ಲರೂ ಬಂದಿದ್ದರು. ರಾಜೇಂದ್ರ ಬೊಂಬಾಯಿಯಿಂದ ಶುಭಾಶಯ ಕೋರಿ ತಂತಿ ಕಳಿಸಿದ್ದ. ಧನಂಜಯರ ಪತ್ನಿ ಸುಶೀಲಮ್ಮ ಕೂಡ ಬಂದಿದ್ದರು. ಪವಿತ್ರಳನ್ನು ಕಂಡು ನಗುನಗುತ್ತಲೇ ಮಾತನಾಡಿದರು. ಅವರಿಗೆ ಸುದ್ದಿ ತಿಳಿದಂತೆ ಕಾಣಲಿಲ್ಲ. 'ತಿರುವು' ನೋಡಿ ಎಲ್ಲರೂ ಬಂದು ಪವಿತ್ರಳನ್ನು ಹೊಗಳುವವರೇ. ವಸಂತ ನನ್ನು ಹೊಗಳುವವರೇ. 'ನೀವು ಹೊಸ ತರಹದ ಆಕ್ಟರ್ ಆಗ್ತೀರಿ ವಸಂತ್ ತುಂಬಾ ಸೆಟಲ್ ಆಗಿವೆ ನಿಮ್ಮ ಪಾತ್ರ.' ಎಂದಾಗ ಪವಿತ್ರ ಅವನಿಗಿಂತ ಸಂತಸಪಟ್ಟಿದ್ದಳು. ಧನಂಜಯರನ್ನಂತೂ ಹೊಗಳಿದ್ದೂ ಹೊಗಳಿದ್ದೇ. 'ನೀವು ಬಿಡಿ ಸಾರ್, ನೀವು ಮುಟ್ಟಿದ್ದೆಲ್ಲಾ ಚಿನ್ನಾನೇ' ಸುಶೀಲಮ್ಮನೇ ಬಂದು ಪವಿತ್ರಳ ಕೈಹಿಡಿದು ಹೇಳಿದ್ದರು. 'ಇವ್ರು ಹೇಳ್ತಾ ಇದ್ರು, ನಮ್ಮ ಪಾಪೂನ್ನನೋಡುವಿಯಂತೆ ಹೇಗೆ ಮಾಡಿದ್ದಾಳೇಂತ. ನಿಜವಾಗ್ಲೂ ತುಂಬಾ ಚೆನ್ನಾಗಿ ಕಾಣ್ತೆ. ತುಂಬಾ ಚೆನ್ನಾಗಿ ಮಾಡಿದ್ದೀ. ನೀನು ನಟಿಸಿದ ಚಿಂತ್ರಾಂದ್ರೆ ಇನ್ನು ಇಬ್ಬರಿಗೂ ಅದೃಷ್ಟದ ಬಾಗಿಲು ತೆರೆದಂತೆಯೇ. ಬೆಳಿಗ್ಗೆ ತಾನೇ ಸೋಂಧಿಯವರೂ ಸುಬ್ರಮಣ್ಯ ಅಂತ ಅದ್ಯಾರೋ ಬಂದಿದ್ರು. ಎರಡು ಚಿತ್ರಗಳಿಗೆ ನಿರ್ದೇಶಕರಾಗೀಂತ ಕೇಳೋಕೆ. ಪವಿತ್ರ ಳನ್ನೇ ಹೀರೋಯಿನ್ ಆಗಿ ಹಾಕ್ಕೊಳ್ಳೋ ಹಾಗಿದ್ರೆ ಮಾಡ್ತೀನಿ ಅಂದ್ರು ಕೂಡಲೇ ಒಪ್ಪಿ ಅಡ್ವಾನ್ಸ್ ಕೊಟ್ಟು ಹೊರಟುಹೋದರು.'

ಪವಿತ್ರಳಿಗೆ ಅವರ ನಿರ್ಮಲ ಮನಸ್ಸು ಕಂಡು ಒಳಗೇ ಕೊರಗಿದಳು. ಇಂತಹ ಸಾಧ್ವಿಗೆ ತಾನು ಮೋಸ ಮಾಡಬಹುದೇ ? ತಾನೇ ಏಕೆ ಹೇಳಿ ಬಿಡಬಾರದು ? ಅವಳು ಅವರ ಕೈಹಿಡಿದು ಅದುಮಿದಳು, 'ಎಲ್ಲಾ ನಿಮ್ಮ ಆಶೀರ್ವಾದಾಮ್ಮ' ಸುಶೀಲಮ್ಮನಿಗಂತೂ ಪವಿತ್ರಳಷ್ಟು ಒಳ್ಳೆಯ ಹುಡುಗಿ ಯರೇ ಯಾರೂ ಇಲ್ಲವೆನ್ನುವಂತಾಗಿತ್ತು. ತಮ್ಮ ಪತಿ ನಿರ್ದೇಶಿಸಿದ್ದ ಅನೇಕ ಚಿತ್ರಗಳಲ್ಲಿ ಎಂತೆಂತಹ ತಾರೆಯರು ಪಾತ್ರ ಮಾಡಿಹೋಗಿದ್ದರು ! ಆ ತಾರೆ ಯರ್ಯಾರೂ ತಮ್ಮನ್ನು ಇಷ್ಟು ಆದರಿಸಿ ನಡೆಸಿಕೊಂಡಿರಲಿಲ್ಲ. ಅವರಿವರಿಂದ ತಾವು ಕೇಳಿದ ಒಡಕು ಮಾತುಗಳಲ್ಲಿ ಹುರುಳಿಲ್ಲ. ಜನ ನೋಡದೇ ಬಾಯಿಗೆ

ಬಂದಂತೆ ಮಾತನಾಡಿದುದನ್ನು ನಂಬಲೇಬಾರದು ಎಂದುಕೊಂಡರು.

ಕಿಕ್ಕಿರಿದ ಗೃಹಗಳಲ್ಲಿ 'ತಿರುವು' ನಡೆಯುತಿತ್ತು. ಎಲ್ಲರ ಬಾಯಲ್ಲೂ ಅದರದೇ ಮಾತು. ಧನಂಜಯರಿಗಂತೂ ಹಿಡಿಸಲಾರದಷ್ಟು ಆನಂದ. 'ಪಾಪೂ, ನಾನು ಅವರಿಗೆ ಅವತ್ತೇ ಹೇಳಿರಲಿಲ್ಲವೇ ಆಗುವುದೆಲ್ಲಾ ಒಳ್ಳೆಯದಕ್ಕೇ ಎಂದು. ಈಗ ನೋಡಿದೆಯಾ, ಮಾಧೂ ರಾಜ್‌ರವರ ಮೇಲಿನ ಪೈಪೋಟಿಯ ಮೇಲೆ ಈ ಚಿತ್ರ ಹೇಗೆ ಬಂತು ? ಸೋಂಧಿಯಂತೂ ತುಂಬಾ ಸಂತಸಪಟ್ಟಿದ್ದಾರೆ. ನನಗೆ ಅವರ ನಾಲ್ಕು ಚಿತ್ರಗಳ ನಿರ್ದೇಶನ ಕೊಟ್ಟಿದ್ದಾರೆ. ವಸಂತ್‌ನ ಅದೃಷ್ಟ ನೋಡು, ಅವನ ಕಾದಂಬರಿಗೆಂತಹ ಹೆಸರು ಬಂದಿತು. ಅವನ ಪಾತ್ರಕ್ಕೆಷ್ಟು ಹೆಸರು ಬಂದಿತು. ನೀನು ಬರಿಯ ಗ್ಲಾಮರ್ ಮಾತ್ರವಲ್ಲ ಎಷ್ಟು ಚೆನ್ನಾಗಿ ಅಭಿನಯಿಸಬಲ್ಲೆ ಎಂದು ಎಲ್ಲರೂ ತಿಳಿಯುವ ಹಾಗಾಯಿತು.'

ಬಹಳ ದಿನಗಳ ಮೇಲೆ ಸಂತಸದ ಹೊನಲು ಪವಿತ್ರಳ ಬದುಕಿನಲ್ಲಿ ಹರಿದಿತ್ತು. ಧನಂಜಯರವರು ಲೊಕೇಷನ್‌ಗಳನ್ನು ನೋಡುವುದಕ್ಕೆ ಹೊರಟಿದ್ದರು. ಅದಕ್ಕಾಗಿ ಯಾತ್ರಾ ಸ್ಥಳಗಳನ್ನು ನೋಡಿ ಬರಲು ಹೊರಟಾಗ ಪವಿತ್ರಳಿಗೂ ಬಿಡುವಿದ್ದುದರಿಂದ ಅವಳನ್ನೂ ಬರಲು ಒತ್ತಾಯಿಸಿದರು.

'ನಾವಿಬ್ಬರೂ ಯಾವ ಒತ್ತಡವೂ ಇಲ್ಲದೆ ದೇವರ ದರ್ಶನ ಮಾಡಿ ಬರಬಹುದು. ಪುಣ್ಯತೀರ್ಥಗಳಲ್ಲಿ, ನದಿಗಳಲ್ಲಿ ಸ್ನಾನಮಾಡಬಹುದು. ಮನಸ್ಸಿಗೂ ಹಿತವಾಗಿರುತ್ತೆ. ನಾವಿಬ್ಬರೂ ಎರಡು ಮನೆಯವರ ಗಲಾಟೆಯೂ ಇಲ್ಲದೇ ಹಾಯಾಗಿದ್ದು ಇರಬಹುದು' ಎಂದಾಗ ಪವಿತ್ರಳಿಗೆ ತನ್ನ ಮನಸ್ಸಿನ ದೇಹದ ಕಲ್ಮಶಗಳನ್ನು ತೊಳೆದುಕೊಳ್ಳುವ ಮನಸ್ಸು ಆಯಿತು. ಆದರೆ ತಾವಿಬ್ಬರೂ ಒಟ್ಟಿಗೆ ಹಾಗೆ ಇರಲು ಹೇಗೆ ಸಾಧ್ಯ ! ಚಿತ್ರದ ತಂಡದವರೂ ಬರುತ್ತಾರೆ. ಒಬ್ಬರ ಬಾಯಿಂದ ಒಬ್ಬರಿಗೆ ಮಾತು ಹರಡುತ್ತದೆ. ಅಲ್ಲದೆ ತಾನೊಬ್ಬಳೇ ಅವರೊಂದಿಗೆ ಹೋದರೇನು ಚೆನ್ನ. ಮಾಲತಮ್ಮ ಮನೆ ಬಿಟ್ಟು ಬರುವ ಹಾಗಿರಲಿಲ್ಲ. ವಸಂತ್ ಬಂದರೆ ಧನಂಜಯರಿಗೆ ಸರಿ ಬರುವುದಿಲ್ಲ. 'ಆಗಲಿ ಯೋಚಿಸ್ತೀನಿ' ಎಂದಿದ್ದಳು. ಆದರೆ ಆ ಸಂಜೆಯೇ ಅವಳು ನಿಷ್ಕರಿಸುವಂತಾಯಿತು. ಸಂಜೆ ಶ್ಯಾಮ್, ವಸಂತ,ಧನಂಜಯರೊಂದಿಗೆ ಕಾರ್ಡ್ಸ್ ಆಡುತ್ತಾ ಕುಳಿತ್ತಿದ್ದ ಅವಳಿಗೆ ರೀಟಾ ಬಂದು ಸುದ್ದಿ ತಿಳಿಸಿದಳು. ರಾಜೇಂದ್ರ ಬೊಂಬಾಯಿಯ ಆಸ್ಪತ್ರೆಯಲ್ಲಿ ಆ ದಿನ ಬೆಳಿಗ್ಗೆ ಹೋಗಿಬಿಟ್ಟನೆಂದು. ಅವಳ ಕೈಲಿದ್ದ ಕಾರ್ಡ್ಸ್ ಕೆಳಗೆ ಬಿದ್ದಿತು.

ಓಡಿ ಹೋಗಿ ತನ್ನ ರೂಮಿನಲ್ಲಿ ಮಂಚದ ಮೇಲುರುಳಿಕೊಂಡು ದಿಂಬಿನಲ್ಲಿ ಮುಖ ಮರೆಸಿ ಅತ್ತಳು. ಸಾವು ಎಷ್ಟು ಬೇಗ ಬಂದಿತ್ತು ರಾಜೇಂದ್ರನಿಗೆ. 'ತಿರುವು' ಚಿತ್ರದ ಯಶಸ್ಸು ಕಿವಿಗೆ ಬಿದ್ದಿತ್ತೋ ಇಲ್ಲವೋ ಅವನ ಕಡೆಯ ಮುಖದರ್ಶನವೂ ತನಗೆ ದೊರಕಲಿಲ್ಲ. ತಾನು ಒಮ್ಮೆ ಪ್ರೀತಿಸಿದ, ಬಯಸಿದ ವಸ್ತು ತನ್ನನ್ನಗಲಿ ಹೋಯಿತು. ತನ್ನ ಬದುಕಿನಲ್ಲಿ ಪ್ರೀತಿ, ಪ್ರೇಮ ಅರಳುವುದೇ ಇಲ್ಲವೇ? ಅವಳ ಹೃದಯದ ಮೂಲೆಯೊಂದರಲ್ಲಿ ಕತ್ತಲಾವರಿಸಿದಂತಾಗಿತ್ತು.

ಪವಿತ್ರ ರೂಮಿಗೆ ಅಳುತ್ತಾ ಹೋದಾಗ ಧನಂಜಯ, ಶ್ಯಾಮ್ ಒಬ್ಬರ ಮುಖ ಒಬ್ಬರು ನೋಡಿಕೊಂಡರು. ವಸಂತ್ ಕಾರ್ಡ್ಸ್‌ನ್ನು ಕೆಳಗಿಟ್ಟು, 'ಸಾಕು ಆಟ.' ಯಾರೊಬ್ಬರೂ ಪವಿತ್ರಳನ್ನು ಸಮಾಧಾನ ಪಡಿಸಲೆತ್ನಿಸಲಿಲ್ಲ. ಅವಳೆಷ್ಟು ಅಳುವಳೋ ಅಷ್ಟು ಅತ್ತು ಮನಸ್ಸು ಸಮಾಧಾನ ಮಾಡಿಕೊಳ್ಳಲಿ ಎಂದು ಸುಮ್ಮನಾಗಿದ್ದರು. ಅನಂತರ ಅವಳು ಯಾರೊಡನೆಯೂ ಮಾತನಾಡಲಿಲ್ಲ. ಒಬ್ಬಳೇ ಮಂಕಾಗಿ ಕುಳಿತಿದ್ದಳು. ರಾತ್ರಿ ಧನಂಜಯ ಅವಳ ತಲೆ ಸವರಿ ಕೆನ್ನೆಗೆ ಕೆನ್ನೆ ತಂದು ಹೇಳಿದ್ದರು.

'ಪಾಪೂ ಮರೀ ಹಾಗೆಲ್ಲಾ ಎಲ್ಲರನ್ನೂ ಹಚ್ಚಿಕೊಂಡರಾಗುವುದೇ? ನಿನಗೆ ಬೇಸರವಾಗಿರೋದು ನನಗೆ ಅರ್ಥವಾಗುತ್ತೆ' ಎಂದಾಗ ಅವರೆದೆಯಲ್ಲಿ ಮುಖ ಹುದುಗಿಸಿ ಅತ್ತಳು.

'ನಾನೂ ನಿಮ್ಮ ಜೊತೆ ಬರ್ತೀನಿ. ಇಲ್ಲಿಂದ ಕರ್ಕೊಂಡು ಹೊರಟು ಹೋಗಿ.'

'ಆಗ್ಲಿ, ಖಂಡಿತವಾಗಿ ಕರ್ಕೊಂಡು ಹೋಗ್ತೀನಿ. ಎಲ್ಲಾ ಮರೆಯುವ ಹಾಗೆ ಮಾಡ್ತೀನಿ.' ಎಂದು ರಮಿಸಿದರು.

ಮೇಲುಕೋಟೆ, ತಿರುಮಕೂಡಲು, ನಂಜನಗೂಡು, ಶೃಂಗೇರಿ, ಹೊರನಾಡು ಮುಂತಾದ ಸ್ಥಳಗಳಿಗೆಲ್ಲಾ ಹೋಗಿ ಮಿಂದು ದೇವರ ದರ್ಶನ ಮಾಡಿ ಪೂಜೆ ಮಾಡಿಸಿಕೊಂಡು ಬಂದಾಗ ಪವಿತ್ರಳ ಮನಸ್ಸು ಹಗುರವಾಗಿತ್ತು. ಯಾವುದೋ ಅವ್ಯಕ್ತ ಆನಂದವಾಗಿತ್ತು. ಮಧ್ಯೆ ದಾರಿಯಲ್ಲಿ ಹೋಟೆಲುಗಳಲ್ಲಿ ತಂಗಿದಾಗ ಅಕ್ಕಪಕ್ಕದ ರೂಮಿನಲ್ಲಿ ಬೇರೆಬೇರೆಯಾಗಿ ತಂಗಿದ್ದರೂ ಡಿಸ್ಕಷನ್ ಎಂದು ಆಗಾಗ ಒಬ್ಬರ ರೂಮಿಗೆ ಇನ್ನೊಬ್ಬರು ಬಂದು ಗಂಟೆಗಟ್ಟಲೆ ಬಾಗಿಲು ಹಾಕಿಕೊಂಡಿರುತ್ತಿದ್ದುದನ್ನು ಕಂಡ ಯೂನಿಟ್ಟಿನ ಕೆಲವರು ಗುಸುಗುಸು ಮಾತಾಡಿಕೊಂಡಿದ್ದರು.

ಯಾತ್ರಾಸ್ಥಳಗಳಲ್ಲೆಲ್ಲಾ ಲೊಕೇಷನ್‌ನಿಂದ ಹಿಂತಿರುಗಿ ಬಂದ ಪವಿತ್ರ ಹೊಸ ವ್ಯಕ್ತಿಯಾಗಿದ್ದಳು. ಒಂದು ಬಗೆಯ ಪ್ರಶಾಂತತೆ ಅವಳಲ್ಲಿ ಮನೆ ಮಾಡಿತ್ತು. ನಡೆನುಡಿಯಲ್ಲಿ ಹೆಚ್ಚು ಸ್ಥೈರ್ಯ ಕಾಣುತಿತ್ತು. ಅವಳಲ್ಲಾದ ಬದಲಾವಣೆ ಕಂಡು ಮಾಲತಮ್ಮ ನಿರಾಂತಕದಿಂದ ಉಸಿರಾಡಿದ್ದರು.

'ಪಾಪ ಅವಳಿಗೂ ಬದಲಾವಣೆ ಬೇಕಿತ್ತು. ಸಧ್ಯ ನೀವು ಒಳ್ಳೆಯ ಕೆಲಸ ಮಾಡಿದಿರಿ ಎಂದು ಧನಂಜಯರನ್ನು ಅಭಿನಂದಿಸಿದರು.

ಆರು ಚಿತ್ರಗಳನ್ನು ಕೈಯಲ್ಲಿ ಹಿಡಿದಿದ್ದ ಧನಂಜಯರಿಗೆ ಬಿಡುವಿಲ್ಲದಂತಾಗಿತ್ತು. ಒಂದಾದರೊಂದ ಮೇಲೆ ಆ ವರ್ಷದೊಳಗೆ ಚಿತ್ರಗಳನ್ನು ಮುಗಿಸಿಕೊಡಲೇ ಬೇಕೆಂದು ನಿರ್ಮಾಪಕರ ಒತ್ತಾಯ. ತಮ್ಮದೇ ಆದ ಚಿತ್ರವನ್ನು ಮುಗಿಸುವ ಆಸೆಯೊಂದು ಕಡೆ. ಅವರ ಬಿಡುವಿಲ್ಲದ ಓಡಾಟ, ಆತಂಕ ಒತ್ತಡಗಳನ್ನು ಕಂಡು ಸುಶೀಲಮ್ಮ ಬುದ್ಧಿ ಹೇಳಿದರು.

'ಇಷ್ಟೊಂದು ಒಪ್ಪಿಕೊಂಡರೆ ಹೇಗೆ? ನಿಮ್ಮ ಆರೋಗ್ಯವೇನಾಗಬೇಕು?'

ತಮ್ಮ ಮಾತಿಗೆ ಬಗ್ಗದಿದ್ದಾಗ ಪವಿತ್ರಳಿಗೆ ಫೋನು ಮಾಡಿ ತಿಳಿಸಿದರು.

'ಹೇಗಾದರೂ ಮಾಡಿ ನೀನಾಗರೂ ಬುದ್ಧಿ ಹೇಳು ಪವಿತ್ರ. ಅವರು ಮನೆಯೇ ಸೇರುವುದಿಲ್ಲ. ಊಟ, ತಿಂಡಿ, ನಿದ್ರೆ ವಿರಾಮ ಇಲ್ದೇ ಹೀಗೆ ಮಾಡಿದ್ರೆ ಆರೋಗ್ಯ ಏನಾಗುತ್ತೇ?'

'ನೀವು ಹೆದರಬೇಡೀಮ್ಮಾ, ನಾನು ಹೇಳ್ತೀನಿ. ಬಲವಂತವಾಗಿ ಊಟ ತಿಂಡಿ ನಿದೆ ಮಾಡಿಸ್ತೀನಿ' ಪವಿತ್ರ ಹೇಳಿದಾಗ ಅವಳಿಗೆ ನಗು. ತನ್ನ ಮನೆಯಲ್ಲೇ ಅಲ್ಲವೇ ಅದೆಲ್ಲಾ ಆಗುತ್ತಿರುವುದು ಪಾಪ ಆಕೆಗೇನು ಗೊತ್ತು? ತನಗೆ ಬೇಕೋ ಬೇಡವೋ ಅಂತೂ ಅವರನ್ನು ನೋಡಿಕೊಳ್ಳುತ್ತಿದ್ದೆ. ಈಗ ಸುಶೀಲಮ್ಮನಿಗಾಗಿಯಾದರೂ ಹೆಚ್ಚು ಆಸಕ್ತಿಯಿಂದ ನೋಡಿಕೊಳ್ಳಬೇಕೆಂದುಕೊಂಡಳು. ಸೆಟ್‌ಗಳ ಮೇಲೆ ಹೊತ್ತು ಹೊತ್ತಿಗೆ ಕಾಫಿ, ತಿಂಡಿ, ಊಟ ಒದಗಿಸುವಂತೆ ರೀಟಾಳಿಗೆ ಹೇಳಿದ್ದಳು.

'ರೀಟಾ, ಸಾರ್‌ಗೆ ಕಾಫಿ ಹೊತ್ತಾಯ್ತು ಕಾಫಿ ಕೊಡು!' 'ರೀಟಾ, ಸಾರ್‌ಗೆ ಹೇಳು ಹತ್ತು ನಿಮಿಷ ವಿರಾಮ ತೆಗೆದುಕೊಳ್ಳಲು.' 'ರೀಟಾ, ಸಾರ್‌ಗೆ ಊಟ ತಂದುಕೊಡು. ಹೋಟೇಲಿನ ಊಟ ಬೇಡ, ವೈಗಾಗು

ವುದಿಲ್ಲ.' ಹೀಗೆ ಅವರನ್ನು ನೋಡಿಕೊಳ್ಳುತ್ತಿದ್ದುದು ಕಂಡು ಎಲ್ಲರಿಗೂ ಅಚ್ಚರಿ. ತನ್ನ 'ಸಾರ್' ಎಂದರೆ ಪವಿತ್ರಳಿಗೆಷ್ಟು ಆದರ, ಎಷ್ಟು ಗೌರವ. ಎಲ್ಲರಿಗೂ ಅಂತಹ ಶಿಷ್ಯೆ ಸಿಕ್ಕುವ ಪುಣ್ಯವಿದೆಯೇ ? ಎಂದುಕೊಳ್ಳುತ್ತಿದ್ದರು.

'ಬಲಿ' ಚಿತ್ರವನ್ನು ಕೈಗೆತ್ತಿಕೊಂಡಾಗಲಂತೂ ಪವಿತ್ರ ಎಡೆಬಿಡದೆ ಅವರನ್ನು ನೋಡಿಕೊಳ್ಳುತ್ತಿದ್ದಳು. ಮೂಕಿಯ ಪಾತ್ರದಲ್ಲಿ ಅವಳು ಅಭಿನಯಿಸಿದ್ದ ಆ ಚಿತ್ರದ ಬಗ್ಗೆ ಸಾಕಷ್ಟು ಪ್ರಚಾರ ಮಾಡಲಾಗಿತ್ತು. ಅವಳೊಡನೆ ಹೊಸ ನಟನೊಬ್ಬನನ್ನು ಪರಿಚಯಿಸಲು ಧನಂಜಯ ಇಷ್ಟಪಟ್ಟು ಸರ್ವೋತ್ತಮನೆಂಬುವನನ್ನು ಆರಿಸಿದ್ದರು. ಅವನು ಅರಳುಗಣ್ಣಿನ ಅರೆಕೂದಲಿನ, ಆರುಅಡಿ ಎತ್ತರದ ಅಜಾನುಬಾಹು. ಸರ್ವೋತ್ತಮ ಮುಂದೆ ಒಳ್ಳೆಯ ನಟನಾಗುವ ಸೂಚನೆಗಳನ್ನು ಹೊತ್ತಿದ್ದ. ಧನಂಜಯ, ಪವಿತ್ರರೆಂದರೆ ಬಹಳ ಗೌರವದಿಂದ ನಡೆದುಕೊಳ್ಳುತ್ತಿದ್ದ. ಪ್ರತಿಯೊಂದು ಸನ್ನಿವೇಶದ ಚಿತ್ರೀಕರಣಕ್ಕೂ, ಧನಂಜಯ ಪವಿತ್ರಳಿಗೆ ಆ ಶಾಟಿನ ವಿಶೇಷತೆಯನ್ನು ಒತ್ತಿ ಹೇಳುತ್ತಿದ್ದರು.

'ನಾಲ್ಕೈದು ಟೇಕ್‌ಗಳಾದರೂ ಪರವಾಗಿಲ್ಲ. ಪರ್ಫೆಕ್ಷನ್ ಇರಬೇಕು' ಎಂದು ಒತ್ತಾಯ ಮಾಡುತ್ತಿದ್ದರು. ಮುಂಬರಲಿರುವ ಶ್ಯಾಮ್, ವಸಂತರ ವಿವಾಹಕ್ಕೆ ಮುನ್ನ ಚಿತ್ರೀಕರಣ ಮುಗಿಸಿಬಿಡಬೇಕೆಂದು ಅವರಾಸೆಯಾಗಿತ್ತು.

'ಬಲಿ' ಅತ್ಯಂತ ಕರುಣಾಜನಕ ಕಥೆಯಾಗಿದ್ದು ಮೂಕಳಾದ ಯುವತಿಯೊರ್ವಳು,ನಾಲ್ವರು ದುರುಳರ ಅತ್ಯಾಚಾರಕ್ಕೊಳಗಾಗಿ ನ್ಯಾಯಕ್ಕಾಗಿ ಹೋರಾಡಿದಾಗ ತನ್ನಂತೆ ಕಾನೂನು ತನ್ನ ಬಗ್ಗೆ ಮೂಕವಾಗಿರುವುದು ಕಂಡು ನೊಂದು ಬೇಸರದಿಂದ ರೊಚ್ಚಿದ್ದು ತಾನೇ ಆ ನಾಲ್ವರನ್ನೂ ಕೊಂದು ಅತ್ಯಾಚಾರದ ಬಗ್ಗೆ ಮೂಕವಾಗಿದ್ದ ಕಾನೂನಿಗೆ ತನ್ನನ್ನು ಕೊಲೆ ಪಾತಕಿಯೆಂದು ಅಮರಣಾಂತರ ಶಿಕ್ಷೆ ವಿಧಿಸುವಾಗ ಬಾಯಿ ಬಂದುದು ಕಂಡು ಹುಚ್ಚಿಯಂತೆ ನಗುತ್ತಾಳೆ. ತನಗೆ ನ್ಯಾಯವೊದಗಿಸಿದ ಕಾನೂನಿನ ಕಟ್ಟಳೆಗೆ ತಾನು ಬಾಗುವುದಿಲ್ಲವೆಂದು ಆತ್ಮಹತ್ಯೆ ಮಾಡಿಕೊಂಡು ವಿಮುಕ್ತಳಾಗಿ ಕಾನೂನುಗಳ ಬಲಿಯಾಗುತ್ತಾಳೆ. ಸತ್ವಯುತವಾದ ಪ್ರಭಾವಶಾಲಿಯಾದ ಕತೆ ಹೊಂದಿದ್ದು ಧನಂಜಯರ ನಿರ್ದೇಶನದಲ್ಲಿ ಹೃದಯ ಮುಟ್ಟುವಂತೆ ಅಭಿನಯ ನೀಡುತ್ತಿದ್ದ ಪವಿತ್ರಳನ್ನು ಕಂಡು ಕ್ಯಾಮೆರಾಮೆನ್

ವಿಶ್ವನಾಥ್, ಅಸಿಸ್ಟೆಂಟ್ ಡೈರೆಕ್ಟರ್ ಆದ ಅರುಣ್, ಇನ್ನುಳಿದ ತಂತ್ರಜ್ಞರಿಗೆಲ್ಲಾ ಅವಳೆಂತಹ ಒಳ್ಳೆಯ ಅಭಿನೇತ್ರಿಯೆಂದು ಮೂಗಿನ ಮೇಲೆ ಬೆರಳಿಟ್ಟುಕೊಂಡಿದ್ದರು. ತನ್ನನ್ನೇ ತಾನು ಮರೆತು ಆ ಪಾತ್ರದಲ್ಲಿ ಒಂದಾಗಿ ಹೋಗುತ್ತಿದ್ದ ಅವಳನ್ನು ವಸಂತ್ ಎಚ್ಚರಿಸುತ್ತಿದ್ದ.

'ತುಂಬಾ ಇನ್‌ವಾಲ್ವ್ ಆಗಿಬಿಡ್ತೀ ಪವಿತ್ರ. ಸ್ವಲ್ಪ ರಿಲಾಕ್ಸ್ ಮಾಡು.'

ಅಂದು ಕ್ಲೈಮಾಕ್ಸ್ ಸನ್ನಿವೇಶ. ಅದಕ್ಕಾಗಿ ಮನಸ್ಸನ್ನು ಹದ ಗೊಳಿಸಿಕೊಂಡಿದ್ದ ಪವಿತ್ರ ಯಾರೊಡನೆಯೂ ಮಾತನಾಡದೇ ಒಂದೆಡೆ ಪ್ರಕ್ಷುಬ್ಧಳಾಗಿ ಕುಳಿತಿದ್ದಳು. ಆ ಸೀನ್‌ಗಾಗಿಯೇ ಗ್ಲಿಸರಿನ್, ತಂದಿತ್ತಾಗ ಪವಿತ್ರ ಅವಳ ಕೈ ಅತ್ತ ಸರಿಸಿದ್ದಳು ಭಾವಾವೇಶದಿಂದ ಉತ್ಕಂಠಿತಳಾಗಿ ಆ ಸನ್ನಿವೇಶದಲ್ಲಿ ಅತ್ಯದ್ಭುತವಾಗಿ ಅಭಿನಯಿಸಿದಳು. ಕಣ್ಣುಗಳಲ್ಲಿ ಕಂಬನಿ ತಾನೇ ತಾನಾಗಿ ಉಕ್ಕಿ ಹರಿದಿತ್ತು. ಅವಳು ಆತ್ಮಹತ್ಯೆ ಮಾಡಿಕೊಂಡು ಪ್ರಾಣ ಕಳೆದುಕೊಳ್ಳುವ ಸನ್ನಿವೇಶವಂತೂ ತಂತ್ರಜ್ಞರ ಕಣ್ಣುಗಳಲ್ಲೂ ನೀರು ತರಿಸಿತ್ತು. ಅವಳು ಅಭಿನಯಿಸಿ ಬರುತ್ತಲೇ ಧನಂಜಯ ಅವಳನ್ನು ಎಲ್ಲರ ಮುಂದೆಯೂ ಅಪ್ಪಿಕೊಂಡುಬಿಟ್ಟಿದ್ದರು. 'ಪಾಪೂ, ನೀನು ಹುಟ್ಟು ಕಲಾವಿದೆ. ನಿನ್ನ ಕಲೆಯು ಇವೊತ್ತು ಎಲ್ಲರಿಗೂ ಮನದಟ್ಟಾಯಿತು. ಬಹಳ ಚೆನ್ನಾಗಿ ಮಾಡಿಬಿಟ್ಟೆ ಮರೀ. ಬಹಳ ಅದ್ಭುತವಾಗಿ ಅಭಿನಯಿಸಿ ಬಿಟ್ಟೆ. ನಾನೇ ಚೆನ್ನಾಗಿ ಪ್ರಶಸ್ತಿಕೊಡುವ ಹಾಗಿದ್ದರೆ ಈಗಲೇ ನಿನಗೆ ಊರ್ವಶಿ ನೀಡುತ್ತಿದ್ದೆ. ನಿನ್ನನ್ನು ಶಿಷ್ಯಳನ್ನಾಗಿ ಪಡೆದ ನಾನು ಅದೃಷ್ಟ ವಂತ.'

ಎಲ್ಲರೂ ಅವಳನ್ನು ಅಭಿನಂದಿಸುವವರೇ. ಪತ್ರಿಕೆಗಳಲ್ಲೆಲ್ಲಾ ಅದು ದೊಡ್ಡ ತಲೆಬರಹಗಳಲ್ಲಿ ಪ್ರಕಟವಾಯಿತು. ಧನಂಜಯ, ಪವಿತ್ರಳಿಗೆ, ಚಿತ್ರಕತೆ, ಸಂಭಾಷಣೆಗೆ ಪ್ರಶಸ್ತಿ ಖಂಡಿತವೆಂದು ಎಲ್ಲರೂ ಮಾತಾಡಿಕೊಳ್ಳ ತೊಡಗಿದ್ದರು. ಚಿತ್ರೀಕರಣ ಮುಗಿದು, ಸಂಸ್ಕರಣ ಮುಗಿದು, ರೀರೆಕಾರ್ಡಿಂಗ್ ಆಗಿ ತೆರೆ ಕಾಣುವ ವೇಳೆಗೆ ವಸಂತ್, ಶ್ಯಾಮ್ ಇಬ್ಬರ ವಿವಾಹದ ದಿನ ಬಂದೇ ಬಿಟ್ಟಿತು.

* * *

ಆ ದಿನ ಚಿತ್ರರಂಗದವರು, ರಾಜಕೀಯ ರಂಗದವರು, ಗಣ್ಯರು ಬಂದು ನೆರೆದಿದ್ದರು. ವಸಂತ್ ಲಲಿತಳ ಕೊರಳಿಗೆ ಮಾಂಗಲ್ಯ ಕಟ್ಟಿದಾಗ

ಪವಿತ್ರಳ ಹೃದಯದಂತರಾಳದಲ್ಲಿ ಮತ್ತೊಂದೆಡೆ ಕತ್ತಲಾವರಿಸಿದಂತಾಗಿತ್ತು. ನೀರ್ಗಣ್ಣಿನಿಂದ ಅದನ್ನು ನೋಡಿ ತುಟಿಗೆ ನಗು ಲೇಪಿಸಿಕೊಂಡಿದ್ದಳು. ಲಲಿತ ತನ್ನ ವಸಂತನಿಗೆ ತನುವನ್ನರ್ಪಿಸಿಕೊಳ್ಳುವುದು ಅವಳಿಗೆ ಸಹಿಸಲಾರದ ದಾರುಣ ವಿಷಯವಾಗಿತ್ತು. ತನ್ನ ಪ್ರೇಮದ ಸೌಧ ಕುಸಿದು ಬಿದ್ದಿತ್ತು. ತಾನು ಯಾರಿಗಾಗಿ ಬದುಕಬೇಕು? ತನ್ನ ಬದುಕಿಗೊಂದು ಅರ್ಥವೇ ಇಲ್ಲವೇ? ಯಾರಿಗಾಗಿ ತಾನು ಈ ರೂಪು, ಸೌಂದರ್ಯ, ಯೌವನ ಕಾಪಾಡಿಕೊಂಡು ಬರಬೇಕು? ಅಂದು ರಾತ್ರಿ ನವ ವಧೂವರರು ಸಜ್ಜೆಮನೆಗೆ ಹೋದಾಗ ತನ್ನ ರೂಮಿಗೆ ಒಂಟಿಯಾಗಿ ಬಂದು ಬಿಕ್ಕಿದಳು. ವಿವಾಹ, ಸಜ್ಜೆಮನೆ ಆ ಮಧುರ ರಸನಿಮಿಷಗಳೆಲ್ಲ ತನಗೆಟುಕದ ವಸ್ತು. ಅದೆಲ್ಲಾ ತನ್ನ ಬಾಳಿನಲ್ಲಿ ಕನಸು ಮಾತ್ರ.

ಧನಂಜಯ ತಮ್ಮ ಕರ್ತವ್ಯ ಮುಗಿಸಿ ಮಾಲತಮ್ಮನಿಗೆ 'ನೋಡಿ, ಇನ್ನು ನಿಮಗೆ ನಿರ್ಯೋಚನೆ. ಪವಿತ್ರನಿಗಾಗಿಯೇ ನಾನೂ ನೀವೂ ಇರಬೇಕು.' ಎಂದು ಹೇಳಿ ರೂಮಿನೊಳಗೆ ಬಂದಾಗ ಅವರನ್ನೇ ಪವಿತ್ರ ದಿಟ್ಟಿಸಿದಳು. ಹಣೆಯ ಇಕ್ಕೆಲದಲ್ಲಿ ನೆರೆಗೂದಲಿನ ಜೊಂಪೆ, ಅಗಲವಾದ ಹಣೆ, ಪ್ರಖರವಾದ ಕೊಂಚ ದೊಡ್ಡದೆನ್ನಬಹುದಾದ ಕಣ್ಣುಗಳು, ಧೀರತೆ ಎತ್ತಿ ತೋರುತ್ತಿದ್ದ ಮುಖಭಾವ, ಆ ಮೂಗು, ಹಟಮಾರಿತನ ಎತ್ತಿ ತೋರುತ್ತಿದ್ದ ಚೂಪುಗಲ್ಲ, ಆ ಬಾಯಿ, ಎತ್ತರವೂ ಕುಳ್ಳೂ ಅಲ್ಲದೆ ಕೊಂಚ ಸ್ಥೂಲವಾದ ದೇಹ, ಅವರುಟ್ಟಿದ್ದ ಬಿಳಿಯ ಮುಗುಟ, ತೊಟ್ಟಿದ್ದ ಸಿಲ್ಕಿನ ಜುಬ್ಬ, ಹೆಗಲ ಮೇಲಿದ್ದ ವಲ್ಲಿ, ಹೊದೆಹುಬ್ಬುಗಳ ನಡುವಿದ್ದ ಕುಂಕುಮ, ತಾಂಬೂಲ ಸವಿದಿದ್ದ ಬಾಯಿ. ಇವನೇ ತನ್ನ ಪತಿ. ತನಗೆ ಮಾಂಗಲ್ಯ ಕಟ್ಟಿದವರು. ಯಾವ ಕಾರಣಕ್ಕೆ ಕಟ್ಟಿದರೋ ಯಾವ ಪುರುಷಾರ್ಥಕ್ಕಾಗಿ ಕಟ್ಟಿದರೋ ಅದೆಲ್ಲಾ ಬೇಡಾ. ತಾನೂ ವಿವಾಹಿತಳು. ತನಗೂ ಲಲ್ಲಿ, ವಿನೀತರಿಗಿರುವಂತೆ ಪತಿಯಿದ್ದಾರೆ. ಅವರಂತೆಯೇ ತಾನೂ ಸಂಸಾರಸ್ಥಳಾಗಿ ಗೃಹಿಣಿಯಾಗಿ ಬಾಳಬೇಕು ತಾನೂ ಸುಮಂಗಲಿ. ತಾನೂ ವಧುವೇ.

'ಇದೇನು ನನ್ನನ್ನು ಹೊಸದಾಗಿ ನೋಡುವಂತೆ ನೋಡುತ್ತಿದ್ದೀಯಾ ಮರೀ?' ಧನಂಜಯ ಅವಳ ಹೆಗಲ ಸುತ್ತ ಕೈ ಬಳಸಿ ಕೇಳಿದಾಗ ಪವಿತ್ರ ಅವರ ಕತ್ತಿನ ಸುತ್ತಲೂ ಕೈಗಳನ್ನು ಬಳಸಿ ಅವರೆದೆಯಲ್ಲಿ ಮುಖವಿಟ್ಟು ಉಸುರಿದಳು.

'ಅದೇಕೋ ನನಗೆ ನಾನು ನಿಮಗೆ ಸರಿಯಾದ ಪತ್ನಿಯಾಗಿ ಬಾಳ

ಬೇಕು ಎನ್ನಿಸಿತು. ನನ್ನ ಪತಿ ನನ್ನನ್ನೆಷ್ಟು ಆದರಿಸುತ್ತಾರೆ. ನಾನೆಷ್ಟು ಪುಣ್ಯವಂತೆ. ನನ್ನನ್ನೇ ನಾನು ಅರ್ಪಿಸಿಕೊಳ್ಳಬೇಕೆನಿಸಿತು.' ಧನಂಜಯ ಬೊಗಸೆಯಲ್ಲಿ ಅವಳ ಮುಖವೆತ್ತಿ ಅವಳ ಕಣ್ಣುಗಳನ್ನೇ ದಿಟ್ಟಿಸಿದರು.

'ನಿಜವಾಗಿಯೂ ನನ್ನನ್ನು ಪ್ರೀತಿಸುತ್ತೀಯಾ ಪವಿತ್ರಾ ?'

ಹೌದೆನ್ನುವಂತೆ ತಲೆಯಾಡಿಸಿದಳು. 'ನನ್ನ ಸರ್ವಸ್ವವೂ ನಿಮ್ಮದೇ, ಪತ್ನಿಯಾಗಿ ಬಾಳಲು ನನಗೆ ಬಹಳ ದಿನದ ಬಯಕೆ.'

ಧನಂಜಯ ಅವಳ ಆಸೆ ತುಂಬಿದ ಕಣ್ಣುಗಳನ್ನು ಅದುರುತ್ತಿದ್ದ ತುಟಿಗಳನ್ನೂ ನೋಡಿದರು. ತನ್ನನ್ನೇ ತಮಗೆ ಸಮರ್ಪಿಸಿಕೊಂಡದ್ದು ಇದೇ ಮೊದಲು. ಮುಂಚಿನದೆಲ್ಲಾ ಯಾಂತ್ರಿಕ, ಕರ್ತವ್ಯವಷ್ಟೆ ಎನಿಸಿತ್ತು. ಅವಳನ್ನು ಬಿಗಿದಪ್ಪಿದರು.

'ಖಂಡಿತವಾಗಿಯೂ ನೀನು ನನ್ನ ಧರ್ಮಪತ್ನಿ ಅಷ್ಟೇ ಅಲ್ಲ ನನ್ನ ಹೃದಯ ಸಿಂಹಾಸನದ ರಾಣಿ.'

ಪವಿತ್ರ ಮಾರನೆಯ ದಿನ ಕಣ್ಬಿಟ್ಟಾಗ ಧನಂಜಯರಿನ್ನೂ ಪಕ್ಕದಲ್ಲಿ ಮಲಗೇ ಇದ್ದರು. ಹಿಂದಿನ ರಾತ್ರಿಯ ಸವಿನೆನಪು ಮೂಡಿ ಬಂದು ಅವರನ್ನು ದಿಟ್ಟಿಸಿದಳು. ಕೆದರಿದ್ದ ಅವರ ತಲೆಗೂದಲನ್ನು ತಡವುವ ಮನಸ್ಸು ಆಯಿತು. ಆದರೆ ಆ ರೀತಿ ಮಾಡದೇ ಕೂದಿಕೆ ಸರಿಪಡಿಸಿ ಅವರಿಗೆಚ್ಚರವಾಗದಂತೆ ಎದ್ದು ಬಂದಳು.

ಮಗಳಿನ್ನೂ ಎದ್ದಿಲ್ಲವೆಂಬ ಆತಂಕ ಮಾಲತಮ್ಮನಿಗೆ. ಅದಕ್ಕಿಂತ ಹೆಚ್ಚಾಗಿ ಧನಂಜಯರು ಇಷ್ಟು ಹೊತ್ತಿಗೆ ಎದ್ದು ಹೊರಟುಹೋಗುತ್ತಿದ್ದರು. ಇನ್ನೂ ಎಚ್ಚರಗೊಂಡಿಲ್ಲವೆಂಬ ಭಯ. ಪವಿತ್ರ ಎದ್ದು ಬಂದಾಗ ಕ್ಷಣಕಾಲ ಅವಳ ಮುಖ ನೋಡಿದರು. ಅವಳ ಮುಖವೇ ಹೊಸತಂತೆ ಕಂಡಿತು.

'ಎಲ್ಲೇ, ಸಾರ್ ಎದ್ದಿಲ್ವಾ ?'

'ಇಲ್ಲಮ್ಮಾ ಮಲಗಿದ್ದಾರೆ, ಮಲಗಿರಲಿ ಬಿಡು. ಅವರಿಗೂ ವಿಶ್ರಾಂತಿ ಬೇಡವೇ ?' ಎಂದಾಗ ಮಗಳತ್ತ ಅಚ್ಚರಿಯಿಂದ ನೋಡಿದರು. ಶ್ಯಾಮನ ಕೋಣೆಯ ಬಾಗಿಲಿನ್ನೂ ತೆರೆದಿರಲಿಲ್ಲ. ಆದರೆ ವಸಂತ್ ಆಗಲೇ ಎದ್ದು ಕುಳಿತು ಅಂದಿನ ಪತ್ರಿಕೆ ತಿರುವಿ ಹಾಕುತ್ತಿದ್ದ. ಲಲ್ಲಿ ಎದ್ದಿರಲಿಲ್ಲ.

'ಅಯ್ಯರ್‌ಗೆ ಹೇಳಮ್ಮಾ ನಂಗೂ, ವಸಂತ್‌ಗೂ ಇಲ್ಲೇ ಕಾಫಿ ತಂದ್ಕೊಡೂಂತ.' ವಸಂತ್‌ನ ಮುಂದೆ ಬಂದು ಕುಳಿತಳು. ತಲೆಯೆತ್ತಿ

ಅವಳತ್ತ ನೋಡಿದ. ಅವನ ಕಣ್ಣುಗಳಲ್ಲಿ ನೋವಿತ್ತು. ತಾನು ಊಹಿಸಿದಂತೆ ಮಾದಕತೆಯಿಲ್ಲ ಎಂದುಕೊಂಡಳು ಪವಿತ್ರ.

'ಹೇಗಿತ್ತು ಮಧುರ ಮಿಲನ?' ಎಂದು ಕೇಳಿ ನಕ್ಕಾಗ ವಸಂತ ಪೇಪರನ್ನು ಮುಖಕ್ಕೆ ಅಡ್ಡ ಹಿಡಿದು ಉತ್ತರಿಸಿದ್ದ.

'ಮಿಲನಗಳೆಲ್ಲಾ ಮಧುರವಾಗಿಯೇ ಇರಬೇಕೆಂದಿಲ್ಲವಲ್ಲಾ?'

ಮತ್ತೆ ಬಣ್ಣದ ಬದುಕು. ಶೂಟಿಂಗ್, ಹೊರಾಂಗಣ ಚಿತ್ರೀಕರಣ ಸಾಗಿತ್ತು. ಆದರೆ ಧನಂಜಯ, ಪವಿತ್ರ ಬಹಳ ಹತ್ತಿರವಾಗಿದ್ದರು. ಧನಂಜಯ ಕುಡಿಯುವುದು ಬಿಟ್ಟಿದ್ದರು. ತಪ್ಪದೇ ಮನೆಗೆ ಹೋಗಿ ಸುಶೀಲಮ್ಮನ ಜೊತೆ ಒಂದು ಗಂಟೆಯ ಕಾಲವಾದರೂ ಇದ್ದು ಬರುತ್ತಿದ್ದರು. ತನ್ನ ಪ್ರೀತಿ ಹೇಗೆ ಅವರ ಬದುಕನ್ನು ಬದಲಾಯಿಸಿತ್ತೆಂದು ಕಂಡಾಗ ಪವಿತ್ರಳಿಗೆ ಅಚ್ಚರಿಯಾಗಿತ್ತು.

ಅಂದು 'ಬಲಿ' ಚಿತ್ರದ ಬಿಡುಗಡೆ. 'ಎ' ಸರ್ಟಿಫಿಕೇಟ್ ಪಡೆದ ಆ ಮಾರ್ಮಿಕ ಚಿತ್ರ ಹೇಗೆ ಹೋಗುವುದೋ ಎಂಬ ಆತಂಕ ಧನಂಜಯರಿಗೆ. ತಾವೇನೋ ಬಹಳ ಆಸೆ ಇಟ್ಟುಕೊಂಡಿದ್ದರು. ಆದರೆ ಜನ ಅದನ್ನು ಹೇಗೆ ಸ್ವಾಗತಿಸುವರೋ ಎಂಬ ಅಳುಕು. ಚಿತ್ರದುದ್ದಕ್ಕೂ ಪವಿತ್ರಳಿಗೆ ಪಾತ್ರ ಸರ್ವೋತ್ತಮ್ ನಾಯಕನಾಗಿ ಅವಳಿಗಾಗಿ ನ್ಯಾಯ ಒದಗಿಸುವ ಸಲುವಾಗಿ ಪಾಡುಪಡುವ ಏಕೈಕ ಪೋಲೀಸ್ ಅಧಿಕಾರಿಯಾಗಿ ಅಲ್ಲಲ್ಲಿ ಕಾಣಿಸಿಕೊಂಡಿದ್ದ. ನೃತ್ಯ, ಹಾಡು, ಫೈಟು, ಕ್ಯಾಬರೇ, ಯಾವ ಮಸಾಲೆಯೂ ಇಲ್ಲದ ಆ ಚಿತ್ರ ಹೇಗೆ ಓಡುವುದೆಂದು ಅವರಿಗೆ ಅನುಮಾನ.

ಬಿಡುಗಡೆಯ ದಿನ ಪ್ರೆಸ್ ಶೋನಲ್ಲಿ ಎಲ್ಲರೂ ಪವಿತ್ರಳ ಅಭಿನಯ, ಶ್ರೇಷ್ಠ ನಿರ್ದೇಶನ, ಉತ್ತಮ ಕಥಾವಸ್ತುವಿದ್ದು ಬಹಳ ಪರಿಣಾಮಕಾರಿ ಚಿತ್ರವೆಂದೂ ಹೊಗಳಿದ್ದರು. ಒಂದೆರಡು ದಿನ ಕಿಕ್ಕಿರಿದ ಜನ ಸಂದಣಿಯಿತ್ತು. ಮೂರು ನಾಲ್ಕನೆಯ ದಿನಗಳಾದ ಮೇಲೆ ಚಿತ್ರನೋಡಲು ಬರುವ ಸಂಖ್ಯೆ ಕಡಿಮೆಯಾಗುತ್ತಾ ಬಂತು. ಒಂದು ವಾರದೊಳಗೆ ಚಿತ್ರ ಮಂದಿರಗಳಲ್ಲಿ ಜನರು ಕಡಿಮೆಯಾಗಿ ಖಾಲಿ ಹೊಡೆಯತೊಡಗಿತ್ತು. ಭಾನುವಾರವೂ ಹೌಸ್‌ಫುಲ್ ಆಗದಿದ್ದಾಗ ಧನಂಜಯರು ತಲೆಯ ಮೇಲೆ ಕೈಹೊತ್ತು ಕುಳಿತರು. ಜನಕ್ಕೆ ಇಂತಹ ಚಿತ್ರ ಬೇಡ. ಮನರಂಜನೆ ಬೇಕು. ಜನಕ್ಕೆ ಬೇಕಾದುದನ್ನು ತಾವು ಕೊಡಬೇಕೆ ಹೊರತು ತಾವು ಕೊಟ್ಟುದುದನ್ನೆಲ್ಲಾ ಜನ ನೋಡುವುದಿಲ್ಲ ಎಂದು. ಮೊದಲ ಬಾರಿಗೆ ಸೋಲೊಪ್ಪಿ

ಕೊಳ್ಳಬೇಕಾಯಿತು. ಕುಂಡಲಿನಿ ಡಿಸ್ಟ್ರಿಬ್ಯೂಟರ್ಸ್ ಫೋನು ಮಾಡಿ ಧನಂಜಯರನ್ನು ಕೇಳಿಯೇ ಬಿಟ್ಟರು.

'ಎನ್ಸಾರ್, ಹೈಕ್ಲಾಸ್ ಫಿಲಂ ಅಂದ್ರಿ, ನೂರು ದಿನ ಗ್ಯಾರಂಟಿ ಅಂದ್ರಿ ಒಂದೇ ವಾರಕ್ಕೆ ಥಿಯೇಟರ್ಸ್ ಎಲ್ಲಾ ಖಾಲಿ ಹೊಡೀತಾ ಇದೆ. ಒಂಭತ್ತು ಥಿಯೇಟರ್ಸ್‌ನಲ್ಲಿ ರಿಲೀಸ್ ಮಾಡಿ ಮೋಸಹೋದ್ವಿ.'

ಪ್ರೊಡಕ್ಷನ್‌ಗೆ ಹಣ ನೀಡಿದ್ದ ತ್ರಿಪುರ ಫೈನಾನ್ಸ್ ಕಾರ್ಪೊರೇಷನ್‌ನವರು ಹೇಳಿ ಕಳಿಸಿದ್ದರು. ಆದಷ್ಟು ಬೇಗ ಇನ್‌ಸ್ಟಾಲ್‌ಮೆಂಟ್ ಬಡ್ಡಿ ಕಟ್ಟುವುದು ಹಾಗಿರಲಿ ಅರ್ಧ ಅಸಲನ್ನು ಕೊಡಬೇಕೆಂದು.

ಚಿತ್ರ ಏಕೆ ಓಡಲಿಲ್ಲವೆನ್ನುವುದು ಧನಂಜಯ, ವಸಂತ್, ಪವಿತ್ರಳಿಗೆ ಅರಿಯದಂತಾಗಿತ್ತು. ಪವಿತ್ರೀಗೆ ಮಾತು ಕೊಟ್ಟಿದ್ದ ಧನಂಜಯ ಮರೆತು ಮತ್ತೆ ಪ್ರತಿದಿನ ಸಂಜೆ ಕುಡಿಯತೊಡಗಿದರು. ಶೂಟಿಂಗಿಗೆ ಹೋದರೆ ಮನೆಗೆ ಹಿಂತಿರುಗದೇ ಯಾವುದಾದರೊಂದು ಹೋಟೆಲಿನಲ್ಲಿ ಹೋಗಿ ಮಲಗಿ ಬಿಡುತ್ತಿದ್ದರು. ಇದನ್ನು ಖಂಡಿಸಿದ ಪವಿತ್ರಳನ್ನು ದುರುದುರು ನೋಡಿದರು.

'ನನಗೆ ಮನಶ್ಶಾಂತಿ ಬೇಕು ಹೋಗ್ತೀನಿ. ಇಲ್ಲಿ ಬಂದ್ರೆ ಕುಡೀಬೇಡಿ, ಸಿಗರೇಟು ಸೇದಬೇಡಿ, ಹಾಗೆ ಮಾಡಬೇಡಿ, ಹೀಗೆ ಮಾಡಬೇಡಿ ಅಂತೀರಿ. ಅಲ್ಲಿ ಮನೆಗೆ ಹೋದರೆ ಸುಶೀಲ ಬುದ್ಧಿ ಹೇಳುವುದಕ್ಕೆ ಪ್ರಾರಂಭಿಸುತ್ತಾಳೆ. ಅದಕ್ಕೆ ನಾನೆಲ್ಲೂ ಬರುವುದಿಲ್ಲ ನನಗೆ ಹೇಗೆ ಬೇಕೋ ಹಾಗೆ ಇರ್ತೀನಿ. ಹೋಟೆಲಿನ ರೂಮಿನಲ್ಲಿ ನನ್ನನ್ನು ಯಾರೂ ಕೇಳುವುದಿಲ್ಲ.'

ಶ್ಯಾಮ್‌ಗೆ ಹೇಳೋಣವೆಂದರೆ ಅವನು ಹನೀಮೂನಿಗೆ ಹೋಗಿದ್ದ. ಕೊನೆಗೆ ಪವಿತ್ರ ವಸಂತನನ್ನು ಕೇಳಿಕೊಂಡಳು.

'ವಸಂತ್, ಏನಾದ್ರೂ ಮಾಡಿ ಅವರನ್ನು ಕಾಯ್ದುಕೊಳ್ಳಬೇಕು. ಅಷ್ಟೊಂದು ಕುಡಿದರೆ ಹೇಗೆ? ನೀವು ಅವರೊಡನೆ ಹೋಗಿ ಅವರೊಡನೇ ಬನ್ನಿ.'

ಆದರೆ ಲಲ್ಲಿ ತಡೆದಳು. 'ಪಾಪೂ, ನನ್ನ ಯಜಮಾನರನ್ನ ಹಾಗೆ ಕಳಿಸಬೇಡಾ. ಅವರೂ ಕಲಿತಾರೂ. ಅವರನ್ನು ಕಾಯಲು ಇವರೇನು ಅವರ ಜವಾನರೇ ?' ಮೊದಲ ಬಾರಿಗೆ ಮಾತೇ ಆಡದ ಲಲ್ಲಿ ಮಾತಾಡಿದ್ದಳು. ಪವಿತ್ರ ತಾಯಿಯ ಬಳಿ ಕುಳಿತು ಅತ್ತಳು.

'ನೋಡಿದ್ಯಾ ಲಲ್ಲಿಗೆ ಎಷ್ಟು ಸೊಕ್ಕು ಬಂತು ? ವಸಂತ್ ಹೆಸರಲ್ಲಿ ಡಿಸ್ಟ್ರಿಬ್ಯೂಷನ್ ಪ್ರಾರಂಭಿಸೋಣ ಅಂತ ನನ್ನ ದುಡ್ಡು ಹಾಕಿದ್ದೀಯಲ್ಲಾ!

ನೋಡು ಅವಳಿಗೇನಾದರೂ ನನ್ನ ಬಗ್ಗೆ ಯೋಚ್ನೆ ಇದೆಯಾ ?'

'ಯಾಕೆ ಇರ್ಬೇಕೂ ? ಅವರೇನು ನಿನ್ನ ಕೈಹಿಡಿದವರೇ ? ಅವ್ರ ಹೆಂಡತಿಗೆ ಇಲ್ದೆ ಇರೋ ಯೋಚ್ನೆ ನಿನಗ್ಯಾಕೆ ?' ಲಲ್ಲಿ ರೇಗಿದಾಗ ವಸಂತ್ ಅವಳನ್ನು ತಡೆದ.

'ಹಾಗೆಲ್ಲಾ ಮಾತಾಡಬೇಡಾ ಲಲ್ಲಿ. ಪವಿತ್ರ ನಿನಗಾಗಿ, ನನಗಾಗಿ, ನಮಗಾಗಿ ಎಷ್ಟು ಮಾಡಿದ್ದಾಳೆ. ಅವಳಿಗಷ್ಟು ಮಾಡದಿದ್ದರೆ ಹೇಗೆ. ನಾನು ಹೋಗಿ ನೋಡ್ಕೊಳ್ತೀನಿ.'

ಲಲ್ಲಿ ಗೊರ್ಗಿದಳು 'ನಂಗೆ ಗೊತ್ತೇ ಇತ್ತು ಹೀಗಾಗುತ್ತೇಂತ. ಹೆಸರಿಗೆ ನಾನು ಹೆಂಡತಿ. ಕುಣಿಯೋದೆಲ್ಲಾ ಇವಳ ತಾಳಕ್ಕೆ.'

ಆ ಮಾತು ಮಾಲತಮ್ಮನ ಕಿವಿಗೆ ಬಿತ್ತು. ಸಧ್ಯ ಅದು ಪವಿತ್ರಳ ಕಿವಿಗೆ ಬೀಳಲಿಲ್ಲ. ಅವಳು ಪ್ರೊಡಕ್ಷನ್ ಆಫೀಸಿಗೆ ಫೋನು ಮಾಡುತ್ತಾ ಇದ್ದಳು ಚಿತ್ರಗಳಿಗೆ ಅಭಿನಯಿಸಲು ಕೇಳಲು ಬಂದಾಗ ಮುಂದೆ ಧನಂಜಯರನ್ನೇ ಕೇಳಿ ಎನ್ನುತ್ತಿದ್ದ ಪವಿತ್ರ ಮತ್ತೆ ತಾಯಿಯ ನೆರವಿಗೆ ಬಂದಳು.

ಇದೇ ಸಂದರ್ಭದಲ್ಲಿ ಮತ್ತೊಂದು ಆಘಾತ ಕಾದಿತ್ತು. ಪವಿತ್ರ ಅಂದು ತನ್ನನ್ನೇ ತಾನು ಅರ್ಪಿಸಿಕೊಂಡಿದ್ದರ ಫಲದಿಂದ ಪ್ರಕೃತಿ ತನ್ನ ಪ್ರತಿಕ್ರಿಯೆ ತೋರಿತ್ತು. ಅದರ ಅನುಮಾನ ಬಂದಾಗ ಪವಿತ್ರಳಿಗೆ ಆಕಾಶವೇ ತಲೆಯ ಮೇಲೆ ಬಿದ್ದಂತಾಯಿತು. ಧನಂಜಯರ ಈಗಿನ ಸ್ಥಿತಿ ನೋಡಿದರೆ ಈ ವಿಷಯ ಅವರಲ್ಲಿ ಪ್ರಸ್ತಾಪಿಸುವ ಹಾಗೆಯೇ ಇಲ್ಲ. ಮಕ್ಕಳಿಲ್ಲವೆಂದು ಕೊರಗಿದ್ದ ಸುಶೀಲಮ್ಮ ಅವರ ಫಲ ಹೊರಲಿಲ್ಲ. ಈಗ ತನ್ನಲ್ಲಿ ಫಲಗೂಂಡಿದೇತಕ್ಕೆ ? ಬೇರೆಯ ಸಂದರ್ಭದಲ್ಲಿಯಾಗಿದ್ದರೆ ಧನಂಜಯರಿಗೆ ಹೇಳಿದ್ದರೆ ಸಂತಸಪಡುತ್ತಿದ್ದರೇನೋ. ಆದರೆ ಈಗ ರೀಟಾಳಿಗೆ ಇದರ ಸುಳಿವು ತಿಳಿಯಿತು.

'ಅಮ್ಮನಿಗೆ ತಿಳಿಸಬೇಡಾ ರೀಟಾ.' ಪವಿತ್ರ ಹೇಳಿದಳು.

'ಮೇಡಂ, ಯಾರಿಗೂ ತಿಳಿಯದಂತೆ ಪ್ರೈವೇಟ್ ನರ್ಸಿಂಗ್ ಹೋಮ್‌ನಲ್ಲಿ ತೆಗೆಸಿಬಿಡಿ' ಎಂದು ಸಲಹೆಯಿತ್ತಳು. ಅದೇಕೋ ಪವಿತ್ರ ನಿಗೆ ಸರಿಬರಲಿಲ್ಲ. ಧನಂಜಯರಿಗೆ ತಿಳಿಸಿಯೇ ಅನಂತರ ಮುಂದುವರಿಯ ಬೇಕು ಎಂದುಕೊಂಡಳು.

ಸಂಜೆ ಶೂಟಿಂಗ್ ಮುಗಿಸಿ ತಾನೇ ಅವರನ್ನರಸಿಕೊಂಡು

ಹೋದಳು. ಅವರು ಹೊರಾಂಗಣ ಚಿತ್ರೀಕರಣದಲ್ಲಿದ್ದರು. ಹಾಗೆ ತಮ್ಮನ್ನು ಹುಡುಕಿಕೊಂಡು ಬಂದಾಗ ಅಚ್ಚರಿಯಿಂದ ಅವಳತ್ತ ನೋಡಿದರು.

'ಶೂಟಿಂಗ್ ಮುಗಿಯುವವರೆಗೆ ಕಾಯುತ್ತೇನೆ' ಎಂದು ಕುಳಿತಳು. ಅವರ ಬೆಂಗಾವಲಾಗಿದ್ದ ವಸಂತ್ ಅವಳ ಬಳಿ ಬಂದ.

'ಯಾಕೆ ಇಲ್ಲಿಗ್ಬಂದೆ ?'

'ನಾನು ಅರ್ಜೆಂಟಾಗಿ ಸಾರ್ ಜೊತೆ ಮಾತಾಡ್ಬೇಕು ಅದಕ್ಕೆ ಬಂದೆ.'

'ನನಗೆ ಹೇಳಿದ್ರೆ ನಾನು ಮನೆಗೆ ಕರ್ಕೊಂಡು ಬರ್ತಾ ಇದ್ದೆ.'

'ಇದು ಮನೇಲಿ ಮಾತಾಡೋ ಸಮಾಚಾರ ಅಲ್ಲ ವಸಂತ್' ಎಂದಾಗ ವಸಂತ ಅವಳ ಮುಖವನ್ನೇ ದಿಟ್ಟಿಸಿದ. ಆದರೆ ಅವನಿಗರ್ಥವಾಗಲಿಲ್ಲ.

ಶೂಟಿಂಗ್ ಮುಗಿದಾಗ ರಾತ್ರಿ ಹತ್ತು ಗಂಟೆ. ಪವಿತ್ರಳಿಗೆ ಆಯಾಸದಿಂದ ಕಣ್ಣೆಳೆದುಕೊಂಡು ಹೋಗುತ್ತಿತ್ತು. ವಸಂತ್‌ನ ಜೊತೆ ಬಂದ ಧನಂಜಯ ಪವಿತ್ರಳ ಬಳಿ ಬಂದು ಕುಳಿತರು.

'ಈಗ ಹೇಳು. ಏನದು ಅಂತಹ ವಿಷಯ ಅಂತ.'

'ಇಲ್ಲ, ಇಲ್ಲಿ ಹೇಳಲು ಸಾಧ್ಯವಿಲ್ಲ. ನಿಮ್ಮ ಹೋಟಲ್ ರೂಮಿಗೆ ಹೋಗೋಣ ಬನ್ನಿ.' ಪವಿತ್ರಳಿಗೆ ಕಣ್ಣಲ್ಲಿ ನೀರು ಬರುವುದೊಂದು ಬಾಕಿಯಿತ್ತು.

'ನೀನು ಅಲ್ಲಿಗೆಲ್ಲಾ ಬರಬಾರದು. ನೋಡಿದವರೇನೆಂದುಕೊಂಡಾರು ?' ಧನಂಜಯ ಹುಬ್ಬು ಗಂಟಿಕ್ಕಿದರು.

'ಏನಾದರೂ ಅಂದುಕೊಳ್ಳಲಿ, ನಿಮಗೆ ಹೇಳಲೇಬೇಕು. ನಿಮ್ಮೊಬ್ಬರೊಂದಿಗೇ ಮಾತಾಡಬೇಕು' ಪವಿತ್ರ ಹಟ ಹಿಡಿದಳು.

ವಸಂತ್ ಅವಳ ಸಹಾಯಕ್ಕೆ ಬಂದ.

ಹಾಗೆ ಹೋಟೆಲ್‌ಗೆ ಹೋಗೋದು ಬೇಡಾ ಪವಿತ್ರ. ಹೊರಗೆ ಕಾರಿದೆಯಲ್ಲ. ಹೇಗಿದ್ದರೂ ನಾನು ನಿಮ್ಮಿಬ್ಬರನ್ನೂ ದೂರ ಕರ್ಕೊಂಡು ಹೋಗಿ ಬಿಡ್ತೀನಿ. ಅದೇನು ಬೇಕೋ ಅದು ಮಾತಾಡಿ. ನಾನು ಅಲ್ಲಿವರ್ಗೂ ದೂರ ಎಲ್ಲಾದ್ರೂ ನಿಂತಿರ್ತೀನಿ.'

ಧನಂಜಯ ಅದಕ್ಕೆ ಒಪ್ಪಿಕೊಂಡರು. ಪಾರ್ಕಿನಾಚೆ ಸ್ಟುಡಿಯೋ

ದಿಂದ ಬಹುದೂರ ಕರೆದೊಯ್ದು ಕಾರು ನಿಲ್ಲಿಸಿ ವಸಂತ್ ರಸ್ತೆಯ ಕೊನೆಯಲ್ಲಿದ್ದ ಪೆಟ್ಟಿಗೆಯಂಗಡಿಯತ್ತ ನಡೆದ.

ಕಾರಿನೊಳಗೆ ಕುಳಿತಿದ್ದ ಪವಿತ್ರಳಿಗೆ ಧನಂಜಯರಿಗೆ ಹೇಗೆ ಹೇಳಬೇಕೋ ತಿಳಿಯದಂತಾಗಿತ್ತು.

'ಅದೇನು ಹೇಳಬೇಕೋ ಹೇಳಬಾರದೇ ?' ಧನಂಜಯ ಸಿಡುಕಿದಾಗ ಪವಿತ್ರಳಿಗೆ ಅಳುವುಕ್ಕಿ ಬಂದಿತು. ಒಲವಿನ ಕುಡಿ ನಾನು ಧರಿಸಿರುವೆನೆಂದು ಹೇಳುವಾಗ ಎಷ್ಟು ಸಂತಸದಿಂದ ಹೇಳಬೇಕು. ಆದರೆ ಈಗ ತಾನು ತಪ್ಪಿತಸ್ಥಳಂತೆ, ಕಳ್ಳತನ ಮಾಡಿ ಒಪ್ಪಿಕೊಳ್ಳುವಂತೆ ಹೇಳಬೇಕಾಗಿದೆಯಲ್ಲಾ !

'ನೀನು ಅತ್ತರೆ ನನಗರ್ಥವಾಗುವುದಿಲ್ಲ. ಹೇಳಬೇಕಾದುದನ್ನು ಬೇಗ ಹೇಳು' ಅವರ ದನಿ ಗಡುಸಾಗಿತ್ತು.

ಅವರ ಬದುಕಿನಲ್ಲಿ ಬಂದ ಸೋಲಿಗೆ ತಾನೇ ಕಾರಣಳೇ ? 'ತಿರುವು' ಚಿತ್ರ ಎಷ್ಟು ಹೆಸರುಗಳಿಸಿತ್ತು. 'ಬಲಿ' ಸೋಲಲು ತಾನೇ ಕಾರಣ ? ತನ್ನ ಮೇಲೇಕೆ ಈ ಕೋಪ ? ತಾನೇನು ತಪ್ಪು ಮಾಡಿರುವೆ ?

'ನಾನು ಇಷ್ಟರಲ್ಲೇ ತಾಯಾಗಲಿದ್ದೇನೆ. ನಿಮ್ಮ ಮಗುವನ್ನು ಹೊತ್ತಿದ್ದೇನೆ' ಪವಿತ್ರ ಹೇಳಿ ಅವಮಾನದಿಂದ ಮುಖ ಮುಚ್ಚಿಕೊಂಡಳು. ರೋಜಿ ಬಂದು ತಿಳಿಸಿದಾಗ ತಾವೆಲ್ಲ ಸಂತಸಪಟ್ಟಿದ್ದೆವು. ಆದರೆ ತಾನು ತಾಯಾಗಲಿರುವುದು ಅವಮಾನ.

ಧನಂಜಯ ಕೊಂಚ ಹೊತ್ತು ಮಾತನಾಡಲಿಲ್ಲ. ಅನಂತರ ನಿಧಾನವಾಗಿ ಹೇಳಿದರು.

'ನಿನ್ನ ಮೂರ್ಖತನಕ್ಕೆ ನಾನೇನು ಮಾಡಲಿ ? ನಿನ್ನ ಎಚ್ಚರಿಕೆ ನೀನು ವಹಿಸಬೇಕಿತ್ತು. ನಿನ್ನಿಷ್ಟ–ಬೇಕಾದರೆ ತೆಗೆಸಿಬಿಡು. ಈಗ ನಾನು ಮಗುವಿನ ತಂದೆಯಾಗಿ ಅದನ್ನು ಸಾಕುವ ಯೋಗ್ಯತೆ ನನಗಿಲ್ಲ. ನನ್ನ ಭವಿಷ್ಯವೇ ನನಗೆ ಕಾಣದಾಗಿದೆ ಇನ್ನು ಮಗುವಿನ ಭವಿಷ್ಯದ ಬಗ್ಗೆ ಹೇಗೆ ಯೋಚಿಸು ?'

ಪವಿತ್ರ ಮುಖ ಮುಚ್ಚಿ ಬಿಕ್ಕಿದಳು, ನನಗೂ ತಾಯಿಯಾಗುವಾಸೆ, ಎಲ್ಲರಂತೆ ಗೃಹಿಣಿಯಾಗಿ ಬಾಳುವಾಸೆ. ತಾರೆಯಾದ ಮಾತ್ರಕ್ಕೆ ವಿವಾಹವಾಗಬಾರದು, ಗೃಹಿಣಿಯಾಗಬಾರದು, ತಾಯಿಯಾಗಬಾರದೆಂದೇನೂ ನಿಯಮವಿಲ್ಲ. ನೀವು ಎಲ್ಲರಿಗೂ ನನ್ನ–ನಿಮ್ಮ ವಿವಾಹದ ವಿಷಯ ತಿಳಿಸಿದರೆ ಸಾಕು. ನಾನಿನ್ನೇನೂ ಅಪೇಕ್ಷಿಸುವುದಿಲ್ಲ.'

ಧನಂಜಯ ತಲೆಯ ಕೂದಲಲ್ಲಿ ಕೈಯ್ಯಾಡಿಸಿಕೊಂಡರು ಕೈಬೆರಳು ಗಳ ನೆಟಿಕೆ ತೆಗೆದರು.

'ಹಾಗೆ ಈಗ ಮಾಡಿದರೆ ಮೊದಲೇ ನಾನು ಕಳೆದುಕೊಳ್ಳುತ್ತಿರುವ ಹೆಸರು ಮತ್ತೂ ಅಳಿಸಿಹೋದೀತು. ಇನ್ನು ಸುಶೀಲಳ ಅಳು, ಅರ್ಭಟ, ರಂಪಾಟ ನಾನು ಸಹಿಸಲಾರೆ ನಾನು ತಲೆಯೊಡೆದು ಸತ್ತು ಹೋಗುತ್ತೇನೆ ಅಷ್ಟೆ' ಎಂದು ಕಣ್ಮುಚ್ಚಿ ಕುಳಿತರು. 'ನನ್ನ ಬದುಕು ಬರೀ ಜಂಜಡವಾಗಿ ಹೋಗಿಬಿಟ್ಟಿದೆ ಪವಿತ್ರ. ಮತ್ತೂ ಜಂಜಡ ಮಾಡಬೇಡ.'

ಪವಿತ್ರಳಿಗೆ ಉಸಿರು ಕಟ್ಟಿದಂತಾಯಿತು ಕಾರಿನಿಂದ ಇಳಿದು ಹೊರಗೆ ನಿಂತಳು. ನೀರವವಾಗಿ ಕತ್ತಲಲ್ಲಿ ಕಣ್ಣೀರ್ಗರೆದಳು. ತನ್ನ ಪಾಡು ಯಾವ ಹೆಣ್ಣಿಗೂ ಬರದಿರಲಿ. ಅವಳು ನಿಂತಿರುವುದನ್ನು ದೂರದಿಂದ ನೋಡಿದ ವಸಂತ್ ಕಾರಿನತ್ತ ಬಂದ. ಅವಳ ಕಣ್ಣೀರು ನೋಡಿದ. ಒಳಗಿದ್ದ ಧನಂಜಯರನ್ನು ನೋಡಿದ. ಮಾತಾಡದೇ ಕಾರಿನ ಬಾಗಿಲು ತೆರೆದು ಪವಿತ್ರಳಿಗೆ ಒಳಗೆ ಕುಳಿತುಕೊಳ್ಳುವಂತೆ ಹೇಳಿದನಷ್ಟೇ. ದಾರಿಯಲ್ಲಿ ಯಾರೂ ಮಾತಾಡಲಿಲ್ಲ. ಧನಂಜಯರನ್ನು ಹೋಟೆಲಿನ ಬಳಿ ಬಿಟ್ಟು ಪವಿತ್ರಳನ್ನು ಮನೆಯ ಬಳಿ ಇಳಿಸಿ ಕಾರನ್ನು ಶೆಡ್ಡಿನಲ್ಲಿಟ್ಟು ಒಳಗೆ ಬಂದ.

ಕೆಂಪಾದ ಕಣ್ಣು, ಕೆದರಿದ ತಲೆ ಹೊತ್ತು ಬಂದಿದ್ದ ಪವಿತ್ರಳನ್ನು ಮಾಲತಮ್ಮ ನೋಡಿದರು.

'ಯಾಕೆ ಏನಾಯ್ತು? ಅವರಿಗುತ್ತರಿಸದೇ ಒಳಗೆ ನಡೆದಳು. ಪವಿತ್ರಳನ್ನು ಹಿಂಬಾಲಿಸಿ ಮಾಲತಮ್ಮ ಒಳಗೆ ಬಂದರು.

'ಏನಾಯ್ತಮ್ಮಾ? ಯಾಕೆ ಹೀಗಿದ್ದೀಯ?' ಮಗಳ ತಲೆ ನೇವರಿಸಿದರು. ಪವಿತ್ರಳ ಸಂಯಮದ ಕಾವು ಒಡೆಯಿತು. ತಾಯಿಯ ಮಡಿಲಲ್ಲಿ ಮುಖವಿಟ್ಟು ಅತ್ತಳು.

'ಅಮ್ಮಾ, ನಾನು ತಾಯಿಯಾಗಲಿದ್ದೇನೆ.' ಅವಳ ತಲೆ ನೇವರಿಸುತ್ತಿದ್ದ ಮಾಲತಮ್ಮನ ಕೈ ಸ್ತಬ್ಧವಾಯಿತು.

'ಧನಂಜಯರಿಗೆ ಗೊತ್ತಾ?'

'ಅವರಿಗೆ ಹೇಳೋಕೆ ಹೋಗಿದ್ದೆ.'

'ಏನಂದರು?'

'ನಾನೀಗ ಮಗುವಿನ ತಂದೆಯಾಗುವ ಸ್ಥಿತಿಯಲ್ಲಿಲ್ಲ ಅಂದರು' ಪವಿತ್ರ ಕಣ್ಣೊರೆಸಿಕೊಂಡಳು.

'ಅದೇನು ಮಹಾ ಬಿಡು. ನೀನ್ಯಾಕೆ ಇಷ್ಟು ತಲೆ ಕೆಡಿಸ್ಕೋತೀ? ತೆಗೆಸಿಬಿಟ್ಟರೆ ಆಯ್ತು? ಪ್ರಾರಬ್ಧ ಕಳೆದುಹೋಗುತ್ತೆ.'

'ಅಲ್ಲಮ್ಮಾ, ನಾನು ಮದುವೆಯಾಗದೇ ದೇವರಾಜ್ ಜೊತೆ ಇದ್ದಾಗ ಅದು ನಿನಗೆ ತಪ್ಪೆನಿಸಲಿಲ್ಲ. ಧನಂಜಯರೊಂದಿಗೆ ಗುಟ್ಟಾಗಿ ಮದುವೆ ಯಾದಾಗ ತಪ್ಪೆನಿಸಲಿಲ್ಲ. ಆದರೆ ಈಗ ನಾನೇಕೆ ತಾಯಾಗಬಾರದು? ಧನಂಜಯ ಅವರ ಮಗು ನನ್ನ ಹೊಟ್ಟೆಯಲ್ಲಿದ್ದರೆ ತಪ್ಪೇನು? ಮಕ್ಕಳು ಬೇಕೆಂದು ತೀರ್ಥಯಾತ್ರೆ ಮಾಡಿ, ಕಂಡ ಕಂಡ ದೇವರಿಗೆ ಹರಿಸಿಕೊಂಡಿದ್ದರು. ಈಗ ನಾನು ಅವರ ಮಗು ಧರಿಸಿದರೆ ಬೇಡವೇನಮ್ಮಾ? ನಾನೂ ಅವರು ತಾಳಿಕಟ್ಟಿದ ಹೆಣ್ಣಲ್ಲವೇ? ಎಲ್ಲಕ್ಕೂ ಅವರ ಹೆಂಡತಿ ಇದಕ್ಕೆ ಮಾತ್ರ ಅಲ್ಲವೇ?'

ಅವಳ ಮಾತಿಗೆ ಮಾಲತಮ್ಮನ ಬಳಿ ಉತ್ತರವಿರಲಿಲ್ಲ. ಬಹಳ ನಿಧಾನವಾಗಿ ಯೋಚಿಸಿ ಹೇಳಿದರು.

'ಈಗ ಬೇಡಾ ಪಾಪೂ. ಮುಂದೆ ಯೋಚಿಸೋಣ. ನಾನೂ ಹೋಗಿ ಅವರನ್ನು ನೋಡಿ ಬರುತ್ತೇನೆ' ಮಗಳನ್ನು ಸಮಾಧಾನ ಮಾಡಿದರು. ಆದರೆ ಅವರ ಯೋಚನೆ ಬೇರೆ ಇತ್ತು. ಮಗಳು ಗರ್ಭಿಣಿಯಾದರೆ ಅವರ ಧನಂಜಯರ ವಿವಾಹದ ಗುಟ್ಟು ರಟ್ಟಾಗುತ್ತದೆ. ಪವಿತ್ರಳ ಭವಿಷ್ಯಕ್ಕೆ ತೊಂದರೆ, ಅಲ್ಲದೇ ಮಗು, ಬಾಣಂತನ ಎಂದರೆ ಅವಳ ದೇಹದ ಚೆಲುವೆಲ್ಲಾ ಇಂಗಿಹೋದೀತು ಹೇಗಾದರೂ ಆದಷ್ಟು ಬೇಗ ತೆಗೆಸಿಬಿಡಬೇಕು.

ಪವಿತ್ರ ಬೆಳಿಗ್ಗೆ ಏಳುವ ವೇಳೆಗೆ ಶ್ಯಾಮ್, ವಿನೀತ ಬಂದಿದ್ದರು. ವಿನೀತಾ ಕೆಂಪನೆ ದುಂಡುದುಂಡಾಗಿದ್ದಳು. ಆಗಲೇ ತನ್ನ ಭವಿಷ್ಯ ತಿಳಿಸಿದ್ದ ಶ್ಯಾಮ್. ತಾನೂ, ವಿನೀತ ಇಬ್ಬರೂ ಬೊಂಬಾಯಿಯಲ್ಲಿರುವುದಾಗಿಯೂ ತಾನು ಅಲ್ಲಿ ಬಿಸಿನೆಸ್ ಮಾಡಲು ನಿರ್ಧರಿಸಿರುವುದಾಗಿಯೂ ಹೇಳಿದ್ದ. ಮಾಲತಮ್ಮ ಮುಖ ಚಿಕ್ಕದು ಮಾಡಿ ಕುಳಿತಿದ್ದರು.

ಅವಳು ಉಪಹಾರ ಮುಗಿಸಿ ಹೊರಡುವ ತರಾತುರಿಯಲ್ಲಿದ್ದಾಗ ತಾಯಿ ಶ್ಯಾಮ್‌ನ ಬಳಿ ತನ್ನ ಸ್ಥಿತಿಯ ಬಗ್ಗೆ ಹೇಳಿರಬೇಕು. ಅವನು ರೇಗಾಡುತ್ತಿದ್ದ.

'ಮುಂಚೆ ಮುಗಿಸಿಬಿಡು. ನಮ್ಮ ಮನೆತನಕ್ಕೇ ಕೆಟ್ಟ ಹೆಸರು ಬಂದೀತು. ನಾನು ಬೊಂಬಾಯಿಯಲ್ಲಿ ವಿನೀತಳ ಮನೆಯಲ್ಲಿ ತಲೆ ಎತ್ತುವ ಹಾಗಿರೋಲ್ಲ. ಥೂ ಶುದ್ಧ ಅವಮಾನ.'

ಶ್ಯಾಮ್‌ಗೆ ಮನೆತನ ಯಾವಾಗ ಬಂದದ್ದು ? ತನ್ನ ಸಂಪಾದನೆಯ ಹಣ ಬಿಸಿನೆಸ್ಸಿಗೆ ಒಡ್ಡಿದಾಗ ಅವನಿಗೆ ನಂಬಿಕೆಯಿರಲಿಲ್ಲವೇ ? ವಿವಾಹದ ಸಮಯದಲ್ಲಿ ತನ್ನ ತಂಗಿ ಹೆಸರಾಂತ ತಾರೆಯೆಂದು ಮೆರೆದಾಗ ಅವಮಾನ ವಾಗಿರಲಿಲ್ಲವೇ ? ಅವಳ ಕೂದಲು ಕಟ್ಟುತ್ತಿದ್ದ ರೀಟಾಳ ಕೈ ಅದುಮಿದಳು.

'ರೀಟಾ, ನೋಡು ಈಗ ಎಲ್ಲಾ ಅವಮಾನ. ನನ್ನ ಮನೆ, ನನ್ನ ಸಂಪಾದನೆಯಲ್ಲಿ ಬೆಳೆದ ದೇಹ, ಐಶ್ವರ್ಯ, ಮಾತ್ರ ಪರ್‍ವಾಗಿಲ್ಲ. ನನ್ನ ಹಿರಿಮೆಯಲ್ಲಿ ಹಣವಂತ ಹೆಂಡತಿ ಸಿಕ್ಕಿದಳು. ಈಗ ಮತೆತನದ ಮಾತು. ಅಮ್ಮ ಸಾರ್ ಹತ್ತಿರ ಹೋಗಿ ಮಾತಾಡ್ತಾರಂತೆ.'

ಅಂದು ಶೂಟಿಂಗ್ ಮುಗಿಸಿ ಬಂದಾಗ ಧನಂಜಯ ಮನೆಗೆ ಬಂದಿದ್ದು ಕಂಡು ಪವಿತ್ರಳಿಗೆ ಅಚ್ಚರಿ. ಇದೇನು ಯಾವಾಗ ಇವರಿಗೆ ಒಳ್ಳೆಯ ಬುದ್ಧಿ ಬಂತು. ವಸಂತನೊಂದಿಗೆ ಮಾತನಾಡುತ್ತಾ ಕುಳಿತಿದ್ದರು. ಎಂದಿನಂತೆ, 'ಬಾ ಮರಿ ಇಲ್ಲಿ' ಎಂದಾಗ ಪವಿತ್ರ ಅವರ ಪಕ್ಕ ಹೋಗಿ ಕುಳಿತಳು

'ನಾನು ಇವೊತ್ತು ಸುಶೀಲನಿಗೆ ಎಲ್ಲಾ ಹೇಳಬೇಕೆಂದಿದ್ದೇನೆ. ನೀನು ಧೈರ್ಯವಾಗಿರು' ಎಂದಾಗ ವಸಂತನತ್ತ ನೋಡಿದಳು. ಅವನ ಕಣ್ಣು ಗಳು ಸಂತಸದಿಂದ ಅರಳಿದ್ದವು. ಅವನಿಂದಲೇ ಧನಂಜಯ ಬದಲಾಗಿರ ಬೇಕು. ವಸಂತ್ ನಸುನಗುತ್ತಲೇ ತಿಳಿಸಿದ.

'ನಾವು 'ಬಲಿ' ಚಿತ್ರವನ್ನು ಅವಾರ್ಡ್‌ಗಾಗಿ ಎಂಟ್ರಿ ಕಳಿಸು ತ್ತಿದ್ದೇವೆ. ಧನಂಜಯ ಒಪ್ಪಿದ್ದಾರೆ.'

ಪವಿತ್ರಳಿಗೆ ತನ್ನ ಕಿವಿಯನ್ನೇ ನಂಬಲಾಗಲಿಲ್ಲ. ಧನಂಜಯ ನಗುನಗು ತ್ತಲೇ ಮಾತನಾಡುತ್ತಿದ್ದರು. ಎಲ್ಲರೊಡನೆ ಕುಳಿತು ಊಟ ಮಾಡಿದರು. ಅನಂತರ ತಾಂಬೂಲ ಹಾಕಿಕೊಳ್ಳುತ್ತಿದ್ದಾಗ ಗಂಟಲಲ್ಲಿದ್ದ ಎಲೆಯಡಿಕೆ ನೆತ್ತಿಗೇರಿ ಕೆಮ್ಮುವುದಕ್ಕೆ ಪ್ರಾರಂಭಿಸಿದರು ಇದ್ದಕ್ಕಿದ್ದಂತೆ ಎದೆ ಹಿಡಿದು ಮುಖ ಹಿಂಡಿದರು ವಸಂತ್ ಅವರತ್ತ ಧಾವಿಸಿದ ಬೀಳುತ್ತಿದ್ದ ಅವರನ್ನು ಹಿಡಿದೆತ್ತಿದ. 'ಶ್ಯಾಮ್ ಬೇಗ ಮುಂದಿನ ರಸ್ತೇಲಿರೋ ಡಾಕ್ಟರ್‌ನ ಕರ್‍ಕೊಂಡ್ಬಾ.' ಒಳಗಿದ್ದ ಪವಿತ್ರ ಓಡಿ ಬಂದಳು. ಧನಂಜಯರ ಮುಖ ನೋಡಿ ಚೀರಿದಳು ಕಣ್ಣಿಗೆ ಕತ್ತಲಿಟ್ಟಂತಾಯಿತು

ಅವಳಿಗೆಚ್ಚರವಾದಾಗ ನೂಲತಮ್ಮನ ತೊಡೆಯ ಮೇಲೆ ತಲೆಯಿಟ್ಟು ಮಲಗಿದ್ದಳು. 'ಅಮ್ಮಾ .. ಅಮ್ಮಾ....ಏನಾಯಿತಮ್ಮಾ ?' ಭ್ರಾಂತಳಾಗಿ ಸುತ್ತಲೂ ನೋಡಿದಳು.

'ಏನೂ ಆಗಿಲ್ಲ ಪಾಪೂ. ಅವರ್ನ ನರ್ಸಿಂಗ್ ಹೋಂಗೆ ಸೇರಿಸಿದ್ದಾರೆ. ಈಗ ಸ್ವಲ್ಪ ಮೇಲು. ಮ್ಯಾಸಿವ್ ಹಾರ್ಟ್ ಅಟ್ಯಾಕ್ ಅಂತೆ.' ಪವಿತ್ರ ನಿಧಾನವಾಗಿ ಎದ್ದು ಕುಳಿತಳು.

'ಅಮ್ಮಾ ನಾನು ಹೋಗಿ ನೋಡಲೇಬೇಕು. ಬಾಮ್ಮಾ ಈಗ್ಲೇ ಹೋಗೋಣ.'

ಅವಳ ಬೆದರಿದ ಬಿಳಿಚಿಕೊಂಡಿದ್ದ ಮುಖ ನೋಡಿ ಮಾಲತಮ್ಮ ನಿಗೇ ಭಯವಾಯಿತು.

'ಆಗ್ಲೇ ಹೋಗೋಣ ಸುಧಾರಿಸ್ಕೋ ಪಾಪೂ. ಅಲ್ಲಿ ಒಳಗೆ ಯಾರ್ನೂ ಬಿಡೋಲ್ಲ. ಇಂಟೆನ್ಸಿವ್ ಕೇರ್‌ನಲ್ಲಿದ್ದಾರೆ. ವಸಂತ್, ಶ್ಯಾಮ್ ಅಲ್ಲೇ ಇದ್ದಾರೆ, ಅವರ ಹೆಂಡತಿ ಸುಶೀಲಮ್ಮ ಅಲ್ಲೇ ಇದ್ದಾರೆ.'

'ಪರ್ವಾಗಿಲ್ಲ ಬಾಮ್ಮಾ, ನಾನು ನೋಡಲೇಬೇಕು.' ಮಾಲತಮ್ಮ ಎದ್ದು ಅವಳಿಗೆ ಶಾಲು ಹೊದೆಸಿಕೊಂಡು ಕರೆದೊಯ್ದರು.

'ನೋಡು ಅಲ್ಲಿ ಅತ್ತು ಕರೆದು ಗಲಾಟೆ ಮಾಡಕೂಡದು ಗೊತ್ತಾಯ್ತಾ?' ಪವಿತ್ರ ತಲೆಯಾಡಿಸಿದಳು.

ಕಾರಿನಲ್ಲಿ ತಾಯಿಯ ಪಕ್ಕದಲ್ಲಿ ಮೌನವಾಗಿ ಕುಳಿತ್ತಿದ್ದಳು. ತನ್ನ ಬಾಳಿನಲ್ಲಿ ಸಂತಸವೆಲ್ಲಾ ಕ್ಷಣಿಕ. ಎಲ್ಲಾ ಸರಿಹೋಗಬೇಕಾದಾಗ ಹೀಗಾಗ ಬೇಕೆ? ದೇವರೇ ಅವರಿಗೇನೂ ಆಗದೇ ಇರಲಿ. ನನ್ನ ಮಾಂಗಲ್ಯಭಾಗ್ಯ ಉಳಿಯಲಿ. ಅವಳು ಮೌನವಾಗಿ ಪ್ರಾರ್ಥಿಸಿದಳು.

ಕಾರು ನರ್ಸಿಂಗ್ ಹೋಂನತ್ತ ಪ್ರವೇಶಿಸುತ್ತಲೇ ದೊಡ್ಡ ಜನರ ಗುಂಪು ಕಂಡಿತು, ಪವಿತ್ರಳ ಎದೆ ಬಡಿದುಕೊಂಡಿತು. ಆಗಬಾರದ್ದು ಆಗಿ ಹೋಯಿತೇ? ಆದರೆ ಇಳಿದಾಗ ಅವರೆಲ್ಲಾ ಧನಂಜಯರನ್ನು ನೋಡಲು ಬಂದವರೆಂದು ತಿಳಿದಾಗ ಕೊಂಚ ನೆಮ್ಮದಿಯಾಯಿತು. ತಾಯಿ ಕೈಹಿಡಿದು ಒಳಗೆ ಹೋದಾಗ ಎಲ್ಲರೂ ಅವಳಿಗೆ ಸ್ಥಳ ಬಿಟ್ಟರು.

'ಪವಿತ್ರಾ ಬಂದರು. ಅವರ ಮೆಚ್ಚಿನ ಶಿಷ್ಯೆಯಲ್ಲವೇ ಅವಳು?'

ತಾನು ಶಿಷ್ಯೆ ಮಾತ್ರವಲ್ಲ, ಅದಕ್ಕಿಂತ ಹೆಚ್ಚಿನವಳು ಹತ್ತಿರದವಳು ಎಂದು ಕೂಗಿ ಹೇಳುವ ಮನಸ್ಸಾಯಿತು ಪವಿತ್ರನಿಗೆ. ಶ್ಯಾಮ್, ವಸಂತ್ ಅವಳತ್ತ ಬಂದರು. 'ಯಾಕೆ ಇವಳ್ನ ಕರ್ಕೊಂಡು ಬಂದಿರಿ?'

'ಅವ್ಳು ನೋಡ್ಬೇಕೂಂತ ತುಂಬಾ ಗಲಾಟೆ ಮಾಡಿದ್ಲು. ನಂಗೂ ತಡೀಲಿಲ್ವೋ?' ಮಾಲತಮ್ಮ ಹೇಳಿದರು. 'ನಾನು ಕರ್ಕೊಂಡೋಗಿ

ತೋರಿಸ್ತೀನಿ ಬಾ.' ವಸಂತ್ ಪವಿತ್ರಳನ್ನು ಕರೆದುಕೊಂಡು ಇಂಟೆನ್ಸಿವ್ ಕೇರ್‌ನತ್ತ ಕರೆದೊಯ್ದ. ಡಾಕ್ಟರುಗಳು ನರ್ಸ್‌ಗಳು ಬೆಡ್ಡಿನ ಸುತ್ತ ಇದ್ದರು. ಧನಂಜಯರಿಗೆ ಆಕ್ಸಿಜನ್ ಕೊಟ್ಟಿದ್ದರು. ಕಣ್ಮುಚ್ಚಿ ಮಲಗಿ ಉಸಿರಾಡಲು ಕಷ್ಟಪಡುತ್ತಿದ್ದ ಅವರನ್ನು ಕಂಡಾಗ ಪವಿತ್ರ ಹಾಗೆಯೇ ನಿಂತು ನೋಡಿದಳು. ಏರಿಳಿಯುತ್ತಿದ್ದ ಅವರೆದೆ, ಆರ್ಭಟದ ಉಸಿರಾಟ ನೋಡಿದಾಗ ಕಣ್ತುಂಬಿ ಬಂದು ಕೆನ್ನೆಯ ಮೇಲಿಳಿಯಿತು. ಅಲ್ಲಿಯೇ ಹತ್ತಿರದಲ್ಲಿ ನಿಂತಿದ್ದ ಸುಶೀಲಮ್ಮನತ್ತ ನೋಡಿದಳು. ಹಣೆಯಲ್ಲಿ ದೊಡ್ಡದಾದ ಕುಂಕುಮ, ತಲೆತುಂಬ ಹೂವು, ಕೈತುಂಬಾ ಬಳೆ, ಕತ್ತಿನಲ್ಲಿದ್ದ ಕರಿಮಣಿ, ಕಣ್ಣುಗಳಲ್ಲಿ ಜಿನುಗಿದ್ದ ನೀರು ಕಂಡಳು. ಮೆಲ್ಲನೇ ಅವರತ್ತ ನಡೆದು ಅವರ ಕೈಯೆತ್ತಿ ಕಣ್ಣೊತ್ತಿಕೊಂಡಳು. 'ಅಮ್ಮಾ ನಿಮ್ಮ ಸೌಭಾಗ್ಯ ನಂದದಿರಲಿ' ಅವಳೆದೆ ಚೀರಿತು. ನಿಮ್ಮ ಸೌಭಾಗ್ಯ ಉಳಿದರೆ ನನ್ನದೂ ಉಳಿದೀತು.

ಸುಶೀಲಮ್ಮ ಅವಳ ಕೆನ್ನೆಯ ಮೇಲಿದ್ದ ಕಣ್ಣೀರು ಒರೆಸಿದರು. ಮೆಲ್ಲನೇ ಅವಳನ್ನು ಆಲಂಗಿಸಿದರು. 'ಪವಿತ್ರ ನೀನು ಕಣ್ಣೀರು ಹಾಕಬಾರದು ಈ ಸ್ಥಿತಿಯಲ್ಲಿ ನೀನು ಅಳಬಾರದು'

ಸುಶೀಲಮ್ಮನಿಗೆ ಹೇಳಿದವರ್‍ಯಾರು? ತನ್ನ ಬಗ್ಗೆ ಅವರಿಗೆ ಹೇಗೆ ತಿಳಿಯಿತು? ಅವರತ್ತ ನೋಡಿದಳು.

'ಎಲ್ಲಾ ವಸಂತ್ ಹೇಳಿದರು. ನೋಡು ನಾನೊಬ್ಬಳೇ ಎದುರಿಸಬೇಕೆಂದು ಹೆದರಿದ್ದೆ. ಈಗ ನೀನೂ ಬಂದುದರಿಂದ ನನಗೆ ಧೈರ್ಯ ಬಂದಿದೆ. ಕೂತ್ಕೋಬಾ ಇಲ್ಲಿ' ಅವಳನ್ನು ತಮ್ಮ ಪಕ್ಕದಲ್ಲಿ ಕುರ್ಚಿಯ ಮೇಲೆ ಕೂಡಿಸಿಕೊಂಡರು.

ಅಲ್ಲಿ ನೆರೆದಿದ್ದ ಅನೇಕರಿಗೆ ಇದರಿಂದ ಆಚ್ಚರಿಯಾಗಿತ್ತು. ಪವಿತ್ರ ಕಣ್ಮುಚ್ಚಿ ಹಾಗೆಯೇ ಒರಗಿದಳು ಸುಶೀಲಮ್ಮನ ಕೈ ಅವಳ ತಲೆಯನ್ನು ತಡವುತ್ತಿತ್ತು ರಾತ್ರಿಯೆಲ್ಲಾ ನಿದ್ದೆಗೆಟ್ಟು ಕಾದರು. ಬೆಳಗಿನ ಹೊತ್ತಿಗೆ ಅವರ ಉಸಿರಾಟ ಬಹಳ ಸುಧಾರಿಸಿತ್ತು. ಆಕ್ಸಿಜನ್ ಮಾಸ್ಕ್ ತೆಗೆದಿದ್ದರು. ನಿಧಾನವಾಗಿ ಕಣ್ತೆರೆದು ನೋಡಿ ಎಲ್ಲರತ್ತ ನೋಡಿ ಮತ್ತೆ ಕಣ್ಮುಚ್ಚಿದ್ದರು. ಇನ್ನು ನಲವತ್ತೆಂಟು ಗಂಟೆಗಳ ಕಾಲ ಏನೂ ಹೇಳಲಾಗುವುದಿಲ್ಲ ಎಂದಿದ್ದರು. ಎಷ್ಟು ಹೇಳಿದರೂ ಕೇಳದೇ ಪವಿತ್ರ ಅಲ್ಲಿಯೇ ಕುಳಿತುಬಿಟ್ಟಿದ್ದಳು. ಸುಶೀಲಮ್ಮ ತಾವೇ ಮನೆಯಿಂದ ಕಾಫಿ ತಂದಿತ್ತರು. ಮಾಲತಮ್ಮ

ಆಕೆಯ ನಡುವಳಿಕೆ ಕಂಡು ಮೂಕರಾಗಿದ್ದರು. ಚಿತ್ರರಂಗದವರು ತಂಡ ತಂಡವಾಗಿ ಬಂದು ನೋಡಿಕೊಂಡು ಹೋಗುತ್ತಿದ್ದರು.

'ಹೋಗಿ ಕೊಂಚ ಸುಧಾರಿಸಿಕೊಂಡು ಬರುವಿಯಂತೆ ಬಾ' ಎಂದು ಪವಿತ್ರಳಿಗೆ ಮಾಲತಮ್ಮ ಹೇಳಿದಾಗ ಪವಿತ್ರ ಅಲುಗಾಡಲಿಲ್ಲ.

'ಅವರು ಕಣ್ತೆರೆದು ನನ್ನೊಡನೆ ಮಾತಾಡುವವರೆಗೆ ನಾನು ಬರುವುದಿಲ್ಲ' ಎಂದು ಹಠ ಹಿಡಿದುಬಿಟ್ಟಳು.

'ಕೈ ಹಿಡಿದ ಹೆಂಡತಿಯೇ ಸುಮ್ಮನಿದ್ದರೆ ಇವಳು ನೋಡು ಅವರಿಗಿಂತ ಹೆಚ್ಚಾಗಿ ಆಡ್ತಾಳೆ' ಎಂದು ಯಾರೋ ಹೇಳಿದ್ದು ಕಿವಿಗೆ ಬಿದ್ದಿತು. ಪವಿತ್ರ ಅದಕ್ಕೆಲ್ಲಾ ಈಗ ಕಲ್ಲಾಗಿ ಹೋಗಿದ್ದಳು.

ಮಧ್ಯಾಹ್ನದ ಹೊತ್ತಿಗೆ ಧನಂಜಯರ ಸ್ಥಿತಿ ಮತ್ತೂ ಸುಧಾರಿಸಿತ್ತು. 'ಸುಶೀಲಾ' ಎಂದು ಕರೆದಾಗ ಸುಶೀಲಮ್ಮನನ್ನು ನರ್ಸ್ ಒಳಗೆ ಕರೆದೊಯ್ದಳು. ಪವಿತ್ರ ಉತ್ಕಂಠತೆಯಿಂದ ತನ್ನನ್ನು ಕರೆಯುವರೆಂದು ಕಾದಳು. ಆದರೆ ಯಾವ ಕರೆಯೂ ಬರಲಿಲ್ಲ. ಹತ್ತು ನಿಮಿಷ ಬಿಟ್ಟು ಬಂದ ಸುಶೀಲಮ್ಮ ಅಳುತ್ತಿದ್ದರು. ನರ್ಸ್ ಅವರಿಗ ಸಮಾಧಾನ ಹೇಳಿದಳು.

'ಈಗ ಮೇಲಾಗಿದೆ, ಯಾಕೆ ಅಳ್ತೀರಿ?'

ಸುಶೀಲಮ್ಮ ಮಾತನಾಡದೇ ಪವಿತ್ರಳ ಬಳಿಗೆ ಬಂದು ಅವಳನ್ನು ಎಬ್ಬಿಸಿದರು.

'ಬಾ ಪವಿತ್ರ, ನಮ್ಮ ಮನೆಗೆ ಹೋಗೋಣ. ಅವರು ಹೇಳಿದ್ದಾರೆ.'

'ನಾನು ಅವರನ್ನು ನೋಡಬೇಕು. ಒಂದೇ ಒಂದು ಸಲ ನೋಡಬೇಕು' ಪವಿತ್ರ ಬೇಡಿಕೊಂಡಳು. ಸುಶೀಲಮ್ಮ ನರ್ಸ್‌ಗೆ ಏನೋ ಹೇಳಿದಾಗ ನರ್ಸ್ ಅವಳನ್ನು ಒಳಗೆ ಕರೆದೊಯ್ದಳು. ಧನಂಜಯ ಮೆಲ್ಲನೆ ಕಣ್ತೆರೆದು ನೋಡಿದರು. ಎದುರಿಗೆ ಪವಿತ್ರ. ಇನ್ನೂ ಈಗ ತಾನೇ ಅರಳಿದ ಹೂವು. ಈ ವಯಸ್ಸಿಗೆ ಎಷ್ಟು ಅನುಭವಿಸಬೇಕಾಗಿ ಬಂದಿದೆ. ಅವಳ ಕಣ್ಣುಗಳಲ್ಲಿ ನೀರು. ಕಣ್ಣಸನ್ನೆಯಲ್ಲೇ ಕರೆದರು. ಪವಿತ್ರ ಹತ್ತಿರ ಬಂದಾಗ ಅವಳ ಕೈ ಹಿಡಿದುಕೊಂಡರು.

'ಪವಿತ್ರ ನೀನು ಧೈರ್ಯವಾಗಿರು. ನಿನ್ನ ನೋಡಿಕೊಳ್ಳಲು ನನ್ನ ಸುಶೀಲ ಇದ್ದಾಳೆ' ಎಂದಷ್ಟೇ ಹೇಳಿದರು. ಆಗಲೇ ಅವರ ಉಸಿರಾಟ ಸ್ವಲ್ಪ ಬಿರುಸಾಯಿತು.

'ಜಾಸ್ತಿ ಮಾತಾಡಬೇಡಿ' ನರ್ಸ್ ಹೇಳಿದಳು.

'ನೀನು ಚಿತ್ರರಂಗ ಬಿಡಬೇಡ. ಪವಿತ್ರ, ನನ್ನ ಮಗೂನ ಕಾಪಾಡುವ ಭಾರ. ನಿನ್ನದು. ನನಗೆ ನೋಡುವ ಆಸೆಯಿತ್ತು' ಅವರೆದೆ ಏರಿಳಿಯುತ್ತಿತ್ತು. ನರ್ಸ್ ಆಗಲೇ ಡಾಕ್ಟರನ್ನು ಕರೆಯಲು ಓಡಿದಳು. ಧನಂಜಯ 'ಸುಶೀಲಾ' ಎಂದು ಕೂಗಿದರು. ಸುಶೀಲ ಅವ: ಕೂಗು ಕೇಳುತ್ತಲೇ ಒಳಗೆ ಧಾವಿಸಿ ಬಂದರು. ಪವಿತ್ರಳ ಕೈಯನ್ನು ಸುಶೀಲರ ಕೈಗಿತ್ತರು. ಇಬ್ಬರನ್ನು ಒಟ್ಟಿಗೆ ನೋಡಿ ಕಿರುನಕ್ಕರು. ಅಷ್ಟರಲ್ಲಿ ಕೆಮ್ಮು ಬಂದು ಉಸಿರಾಟ ತೀವ್ರವಾಯಿತು. ಹಾಗೆಯೇ ನಿಧಾನವಾಗಿ ಅವರ ತಲೆ ಒಂದೆಡೆಗೆ ವಾಲಿತು. ಧಾವಿಸಿ ಬಂದ ಡಾಕ್ಟರ್ ಉಸಿರಾಟ ಪರೀಕ್ಷಿಸಿ ಎದೆಯ ಬಳಿ ಉಜ್ಜಿದರು. ಆಕ್ಸಿಜನ್ ನೀಡಲು ಪ್ರಯತ್ನಿಸಿದರು. ಕೊನೆಗೆ ತಲೆತಗ್ಗಿಸಿ ನಡೆದರು. ಪವಿತ್ರ, ಸುಶೀಲ ಇಬ್ಬರೂ ಹಾಗೆಯೇ ನಿಂತಿದ್ದರು.

ಧನಂಜಯರ ಅನಿರೀಕ್ಷಿತ ಸಾವು ಕಿಚ್ಚಿನಂತೆ ಹಬ್ಬಿತು. ಅಭಿಮಾನಿಗಳು, ಸ್ನೇಹಿತರು ಅಂತಿಮ ದರ್ಶನ ಪಡೆಯಲು ಬಂದರು. ಮೂಕಳಂತಾಗಿ ಹೋಗಿದ್ದ ಪವಿತ್ರಳನ್ನು ಬಲವಂತವಾಗಿ ಮನೆಗೆ ಕರೆದೊಯ್ಯಬೇಕಾಯಿತು.

ಮಾರನೆಯ ದಿನ ಪತ್ರಿಕೆಗಳಲ್ಲೆಲ್ಲಾ ಸುದ್ದಿ ಪ್ರಕಟವಾಗಿತ್ತು. ಪ್ರಸಿದ್ಧ ನಿರ್ದೇಶಕ ಧನಂಜಯರ ಹಠಾತ್ ನಿಧನ. ಪತ್ನಿ ಸುಶೀಲಾ ಮತ್ತು ಉಪ ಪತ್ನಿ ಹೆಸರಾಂತ ತಾರೆ ಪವಿತ್ರಳನ್ನು, ಅಸಂಖ್ಯಾತ ಅಭಿಮಾನಿಗಳನ್ನು ಸ್ನೇಹಿತರನ್ನು ಅಗಲಿದ್ದಾರೆ. ಪವಿತ್ರಳನ್ನು ಗುಟ್ಟಾಗಿ ತಿರುಪತಿಯಲ್ಲಿ ವಿವಾಹವಾಗಿದ್ದಾರೆಂದು ತಿಳಿದು ಬಂದಿದೆ.

ಶ್ಯಾಮ್ ತಾಯಿಯ ಮುಖಕ್ಕೆ ಹಿಡಿದ.

'ನೋಡು, ನಿನ್ನ ಮಗಳ ಭವಿಷ್ಯ ಹಾಳಾಯಿತೆಂದು ತಿಳಿದುಕೋ. ಇವಳ್ನ ಯಾರು ಚಿತ್ರಕ್ಕೆ ಕರೀತಾರೆ ಇನ್ನು. ನೀನೇ ಅವ್ಳ ತಲೆ ಮೇಲೆ ಮಣ್ಣು ಹಾಕ್ದೆ. ಈಗ್ಲೂ ಸಮಯ ಮಿಂಚಿಲ್ಲ. ಮನಸ್ಸಿನ ಒತ್ತಡದಿಂದ ಆಯಿತೆಂದು ಹೇಳಿ ತೆಗೆಸಿಬಿಡಮ್ಮಾ.'

ಪವಿತ್ರ ಅಣ್ಣನನ್ನು ದುರುದುರು ನೋಡಿದಳು.

'ಇಲ್ಲ ನನಗೆ ಬೇಕೇ ಬೇಕು. ನಾನು ಪ್ರೀತಿಸಿದವರೆಲ್ಲಾ ನನ್ನ ಬಿಟ್ಟು ಹೋಗಿಯಾಯಿತು. ಇದೊಂದನ್ನು ನಾನು ಬಹಳ ಪ್ರೀತಿಸುತ್ತೇನೆ. ಇದಕ್ಕಾಗಿ ನಾನು ಬದುಕಬೇಕು ಬದುಕುತ್ತೇನೆ' ಎಂದು ಚೀರಿದಳು. ಮತ್ತೊಂದು ರಂಗಿನಲ್ಲಿ ಬೆಳ್ಳಿತೆರೆ ಅವಳ ಮುಂದೆ ರಂಗುರಂಗಾಗಿ ಕಂಡಿತು.

'ನನ್ನ ಮೈಯಲ್ಲಿ ಶಕ್ತಿಯಿರುವವರೆಗೂ ಚಿತ್ರರಂಗದಲ್ಲಿ ದುಡಿಯುತ್ತೇನೆ.'

ಪವಿತ್ರ ಬಿಕ್ಕಿ ಬಿಕ್ಕಿ ಅಳತೊಡಗಿದಳು ಮಾಲತಮ್ಮ ಪವಿತ್ರಳ ಮೇಲೆ ಕಣ್ಣಿಟ್ಟಿದ್ದರು, ಅದಕ್ಕಿಂತ ಹೆಚ್ಚಾಗಿ ಕೊಂಚ ಮುಖ ಬಾಡಿದ್ದರೂ ಆತಂಕ ವ್ಯಕ್ತಪಡಿಸುತ್ತಿದ್ದವನು ವಸಂತ. ಸುಸ್ತು, ಸಂಕಟ ಜಾಸ್ತಿಯಾಗಿ ಶೂಟಿಂಗಿಗೆ ಹೋಗಲೇ ತೊಂದರೆಯಾಗತೊಡಗಿದಾಗ ಮಾಲತಮ್ಮ ಇದೇ ಸಮಯವೆಂದು ತಾವೇ ಗುಟ್ಟಾಗಿ ಲೇಡಿ ಡಾಕ್ಟರೊಬ್ಬರಲ್ಲಿಗೆ ಹೋಗಿ ತಮ್ಮ ಸಂದರ್ಭ, ಕಷ್ಟ ತಿಳಿಸಿ ಗೋಳಾಡಿ ಅವರ ಮನಸ್ಸು ಕರಗಿಸಿ ಪವಿತ್ರಳನ್ನು ನೋಡಿ ಹೋಗಲು ಬೇಡಿದಾಗ ಹೆಸರಾಂತ ತಾರೆಗೆ ಚಿಕಿತ್ಸೆ ನೀಡಲು ಸಂತಸದಿಂದಲೇ ಡಾಕ್ಟರ್ ಒಪ್ಪಿಕೊಂಡರು. ಆದರೆ ಅವಳಿಗೆ ಇಂಜೆಕ್ಷನ್ ಕೊಡುವಾಗ ಅದು ಯಾವ ಕಾರಣಕ್ಕೆಂದು ತಿಳಿಸಕೂಡದೆಂದು ಮಾಲತಮ್ಮ ಹೇಳಿ ಕೈಗೊಂದಿಷ್ಟು ಹಣ ನೀಡಿದ್ದರಿಂದ ಅವರು ಅದಕ್ಕೂ ಒಪ್ಪಿದರು. ಪವಿತ್ರಳನ್ನು ಪರೀಕ್ಷಿಸಿ ನಗುತ್ತಾ 'ಹೀಗೇ ಮೊದಲು ಆಮೇಲೆ ಸರಿ ಹೋಗುತ್ತೆ' ಎಂದು ಹೇಳಿ ಅವಳಿಗೆ ಇಂಜೆಕ್ಷನ್ ಕೊಟ್ಟಾಗ ಡಾಕ್ಟರಿಗೆ ಅವಳ ಬಗ್ಗೆ ಮರುಕ ಮೂಡಿತು.

ಮಾಲತಮ್ಮ ಇಂಜೆಕ್ಷನ್ನಿನ ಪ್ರತಿಕ್ರಿಯೆಗಾಗಿ ತುದಿಗಾಲಿನಲ್ಲಿ ನಿಂತು ಕಾದರು. ಪವಿತ್ರಳಿಗೆ ಸುಸ್ತು ಸಂಕಟ ಹೆಚ್ಚಾಯಿತೇ ವಿನಃ ಏನೂ ಅವರು ಬಯಸಿದಂತೆ ಆಗಲಿಲ್ಲ. ಲೇಡಿ ಡಾಕ್ಟರಿಗೆ ಹಿಡಿಶಾಪ ಹಾಕಿದರು. 'ದುಡ್ಡು ತಿಂದು ಯಾವುದೋ ಉಪಯೋಗಕ್ಕೆ ಬಾರದ ಔಷಧಿ ಕೊಟ್ಟಿದ್ದಾಳೆ.'

ಪವಿತ್ರ ಸುಸ್ತು ಸಂಕಟದಿಂದ ಬಸವಳಿದು ಹೋದಳು. ಕಣ್ಣ ಸುತ್ತಲಿನ ಕಪ್ಪುಗೆರೆ ಕಾಣದಂತೆ ಮೇಕಪ್‌ನಲ್ಲಿ ಹೆಚ್ಚು ಆಸಕ್ತಿವಹಿಸುತ್ತಿದ್ದಳು. ರೀಟಾ ಯಾವಾಗಲೂ ಅವಳಿಗೆ ನೀಡಲು ಹಣ್ಣಿನರಸ ಇಟ್ಟುಕೊಂಡು ತಯಾರಾಗಿರುತ್ತಿದ್ದಳು. ಮಾಲತಮ್ಮನಂತೂ ಮನೆಗೆ ಬಂದ ಸೊಸೆಯ ಬೆಡಗಿನಲ್ಲಿ ಮೈಮರೆತಿದ್ದರು. ಪವಿತ್ರಳ ಜೊತೆಗೆ ಸ್ಟುಡಿಯೋಗೆ ಬರುತ್ತಿದ್ದುದು ಅಪರೂಪ. ಅಲ್ಲದೆ ಅವಳ ಮೇಲಿನ ಅಸಮಾಧಾನವಿನ್ನೂ ಹೋಗಿರಲಿಲ್ಲ.

ಪವಿತ್ರ ಸಮಯ ಬಿಡುವು ಮಾಡಿಕೊಂಡು ತಾಯಿಗೆ ತಿಳಿಯದಂತೆ ರೀಟಾಳೊಂದಿಗೆ ಸುಶೀಲಮ್ಮನನ್ನು ನೋಡಲು ಹೊರಟಳು. ಬರಿಯ ಹಣೆ, ಕುಂದಿದ ಮುಖದ ಅವರನ್ನು ಕಂಡಾಗ ಅವಳಿಗೆ ಮರುಕವುಕ್ಕಿತು.

'ನೋಡೂ, ನನ್ನ ಯಜಮಾನರು ಹೆಸರಾಂತ ನಿರ್ದೇಶಕರು. ನೋಡು ಪಾಪು, ಹೇಳಿದರೆ ಯಾರೂ ನಂಬೋಲ್ಲ. ಕದ್ದು ಕದ್ದು ದುಡ್ಡು ಬಚ್ಚಿಟ್ಟಿದ್ದಾರೆ ಅಂತಾರೆ. ನೀನು ಹಣ ಕಳಿಸೋ ಹೊತ್ಗೆ ಅವರ ಕರ್ಮ ಮಾಡೋಕ್ಕಾಯ್ತು. ಇಲ್ದಿದ್ರೆ ಅದೂ ಆಗ್ತಾ ಇರ್ಲಿಲ್ಲ. ನಿನ್ನುಪಕಾರ ನಾನ್ಹೇಗೆ ಮರೀಲಿ?' ಅವಳನ್ನೇ ತಬ್ಬಿ ಅತ್ತರು. 'ನಾನು ಹೇಗೆ ಬದುಕಲಿ? ಇರೋಕೆ ಮನೆ ಇಲ್ಲ, ನಿಲ್ಲೋಕೆ ನೆಲೆಯಿಲ್ಲ. ಯಾರ ಮನೆಗೆ ಹೋಗಿ ಬದುಕಲಿ ?'

ಪವಿತ್ರ ಅವರ ಮುಖ ದಿಟ್ಟಿಸಿದಳು. ಎಷ್ಟಾದರೂ ಅವರು ತನಗೆ ಅಕ್ಕನಂತೆ. ಸ್ವಂತ ಅಕ್ಕಂದಿರಿಗಿಂತ ಎಷ್ಟು ಪ್ರೀತಿ ಆದರತೋರಿದವರು. ಅಲ್ಲದೆ ತನ್ನ ಮಗುವಿಗೆ ದೊಡ್ಡಮ್ಮ. ಒಂದು ವಿಧದಲ್ಲಿ ಮಗುವಿನ ಹಕ್ಕು ಇವರಿಗೂ ಸೇರಿದ್ದು.

'ಸುಶೀಲಮ್ಮ, ನೀವು ತಪ್ಪು ತಿಳಿಯದಿದ್ರೆ ನೀವು ನಮ್ಮ ಮನೆಗೆ ಬಂದೇಕಿರಬಾರದು? ನನ್ನ ಈ ಸ್ಥಿತಿಯಲ್ಲಿ ನೀವು ನನ್ನ ಜೊತೆಗಿದ್ರೆ ನಂಗೆಷ್ಟು ಧೈರ್ಯ ಇರುತ್ತೆ.' ಸುಶೀಲಮ್ಮ ಒಪ್ಪಲಿಲ್ಲ.

'ಆ ಹೊತ್ತಿಗೆ ಎಲ್ಲಿದ್ರೂ ಬರ್ತೀನಿ ಪವಿತ್ರ. ಆದ್ರೆ ನಿಮ್ಮ ಮನೆಗೆ ಬರೋಲ್ಲ. ನೀನೇ ಮನೆ ಮಾಡಿಕೋ. ಆಗ ಬರ್ತೀನಿ, ಬಂದಿರ್ತೀನಿ.'

ಅವರಿಗೆ ತಿಂಗಳಿಗಿಷ್ಟು ಹಣ ಕಳಿಸುವ ಏರ್ಪಾಡು ಮಾಡಿದಳು.

ಪವಿತ್ರಳ ಮೈ ಕೈ ತುಂಬುತ್ತಾ ಬಂದಂತೆ ಶ್ಯಾಮ್, ಮಾಲತಮ್ಮ ಒಳಗೇ ಕುದಿಯತೊಡಗಿದರು. ರೀಟಾ ಎಷ್ಟೇ ಜಾಗರೂಕತೆಯಿಂದ ಉಡುಪು ತೊಡಿಸಲು ಯತ್ನಿಸಿದರೂ ಎಷ್ಟೋ ಜನರ ಮಾತು ಅವರ ಕಿವಿಗೆ ಬಿದ್ದಿತ್ತು. ಈಚೀಚೆಗೆ ಪವಿತ್ರಳಿಗೆ ಮೈಬರ್‍ತಾ ಇದೆ. ಕಾರಣ ಯಾಕೋ ತಿಳಿಯಲಿಲ್ಲ. ವಸಂತ್ ಬೇರೆ ಮನೇಲಿ ಇದ್ದಾರಂತೆ. ಏನೋ ಇರ್ಬೇಕೂ ಸಮಾಚಾರ. ಲಲ್ಲಿಯ ಕಿವಿಗೆ ಬಿದ್ದರೆ ಕಷ್ಟವೆಂದು ಬಹಳ ಎಚ್ಚರಿಕೆ ವಹಿಸಿ ಯಾರೊಡನೆಯೂ ಪ್ರಸ್ತಾಪಿಸಿರಲಿಲ್ಲ. ಆದರೆ ಆದಕ್ಕೂ ದಿನ ದೂರವಿರಲಿಲ್ಲ.

ಅಂದು ಪವಿತ್ರ ಶೂಟಿಂಗಿಗೆ ಹೊರಡುವಾಗ ವಿಪರೀತ ಸುಸ್ತಾಗಿದ್ದಳು. ಅದನ್ನು ವಸಂತ ಗಮನಿಸಿದ್ದ. ಅವಳನ್ನು ನೆರಳಂತೆ ಹಿಂಬಾಲಿಸಿದ್ದ. ಮಧ್ಯಾಹ್ನ ಅದೇಕೋ ಮೈ ಸರಿಯಿಲ್ಲವೆಂದು ಹೇಳಿ ಪವಿತ್ರ ಶೂಟಿಂಗ್ ಅರ್ಧದಲ್ಲೇ ಬಿಟ್ಟು ಬಂದಾಗ ವಸಂತ್ ತಳಮಳಿಸಿದ್ದ. ಅದನ್ನೇ

ಕಣ್ಣಲ್ಲಿ ಕಣ್ಣಿಟ್ಟು ಗಮನಿಸುತ್ತಿದ್ದ ಲಲ್ಲಿ ಕಿಡಿಕಿಡಿಯಾದಳು.

'ಯಾಕ್ರೀ ಹಾಗೆ ಅವಳ ಹಿಂದೆ ತಿರಗ್ತೀರಿ. ನಂಗ್ಯಾಕೋ ಅನುಮಾನ ಅವ್ಳ ಹೊಟ್ಟೇಲಿರೋದು ಧನಂಜಯರದ್ದೋ, ನಿಮ್ದೋಂತ' ಎಂದಾಗ ವಸಂತ್ ಅಲ್ಲಿಯವರೆಗೆ ಸಹನೆಯಿಂದಿದ್ದವನು ತಾಳ್ಮೆಗೆಟ್ಟ. 'ನನ್ನ ಕಂಡ್ರೆ ಅಷ್ಟಕ್ಕಷ್ಟೆ.'

'ಮುಚ್ಚು ಬಾಯಿ. ತಿನ್ನೋದು ಅವಳೆಂಜಲು, ಅವಳ ಮೇಲೆ ಇಲ್ಲದ್ದು ಸಲ್ಲದ್ದು ಮಾತಾಡ್ತೀಯಾ' ಎಂದವನೇ ನಾಲ್ಕು ಬಾರಿಸಿಬಿಟ್ಟ.

ಸರಿ ಮನೆಯಲ್ಲಿ ಒಂದೇ ಗಲಾಟೆ, ಮಾಲತಮ್ಮ ವಸಂತ್‌ನನ್ನೇ ಗದರಿದರು. 'ಇವ್ಳು ಬಸರಿ ಹುಡುಗಿ. ಇವಳ ಮೇಲೆ ಕೈ ಮಾಡ್ತೀಯಲ್ಲ. ಏನಾದರೂ ಹೆಚ್ಚು ಕಡಿಮೆಯಾದ್ರೆ ! ಇದೆಲ್ಲಾ ಚೆನ್ನಾಗಿರೋಲ್ಲ.' ಲಲ್ಲಿ ಹೋ ಎಂದು ಅತ್ತಳು.

'ಪಾಪೂ ಪ್ರಿಯಕರನ್ನ ನನ್ನ ಕತ್ತಿಗೆ ಕಟ್ಟಿದ್ರಲ್ಲ. ಈಗ್ನೋಡು ನನ್ನ ಪಾಡು. ನನ್ನ ಮಗೂ ಮೇಲೆ ಪ್ರೀತಿ ಇಲ್ಲ. ಅವ್ಳಂದ್ರೆ ಹೇಗೆ ಸಾಯ್ತಾರೆ. ನೋಡ್ತಾ ಇರು ನಾಳೆಯಿಂದ ಅವಳ ಹತ್ರ ಮಲ್ಗೋಕೂ ಹೋಗ್ತಾರೆ.'

ಶ್ಯಾಮ್ ಬಂದು ತಡೆದ.

'ಮನೆ ನರಕವಾಗಿ ಹೋಯ್ತು. ಹೇಗಿದ್ರೂ ಮುಂದಿನ ವಾರ ನಾವು ಹೊರಟುಹೋಗ್ತಾ ಇದ್ದೀವಿ. ಪಾಪ, ಪುಟ್ಟ ಕಿಟ್ಟು ಇನ್ನೂ ಏನೇನು ಕಾಣ್ಬೇಕೋ.'

ಪವಿತ್ರ ಎಲ್ಲಾ ಕೇಳಿಸಿಕೊಂಡಿದ್ದಳು. ಮಾತನಾಡಲು ಅವಳಿಗೆ ಕೈಲಾಗಲಿಲ್ಲ. ದಿಂಬಿನಲ್ಲಿ ಮುಖ ಮರೆಸಿ ಅತ್ತಳು. ಅಯ್ಯೋ ದೇವರೇ, ನನ್ನ ಪಾಡು ಹೇಗಿದೆ ನೋಡು. ಎಲ್ಲರೂ ನಾನು ಮಜವಾಗಿದ್ದೇನೆ. ಮನೆಯಲ್ಲಿ ಅಕ್ಕ, ಅಣ್ಣ, ತಾಯಿ ಎಲ್ಲಾ ನನ್ನ ನೋಡ್ಕೋತಾರೆ ಅಂದ್ಕೊಂಡಿದ್ದಾರೆ. ನಾನು ಎಲ್ಲರಿದ್ದೂ ಎಲ್ಲವಿದ್ದೂ ಅನಾಥೆ.

ಹೇಗಾದರೂ ಮಾಡಿ ವಸಂತ್, ಲಲ್ಲಿಯನ್ನು ಬೇರೆ ಕಳುಹಿಸ ಬೇಕೆಂದುಕೊಂಡಳು. ತನ್ನ ಉಬ್ಬಿದ ಹೊಟ್ಟೆಯ ಮೇಲೆ ಕೈಯಾಡಿಸಿ ಕೊಂಡಳು. ಅದಕ್ಕೆ ತಕ್ಕ ಸಂದರ್ಭ ಬಂದಿತ್ತು. 'ಬಲಿ' ಚಿತ್ರಕ್ಕೆ ಅಖಿಲ ಭಾರತದ ಸ್ವರ್ಣ ಪದಕ, ದಶಕದ ಅತ್ಯುತ್ತಮ ಚಿತ್ರವೆಂದು ಚುನಾಯಿಸಿದ ಮಾರನೆಯ ದಿನವೇ ಅವಳಿಗೆ ಗುಟ್ಟಾಗಿ ತಿಳಿದುಬಂದಿತ್ತು. ಅವಳಿಗೆ ಅತ್ಯುತ್ತಮ ನಟಿಯೆಂದೂ, ವಸಂತ್‌ಗೆ ಅತ್ಯುತ್ತಮ ಕತೆ, ಚಿತ್ರಕತೆಗೆ,

ಧನಂಜಯರಿಗೆ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿ ಬಂದಿರುವುದೆಂದು ತಿಳಿದಿತ್ತು. ಆದರೆ ಪತ್ರಿಕೆಯಲ್ಲಿ ಬರುವವರೆಗೆ, ರೇಡಿಯೋ ಸುದ್ದಿಯಲ್ಲಿ ಬರುವವರೆಗೆ ಸುಮ್ಮನಿರಬೇಕೆಂದುಕೊಂಡಳು. ಅವಳಿಗೆ ಒಳಗೇ ಸಂತಸ. ರೀಟಾಳಿಗೆ ಹೇಳಿ ಸಂತಸದಿಂದ ಓಲಾಡಿದ್ದಳು. ಇವೊತ್ತು ಅವರಿದ್ದರೆ ಎಷ್ಟು ಸಂತಸಪಡುತ್ತಿದ್ದರು.

ಎರಡು ದಿನಗಳ ನಂತರ ಸುದ್ದಿ ಪ್ರಕಟವಾದಾಗ ಪವಿತ್ರ ಬಿಕ್ಕಿ ಬಿಕ್ಕಿ ಅತ್ತು ಬಿಟ್ಟಳು. ಸಂತಸದಿಂದಲೋ ದುಃಖದಿಂದಲೋ ತಿಳಿಯುಲಿಲ್ಲ ಮಾಲತಮ್ಮನನ್ನಂತೂ ಹಿಡಿಯುವವರೇ ಇರಲಿಲ್ಲ ಮನೆಗೆ ಅಭಿನಂದನೆ ಸಲ್ಲಿಸಲು ಬಂದ ಜನಜಂಗುಳಿ ಕಂಡು ಹಿರಿಹಿರಿ ಹಿಗ್ಗಿದರು. ಪತ್ರಿಕಾ ಪ್ರತಿನಿಧಿಗಳು ಪವಿತ್ರಳ ಸಂದರ್ಶನಕ್ಕಾಗಿ ಕಾದು ನಿಂತಿದ್ದರು ಎಲ್ಲಾ ಭಾವಾವೇಶದಿಂದ ಮಾಡಿಬಿಡುವಳೆಂದು ಮಾಲತಮ್ಮ ಎಚ್ಚರಿಕೆ ವಹಿಸಿದ್ದರು. ವಸಂತ್‌ಗೆ ಸಂತಸವಾದರೂ ಬಹಳ ಗಂಭೀರವಾಗಿದ್ದ. ತನ್ನ ಕಥೆಗೆ, ಚಿತ್ರಕತೆಗೆ ಒರಬೇಕಾದ್ದಲ್ಲಿ ತಾನೊಬ್ಬನೇ ಅದಕ್ಕೆ ಕಾರಣನಲ್ಲವೆಂದು ಅವನಿಗರಿವಾಗಿತ್ತು. ಇನ್ನೊಬ್ಬರ ಬೆಳಕಿನಲ್ಲಿ ಮಿನಗುವ ಗ್ರಹ ತಾನು . .

ಆದರೆ ಲಲ್ಲಿಗೆ ಸಂತಸ. 'ನೋಡಿ ನನ್ನ ಕೈಹಿಡಿದ ಅದೃಷ್ಟ ಹೇಗಿದೇಂತ. ಇನ್ನು ನೋಡ್ತಾ ಇರಿ. ನಿಮಗೋಸ್ಕರ ಎಷ್ಟು ಜನ ಡೈರೆಕ್ಟರ್ಸ್, ಪ್ರೊಡ್ಯೂಸರ್ಸ್ ಬರ್ತಾರೇಂತ' ಎಂದು ಹಿಗ್ಗಿದ್ದಳು.

ಪವಿತ್ರಳನ್ನು ತಮ್ಮ ಚಿತ್ರಗಳಿಗೆ ಬುಕ್ ಮಾಡಿಕೊಳ್ಳಲು ನಿರ್ಮಾಪಕರ ಗುಂಪೇ ಬಂದಾಗ ಮಾಲತಮ್ಮ ತಾವೇ ಖುದ್ದಾಗಿ ನಿಂತು ಎಷ್ಟು ಹೇಗೆ ವಸೂಲು ಮಾಡಿಕೊಳ್ಳಬೇಕೋ ಅಷ್ಟು ವಸೂಲು ಮಾಡಿಕೊಂಡು ಒಳಗಿಟ್ಟು ಬೀಗ ಹಾಕಿದರು.

'ಅಮ್ಮಾ ದುರಾಸೆ ಬೇಡಾ. ಅಷ್ಟು ಮಾಡೋಕೆ ನನ್ನ ಕೈಲಾಗೋಲ್ಲ' ಪವಿತ್ರ ಸಂಕಟದಿಂದ ಹೇಳಿದಾಗ ಮಾಲತಮ್ಮ ಅವಳನ್ನೇ ಗದರಿದ್ದರು.

'ಮನೆಗೆ ಬಂದ ಮಹಾಲಕ್ಷ್ಮೀನ್ನ ಹಾಗೆ ಅಟ್ಟಕ್ಕಾಗುತ್ತಾ ? ಕಾಲ್ ಶೀಟ್ಸ್ ಕೊಡಬೇಕಾದಿ ನಿಂಗೆ ತೊಂದರೆಯಾಗದ ಹಾಗೆ ಕೊಟ್ಟರಾಯ್ತು. ಆಮೇಲೆ ನಿಂಗೆ ಚಿತ್ರಗಳೇ ಬರುತ್ತೋ ಇಲ್ವೋ ? ಅಗ್ಲೇ ನಿಂಗೆ ವೈ ಬರ್ತಾ ಇದೆ ? ಒಳ್ಳೆ ಮೇಲೆ ಏರೋಹೊತ್ನಲ್ಲಿ ಈ ಪ್ರಾರಬ್ಧ ಬೇರೆ ನಿಂಗೆ' ಮಾಲತಮ್ಮ ಹೇಳಿದಾಗ ಪವಿತ್ರ ಕಿಡಿಕಿಡಿಯಾದಳು.

'ನೀನು ಎಷ್ಟು ಬೇಕೋ ಅಷ್ಟು ತೊಗೋಮ್ಮಾ. ನನ್ನೇನಾದ್ರೂ ಅನ್ನು. ಆದ್ರೆ ನನ್ನ ಹೊಟ್ಟೇಲಿರೋ ಮಗೂನ್ನ ಹಾಗನ್ನಬೇಡಾ. ಅದು ಯಾವ ತಪ್ಪೂ ಮಾಡಿಲ್ಲ. ನಾನು ಎಡವಿದ್ದು, ಅವರು ಎಡವಿದ್ದು ನೀವೆಲ್ಲಾ ಸೇರಿ ನನ್ನನ್ನು ಪಾಪಕೂಪಕ್ಕೆ ತಳ್ಳಿದ್ದು, ಮಗೂಗೆ ಏನೂ ತಿಳಿಯದು. ಅದನ್ನೇನಾದರೂ ಅಂದರೆ ನಾನು ಸುಮ್ಮನಿರೋಲ್ಲ.'

'ಬಲಿ'ಯ ಪ್ರಶಸ್ತಿಗಳು ಪವಿತ್ರಳಿಗೆ ನೂರು ಪಟ್ಟು ತಾರಾ ಮೌಲ್ಯ ಹೆಚ್ಚಿಸಿತ್ತು. ವಸಂತನಿಗೊಂದು ಭವಿಷ್ಯ ಮಾಡಿಕೊಟ್ಟಿತ್ತು. ಆಗಲೇ ಮೂರು ನಾಲ್ಕು ನಿರ್ದೇಶಕರು ಅವನನ್ನು ಕಂಡು ಮಾತಾಡಿದ್ದರು. ಇದೇ ಸಮಯವೆಂದು ವಸಂತ್‌ನನ್ನು ಕರೆದು ಪವಿತ್ರ ಹೇಳಿಬಿಟ್ಟಳು.

'ವಸಂತ್, ನೀವು ಬೇರೆ ಹೋಗುವುದು ಮೇಲು. ನಾನು ಅಲ್ಲಿಯ ಮಾತು ತಡೆಯಲಾರೆ ಹೇಗಿದ್ದರೂ ನಿಮಗೆ ಹೆಸರಿದೆ. ನಿಮ್ಮ ನೆರಳಲ್ಲಿ ಬಾಳುವ ಅವಕಾಶ ಅವಳಿಗಿರಬಹುದು? ದಯವಿಟ್ಟು ತಪ್ಪು ತಿಳಿದುಕೊಳ್ಳಬೇಡಿ.' ಅವನು ತಳಮಳಿಸಿದ.

'ನಾನು ಅದೇ ಯೋಚಿಸುತ್ತಿದ್ದೆ ಪವಿತ್ರ. ಆದರೆ ಈ ಹೊತ್ತಿನಲ್ಲಿ ನಿಮ್ಮನ್ನು ನಿಮ್ಮ ತಾಯಿಯ ಕೈಗೊಪ್ಪಿಸಿ ಹೋಗಲು ನನಗೇಕೋ ಭಯ ನನಗೇಕೋ ಹೋಗಲೇ ಮನಸ್ಸಿಲ್ಲ. ನನ್ನ ಪಾಡಿಗೆ ನಾನು ನಿನ್ನ ಆರಾಧಕನಾಗಿರುತ್ತಿದ್ದೆ. ಆದರೆ ನೀವೆಲ್ಲಾ ನನ್ನ ತಲೆಗೆ ಕಟ್ಟಿದಿರಲ್ಲ. ನಾಯಿಗಿಂತ ಕಡೆ ನಿನ್ನ ಅಕ್ಕಂದಿರು, ಅಣ್ಣಂದಿರು ಎಂಜಲನ್ನ ಹಿಡಿ ಹಾಕಿದರೂ ನಾಯಿಗಳೂ ಸ್ಮರಿಸುತ್ತವೆ. ಇವರೆಲ್ಲರೂ ಅದಕ್ಕಿಂತ ಕೀಳು ಅವಳ ಬಾಣಂತನ ಮುಗಿಯಲಿ ಆಗ ಹೋಗ್ತೀನಿ. ಅಷ್ಟೊತ್ತಿಗೆ ನಿಂದೂ ಎಲ್ಲಾ ಮುಗಿದಿರುತ್ತೆ.'

'ವಸಂತ್ ದಯವಿಟ್ಟು ನಾನೂ, ಅವಳೂ ಒಂದೇ ಸೂರಿನ ಕೆಳಗಿರುವುದು ಸರಿಯಲ್ಲ. ಅವಳಿಗೂ ಈಗ ಬಯಕೆ ಸಂಕಟ. ಬಾಣಂತನಕ್ಕಾಗಿ ಅವಳು ಇಲ್ಲಿಗೆ ಬರುವುದೂ ಬೇಡಾ ಅಮ್ಮನೇ ಒಂದು ನಿಮ್ಮ ಮನೆಯಲ್ಲಿರುವಂತೆ ನಾನು ಹೇಳುತ್ತೇನೆ' ಪವಿತ್ರಾ ಹೇಳಿದಾಗ ವಸಂತ್ ದಿಕ್ಕೆಟ್ಟ.

'ನಿನ್ನನ್ನು ಬಿಟ್ಟು ನಾನಿರಲಾರೆ ಪವಿತ್ರ ದಿನಕ್ಕೊಂದು ಬಾರಿಯಾದರೂ ನಿನ್ನ ದರ್ಶನ ಮಾಡಬೇಕು. ನಿನ್ನ ಮುಖ ನೋಡಬೇಕು. ನಾಲ್ಕು ಮಾತಾಡಬೇಕು. ಇಲ್ಲದಿದ್ದರೆ ನನಗೆ ಬದುಕುವುದೇ ಕಷ್ಟ. ನನ್ನ

ಬರವಣಿಗೆಗೆ ನೀನೇ ಸ್ಫೂರ್ತಿ. ಅದು ಪೂರ ನಿಂತುಹೋಗುತ್ತೆ.'

'ಬೇರೆ ಮನೆ ಮಾಡಿಕೊಳ್ಳಿ ಎಂದರೆ ನೀವು ನನ್ನ ಬಂದು ನೋಡ ಬೇಡಿ, ಮಾತಾಡಬೇಡಿ ಎನ್ನಲಿಲ್ಲ. ನೀವು ಯಾವಾಗ ಬೇಕಾದರೂ ಈ ಮನೆಗೆ ಬರಬಹುದು ಏನು ಬೇಕಾದರೂ ಮಾತಾಡಬಹುದು. ಈಗ ನನಗೆ ಈ ಮನೆಯಲ್ಲಿ ಮನಶ್ಶಾಂತಿ, ಏಕಾಂತತೆ ಬೇಕು. ನಾನು ಹೇಳಿದೆನೆಂದು ಅಮ್ಮನಿಗೆ ಹೇಳಬೇಡಿ. ನಿಮ್ಮಿಂದಲೇ ಎಲ್ಲಾ ಮಾತು ಬಂದಂತೆ ಮಾಡಿ ನನಗುಪಕಾರ ಮಾಡಿ. ಕೈಮುಗಿದು ಬೇಡಿಕೊಳ್ಳುತ್ತೇನೆ.'

ವಸಂತ್ ಲಲ್ಲಿಯನ್ನು ಬೇರೆ ಮನೆಗೆ ಕರೆದೊಯ್ಯುವ ಸಮಾಚಾರ ಕೇಳಿ ಮಾಲತಮ್ಮ ಹೌಹಾರಿದರು.

'ಅಯ್ಯೋ ಬಸರಿ ಹುಡ್ಗಿ. ಎಲ್ರೂ ತಾಯಿ ಮನೇಗೆ ಬರ್ತಾರೆ. ನೀನು ಕರ್ಕೊಂಡು ಹೋಗ್ತೀಯಲ್ಲಾ.'

'ಮನೇಲಿರೋ, ಮಗಳನ್ನ ಕಾಪಾಡಿಕೊಳ್ಳಿ. ಇವ್ಳನ್ನ ನಾನು ನೋಡ್ಕೋತೀನಿ' ಎಂದುಬಿಟ್ಟ.

'ಎಲ್ರೂ ಹಾಗೇ. ನಮ್ಮನೇಲಿ ಹೆಸ್ರು, ಹಣ ಮಾಡ್ಕೊಳ್ಳೋದೂ ಆಮೇಲೆ ಜಾರಿಹೋಗೋದು' ಮಾಲತಮ್ಮ ಹೇಳಿದಾಗ ವಸಂತ್ ನಕ್ಕ.

'ನಾನೊಬ್ಬನೇ ಅಲ್ಲವಲ್ಲ.'

ವಸಂತ್ ದೂರ ಹೋದ ಮೇಲೆ ಪವಿತ್ರಳಿಗೇಕೋ ತಾನು ಒಂಟಿ ಎನ್ನುವ ಮನೋಭಾವನೆ ಬಂದುಬಿಟ್ಟಿತ್ತು. ಅವನು ಸೆಟ್ಸ್‌ನಲ್ಲಿ ಬಂದು ಮಾತಾಡುತ್ತಿದ್ದ. ವಿಚಾರಿಸಿಕೊಳ್ಳುತ್ತಿದ್ದ. ಅದರೂ ಏನೋ ಕಳೆದು ಕೊಂಡ ಅನುಭವ ಪವಿತ್ರಳಿಗೆ.

ಒಳಗಿನ ಮಗು ಬೆಳೆದಂತೆ ಅದರ ಬಗ್ಗೆ ಕನಸು ಕಟ್ಟಿಕೊಳ್ಳುವುದು ಪವಿತ್ರಳಿಗೊಂದು ಮೆಚ್ಚಿನ ಹವ್ಯಾಸವಾಯಿತು. ಶೂಟಿಂಗಿಗೆ ಮುಂಚೆ ಬಿಗಿಯಾಗಿ ಹೊಟ್ಟೆ ಬಿಗಿದಾಗ ಒಳಗೆ ಮಗು ಎಷ್ಟು ಸಂಕಟ ಪಡುವುದೋ ಎಂದು ಮಮ್ಮಲ ಮರಗುತ್ತಿದ್ದಳು. ತನಗೆ ತಾಯ್ತನವೊಂದು ಶಾಪವಾಯಿ ತಲ್ಲಾ. ಅದೇ ಲಲ್ಲಿಗೆ, ರೋಜಿಗೆ ಪುಣ್ಯವಾಗಿತ್ತು. ನಾಳೆ ತನ್ನ ಮಗುವನ್ನು ಹೇಗೆ ಆದರಿಸುವರೋ. ಅದರ ಬಾಳು ದುರ್ಭರವಾಗಬಾರದು. ಅದ ಕ್ಕೊಂದು ಮಾರ್ಗ ಹುಡುಕಲೇಬೇಕು. ಇವರ ನೆರಳಲ್ಲಿ ಮಾತ್ರ ಬಿಡ ಬಾರದು. ಮನಸ್ಸಿನಲ್ಲಿ ಆಗಲೇ ನಿರ್ಧಾರ ಕೈಗೊಂಡಿದ್ದಳು.

ಆರು ತಿಂಗಳು ತುಂಬುವವರೆಗೂ ಅವಳಿಗೆ ಅಷ್ಟು ತೊಂದರೆಯಾಗ

ಲಿಲ್ಲ. ಆದರೆ ಅನಂತರ ಹೊಟ್ಟೆಗೆ ಬಿಗಿಯಾಗಿ ಬೈಂಡರ್ ಹಾಕಿ ಉಡುಪು ಧರಿಸುವಾಗ ಸಂಕಟಪಡುತ್ತಿದ್ದಳು. ಏದುಸಿರು ಬಿಡುತ್ತಿದ್ದಳು. ಮೇಕಪ್ ಬಳಿದುಕೊಂಡು ಬಹಳ ಹೊತ್ತು ಕುಳಿತಿರಲೂ ಆಗುತ್ತಿರಲಿಲ್ಲ. ಮಗು ಒಳಗೇ ಆಡಿದಾಗ ಒದ್ದಾಡುತ್ತಿದ್ದಳು. ರೀಟಾಳ ಬಳಿ ಬೇಡುತ್ತಿದ್ದಳು.

'ರೀಟಾ, ಬಿಗಿಯಾಗಿ ಕಟ್ಟಬೇಡ ನನಗೆ ಸಂಕಟ ತಡೆಯಲಾಗುವುದಿಲ್ಲ.'

'ಎಲ್ಲರಿಗೂ ನೋಡಿದ್ರೇ ಅನುಮಾನ ಬರ್ತಾ ಇದೆ. ಇನ್ನೊಂದು ತಿಂಗಳು ತಡೆದುಕೊಳ್ಳಿ. ಆಮೇಲೆ ಹೇಗಿದ್ದರೂ ಮಳೆಗಾಲ ಅಷ್ಟು ಚಿತ್ರಗಳೂ ಇಲ್ಲ.'

ಆದರೆ ಅಲ್ಲಿಯವರೆಗೆ ಹೇಗೆ ತಡೆದುಕೊಳ್ಳಲಿ? ಪವಿತ್ರ ಬಸವಳಿಯುತ್ತಿದ್ದಳು

ಅವಳಿಗೆ ಆತ್ಮೀಯರಾಗಿದ್ದ ಕೆಲವು ನಿರ್ದೇಶಕರು ಅವಳ ಸ್ಥಿತಿಯನ್ನರಿತಿದ್ದರೂ ಗುಟ್ಟು ಬಯಲು ಮಾಡದೇ ಅವಳಿಗೆ ತೊಂದರೆಯಾಗದಂತೆ ನಡೆಸಿಕೊಳ್ಳುತ್ತಿದ್ದರು. ಸುರೇಂದ್ರ, ಸುಶೀಲ್‌ಕುಮಾರ್, ಸರ್ವೋತ್ತಮ್ ಅವಳಿಗೆ ಹೇಳಿದರು

'ನಾಲ್ಕು ತಿಂಗಳು ಫಾರಿನ್ ಟೂರ್ ಅಂತ ಹೇಳಿ ಹೊರಟುಹೋಗಿ ನೀವು ಬರುವವರೆಗೆ ಕಾಯಲಿ'

'ಆದರೆ ನಾಲತ್ನಮ್ಮನದೇ ಬೇರೆ ವಾದ.

'ನಾಲ್ಕು ತಿಂಗಳು ಹೊರಟುಹೋದರೆ ಬೇರೆಯವರ್ನಾದ್ರೂ ಹಾಕ್ಕೊಳ್ತಾರೆ. ಈಗೇನು ಎಷ್ಟು ಜನ ಬರ್ತಾ ಇದ್ದಾರೆ. ಯಾರಾದ್ರೂ ನಿನಗಿಂತ ಚೆನ್ನಾಗಿರೋಳು ಬಂದ್ರೆ ನಿನ್ನ ಕೈ ಬಿಡ್ತಾರೆ. ಏನೂ ಬೇಡಾ, ಆಗೋತನ್ಕ ಮಾಡಿ ಬಿಡು ಆಮೇಲೆ ದೇವರಿದ್ದಾನೆ.'

ಅವಳ ಹೊಟ್ಟೆಯಲ್ಲಿದ್ದ ಮಗುವಿನಿಂದ ಅವಳ ಮೇಲಿದ್ದ ಮಮಕಾರವೂ ಕಡಿಮೆಯಾಗಿತ್ತು. ಅವನ ಮೇಲಿನ ತಾತ್ಸಾರದಿಂದ ಪವಿತ್ರಳ ಬಗ್ಗೆಯೇ ಅನಾದರ ಮೂಡಿತ್ತು.

ಏಳು ತಿಂಗಳು ತುಂಬಿದ ಮೇಲೆ ಅವಳಿಗೆ ಶೂಟಿಂಗ್‌ಗೆ ಬರುವುದೇ ಕಷ್ಟವಾಗ ತೊಡಗಿದಾಗ ಕೆಲವು ಕಾಲ್ ಶೀಟ್‌ಗಳನ್ನು ವಸಂತನೇ ನಿಂತು ಕ್ಯಾನ್ಸಲ್ ಮಾಡಿದ್ದ.

'ಅವರಿಗೆ ಈಚೆಗೆ ಮೈ ಸರಿಯಾಗಿಲ್ಲ. ಅವರ ಕೈಲಾಗುವುದಿಲ್ಲ.'

ನಿರ್ದೇಶಕರು, ನಿರ್ಮಾಪಕರು ಕೆಲವರು ರೇಗಿದ್ದರು.

'ಬೇಡಾ ಬಿಡ್ರಿ, ಬೇರೆಯವರ್ನ ಹಾಕ್ಕೋತೀವಿ.' ಮತ್ತೆ ಕೆಲವರು ಒಪ್ಪಿದರು.

'ನಾವು ಕಾಯುತ್ತೇವೆ. ಅವರೇ ಬಂದು ಮಾಡಲಿ.'

ಪವಿತ್ರ ತಾನೇ ಸುಶೀಲಮ್ಮನ ಮನೆಗೆ ಹೋಗಿ ಆಗಾಗ ಮಾತಾಡಿಸಿಕೊಂಡು ಬರುತ್ತಿದ್ದಳು. ವೀರಪ್ಪ ಅವರಿವರೊಡನೆ ವ್ಯವಹರಿಸಿ ಧನಂಜಯರಿಗೆ ಬರಬೇಕಾಗಿದ್ದ ಹಣ ಸಂಗ್ರಹಿಸಿ ತಂದಿತ್ತಿದ್ದರಿಂದ ಅವರ ಸ್ಥಿತಿಯೂ ಸುಧಾರಿಸಿತ್ತು. 'ಬಲೀ' ಚಿತ್ರದ ಪ್ರಶಸ್ತಿಯಿಂದ ಅವರಿಗೊಂದು ಬದುಕಿನಲ್ಲಿ ನಂಬಿಕೆ ಮೂಡಿತ್ತು. ಪವಿತ್ರ ಮೈಮುರಿದು, ಬಿಡುವಿಲ್ಲದೇ ದುಡಿಯುವುದು ಕಂಡು ಮಮ್ಮಲ ಮರುಗಿದ್ದರು.

'ಈ ಹೊತ್ತಿನಲ್ಲಿ ತುಂಬಾ ವಿಶ್ರಾಂತಿ ಬೇಕು. ಯಾಕಿಷ್ಟು ಒಪ್ಪಿಕೊಂಡಿದ್ದೀ? ಅವರ ಮುಂದೆ ತಾಯಿಯನ್ನು ಬಿಟ್ಟುಕೊಡೋಕೇ ಇಷ್ಟವಿಲ್ಲದೇ ಹೇಳಿದ್ದಳು.

'ಏನು ಮಾಡೋದು ಸುಶೀಲಕ್ಕ. ಮುಂಚೆಯೇ ಒಪ್ಪಿಕೊಂಡುಬಿಟ್ಟಿದ್ದೆ. ಮುಗಿಸದಿದ್ದರೆ ಪಾಪ ನಿರ್ಮಾಪಕರಿಗೆ, ನಿರ್ದೇಶಕರಿಗೆ ತೊಂದರೆಯಾಗುತ್ತೆ. ನಮ್ಮಿಂದ ಅವರಿಗೆ ತೊಂದರೆಯಾಗಬಾರದು.'

ಆದರೆ ಎಂಟು ತುಂಬುವ ಮುನ್ನವೇ ವಸಂತ್ ಅವಳನ್ನು ಎಲ್ಲೂ ಹೋಗಕೂಡದೆಂದು ಕೇಳಿಕೊಂಡ. ಹೆಂಡತಿಯ ಬಗ್ಗೆ ಅವನಿಗೆ ಯೋಚನೆಯೇ ಇರಲಿಲ್ಲ. ಹಟಮಾಡಿ ಪತ್ರಿಕೆಗಳಲ್ಲಿ ಅವಳಿಗೆ ಮೈ ಸ್ವಾಸ್ಥ್ಯವಿಲ್ಲವೆಂದು ಹಬ್ಬಿಸಿದ. ಆದಕ್ಕೆ ತಕ್ಕಂತೆ ಒಂದು ದಿನ ಕೆಲವು ಸನ್ನಿವೇಶಗಳ ಹೊರಾಂಗಣ ಚಿತ್ರೀಕರಣದಲ್ಲಿ ಬಿಸಿಲಿನಲ್ಲಿ ಬಸವಳಿದು ಸುಸ್ತಿನಿಂದ ಪ್ರಜ್ಞೆ ತಪ್ಪಿದ್ದರಿಂದ ಅವನ ಕಾರಣ ಬಲವಾಯಿತು.

ಮಾಲತಮ್ಮ ಅವನ ಉದ್ಧಟತನವನ್ನು ಕಂಡು ಮನಸ್ಸಿಗೆ ಬಂದಂತೆ ಅಂದರು.

'ಅವಳ ಅಣ್ಣಂದಿರು, ಅಕ್ಕಂದಿರು, ಕೊನೆಗೆ ನೀವು ಈ ಸಮಯದಲ್ಲಿ ನೆರವು ನೀಡದಿದ್ದರೆ ಆದರಿಸದಿದ್ದರೆ ನಾನೂ ಮಾಡದಿರುವುದಕ್ಕಾಗುತ್ತದೆಯೇ? ಅವಳ ಉಪ್ಪು ತಿಂದಿದ್ದೇನೆ. ಆದಕ್ಕೆ ಮಾಡುತ್ತೇನೆ' ಎಂದು ಹೇಳಿದ.

ಮದ್ರಾಸಿನಲ್ಲಿ ತನಗೆ ತಿಳಿದಿದ್ದ ಸ್ನೇಹಿತನಿಗೆ ಬರೆದು ಪವಿತ್ರ ಇಳಿದು

ಕೊಳ್ಳಲು ಸಣ್ಣ ಮನೆಯೊಂದನ್ನು ಗೊತ್ತು ಮಾಡಿದ ಪ್ರೈವೇಟ್ ನರ್ಸಿಂಗ್ ಹೋಂ ಒಂದರಲ್ಲಿ ಬೇರೆ ಹೆಸರಿನಲ್ಲಿ ಒಂದು ಬೆಡ್ ಬುಕ್ ಮಾಡಿದ. ಅನಂತರ ಪವಿತ್ರಳನ್ನು ಮದ್ರಾಸಿಗೆ ಕರೆದೊಯ್ಯಲು ತಯಾರಿ ನಡೆಸಿದಾಗ ಮಾಲತಮ್ಮ ರೋಷದಿಂದ ಕೂಗಾಡಿದರು.

'ನಾವೇನು ಸತ್ತು ಹೋಗಿದ್ದೇವಾ? ಅದ್ಯಾಕೆ ನಮಗೊಂದು ಮಾತೂ ತಿಳಿಸ್ದೇ ಮಾಡ್ದೀ? ನೀನೇ ಸಾಕ್ಷೀಯೇನು ಮಗೂನ್ನ, ಲಲ್ಲಿ ಹೇಳುವ ಹಾಗೆ ಎಲ್ಲೋ ಸಂದೀ ಇಡಬೇಕು ಮಗು.'

ವಸಂತ್ ಕಿಡಿಕಿಡಿಯಾದ.

'ನಾಲಿಗೆ ಬಿಗಿ ಹಿಡಿದು ಮಾತಾಡಿ. ನಿಮ್ಮ ಸುಖ ಸಂತೋಷಕ್ಕೆ ಅಂತಹ ಮುದ್ದಾದ, ಒಳ್ಳೆಯ ಮಗಳನ್ನು ಬಲಿಪೀಠದಲ್ಲಿಟ್ಟಾಯಿತು. ಈಗ ತಲೆ ಕತ್ತರಿಸಿ ಬಲಿಕೊಟ್ಟುಬಿಡಿ. ನೀವು ಮಾಡಿರುವ ಅತ್ಯಾಚಾರ, ಪಾಪ ದಂತೆ ನಾನು, ಪವಿತ್ರ ಏನೂ ಮಾಡಿಲ್ಲ. ನಿಮ್ಮ ಕೈಯ್ಯಲ್ಲಿ ಸಿಕ್ಕಿ ಪಡಬಾರದ ಕಷ್ಟ ಅನುಭವಿಸುತ್ತಿರುವವರು ನಾವು.'

ಮಾಲತಮ್ಮ ಒಲ್ಲದ ಮನಸ್ಸಿನಿಂದಲೇ ಮದ್ರಾಸಿಗೆ ತೆರಳಿದರೂ, ಅವರಿಗೆ ಮುಂಚೆಯೇ ಸುಶೀಲಮ್ಮ ಬಂದಿದ್ದರು. ಒಂಭತ್ತು ತಿಂಗಳು ತುಂಬುತ್ತಲೇ ಮುಂಚೆಯೇ ನಿಗದಿಪಡಿಸಿದ್ದಂತೆ ಪವಿತ್ರಳನ್ನು ನರ್ಸಿಂಗ್ ಹೋಂಗೆ ಸೇರಿಸಲು ಒಪ್ಪಿಕೊಂಡಿದ್ದರು. ಆದರೆ ಡಾಕ್ಟರ್ ಒಂದು ವಾರ ತಡೆಯುವುದು ವಾಸಿಯೆಂದಾಗ ಮಾಲತಮ್ಮ ಲಲ್ಲಿಯನ್ನು ನೋಡಿಕೊಂಡು ಬರುವುದಾಗಿ ಹೇಳಿಹೋದರು. ಅವರಿಗೆ ಲಲ್ಲಿಗಿಂತಾ ಮನೆಯ ಸೇಫ್ ನಲ್ಲಿದ್ದ ಹಣ, ಒಡವೆ ವಸ್ತ್ರದ ಮೇಲಿತ್ತು ಗಮನ. ಯಾರಾದರೂ ಇನ್‌ಕಂ ಟ್ಯಾಕ್ಸ್‌ನವರು ಬಂದರೆ, ಯಾರಾದರೂ ಬಂದು ದರೋಡೆ ಮಾಡಿಬಿಟ್ಟರೆ ಎನ್ನುವ ಭಯ. ತಲುಪಿದ ಕೂಡಲೇ ತಾವು ರೀಟಾಳನ್ನು ತಮ್ಮ ಬದಲಾಗಿ ಕಳಿಸಿಕೊಟ್ಟರು 'ಅಮ್ಮನಿಗೆ ಲಲ್ಲಿಯನ್ನು ಬಿಟ್ಟುಬರುವುದಕ್ಕೆ ಆಗೋಲ್ಲವಂತೆ. ವಸಂತ್ ಕೂಡ ಇಲ್ದೇ ಅವಳ್ನ ಒಬ್ಬಳನ್ನೇ ಬಿಡೋಕೆ ಆಗೋಲ್ವಂತೇಂತ ಹೇಳು' ಎಂದು ಹೇಳಿ ಕಳಿಸಿದ್ದರು. ಅದನ್ನ ಕೇಳಿದ ಪವಿತ್ರ ನೋವಿನ ನಗೆ ನಕ್ಕಳಷ್ಟೆ. ತಾಯಿ ಬಾರದಿದ್ದುದೇ ಅವಳಿಗೆ ಹಿತ ವಾಗಿತ್ತು. ಇಂಡ್ಯೂಸ್ ಮಾಡುವ ಮುಂಚೆಯೇ ನೋವು ಬಂದಾಗ ವಸಂತ್ ದೇವಸ್ಥಾನವೊಂದಕ್ಕೆ ಹೋಗಿ ಹಣ್ಣುಕಾಯಿ ಮಾಡಿಸಿ ಪವಿತ್ರಳಿಗೆ ಸುಖಪ್ರಸವವಾಗಲೆಂದು ಬೇಡಿಕೊಂಡ. ಸುಶೀಲಮ್ಮ, ರೀಟಾ ಅವಳ

ಪಕ್ಕ ಬಿಟ್ಟು ಕದಲಲಿಲ್ಲ. ಅವಳು 'ಅಮ್ಮಾ' ಎಂದು ನರಳಿದಾಗ ರೀಟಾ ಕಂಬನಿ ತುಂಬಿದಳು.

'ಈ ಹೊತ್ತಿನಲ್ಲಿ ತಾಯೀನ್ನ ತುಂಬಾ ನೆನೆಸ್ಕೋತಾರೆ ಪಾಪ, ಇಲ್ಲಿಗೆ ಬಂದು ಹೆರಿಗೆ ಆಗೋವರ್ಗೂ ಇರ್ಬೋದಿತ್ತು' ಎಂದಾಗ ಸುಶೀಲಮ್ಮ ನಿಟ್ಟುಸಿರುಬಿಟ್ಟರು.

ಹೆಸರಾಂತ ತಾರೆ ತಾನು ಅಣ್ಣಂದಿರು, ತಾಯಿ, ಅಕ್ಕಂದಿರು, ಸ್ನೇಹಿತರು, ಬಂಧು–ಬಳಗ, ಅಭಿಮಾನಿಗಳುಳ್ಳ ತಾನು ಈಗ ಹೀಗೆ ಯಾರಿಗೂ ತಿಳಿಯದಂತೆ, ಇಲ್ಲಿ ಬಂದು ತನ್ನ ಮಗುವನ್ನು ಹೆರಬೇಕಾಯಿತೇ ? ತನ್ನ ಅಸಹಾಯಕ ಸ್ಥಿತಿ ಕಂಡು ಕಣ್ಣಲ್ಲಿ ನೀರು ತಂದುಕೊಂಡು ಸುಶೀಲಕ್ಕನ ಕೈಹಿಡಿದು ಹೇಳಿದಳು.

'ಅಕ್ಕಾ, ಎಲ್ರೂ ಸಿನಿಮಾ ತಾರೆ ಅಂದ್ರೆ ಏನೋ ಭವ್ಯವಾದ ಕನಸು ಕಟ್ಕೋತಾರೆ, ಆದ್ರೆ ಈಗ್ನೋಡಿ ನನ್ನ ಪಾಡು ಎಲ್ಲರೂ ಇದ್ದು ಯಾರೂ ಇಲ್ಲ.' ಸುಶೀಲಮ್ಮ ಅವಳ ಕಣ್ಣೊರೆಸಿದರು.

ಕೊನೆಗೇ ಎರಡು ದಿನಗಳ ನೋವು ತಿಂದು ಹೆಣ್ಣುಮಗುವೊಂದಕ್ಕೆ ಜನ್ಮ ನೀಡಿದಳು ಪವಿತ್ರ. ಮುದ್ದಾಗಿದ್ದ ಮಗು ನೋಡಿದ ಕ್ಷಣ ಅವಳು ತಾನು ಪಟ್ಟ ಕಷ್ಟ ಸಂಕಟ ನೋವು ಮರೆತಳು. ತನ್ನ ಪಕ್ಕದಲ್ಲಿ ಮುದ್ದಾಗಿ ಮಲಗಿದ್ದ ಮಗಳ ಕೆನ್ನೆ ತಲೆ ನೇವರಿಸಿ ಪುಟ್ಟ ಕೈಗಳನ್ನು ತುಟಿಗೊತ್ತಿಕೊಂಡಳು.

'ನನ್ನ ಕಂದಾ, ನನ್ನ ಬಂಗಾರ...'

ಸುಶೀಲಮ್ಮನಿಗಂತೂ ಹಿಡಿಸಲಾರದಷ್ಟು ಆನಂದ ಮಗುವನ್ನೆತ್ತಿಕೊಂಡು ಮುದ್ದಾಡಿದರು.

'ಎಲ್ಲಾ ಅವರ ಹಾಗೇ. ಆ ಮೂಗು, ಆ ಬಾಯಿ, ಕೂದಲು, ಅವರ ತದ್ರೂಪೇ.'

ಮಗುವನ್ನು ಎದೆಗೊತ್ತಿ ಹಿಡಿದಿದ್ದ ಅವರನ್ನು ನೋಡಿ ಪವಿತ್ರ ನಸುನಕ್ಕಳು.

'ಅಕ್ಕಾ ಅವಳು ನಿಮ್ಮ ಮಗಳು. ನೀವೇ ಅವಳನ್ನು ಸಾಕಬೇಕು, ಪಾಲಿಸಬೇಕು. ನಾನು ಬರೀ ಜನ್ಮ ಕೊಟ್ಟ ತಾಯಿ ಮಾತ್ರ. ನನಗೆ ಮಾತು ಕೊಡಿ ಸುಶೀಲಕ್ಕ ಈ ಮಗೂನ್ನ ನೀವೇ ಕಾಪಾಡ್ತೀನಂತ. ನನ್ನ ಬದುಕಿನಿಂದ ಅವಳು ದೂರವಿರಬೇಕು. ನಾನು ಅನುಭವಿಸಿದ್ದು ಸಾಕು.

ಅವಳಿಗೆ ಅದರ ಗಾಳಿಯೂ ಬೀಸಬಾರದು. ನನಗೆ ಭಾಷೆ ಕೊಡಿ ಅಕ್ಕಾ.'

ಸುಶೀಲಮ್ಮ ಅವಳ ಕೈ ಹಿಡಿದರು. 'ನನ್ನ ಭಾಷೆಯೇಕೆ ಪವಿತ್ರಾ. ಇವಳನ್ನು ಕಾಪಾಡುವುದು, ಸಾಕುವುದು ನನ್ನ ಕರ್ತವ್ಯ. ಇವಳು ನನ್ನ ಮಗಳೆಂದೇ ಹೇಳುತ್ತೇನೆ. ಸಾಕು ಮಗಳೆಂದೇ ಹೇಳುತ್ತೇನೆ. ನೀನು ನಿರ್ಯೋಚನೆಯಿಂದಿರು.'

'ಅಕ್ಕಾ, ನಾನು ಇನ್ನು ಐದಾರು ದಿನಗಳಿದ್ದು ಹಿಂತಿರುಗಿ ಹೋಗುತ್ತೇನೆ. ನಾನು ಇವಳಿಗಾಗಿ ದುಡಿಯಬೇಕು ಇವಳ ಭವಿಷ್ಯ ರೂಪಿಸುವುದಕ್ಕಾಗಿ ದುಡಿಯುತ್ತೇನೆ. ಇವಳಿಗಾಗಿ ನನ್ನ ಬದುಕು ಮುಡಿಪು. ಇವಳಿಗಾಗಿ ಒಂದು ದಿನ ಜಗತ್ತನ್ನೇ ಎದುರಿಸುತ್ತೇನೆ' ಪವಿತ್ರ ಮಗುವನ್ನು ಅಪ್ಪಿ ಮುದ್ದಾಡಿದಳು. 'ಬೆಳ್ಳಿತೆರೆಯ ಆಕರ್ಷಣೆ ನಿನಗೆ ಬೇಡಾ ಬಂಗಾರ. ನೀನು ಅದರಿಂದ ದೂರವಾಗಿ, ಸುಖವಾಗಿ ನೂರು ವರ್ಷ ಬಾಳಬೇಕು. ಬಣ್ಣದ ಬದುಕು ನಿನಗೆ ಬೇಡಾ. ನಿನ್ನ ತಂದೆ ಬೆಳ್ಳಿತೆರೆಯ ಕಣಕಣಗಳಲ್ಲಿ ಸೇರಿಹೋಗಿದ್ದಾರೆ. ನನಗೆ ಅದರ ಕೈ ಬಿಡಬೇಡಾ ಎಂದಿದ್ದಾರೆ. ನಾನು ಅಲ್ಲಿ ಹೋಗಿ ನಿನಗಾಗಿ ಬದುಕುತ್ತೇನೆ. ನಿನ್ನನ್ನು ಪ್ರತಿವನಬಂದು ನೋಡುತ್ತೇನೆ, ಮುದ್ದಿಸುತ್ತೇನೆ. ಇನ್ನು ನಿನಗಾಗಿಯೇ ನನ್ನ ಬದುಕು ಚಿನ್ನ ನಿನಗಾಗಿಯೇ. ಆದರೆ ನೀನು ನನ್ನ ಮಗಳೆಂದು ಹೇಳಿಕೊಳ್ಳುವ ದಿನ ನಿನ್ನನ್ನು ಬಂದು ಕರೆದೊಯ್ಯುತ್ತೇನೆ.'

ಅದನ್ನು ಕಂಡ ವಸಂತ್ ತುಂಬಿ ಬಂದ ಕಂಬನಿಯನ್ನು ಹಿಂಗೈಯಿಂದ ಒರಸಿಕೊಂಡ.

'ಇಲ್ಲಿ ಬಾ ವಸಂತ್. ನೀನೇ ಇವಳ ಗಾಡ್ ಫಾದರ್. ಇವಳನ್ನು ಬಣ್ಣದ ಬದುಕಿನಿಂದ ದೂರವಿಡಿಸಬೇಕಾದವನು ನೀನೇ. ಸುಶೀಲಕ್ಕನೇ ತಾಯಿ, ನೀನೇ ತಂದೆ ಇವಳಿಗೆ. ನನಗೆ ಇಬ್ಬರೂ ಭಾಷೆ ಕೊಡಲೇಬೇಕು.

ಸುಶೀಲಮ್ಮ ಅವಳ ಕೈ ಅದುಮಿದರು. ವಸಂತ್ ಅವಳ ಕೈಹಿಡಿದು ಹೇಳಿದ.

'ಹೆದರಬೇಡಾ ಪವಿತ್ರಾ, ನನ್ನನ್ನು ನಂಬು. ನಾನು ನಿನ್ನ ಕೈ ಎಂದೂ ಬಿಡುವುದಿಲ್ಲ.

# ಪ್ರಕಾಶ ಸಾಹಿತ್ಯ

## ಬೆಳ್ಳಿ ವರ್ಷದ ಪ್ರಕಟಣೆಗಳು

1960 1985

ಒಂದೇ ವರ್ಷದಲ್ಲಿ

**೧೦೧**

ಕನ್ನಡ ಪುಸ್ತಕಗಳ ಬೃಹತ್ ಪ್ರಕಟಣೆ

ಪ್ರಕಾಶನ
ಕ್ಷೇತ್ರದಲ್ಲಿ
ವಿನೂತನ
ಪ್ರವಾದ

**ಬೆಳ್ಳಿ ವರ್ಷದ ಸಂದರ್ಭದಲ್ಲಿ ವಿಶೇಷ ಯೋಜನೆಗಳು**

ಮನೆಗೊಂದು
ಪುಸ್ತಕ
ಭಂಡಾರ

ಪ್ರಚಲಿತ
ಗ್ರಂಥಾಲಯಗಳು
ಪುಸ್ತಕ ವ್ಯಾಪಾರಿಗಳು
ತಮ್ಮ ವಿಳಾಸವನ್ನು
ನೋಂದಾಯಿಸಿ
ವಿಶೇಷ ಯೋಜನೆಯ
ವಿವರಗಳನ್ನು
ಪಡೆಯಿರಿ

ಗ್ರಂಥಾಲಯಗಳಿಗೆ
ಶಿಕ್ಷಣ
ಸಂಸ್ಥೆಗಳಿಗೆ
ಸಾರ್ವಜನಿಕರಿಗೆ
ವಿಶೇಷ
ರಿಯಾಯಿತಿ

ವಿವರಗಳಿಗೆ ನೇರವಾಗಿ ವ್ಯವಹರಿಸಿ

**ಪ್ರಕಾಶ ಸಾಹಿತ್ಯ**

ನಂ. ೧. ಬಿ.ಎಸ್. ಲೇನ್ ಅರಳೇಪೇಟೆ ಬೆಂಗಳೂರು ೫೬೦೦೫೩
ದೂರವಾಣಿ : ೭೮೦೨೦



894.814 3
VEN N82
ಗ್ರಂಥ ಸ್ವಾಮ್ಯ ವಿಭಾಗ